
ಕಸ್ತೂರಿ

ಡಿಸೆಂಬರ್ 1990 ರೂ. 3-00



- ಒಂದಾಯಿತು ಜರ್ಮನಿ: ಮುಂದೇನು ?
- ಹಸಿರಿನರಮನೆಯಲ್ಲಿ ಸಿದ್ದಿಗಳ ಬಾಳು
- ಹೀಗಿದ್ದವು ಅಂದಿನ ಶಸ್ತ್ರಾಸ್ತ್ರಗಳು





ಬಾನಿ ಮಿಕ್ಸ್ ®

ತಕ್ಷಣ ಪಾರಿಜ್

ಧಾನ್ಯ, ಹಣ್ಣು ಹಂಪಲು ಮತ್ತು ಬೀಜಗಳ ಉತ್ತಮಿಕೆಯ ಅಪೂರ್ವ ಸಂಗಮ.


ಬಾನಿಮಿಕ್ಸ್ ಸುಲಭವಾಗಿ ಜೀರ್ಣವಾಗುವ, ಪುಷ್ಟಿಕರ ಪಾರಿಜ್- ಇಡೀ ಕುಟುಂಬಕ್ಕೆ ಉತ್ತಮ. ಬೆಳಗ್ಗಿನ ಉಪಾಹಾರ ಮತ್ತು ಸಂಜೆಗೆ ಶಾಲೆಯಿಂದ ಅಥವಾ ಆಫೀಸಿನಿಂದ ಹಿಂದಿರುಗಿದ ಮೇಲೆ ಶೀಘ್ರ ಆಹಾರ.



ನಿಮಿಷಗಳಲ್ಲಿ ತಯಾರು!
ಬಾನಿ ಮಿಕ್ಸ್ ಸುಲಭವಾಗಿ ಮತ್ತು ಶೀಘ್ರವಾಗಿ ತಯಾರು ಮಾಡಬಹುದು.




ಅವಶ್ಯವಿರುವಷ್ಟು ಬಾನಿ ಮಿಕ್ಸ್‌ನ್ನು ಒಂದು ಬಟ್ಟಲಿಗೆ ಹಾಕಿರಿ.



ಮೊದಲೇ ಕುದಿಸಿದ ಹಾಲನ್ನು ಸಾಕಷ್ಟು ಪ್ರಮಾಣದಲ್ಲಿ ಸೇರಿಸಿರಿ.



ಮೆಲ್ಲ ಮೆಲ್ಲನೆ ಬೆರೆಸಿರಿ. ನುಣುಪಾದ ಪಾರಿಜ್ ಪಡೆಯಿರಿ.



ನಿಮ್ಮ ಕುಟುಂಬದವರೆಲ್ಲ ಬಾಯಿ ಚಪ್ಪರಿಸಿ ತಿನ್ನುವರು -- ರುಚಿಯೇ ರುಚಿ!

ಬಾನಿ ಮಿಕ್ಸ್ ®

ಭಾರತದಲ್ಲಿ ಪ್ರಥಮ ಬಾರಿಗೆ!



ಗ್ಲ್ಯಾಕ್ಸೋದಿಂದ ಉತ್ತಮ ಆರೋಗ್ಯ

GL/2/88-R-KAN

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ 35

ಸಂಚಿಕೆ 4

ಡಿಸೆಂಬರ್ 1990

*

ವ್ಯವಸ್ಥಾಪಕ ಸಂಪಾದಕ

ಕೆ. ಶಾಮರಾವ್

ಸಂಪಾದಕ

ಆರ್. ಎ. ಉಪಾಧ್ಯ

ನಿರ್ವಹಣೆ

ರವಿ ಬೆಳಗೆರೆ

ಮುಖಪುಟ ಚಿತ್ರ

ಡಾ. ವಿಜಯ್ ಕಾಮತ್

*

ಕಸ್ತೂರಿ ಕಾರ್ಯಾಲಯ
ಕೊಪ್ಪೀಕರ ರಸ್ತೆ
ಹುಬ್ಬಳ್ಳಿ-580 020.

ಚೆಲುಕಿಂಡಿ

ನಾನು ಬೇರೊಬ್ಬರ ಅಡಿಯಾಳಾಗುವುದಿಲ್ಲ. ಬೇರೊಬ್ಬ ನನ್ನ ಗುಲಾಮನಾಗುವುದನ್ನೂ ನಾನು ಒಪ್ಪುವುದಿಲ್ಲ.

ಅಬ್ರಹಾಂ ಲಿಂಕನ್

ನನ್ನ ಜೀವಮಾನದಲ್ಲಿ ಎರಡು ಸಮಸ್ಯೆಗಳಿವೆ. ಬಗೆಹರಿಸಲಾರದ ರಾಜಕೀಯದವು ಮತ್ತು ಅರ್ಥವಾಗದ ಆರ್ಥಿಕ ವಿಷಯಗಳು.

ಸರ್ ಅಲೆಕ್ ಡೌಗ್ಲಾಸ್ ಹೋಂ

ವೃದ್ಧರಿಗೆಂದೂ ಹೊಸದರ ಆಕರ್ಷಣೆ! ಯುವಕರು ಇತಿಹಾಸದಲ್ಲಿ ಆಸಕ್ತಿ ತೋರುತ್ತಿದ್ದರೆ, ಮುದುಕರು ವೃತ್ತಪತ್ರಿಕೆಗಳಲ್ಲೇ ಮಗ್ನರಾಗಿರುತ್ತಾರೆ.

ಜಿ.ಕೆ. ಚೆಸ್ಟರ್ಟನ್

ನಾವು ವಾಸಿಸುವ ಭೂಗ್ರಹದ ಪರಿಸರ ಮಾಲಿನ್ಯವನ್ನು ನಿಯಂತ್ರಿಸದೇ ಹೋದರೆ, ಅದು ಮಾನವನ ವಾಸಕ್ಕೇ ಅನರ್ಹವೆಂದೆನಿಸಿಕೊಳ್ಳುವ ಕಾಲ ದೂರವಿಲ್ಲ.

ಬ್ಯಾರಿ ಕಾಮನರ್

ನಮ್ಮ ಸಮಾಜವಾದದ ಪರಿಣಾಮದಿಂದ ಸಂಪತ್ತು ಧನಿಕರಿಂದ ಬಡವರೆಡೆಗೆ ಹರಿಯಲಿಲ್ಲ. ಅದರ ಬದಲು ನೀತಿವಂತ ಲಕ್ಷ್ಮೀಪುತ್ರರಿಂದ ವಾಮಮಾರ್ಗದಲ್ಲಿ ಸಾಗಿದ ಶ್ರೀಮಂತರ ಕಡೆ ಹರಿಯುತ್ತಿದೆ.

ನಾನಿ ಫಾಲ್ಕಿವಾಲಾ

ಚಂದಾ ದರಗಳು

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆ ಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

KASTURI, DECEMBER 1990

ಸಹಚಿಂತನ

ಅದ್ಭುತ ಲೇಖನ

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ರವಿ ಬೆಳಗೆರೆ ಅವರ "ದೇವ ಲೋಕದ ಹೂಗಳು" ನಿಜಕ್ಕೂ ಅದ್ಭುತವಾಗಿ ಮೂಡಿ ಬಂದಿದೆ. ಜೊತೆಯಲ್ಲಿಯೇ ಉಳ್ಳವರ-ಬಡವರ ಮನೆಯಲ್ಲಿನ ಪರಿಸರ, ಮಕ್ಕಳ ಬೆಳವಣಿಗೆ ಬಗ್ಗೆ ಲೇಖನ ಮಾರ್ಮಿಕವಾಗಿತ್ತು.

ಕೊಪ್ಪ **ಎಲ್. ಗೋಪಾಲರಾವ್**

ಸ್ವಾರಸ್ಯಕರವಾಗಿತ್ತು

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ "ವಿಜ್ಞಾನಕ್ಕೂ ವಿಸ್ಮಯವಾದ ಅಭಿಚಾರ" ಎಂಬ ಎಂ.ವಿ. ಶರ್ಮಾ ತದ್ದಲಸೆ ಅವರ ಲೇಖನ ತುಂಬಾ ಸ್ವಾರಸ್ಯಕರವಾಗಿತ್ತು.

ಹುನಗುಂದ **ಸುರೇಶ ಮಾಗಿ**

ಗೌರವ ಮೂಡಿತು

ಎಂ.ಟಿ.ವಿ. ಆಚಾರ್ಯರ ಚಿತ್ರಕಲಾ ಸಂಪತ್ತನ್ನು ನೋಡಿ ನನಗೆ ತುಂಬಾ ಆಶ್ಚರ್ಯ ಹಾಗೂ ಸಂತೋಷವಾಯಿತು. ಈಚೆಗೆ ಶೃಂಗೇರಿಯಲ್ಲಿ ಅವರ ಚಿತ್ರಕಲೆಯನ್ನು ಪ್ರತ್ಯಕ್ಷ ನೋಡಲು ನನಗೆ ಅವಕಾಶ ಸಿಕ್ಕಿದ್ದು ಕಲಾವಿದರ ಬಗ್ಗೆ ತುಂಬಾ ಗೌರವ ಮೂಡಿತು.

ಲೋಕನಾಥಪು **ಎಲ್.ಎಸ್. ದೀಪಾ**

ಮಾದರಿ

ಎಂ.ಟಿ.ವಿ. ಆಚಾರ್ಯರ ಕುರಿತ ಲೇಖ ಉತ್ತಮವಾಗಿತ್ತು. ಆಚಾರ್ಯರು ಕಡು ಕಷ್ಟವಿದ್ದರೂ ಕಲೆಯನ್ನು ಮುಂದುವರಿಸಿರುವುದು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ.

ಹುಲಿಗರಡಿ **ಹೆಚ್.ಎಂ. ಗಿರೀಶ್**

ಹೃದಯಸ್ಪರ್ಶಿ ಕಥೆ

ಪೊಟ್ಟೆಕ್ಕಾಟ್ ಅವರ 'ಮಮ್ಮು ಎಂಬ ದೋಣಿಯಾತ' (ಅನು:ಡಾ.ಅಶೋಕಕುಮಾರ್) ಎಂಬ ಕಥೆ ಸುಂದರವಾಗಿತ್ತು. ಮಮ್ಮುವಿನ ಪ್ರಶಾಂತ ಬದುಕಿನಲ್ಲಿ, ಒಂದು ಅಲೆಯಂತೆ ಬಂದ ಆಲೀಮ, ತನ್ನ ಸೌಂದರ್ಯದ ಸೆಳವಿನಲ್ಲಿ ಕೊಚ್ಚಿಕೊಂಡು ಹೋದ ಕಥೆ ಹೃದಯಸ್ಪರ್ಶಿಯಾಗಿದೆ.

ಹಂಪನದುರ್ಗ **ಬಿ.ಆರ್. ತುಬಾಕಿ**

ಪರಿಣಾಮ ಬೀರದ ಚಿತ್ರ

ನವೆಂಬರ್ ಸಂಚಿಕೆಯಲ್ಲಿನ ವಲಂಪುರಿ ಸೋಮನಾಥನ್‌ರವರ 'ಮಾತಾಡಬೇಡ' ಕಥೆಯು ಮನಮುಟ್ಟುವಂತಿದ್ದರೆ ಅದಕ್ಕೆ ಅಳವಡಿಸಿದ ಚಿತ್ರ ತೀರ ಅಸಮರ್ಪಕ ಹಾಗೂ ಬಾಲಿಶ. ಕಥೆಯಷ್ಟೇ ಪರಿಣಾಮಕಾರಿಯಾದ ಚಿತ್ರ ಇನ್ನು ಮುಂದೆ ಮೂಡಿ ಬರಲಿ.

ಬೆಂಗಳೂರು **ಸು.ಬೈ. ಸಿದ್ದಪ್ಪ**

ಕಳಪೆ ವ್ಯಂಗ್ಯಚಿತ್ರ

ನವೆಂಬರ್ ಸಂಚಿಕೆಯಲ್ಲಿ ಕೆಲವು ಕಳಪೆ ವ್ಯಂಗ್ಯ ಚಿತ್ರಗಳನ್ನು ನೋಡಿ ದಿಗ್ಭ್ರಮೆಯಾಯಿತು. ಇನ್ನು ಈ ರೀತಿಯ ವ್ಯಂಗ್ಯ ಚಿತ್ರಗಳನ್ನು ಬಳಸಬೇಡಿ.

ಧಾರವಾಡ **ಶ್ರೀಕಾಂತ ಆರ್.ಕೆ.**

ಅಕ್ಷರ ಸ್ಖಾಲಿತ್ಯ

ಕಳೆದ ಸಂಚಿಕೆಯಲ್ಲಿ 'ಬೆಳಗಿನ ಉಪಹಾರ' ಓದಿದೆ. ಉಪಹಾರ ಶಬ್ದವೇ ಅಸಂಬದ್ಧ. ಅದು ಉಪಾಹಾರ (ಉಪ + ಆಹಾರ) ಎಂದಿರಬೇಕಿತ್ತು. 'ಕಸ್ತೂರಿ'ಯಲ್ಲಿ ಇಂತಹ ತಪ್ಪುಗಳು ಆಗದಂತೆ ದಯಮಾಡಿ ನೋಡಿಕೊಳ್ಳಿ

ತರೀಕೆರೆ **ನಾರಾಯಣ ಯಾಜಿ**

ನೈಜವಾಗಿತ್ತು

ನವೆಂಬರ್ ಸಂಚಿಕೆಯಲ್ಲಿ ಬಂದ 'ಸಾವಿನ ದವಡೆಯಿಂದಾಚೆಗೆ' ಎಂಬ ಕಾದಂಬರಿ ಸಂಗ್ರಹವು ಬಹಳ ನೈಜವಾಗಿತ್ತು.

ಕರಡಿಕೊಪ್ಪ **ಮೋಹನ ಮಿಶ್ಕಿನ**

ರೋಮಾಂಚನಕಾರಿ

ನವೆಂಬರ್ ಸಂಚಿಕೆಯ ಪುಸ್ತಕ ವಿಭಾಗದಲ್ಲಿ ಪ್ರಕಟವಾದ ವಾಲ್ಟರ್ ಗಿಬ್ಸನ್ನರ "ಸಾವಿನ ದವಡೆಯಿಂದಾಚೆಗೆ" ನಿಜಕ್ಕೂ ರೋಮಾಂಚನಕಾರಿ.

ಓದುತ್ತಿದ್ದಂತೆಯೇ ಮಾನವ ಬದುಕಿಗಾಗಿ ಎಷ್ಟೊಂದು ಸ್ವಾರ್ಥಿಯಾಗುತ್ತಾನೆ ಹಾಗೂ ದೋಣಿಯಲ್ಲಿನ ೮೦ ಜನರಲ್ಲಿ ನಾನೂ ಒಬ್ಬಳೆನಿಸಿತ್ತು. ಕಸ್ತೂರಿಗೆ ನನ್ನ ವಂದನೆಗಳು.

ಜಿ.ಜಿ. ಹಳ್ಳಿ **ಚಂದ್ರಾಗುಡ್ಡೆಮನೆ**

ಭಾವಗೀತೆ

ನವೆಂಬರ್ ಕಸ್ತೂರಿಯಲ್ಲಿ ಶ್ರೀ ರವಿ ಬೆಳಗೆರೆ ಅವರು ಬರೆದ 'ದೇವಲೋಕದ ಹೂಗಳು' ಭಾವಗೀತೆಯಂತೆ ಇತ್ತು.

ಆಳವಂಡಿ **ಲಕ್ಷ್ಮಣ ಆಳವಂಡಿ**

ನಾಚಿಸುವಂತಾಗಿತ್ತು

ನವೆಂಬರ್ ತಿಂಗಳ ಕಸ್ತೂರಿ ಸಂಚಿಕೆಯು ಆಕರ್ಷಕ ಮುಖಪುಟ ಹಾಗೂ ಕಥೆಗಳನ್ನು ತಂದಿತ್ತು. ಅದರಲ್ಲಿಯ 'ಹೆಣ್ಣುಕರಡಿಯ ಪತಿ ಪ್ರೇಮ'ವು ಹಾಗೂ ಅದರ ವೈದ್ಯಕೀಯ ಉಪಚಾರವು ನಿಜವಾಗಲೂ ಮಾನವ ಜಾತಿಯನ್ನು ನಾಚಿಸುವಂತಾಗಿತ್ತು. ಎಂಥ ಕಟುಕರ ಹೃದಯವನ್ನೂ ಕರಗಿಸುವಂತೆ ಮೂಡಿ ಬಂದ ಈ ಹೆಣ್ಣು ಕರಡಿಯ ಪತಿ ಪ್ರೇಮವನ್ನು ಮತ್ತೊಮ್ಮೆ ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

ಬೆನಕಟ್ಟಿ **ಪಾಂಡುರಂಗ ಬಾಳಕ್ಕನವರ**

ಕಲ್ಲಾದವರೇ ಒಳ್ಳೆಯವರು

ನವೆಂಬರ್ ೯೦ರ ಸಂಚಿಕೆಯಲ್ಲಿ ವಲಂಪುರಿ ಸೋಮನಾಥನ್ ಅವರ ಮಾತಾಡಬೇಡ (ಕಥೆ) ನಿಜಕ್ಕೂ ಮಾತು ಮನುಷ್ಯನಿಗೆ ಬಹಳ ಉಪಯೋಗ ಆದರೂ ಚಲ್ಲಮ್ಮನ ಪ್ರಕಾರ 'ಕಲ್ಲಾದವರೇ ಒಳ್ಳೆಯವರು'. ಜಾಸ್ತಿ ಮಾತಾಡುತ್ತಿದ್ದ ನಾನು ಕೂಡಾ ಇದರಿಂದ ಉತ್ತಮ ಪಾಠ ಕಲಿತೆ.

ರಾಂಪುರ **ಮಹೇಶ**

ಕ್ಯಾಮೆರಾ ಚಿತ್ರಗಳೇ ! ?

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಎಂ.ಟಿ.ವಿ. ಆಚಾರ್ಯರ ಕಲಾಕೃತಿಗಳನ್ನು ನೋಡಿದಾಗ ಇದೇನೋ ಕ್ಯಾಮರಾ ಚಿತ್ರಗಳೇ! ಎಂದು ಭಾಸವಾಗುತ್ತದೆ.

ಮುರೊಳ್ಳಿ **ಎಂ.ಹೆಚ್. ಸುಧೀರ್‌ಕುಮಾರ್**

ತಿದ್ದುಪಡಿ

ನವೆಂಬರ್ '೯೦ ರ ಸಂಚಿಕೆಯಲ್ಲಿ 'ಆ ಮಹಾಪಾಪಿ ಕಡೆಗೂ ಸಿಕ್ಕಿಬಿದ್ದ' ಈ ಲೇಖನದಲ್ಲಿ ಇಸ್ರೇಲಿನ ಪ್ರಧಾನಿ ಗೋಲ್ಡಾ ಮೇಯರ್....ಕ್ಷಮೆ ಯಾಚಿಸಿದ....ಸಮರ್ಥಿಸಿಕೊಂಡ, ಎಂದು ಇದೆ(ಪುಟ ೫೨). ಆದರೆ ಗೋಲ್ಡಾ ಮೇಯರ್ ಹೆಂಗಸು. ಇನ್ನು ಮುಂದೆ ಲಿಂಗ ಬದಲಾವಣೆಯಾಗದಿರಲಿ ಎಂದು ಆಶಿಸುತ್ತೇನೆ.

ಕೊಂಕಟನೂರ **ಡಾ.ಗೋ.ಮ. ಕಟ್ಟಿ**

ಚಿಂತನಾರ್ಹ

ನವೆಂಬರ್ ಕಸ್ತೂರಿಯಲ್ಲಿ ಪ್ರಕಟವಾದ ಎಚ್.ಪಾಂಡುರಂಗ ವಿಠಲ ಅವರ 'ಸಾಕ್ಷರರು ರಾಕ್ಷಸರೇ ?'- ಚಿಂತನೆಗೊಂದು ಚಾಲನೆ ಕೊಟ್ಟ ಲೇಖನವಿದು. ಸಾಕ್ಷರತೆ ರಾಕ್ಷಸರನ್ನು ತಯಾರುಮಾಡುತ್ತದೆಂಬುದನ್ನು ಇತಿಹಾಸದ ಕೆಲ ಘಟನೆಗಳನ್ನೂ, ವರ್ತಮಾನವನ್ನೂ ನೋಡಿ ಒಪ್ಪ ಬೇಕಾಗುತ್ತದೆಂಬುದು ದಿಟವಾದರೂ ಇದೇ ಸತ್ಯವೆಂದು ಅಂಗೀಕರಿಸಲಾಗದು. ಅಕ್ಷರಗಳ ಮೂಲಕ ಏನೇನನ್ನೋ ಕೊಡುತ್ತಿರುವ ನಾವು ಕೊಡಬೇಕಾದದ್ದನ್ನು ಕೊಡುತ್ತಿಲ್ಲದಿರುವುದೇ ಇಂದಿನ ಈ ಪರಿಸ್ಥಿತಿಗೆ ಕಾರಣವಾಗಿರಲಾರದೇ ?

ಸಾಕ್ಷರತೆಯ ಬಗ್ಗೆ ಕಳಕಳಿಯಿರುವ ನಾವು ಆ ಮೂಲಕ ಮಾನವತ್ವದ ವಿಕಾಸಕ್ಕೆ ಬೇಕಾದ ಅಂಶಗಳನ್ನು ತಿಳಿಯಪಡಿಸುತ್ತಿದ್ದೇವೆಯೆ ? ಆತ್ಮವಿಕಾಸವನ್ನು ಪೂರ್ಣವಾಗಿ ಮರೆತು 'ಶರೀರದ' ಪೋಷಣೆಯಲ್ಲಿಯೇ ನಿರತರಾಗಿದ್ದೇವೆಂದು ಅನ್ನಿಸುವುದಿಲ್ಲವೇ ? ಬೇವನ್ನು ಬಿತ್ತಿ ಮಾವನ್ನು ಬಯಸಿದರೆ ಅದು ಹೇಗೆ ತಾನೇ ದೊರೆತೀತು ?

ಬೆಂಗಳೂರು **ಜನಾರ್ಧನ ದೇವದಕೇರಿ**

ಈ ಸಂಚಿಕೆಯಲ್ಲಿ

ಜರ್ಮನಿ:
ೀನು?



East is East. West is West.
Both can never meet.

- Rudyard Kipling

ಅಕ್ಟೋಬರ್ ಎರಡರ ರಾತ್ರಿ. ಬರ್ಲಿನ್‌ನ ಚರ್ಚುಗಳಲ್ಲಿ ಒಂದೇ ಸಮನೆ ಬೃಹತ್ ಗಂಟೆಗಳ ಮೊರೆತ, ಪ್ರಾರ್ಥನೆ, ರಾಷ್ಟ್ರಗೀತೆಗಳ ಉದ್ಘೋಷ, ಸಿಡಿಮದ್ದು, ಬಾಣಬಿರುಸು, ಮಾತುಗಳ ಆರ್ಭಟ, ಎಲ್ಲೆಲ್ಲೂ ಕೇಕೆ, ನರ್ತನ. ಹರ್ಷೋದ್ಗಾರ. ವಿಚ್ಛೇದನದಿಂದ ಅಗಲಿದ ಪತ್ನಿ ಮತ್ತೆ ಅಪ್ಪುಗೆಗೆ ಬಂದಾಗಿನ ಸಂತಸ, ಸಮಾಧಾನ. ಹೌದು ..... ಅಂದು ಎರಡು ಜರ್ಮನಿಗಳು ಒಂದಾದ ದಿನ. ಒಡೆದ ಮನಗಳಾಗಿ, ಛಿದ್ರಗೊಂಡ ಮನೆಗಳಾಗಿ ಬೇರ್ಪಟ್ಟಿದ್ದ ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿಗಳು ಪುನಃ ಒಂದಾಗಿ ಐಕ್ಯ ಜರ್ಮನಿಯಾಗಿ ಪುನರೋದಯಗೊಂಡ ಸುದಿನ.

ಇನ್ನು ಮುಂದೆ ಪೂರ್ವ ಮತ್ತು ಪಶ್ಚಿಮ ಜರ್ಮನಿ ಎಂಬುದಿಲ್ಲ. ಅವೆಲ್ಲ ಈಗ ಚರಿತ್ರೆಗೆ ಸೇರಿದ ಮಾತು. ಸುಮಾರು ನಲವತ್ತೈದು ವರ್ಷಗಳ ವಿಭಜನೆಯ ನಂತರ ಎರಡೂ ಜರ್ಮನಿಗಳು ಶತೃತ್ವವನ್ನು ತೊರೆದು ಅಂತಿಮವಾಗಿ ಒಂದುಗೂಡಿವೆ. ಹಾಲಿನಲ್ಲಿ ಕುಳಿತ ಮೊದ್ದಾದ ಮೊಸರಿನ ಮಜ್ಜಿಗೆಯಂತೆ!

ಭಾವೋದ್ವೇಗ ಹಾಗೂ ಚಿಂತನೆಯಲ್ಲಿ ವ್ಯತ್ಯಾಸವಿಲ್ಲದಿರಬಹುದು. ಆದರೆ ಸಂಪೂರ್ಣ ವಿಭಿನ್ನ ಹಣಕಾಸು ನೀತಿ, ರಾಜಕೀಯ ವ್ಯವಸ್ಥೆ ಹಾಗೂ ಬೇರೆ ಬೇರೆ ಜೀವನ ಮಟ್ಟವನ್ನು ಹೊಂದಿದ ಎರಡು ದೇಶಗಳು ವೈಮನಸ್ಸು, ದ್ವೇಷ ಹಾಗೂ ವೈರುಧ್ಯಗಳನ್ನು ಮರೆತು ಪುನಃ ಒಂದಾಗುವುದು ಸಣ್ಣ ಮಾತೇನಲ್ಲ! ಜಾಗತಿಕ ಇತಿಹಾಸದಲ್ಲಿ ಇಂಥ ನಿದರ್ಶನಗಳು ಅಪರೂಪ. ದೇಶವೊಂದು ಇಬ್ಭಾಗವಾದ ಘಟನೆಗಳು ಹಲವಾರಿರಬಹುದು. ಹಾಗೆ ಇಬ್ಭಾಗಗೊಂಡ ದೇಶ ಪುನಃ ಒಂದಾಗುವುದು ಸಾಮಾನ್ಯ ಸಂಗತಿಯೇ? ಈ ಹಿನ್ನೆಲೆಯಲ್ಲಿ ಜರ್ಮನಿಯ ಪುನರ್ ಏಕೀಕರಣ ಜಗತ್ತಿನ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು. ಹೊಸ ಶಕೆಯ ನಾಂದಿ. ಇಪ್ಪತ್ತನೆ ಶತಮಾನದ ಒಂದು ಅದ್ಭುತ ಪವಾಡ.

ಹಾಗೆ ನೋಡಿದರೆ ಈ ಬದಲಾವಣೆಯನ್ನು ಯಾರೂ ನಿರೀಕ್ಷಿಸಿರಲಿಲ್ಲ. ನಾವು ಇದನ್ನು ನಿರೀಕ್ಷಿಸುವುದು ದೂರ ಉಳಿಯಿತು. ಉಭಯ ಜರ್ಮನ್ನರೂ ಈ ಪರಿವರ್ತನೆಯನ್ನು ತಮ್ಮ ಕನಸಿನಲ್ಲಿಯೂ ಕಂಡಿರಲಿಕ್ಕಿಲ್ಲ. ಬಹುಶಃ ಕಾಲವೇ ಇದನ್ನು ನಿರ್ಣಯಿಸಿತೆನ್ನಬಹುದು.

ಗಡಿ ಅಥವಾ ಸೀಮೆಯ ಮೂಲಕ ಒಂದು ಸಮುದಾಯದ ಜನರನ್ನು ಬೇರ್ಪಡಿಸುವುದು ಸಾಧ್ಯವಿಲ್ಲವೆಂಬುದಕ್ಕೆ ಜರ್ಮನ್ ಪುನರ್ ಏಕೀಕರಣವೇ ಒಳ್ಳೆಯ ಸಾಕ್ಷಿ. ಗಡಿ ಅಥವಾ ಗೋಡೆ ಮನುಷ್ಯ ನಿರ್ಮಿಸಿದ 'ತಡೆ'ಯಿರಬಹುದು. ಆದರೆ ವ್ಯಕ್ತಿ-ವ್ಯಕ್ತಿ, ಸಮುದಾಯ-ಸಮಾಜಗಳ ನಡುವೆ ಏರ್ಪಡುವ ಸಂಬಂಧವನ್ನು ಯಾವ ಗೋಡೆಯಿಂದಲೂ ತಡೆಯಲಾಗುವುದಿಲ್ಲ. ಈ ಕಾರಣಕ್ಕಾಗಿಯೇ ಬರ್ಲಿನ್ ಗೋಡೆಯಂಥ ಗೋಡೆ ಮಾನವ ಸಮಾಗಮದ ತುಡಿತದ ವಿರುದ್ಧ ಸಿಕ್ಕು ನೆಲಸಮಗೊಳ್ಳುತ್ತಿದೆ.

ಎರಡನೆ ಮಹಾಯುದ್ಧದಲ್ಲಿ ಸೈನಿಕ ನಿರಂಕುಶಾಧಿಕಾರಿ ಅಡಾಲ್ಫ್ ಹಿಟ್ಲರ್ ಪರಾಭವಗೊಂಡು ಶರಣಾಗತನಾದ ಬಳಿಕ ಮಿತ್ರ ರಾಷ್ಟ್ರ(?)ಗಳಾದ ಫ್ರಾನ್ಸ್, ಅಮೇರಿಕಾ ಮತ್ತು ಬ್ರಿಟನ್ ದೇಶಗಳು ಜರ್ಮನಿಯನ್ನು ಛಿದ್ರ ಛಿದ್ರಗೊಳಿಸಿ ತಮ್ಮ ಹಳೆಯ ಸೇಡನ್ನು ತೀರಿಸಕೊಂಡವು. ಹಿಟ್ಲರ್‌ನ 'ಥರ್ಡ ರೀಕ್' ಅಥವಾ ನಾಜಿ ಪ್ರಭುತ್ವ ಮಾಡಿದ ಬರ್ಬರ ಕೃತ್ಯಗಳಿಗೆ ಲಕ್ಷಾಂತರ ಮಂದಿ ಯಹೂದಿಗಳನ್ನು ಕಗ್ಗೊಲೆ ಮಾಡಲಾಯಿತು. ಹಿಟ್ಲರನ ಕೈಗೆ ಆಡಳಿತದ ಚುಕ್ಕಾಣಿ ಕೊಟ್ಟುದುದರಿಂದ ಇಡೀ ದೇಶವೇ ಮೂರಾಬಟ್ಟೆಯಾಯಿತು. ಹಿಟ್ಲರನ ಮೇಲಿನ

ದ್ವೇಷದಿಂದಲೇ ಬ್ರಿಟನ್, ಅಮೇರಿಕಾ ಹಾಗೂ ಫ್ರಾನ್ಸ್ ದೇಶಗಳು ಜರ್ಮನಿಯನ್ನು ಛಿದ್ರಗೊಳಿಸಿದವು. ಪರಕೀಯ ರಾಕ್ಷಸನೊಬ್ಬನ ಕೈಗೆ ದೇಶವನ್ನು ಒಪ್ಪಿಸಿದ್ದಕ್ಕಾಗಿ ಈ ಜನ ತೆತ್ತ ಬೆಲೆ ಅಪಾರ. ಇದಕ್ಕಾಗಿ ಜರ್ಮನ್‌ರು ಈಗಲೂ ಪಶ್ಚಾತ್ತಾಪ ಪಡುತ್ತಾರೆ.

ಜಾಗತಿಕ ಯುದ್ಧ ಕೊನೆಗೊಂಡು, ಶಾಂತಿ ನೆಲೆಯೂರಿದ ನಂತರ ಜರ್ಮನಿಯ ಪೂರ್ವ ಹಾಗೂ ಪಶ್ಚಿಮ ಭಾಗಗಳು ನಿರೀಕ್ಷಿಸಿದಂತೆ ಪರಸ್ಪರ ವಿರುದ್ಧ ದಿಕ್ಕನ್ನು ಹಿಡಿದುಹೊರಟವು. ಬೇರೆ ರಾಷ್ಟ್ರಗಳ ಮಧ್ಯಸ್ಥಿಕೆ ಹಾಗೂ ಸೇಡಿನ ಕ್ರಮವಾಗಿ ಅಖಂಡ ಜರ್ಮನಿ, ಪೂರ್ವ ಜರ್ಮನಿ (ಜರ್ಮನ್ ಡೆಮಾಕ್ರೆಟಿಕ್ ರಿಪಬ್ಲಿಕ್) ಹಾಗೂ ಪಶ್ಚಿಮ ಜರ್ಮನಿ (ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ) ಎರಡು ದೇಶಗಳಾಗಿ ಹೋಳಾದವು. ಪಶ್ಚಿಮ ಜರ್ಮನಿ 'ಜನತಂತ್ರ' ಮಾದರಿಯ ಸರ್ಕಾರವನ್ನು ಆಯ್ದುಕೊಂಡಿತು. ಪೂರ್ವ ಜರ್ಮನಿ ಕಮ್ಯುನಿಸ್ಟ್ ಆಡಳಿತ ವ್ಯವಸ್ಥೆಯನ್ನು ಅಳವಡಿಸಿಕೊಂಡಿತು.

ತನ್ನ ದೇಹದ ಬೂದಿಯಿಂದಲೇ ಮರುಹುಟ್ಟು ಪಡೆದು ಚಿಮ್ಮುವ ಫೀನಿಕ್ಸ್ ಹಕ್ಕಿಯಂತೆ, ದ್ವಿತೀಯ ಮಹಾಯುದ್ಧದಲ್ಲಿ ವಿನಾಶದ ಕೂಪಕ್ಕೆ ತಳ್ಳಲ್ಪಟ್ಟಿದ್ದ ಪಶ್ಚಿಮ ಜರ್ಮನಿ ಕ್ಷಿಪ್ರವಾಗಿ ಪ್ರಗತಿಪಥದತ್ತ ಮುನ್ನಡೆದಿದ್ದು ಒಂದು ಅಮೋಘ ಸಾಧನೆಯೇ! ಮುಕ್ತ ಹಾಗೂ ಸರಳ ಮಾರುಕಟ್ಟೆ ನೀತಿಯನ್ನು ಅನುಸರಿಸಿದ ಪಶ್ಚಿಮ ಜರ್ಮನಿ ಎಣಿಕೆಯಿಲ್ಲದ ಹಾಗೆ ಶ್ರೀಮಂತವಾಗುತ್ತ ಹೋಯಿತು. ದೊಡ್ಡ ದೊಡ್ಡ ಕೈಗಾರಿಕೆಗಳು, ಉದ್ದಿಮೆಗಳು ತಲೆಯೆತ್ತಲಾರಂಭಿಸಿದವು. ಇದರಿಂದಾಗಿ ನಿರುದ್ಯೋಗ ಸಮಸ್ಯೆ ಸ್ವಾಭಾವಿಕವಾಗಿ ದೂರವಾಯಿತು. ಪಶ್ಚಿಮ ಜರ್ಮನಿಯ ವಸ್ತುಗಳು ಜಾಗತಿಕ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುವ ಅರ್ಹತೆ ಹಾಗೂ ಗುಣಮಟ್ಟವನ್ನು ಪಡೆದವು. ಅರವತ್ತು ಹಾಗೂ ಎಪ್ಪತ್ತರ ದಶಕದಲ್ಲಿ ತಂತ್ರಜ್ಞಾನ, ಹಾಗೂ ಕಂಪ್ಯೂಟರೀಕರಣದಲ್ಲಾದ ಪರಿವರ್ತನೆ ಪಶ್ಚಿಮ ಜರ್ಮನಿಯ ಭವಿಷ್ಯವನ್ನೇ ಮಾರ್ಪಡಿಸಿತು. ಈ ಕಾರಣದಿಂದಲೇ ದೇಶ ದಿಢೀರನೆ ಶ್ರೀಮಂತಿಕೆಯ ಸುಪ್ಪತ್ತಿಗೆಗೇರಿತು. ಹಿಂದಿನ ಸಂಕಷ್ಟಗಳನ್ನು ಮರೆತ ಜನರಲ್ಲಿ ನೆಮ್ಮದಿ ನೆಲೆಸಿತು.

ಆದರೆ ಇತ್ತ ಪೂರ್ವ ಜರ್ಮನಿಯ ಚಿತ್ರಣವೇ ಸಂಪೂರ್ಣ ಬೇರೆಯಾಗಿತ್ತು. ಪೂರ್ವ ಜರ್ಮನಿಯಲ್ಲಿ ಬಡತನ ತಾಂಡವವಾಡತೊಡಗಿತು. ಮಾಸ್ಕೋ ಆಡಳಿತದ ನೆರಳಿನಲ್ಲಿ ಜನರ ಜೀವನ ಸುಧಾರಿಸುವುದು ಸಾಧ್ಯವೇ ಇರಲಿಲ್ಲ. ರಷ್ಯಾದ ಪ್ರಾಬಲ್ಯ ಹಾಗೂ ಹಿಡಿತದಿಂದ ಪೂರ್ವ ಜರ್ಮನ್‌ರು ಕೈಗೊಂಬೆಗಳಾಗಿಯೋ ಅಥವಾ ಸೆರೆಯಾಳುಗಳಾಗಿಯೋ ಬದುಕುತ್ತಾ, ಜೀವನ ನಡೆಸಲಾರಂಭಿಸಿದರು. ಕೈಗಾರಿಕೆ ಹಾಗೂ ತಂತ್ರಜ್ಞಾನದಲ್ಲಿ ಯಾವುದೇ ಅಭಿವೃದ್ಧಿ ಸಾಧಿಸಲು ಬಯಸದ ಪೂರ್ವ ಜರ್ಮನಿ ಸ್ವಾಭಾವಿಕವಾಗಿ ಹಿಂದಕ್ಕುಳಿಯಿತು. ಜನರಿಗೆ ಉದ್ಯೋಗವಿಲ್ಲದ ಹಾಗೆ ಆಯಿತು. ಲಕ್ಷಾಂತರ ಮಂದಿ ಶಿಕ್ಷಿತ ನಿರುದ್ಯೋಗಿಗಳು ದೇಶಕ್ಕೆ ತಲೆನೋವಾಗಿ ಪರಿಣಮಿಸಿದರು. ರಷ್ಯಾದ ಬಿಗಿ ಹಿಡಿತದಲ್ಲಿ 'ಪ್ರಗತಿ'ಯೆಂಬುದು ಕನ್ನಡಿಯೊಳಗಿನ ಗಂಟಾಯಿತು. ಹತಾಶೆಗೊಂಡ ಮನದಲ್ಲಿ ಹೊಸ ಕನಸನ್ನು ಚಿಗುರಿಸುವ ಅಧಿಪತ್ಯ ಅವರಿಗೆ ದೊರೆಯಲಿಲ್ಲ.

ಈ ಮಧ್ಯೆ ಪಶ್ಚಿಮ ಜರ್ಮನಿಯಲ್ಲಿ ಅಲ್ಲಿಯ ಪ್ರಜೆಗಳಿಗೆ ರಾಜಕೀಯ ಸ್ವಾತಂತ್ರ ನೀಡುವುದರ ಮೂಲಕ ಇನ್ನೊಂದು ಕ್ರಾಂತಿಯಾಯಿತು. ಅಧಿಕಾರಶಾಹಿ ಹಾಗೂ ಕೆಂಪುಪಟ್ಟಿಯ ಕಿರುಕುಳವಿಲ್ಲದೇ ಜನರು ನಿರ್ಭೀತರಾಗಿ, ಮುಕ್ತ ಜೀವನ ನಡೆಸಲಾರಂಭಿಸಿದರು. ಪಶ್ಚಿಮ ಜರ್ಮನ್‌ರ ವಿಲಾಸಿ ಹಾಗೂ ಸಂತೃಪ್ತ ಜೀವನ ಪೂರ್ವ ಜರ್ಮನ್‌ರಲ್ಲಿ ಅಸೂಯೆ ಹುಟ್ಟಿಸಿತು. ಪಶ್ಚಿಮ ಜರ್ಮನಿಯಲ್ಲಿನ ಸ್ವಚ್ಛಂದ ಸ್ವಾತಂತ್ರ್ಯ ಗಾಳಿ ಪೂರ್ವಕ್ಕೆ ಹೋಗ

ವಿಲೀನದ ಫಲಶೃತಿ

1. ಸಂಸದೀಯ ಆಯೋಗ ಹಾಗೂ ಪ್ರಾದೇಶಿಕ ಸರ್ಕಾರಗಳ ಸ್ಥಾಪನೆಗಾಗಿ ಒಕ್ಕೂಟಗಳ ರಚನೆ.
2. ಏಕೀಕೃತ ಜರ್ಮನಿಯಲ್ಲಿ ಇನ್ನು ಮುಂದೆ ಎಲ್ಲವೂ ಜಂಟಿ ಜಂಟಿ. ಆರ್ಥಿಕ ವ್ಯವಸ್ಥೆ, ಸಾರಿಗೆ, ಸಮಾನ ಕರೆನ್ಸಿ, ಕಾನೂನು, ವಿದೇಶಾಂಗ ನೀತಿ. ಇವುಗಳನ್ನು ರಚಿಸುವ ಸಲುವಾಗಿ ಸಮುದಾಯಗಳ ರಚನೆ.
3. ಒಕ್ಕೂಟ ಸಂಸ್ಥೆಗಳನ್ನು ರಚಿಸಿದ ನಂತರ ಅವುಗಳಿಗೆ ಸಾರ್ವಭೌಮ ಹಕ್ಕುಗಳನ್ನು ವರ್ಗಾಯಿಸಲಾಗುವುದು. ಇದರಿಂದ ಎರಡೂ ದೇಶಗಳ ಸೈನಿಕ ವ್ಯವಸ್ಥೆ ತಟಸ್ಥಗೊಳ್ಳಲಿದೆ.
4. ಎರಡೂ ಜರ್ಮನಿಗೆ ಒಂದೇ ಆಡಳಿತ ಪದ್ಧತಿ. ಇದರ ಫಲವಾಗಿ ಏಕರೂಪದ ಸಂವಿಧಾನ ಜಾರಿಗೆ ಕ್ರಮ. ಎರಡೂ ದೇಶಕ್ಕೆ ಒಂದೇ ಬಾರಿ ಚುನಾವಣೆ, ಏಕ ಸರ್ಕಾರ, ತನ್ಮೂಲಕ ಸಂಯುಕ್ತ ರಾಷ್ಟ್ರವೊಂದರ ಸ್ಥಾಪನೆಗೆ ದಾರಿ.

ದಂತೆ ತಡೆಯಲು ಹಾಗೂ ಇಲ್ಲಿನ ಆಕರ್ಷಣೆಗೆ ಮನಸೋತು, ಪೂರ್ವ ಜರ್ಮನಿಯರ ನುಗ್ಗುವಿಕೆಯನ್ನು ತಡೆಯುವ ಸಲುವಾಗಿ ಆಗಸ್ಟ್ 13-1961ರಲ್ಲಿ ಜರ್ಮನ್ ಗೋಡೆಯನ್ನು ನಿರ್ಮಿಸಲಾಯಿತು. ಈ ಗೋಡೆಯನ್ನು ಹಾರಿ, ಪಶ್ಚಿಮ ಜರ್ಮನಿಗೆ ಹೋಗಲು ಪ್ರಯತ್ನಿಸಿದ ಸಾವಿರಾರು ಪೂರ್ವ ಜರ್ಮನ್‌ರನ್ನು ನಿರ್ದಯೆಯಿಂದ ಕೊಲ್ಲಲಾಯಿತು. (ಬರ್ಲಿನ್ ಗೋಡೆ ಕೆಡವಿದಾಗ, ನೂರಾರು ಜನರ ಅಸ್ಥಿಪಂಜರ, ತಲೆಬುರುಡೆಗಳು ದೊರಕಿತ್ತಂತೆ!)

ಪೂರ್ವ ಜರ್ಮನ್‌ರ ಹಲವಾರು ದಿನಗಳ ಕನಸಿಗೆ ಒಂದು ಮೂರ್ತ ರೂಪ ಕೊಟ್ಟವರು ಸೋವಿಯತ್ ಅಧ್ಯಕ್ಷ ಮಿಖಾಯಿಲ್ ಗೋರ್ಬಚೇವ್. ನವಯುಗದ ಪ್ರವಾದಿಯಂತೆ ದೇಶದಲ್ಲಿ ಪರಿವರ್ತನೆ ಹಾಗೂ ಚೇತನದ ವಾತಾವರಣವನ್ನು ತಮ್ಮ 'ಪೆರಿಸ್ಟ್ರೊಯಿಕ' ಹಾಗೂ 'ಗ್ಲಾಸ್‌ನಸ್ಟ್' ನೀತಿಗಳಿಂದ ತಂದ ಗೋರ್ಬಚೇವ್‌ರ ಸೃಜನಶೀಲ ಮನಸ್ಸಿನಿಂದ ರಷ್ಯಾ ಹಾಗೂ ಯುರೋಪಿನ ರಾಷ್ಟ್ರಗಳಲ್ಲಿ ಹೊಸ ವ್ಯವಸ್ಥೆಯ ಸ್ಥಾಪನೆಗಾಗಿ ಚಿಂತನೆಯನ್ನೊದಗಿಸಿತು. ಈ ಬದಲಾವಣೆ ಪೂರ್ವ ಜರ್ಮನಿಯ ಮೇಲೂ ತಟ್ಟದೇ ಇರಲಿಲ್ಲ. ಮೊದಮೊದಲು ಅವರು ಪೂರ್ವ ಜರ್ಮನಿಯ ರಾಜತಾಂತ್ರಿಕ ವ್ಯವಹಾರದಲ್ಲಿ ಅಷ್ಟೇನೂ ಆಸ್ಥೆವಹಿಸಿರಲಿಲ್ಲ. ಆದರೆ ಅವರ ಹಂಬಲಕ್ಕೆ ಅದು ನಿರೀಕ್ಷೆಗಿಂತ ಉತ್ತಮವಾಗಿ ಪ್ರತಿಕ್ರಿಯಿಸಿದ್ದರಿಂದ, ಪೂರ್ವಜರ್ಮನಿಯ ಕೈಗೊಂಬೆ ಸರ್ಕಾರ ಕ್ರಮೇಣವಾಗಿ ದುರ್ಬಲವಾಗತೊಡಗಿತು.

ಈ ಮಧ್ಯೆ, ಪೂರ್ವ ಜರ್ಮನಿ ಹಾಗೂ ಪಶ್ಚಿಮ ಜರ್ಮನಿಯನ್ನು ಒಂದುಗೂಡಿಸಬೇಕೆಂಬ ಆಗ್ರಹ ಹೆಚ್ಚಾಗತೊಡಗಿತು. ಗೋರ್ಬಚೇವ್ ಅವರ ಸಹಾಯವಿಲ್ಲದಿದ್ದರೂ ಪೂರ್ವ ಜರ್ಮನ್‌ರು ತಮ್ಮ ಕಮ್ಯುನಿಷ್ಟ್ ಪ್ರಭುತ್ವದ ವಿರುದ್ಧ ಬಂಡೇಳುತ್ತಿದ್ದರೆಂಬುದು ಬೇರೆ ಮಾತು. ಎರಡೂ ಜರ್ಮನಿಯ ಜನರನ್ನು ಭಾವನಾತ್ಮಕವಾಗಿಯಲ್ಲದಿದ್ದರೂ ಬಂದೂಕಿನ ಮೊನೆ ತಂತಿ ಬೇಲಿ ಹಾಗೂ ಇಟ್ಟಿಗೆ ಕಲ್ಲುಗಳಿಂದ ತಡೆದ ಬರ್ಲಿನ್ ಗೋಡೆಯನ್ನು ಕೆಡವಲು ಜನರು ಒತ್ತಾಯಿಸತೊಡಗಿದರು. ಇದರ ಪರಿಣಾಮವಾಗಿ 1989ರ ಅಕ್ಟೋಬರ್‌ನಲ್ಲಿ

ಬರ್ಲಿನ್ ಗೋಡೆಯನ್ನು ನೆಲ ಸಮ ಮಾಡಲಾಯಿತು. ಇದು ಸಹಜ ಮಾನವ ಪ್ರೇಮ ಹಾಗೂ ಆತ್ಮೀಯತೆಯ ದೇಶ ಕಾಲಾತೀತ ಸಂಬಂಧದ ದ್ಯೋತಕ. ಬರ್ಲಿನ್ ಗೋಡೆಯ ಅವಶೇಷಗಳನ್ನು ಜನರು ಮುತ್ತುರತ್ನಗಳಂತೆ ತಿಜೋರಿಯಲ್ಲಿಟ್ಟು ಸಂಗ್ರಹಿಸಿಕೊಂಡರು. ನಾಲ್ಕು ದಶಕಗಳಿಂದ ಅಗಲಿದ ಮಿತ್ರರು ಅಪ್ಪಿಕೊಂಡು ಆಲಂಗಿಸಿ ಮುದ್ದಾಡಿದರು. ಯಾವುದೇ ಅಧಿಕಾರದಿಂದ ತಡೆಯಲಾಗದ, ಗೋಡೆಗಳಿಂದ ಅಡ್ಡಿಪಡಿಸಲಾಗದ, ತುಪಾಕಿಯ ತುದಿಯಿಂದ ತಟಸ್ಥಗೊಳಿಸಲಾರದ ಒಂದು 'ಪ್ರೇಮ' ಆ ಸಮಾಗಮದಲ್ಲಿ ಕಲೆತಿತ್ತು. ಅದೊಂದು ಅಪೂರ್ವ ಸಂಗಮ! ಕಲ್ಪನೆಗೂ ನಿಲುಕದ ಮಿಲನ!!

ಈ ಮಹತ್ತರವಾದ ಬೆಳವಣಿಗೆ ಪೂರ್ವ ಜರ್ಮನಿಯಲ್ಲಿ ರಾಜಕೀಯ ವ್ಯವಸ್ಥೆಯ ಬದಲಾವಣೆಗೆ ನಾಂದಿಯಾಯಿತು. ಹಳೆಯ ಸರ್ಕಾರವನ್ನು ಜನರು ಕಿತ್ತೆಸೆದರು. ಜನರಿಗೆ ತಮ್ಮ ತಪ್ಪಿನ ಅರಿವಾದದ್ದು ಆಗಲೇ. ಇದಾದ ನಂತರ ಜರ್ಮನ್ ಡೆಮಾಕ್ರೆಟಿಕ್ ರಿಪಬ್ಲಿಕ್‌ನ ಹಿಡಿತ ಅಥವಾ ಏಕಸ್ವಾಮ್ಯತೆ ಸಂಪೂರ್ಣ ಕಡಿಮೆಯಾಯಿತು. ಈ ವರ್ಷದ ಮಾರ್ಚ 18ರಂದು ಪ್ರಜಾಸತ್ತಾತ್ಮಕ ಬಹುಪಕ್ಷೀಯ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ 'ಏಲಿಯನ್ಸ್ ಫಾರ್ ಜರ್ಮನಿ' (ಕ್ರೈಸ್ತ ಪ್ರಜಾಸತ್ತಾತ್ಮಕ ಒಕ್ಕೂಟ, ಪ್ರಜಾಸತ್ತಾತ್ಮಕ ಜಾಗ್ರತ ಪಕ್ಷ ಹಾಗೂ ಜರ್ಮನ್ ಸಮಾಜವಾದಿಗಳ ಒಕ್ಕೂಟ) ಚುನಾವಣೆಯಲ್ಲಿ ಭಾರಿ ಜಯಗಳಿಸಿತು. ಜರ್ಮನ್ ಪುನರ್ ಏಕೀಕರಣಕ್ಕೆ ಜನರು ಕೊಟ್ಟ ತೀರ್ಪು ಇದಾಗಿತ್ತು. ಎರಡೂ ಜರ್ಮನಿಗಳು ಒಂದಾಗಬೇಕೆಂಬುದನ್ನು ಚುನಾವಣೆಯ ಫಲಿತಾಂಶ ಹೊರಬರುವುದರೊಂದಿಗೆ ಅಲ್ಲಿಯ ಜನರು ತೋರಿಸಿಕೊಟ್ಟರು. ಒಂದು ಕಾಲಕ್ಕೆ ನಿಷೇಧಕ್ಕೊಳಗಾಗಿದ್ದ ''ನಾವು ಒಂದೇ ಜರ್ಮನಿಯ ಮಣ್ಣಿನ ಮಕ್ಕಳು'' ಎಂಬ ಸ್ಲೋಗನ್ ಪುನಃ ಪೂರ್ವ ಜರ್ಮನ್ನರ ಬಾಯಲ್ಲಿ ಉಲಿಯತೊಡಗಿತು.

ಇದಾದ ತರುವಾಯ ಈ ವರ್ಷದ ಜುಲೈ ಒಂದರಂದು ಪೂರ್ವಜರ್ಮನಿ ಹಾಗೂ ಪಶ್ಚಿಮ ಜರ್ಮನಿ ಎರಡು ದೇಶಗಳಿಗೂ 'ಡಾಯಿಷ್ ಮಾರ್ಕ್‌ಸ' ಎಂಬುದು ಅಧಿಕೃತ ಕರೆನ್ಸಿಯಾಗಿ ಅಂಕಿತ ಬೀಳುವುದರೊಂದಿಗೆ ಏಕೀಕರಣದ ಮೊದಲ ಹಂತ ಸುಗಮವಾಯಿತು.

ಅಚ್ಚರಿ ಪಡಬೇಕಾದ ಸಂಗತಿಯೆಂದರೆ, ಎರಡೂ ದೇಶಗಳಲ್ಲಿ ಇಷ್ಟೊಂದು ವ್ಯಾಪಕ ಸ್ಥಿತ್ಯಂತರ ನಡೆದರೂ ಅದಕ್ಕೆ ಅಲ್ಲಿಯ ಜನರ ಕಟು ವಿರೋಧವೆಂಬುದು ಮಾತ್ರ ಇರಲಿಲ್ಲ. ಅದಕ್ಕಾಗಿ ಒಂದು ತೊಟ್ಟು ನೆತ್ತರು ಚೆಲ್ಲಲಿಲ್ಲ. ಆದರೆ ಎರಡೂ ದೇಶಗಳು ಸೇರಿದ ನಂತರ ಮುಂದೇನಾಗಬಹುದೆಂಬ ವಿಚಿತ್ರ ಕುತೂಹಲ ಜತೆಗೆ ಸಂದೇಹ ಜನರಲ್ಲಿ ಮನೆಮಾಡಿದೆ. ಅಷ್ಟೇನೂ ಶ್ರೀಮಂತವಲ್ಲದ ಪೂರ್ವಜರ್ಮನಿ ಪಶ್ಚಿಮ ಜರ್ಮನಿಯಲ್ಲಿ ಒಂದಾದಾಗ, ಅತಿ ಶ್ರೀಮಂತ ರಾಷ್ಟ್ರವಾದ ಪಶ್ಚಿಮ ಜರ್ಮನಿ



ಈಗಲಾದರೂ ಸ್ವಲ್ಪ ಬಾಯಿ ಬಿಡಿ, ನಿಮ್ಮ ಹೆಂಡ್ತಿ ಇಲ್ಲಲ್ಲ!

ಹಾಗೆ ಯೋಚಿಸುವುದರಲ್ಲಿ ತಪ್ಪೇನಿಲ್ಲ.

ಜರ್ಮನಿಯ ಪುನರೋದಯಕ್ಕೆ ಸೋವಿಯತ್ ಅಧ್ಯಕ್ಷ ಗೋರ್ಬಚೇವ್ ಜತೆ ಕಾರಣರಾದ ಇನ್ನೊಬ್ಬ ವ್ಯಕ್ತಿಯೆಂದರೆ, ಪಶ್ಚಿಮ ಜರ್ಮನಿಯ ಅಧ್ಯಕ್ಷ ಹೆಲ್ಮೆಟ್ ಕೋಲ್. 1871ರಲ್ಲಿ ಜರ್ಮನಿಯ ಏಕೀಕರಣವನ್ನು ಸಾಧಿಸಿದ್ದ ಒಟೋವಾನ್ ಬಿಸ್ಮಾರ್ಕ್‌ನ ಮತ್ತೊಂದು ರೂಪ ಈ ಹೆಲ್ಮಟ್ ಕೋಲ್ ಎಂದು ಎರಡೂ ಜರ್ಮನ್ನರು ಅವರನ್ನು ಕೊಂಡಾಡತೊಡಗಿದ್ದಾರೆ. ಅವರನ್ನು ಸ್ತುತಿಸುವ ಭಿತ್ತಿಪತ್ರಗಳು, ಗೋಡೆಬರಹಗಳು ಈಗ ಎಲ್ಲೆಲ್ಲೂ ರಾರಾಜಿಸತೊಡಗಿವೆ. ಪಶ್ಚಿಮದ ಮಿತ್ರ ರಾಷ್ಟ್ರಗಳು, ಏಕೀಕರಣ ನಡೆಯಕೂಡದೆಂದು ಪರಿಪರಿಯಾಗಿ ಒತ್ತಾಯಿಸಿದರೂ ಹೆಲ್ಮಟ್ ಕೋಲ್ ಅವ್ಯಾವುದಕ್ಕೂ ಸೊಪ್ಪು ಹಾಕದೇ ಮುನ್ನಡೆದಿದ್ದಾರೆ.

ಈ ವರ್ಷದ ಅಕ್ಟೋಬರ್ 3ರಂದು ವಿದ್ಯುಕ್ತವಾಗಿ ಎರಡೂ ಜರ್ಮನಿಗಳು ಒಂದುಗೂಡಿವೆ. ಎರಡೂ ದೇಶಗಳ ಮಧ್ಯದ ಸೀಮಾ ಗೆರೆ ಇಲ್ಲದಂತಾಗಿದೆ. ಕರೆನ್ಸಿ ಒಂದಾಗಿದೆ. ಒಂದೇ ಆಡಳಿತ ಪದ್ಧತಿ.

ಆಧುನಿಕ ಜಾಗತಿಕ ಇತಿಹಾಸದಲ್ಲಿಯೇ ಯುದ್ಧ ಅನಿವಾರ್ಯವಾಗದೇ, ಕೇವಲ ಶಾಂತಿ ಹಾಗೂ ಪರಸ್ಪರ ತಿಳುವಳಿಕೆಯ ಮೂಲಕ ಏಕೀಕೃತಗೊಂಡ ದೇಶವೆಂದರೆ ಜರ್ಮನಿ!

ಹೌದು .... ಎರಡೂ ಜರ್ಮನಿಗಳೂ ಈಗ ಒಂದುಗೂಡಿವೆ. - ಏಕೀಕೃತ ಜರ್ಮನಿ!

ಏಕೀಕೃತ ಜರ್ಮನಿ ತನ್ನ ಮೂಲ ಧ್ಯೇಯೋದ್ದೇಶವನ್ನು ಈಡೇರಿಸಬಹುದೇ ಎಂಬುದು ಸಧ್ಯದ ಪ್ರಶ್ನೆ. ವಿಭಿನ್ನ ರಾಜಕೀಯ ಸಂಸ್ಕೃತಿ, ಆಡಳಿತ ಪದ್ಧತಿ, ಹಾಗೂ ಹಣಕಾಸು ನೀತಿಯನ್ನು ಹೊಂದಿದ ಎರಡು ದೇಶಗಳು ಒಗ್ಗೂಡಿದಾಗ ಮೊದಮೊದಲು ಹೊಂದಾಣಿಕೆಗೆ ಕಷ್ಟವಾಗಬಹುದು. ಪರಸ್ಪರ ಭಿನ್ನಾಭಿಪ್ರಾಯ ತಲೆದೋರಬಹುದು. ಜನರಲ್ಲಿ ಭಾವನಾತ್ಮಕವಾದ ಹಾಗೂ ತಾತ್ವಿಕ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇಲ್ಲದಿಲ್ಲ. ಆದರೆ ಇವೆಲ್ಲ ಸಣ್ಣ ಪುಟ್ಟ ವೈರುಧ್ಯ, ವೈಮನಸ್ಸುಗಳನ್ನು ಮೆಟ್ಟಿನಿಂತ ಬಳಿಕ ಎರಡೂ ದೇಶಗಳ ವಿಲೀನ ಅಂತಿಮವಾಗಿ ಶ್ರೀಮಂತಿಕೆಯೆಡೆಗೆ ಕರೆದೊಯ್ಯಬಹುದೆಂದು ನಿರೀಕ್ಷಿಸಲಾಗಿದೆ. ಎರಡೂ ರಾಷ್ಟ್ರಗಳ ನೈಸರ್ಗಿಕ ಸಂಪತ್ತು, ಮಾನವ ಸಂಪನ್ಮೂಲ, ಕೈಗಾರಿಕೆ, ತಂತ್ರಜ್ಞಾನ ಮತ್ತು ಬಂಡವಾಳವನ್ನು ಬಳಸಿಕೊಂಡು ಏಕೀಕೃತ ಜರ್ಮನಿ ಯುರೋಪಿನಲ್ಲಿಯೇ ಅತ್ಯಂತ ಬಲಿಷ್ಠ ದೇಶವಾಗಲಿದೆಯೆಂದು ಬಾವಿಸಲಾಗಿದೆ.

ಜರ್ಮನಿಯ ಪುನರೇಕೀಕರಣ ಜಾಗತಿಕವಾಗಿ ಸದಭಿಪ್ರಾಯವನ್ನು ಮೂಡಿಸಿದರೂ, ಯುರೋಪಿನ ಕೆಲವು ರಾಷ್ಟ್ರಗಳು ಮತ್ತು ಏಕೀಕೃತ ಜರ್ಮನಿಯ ನೆರೆಹೊರೆ ದೇಶಗಳು ಈಗ ಭಯಭೀತಗೊಂಡಿವೆ. ಆರ್ಥಿಕವಾಗಿ ಬಲಾಢ್ಯಗೊಂಡು, ಸರ್ವತೋಮುಖ ಅಭಿವೃದ್ಧಿ ಸಾಧಿಸಿ ಬಲಿಷ್ಠ ರಾಷ್ಟ್ರವಾಗಿ ಬೆಳೆಯಬಹುದೆಂದು ತಿಳಿದು ಯುರೋಪಿನ ರಾಷ್ಟ್ರಗಳು ತಲ್ಲಣಗೊಂಡಿವೆ. ತಮ್ಮ ಭದ್ರತೆ ಹಾಗೂ ಸಾರ್ವಭೌಮತ್ವಕ್ಕೆ ಎಲ್ಲಿ ಸಂಚಕಾರ ಬಂದುಬಿಡುವುದೋ ಎಂಬುದು ಆ ದೇಶಗಳ ಆತಂಕ.

ಅವುಗಳ ಆತಂಕಕ್ಕೆ ಕಾರಣಗಳಿಲ್ಲದಿಲ್ಲ. ಏಕೀಕೃತ ಜರ್ಮನಿ ಎಂಬತ್ತೈದು ಮಿಲಿಯನ್ ಜನಸಂಖ್ಯೆಯನ್ನು ಹೊಂದುವುದರಿಂದ, ಅಪಾರ ಮಾನವ ಸಂಪನ್ಮೂಲದ ಸದ್ಬಳಕೆಯನ್ನು ಮಾಡಿಕೊಳ್ಳಲಿದೆ. ಯುರೋಪಿನ ಇತರ ರಾಷ್ಟ್ರಗಳಿಗೆ ಹೋಲಿಸಿದರೆ, ಈ ಶಕ್ತಿ ಅಗಾಧವೆನಿಸಲಿದೆ. ಎರಡೂ ದೇಶಗಳ ಮಿಲಿಟರಿ ಶಕ್ತಿಗಳು ಒಂದಾಗಲಿವೆ. ಇದರಿಂದ ಏಕೀಕೃತ ಜರ್ಮನಿಯ ಸೈನಿಕ ಬಲ 2 ಮಿಲಿಯನ್‌ಗೆ ಏರಲಿದೆ. ಇದರಿಂದ ಸೈನಿಕವಾಗಿಯೂ ಜರ್ಮನಿ, ಯುರೋಪಿನಲ್ಲಿಯೇ ಅತ್ಯಂತ ಬಲಶಾಲಿ ರಾಷ್ಟ್ರವಾಗಲಿದೆ. ಮೊದಲಿನಿಂದಲೂ ಮುಕ್ತ ಮಾರುಕಟ್ಟೆ ನೀತಿಯನ್ನು ಅನುಸರಿಸಿಕೊಂಡು ಬಂದ ಪಶ್ಚಿಮ ಜರ್ಮನಿ, ವಿಲೀನದ ನಂತರವೂ ಅದೇ ನೀತಿ

ಯನ್ನು ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿದೆ. ಇದರಿಂದ ಸ್ವಾಭಾವಿಕವಾಗಿ ರಫ್ತು ಹೆಚ್ಚಾಗಲಿದ್ದು, ಐಕ್ಯ ಜರ್ಮನಿ ಉತ್ಪಾದಿಸಿದ ವಸ್ತುಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಪ್ರಾಮುಖ್ಯತೆ ಹಾಗೂ ಬೇಡಿಕೆ ಸಹಜವಾಗಿಯೇ ಬರಲಿದೆ. ಇದರಿಂದ ಯುರೋಪಿನ ಮಾರುಕಟ್ಟೆ ಹಾಗೂ ಆರ್ಥಿಕ ವ್ಯವಸ್ಥೆಗೆ ಗಣನೀಯ ಹೊಡೆತ ಬೀಳಲಿದೆ. ಸ್ವಾಭಾವಿಕವಾಗಿಯೂ ಎಲ್ಲ ರಂಗದಲ್ಲಿಯೂ ಪ್ರಗತಿ ಸಾಧಿಸಲು ಬೇಕಾದ ಪ್ರಮುಖ ಅಂಶಗಳು ಐಕ್ಯ ಜರ್ಮನಿಯ ಕಡೆಗಿರುವಾಗ ಅದು ಯುರೋಪಿನಲ್ಲಿಯೇ ಶಕ್ತಿಶಾಲಿ ರಾಷ್ಟ್ರವಾಗಿ ಮೆರೆಯಲಿದೆಯೆಂಬುದು ಅತಿಶಯೋಕ್ತಿಯೇನಲ್ಲ. ಜರ್ಮನಿಯ ಏಕೀಕರಣದಿಂದ ನ್ಯಾಟೋ ಹಾಗೂ ಯುರೋಪಿಯನ್ ಸಮುದಾಯ ರಾಷ್ಟ್ರಗಳು ತಮ್ಮ ಇತಿಮಿತಿ ಹಾಗೂ ಸಾಮರ್ಥ್ಯವನ್ನು ಪುನರ್ ವಿಮರ್ಶಿಸಿಕೊಳ್ಳುವ ಕಾಲ ಸನ್ನಿಹಿತವಾದಂತೆ ಕಂಡುಬರುತ್ತಿದೆ.

ಎರಡೂ ಜರ್ಮನಿಗಳು ಒಂದುಗೂಡಿರುವದು ಮತ್ತೊಂದು 'ಸೂಪರ್ ಪವರ್'ನ ಜನ್ಮವೇ ಎಂದು ಜಾಗತಿಕವಾಗಿ ಚರ್ಚೆಗೆ ಗ್ರಾಸವಾಗಿರುವ ವಿಷಯ. ಈ ಪ್ರಶ್ನೆಗೆ ಉತ್ತರಿಸುವುದು ತುಸು ಕಷ್ಟದಾಯಕ. ಏಕೆಂದರೆ ಜರ್ಮನಿಯ ಏಕೀಕರಣ ನಡೆದು ಕೇವಲ ಎರಡು ತಿಂಗಳಾಗಿವೆ. ಅಲ್ಲಿಯ ಜನರು ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಬೇಕಾಗಿರುವ ಹಿನ್ನಲೆಯಲ್ಲಿ ಇದರ ಕುರಿತು ಚರ್ಚೆ ಕೇವಲ ಊಹೆ, ಕಲ್ಪನೆ, ಹಾಗೂ ಲೆಕ್ಕಾಚಾರಗಳ ಮೇಲೆ ಮಾತ್ರ ನಿಲ್ಲುತ್ತದೆ.

ಆದರೂ ಅದೇ ದಿಕ್ಕಿನಲ್ಲಿ ಆರೋಗ್ಯಕರವಾಗಿ, ಪೂರ್ವಾಗ್ರಹವಿಲ್ಲದೇ ಚರ್ಚಿಸುವುದಾದರೆ, ಏಕೀಕೃತ ಜರ್ಮನಿಗೆ 'ಸೂಪರ್ ಪವರ್' ಆಗಿ ವಿಜೃಂಭಿಸುವ ಶಕ್ತಿ ಖಂಡಿತವಾಗಿಯೂ ಇದೆಯೆನ್ನಬಹುದು. ಈಗಿನ 'ಸೂಪರ್ ಪವರ್' ಎಂದು ಎನಿಸಿಕೊಂಡ ಅಮೇರಿಕ ಹಾಗೂ ರಷ್ಯಾದಷ್ಟು ಭೂವಿಸ್ತಾರವಾಗಲಿ, ನೈಸರ್ಗಿಕ ಸಂಪತ್ತು ಅಥವಾ ಮಾನವ ಸಂಪನ್ಮೂಲಗಳಾಗಲೀ ಇಲ್ಲದಿರಬಹುದು. ಹತ್ತು ನಿಮಿಷದಲ್ಲಿ ಜಗತ್ತನ್ನೇ ಉಡಾಯಿಸಿಬಿಡುವ ಯುದ್ಧ ವಿಮಾನಗಳು ಇಲ್ಲದಿರಬಹುದು. ಪರಮಾಣು ಶಕ್ತಿಯಿಂದಲೇ ಪ್ರಪಂಚವನ್ನು ನಿಗ್ರಹಿಸುವ ದೊಡ್ಡ ದೊಡ್ಡ ಪರಮಾಣು ಸ್ಥಾವರಗಳು ಇಲ್ಲದಿರಬಹುದು. ಅಣುಬಾಂಬ್ ಆಗಲಿ, ರಾಸಾಯನಿಕ ಶಸ್ತ್ರಾಸ್ತ್ರಗಳಾಗಲಿ, ಜಲಾಂತರ್ಗಾಮಿ ಯುದ್ಧ ನೌಕೆಗಳಾಗಲಿ ಇಲ್ಲದಿರಬಹುದು. ಆದರೆ ಇವುಗಳನ್ನು 'ದೈತ್ಯ ಶಕ್ತಿ' ಹಾಗೂ 'ಸೂಪರ್ ಪವರ್' ಎಂದು ಎಣಿಸಬೇಕಾಗಿಲ್ಲ. ತನ್ನ ಅಣುಬಾಂಬ್ ಜಮಾವಣೆಯಿಂದಲೋ, ತಾನು ಹೊಂದಿರುವ ಯುದ್ಧ ವಿಮಾನಗಳ ಸಂಖ್ಯಾಬಲದಿಂದಲೋ 'ಸೂಪರ್ ಪವರ್' ಆದ ರಾಷ್ಟ್ರಗಳು ಇವೆಲ್ಲವನ್ನೂ ಹೊಂದಿ, ಕೈ ಚೆಲ್ಲಿದ ನಿದರ್ಶನಗಳು ನಮ್ಮ ಮುಂದಿವೆ. ಇವುಗಳೇ 'ಸೂಪರ್ ಪವರ್' ಎಂದು ನಿರ್ಧರಿಸುವ ಮಾನದಂಡಗಳಲ್ಲ. ಆ ಕಾಲ ಈಗ ದೂರವಾಗಿದೆ. ಅಣುಸ್ಥಾವರಗಳು, ಯುದ್ಧನೌಕೆಗಳು ಅಥವಾ ಕ್ಷಿಪಣಿಗಳು 'ಸೂಪರ್ ಪವರ್' ರಾಷ್ಟ್ರಗಳ ಬಂಡವಾಳಗಳು. ಹಾಗೂ ನಿಮಿತ್ತಗಳು. ಹಾಗೆಂದು ಅವೇ ನಿರ್ಧಾರಮಾಪಕಗಳಲ್ಲ. ಸೈನಿಕ ಶಕ್ತಿಗಿಂತ ಮಿಗಿಲಾದದ್ದು ಆ ದೇಶದ ಹಣಕಾಸು ವ್ಯವಸ್ಥೆ. ವಾಣಿಜ್ಯವೊಂದೇ ಸೈನಿಕ ಶಕ್ತಿಗೆ ಪ್ರೇರಣೆ ನೀಡಬಲ್ಲುದು. ಜನರ ಜೀವನ ಮಟ್ಟ ತನ್ಮೂಲಕ ದೇಶದ ಹಣಕಾಸು ಸ್ಥಿತಿ, ಆ ದೇಶದ ಅಣುಸ್ಥಾವರ, ಕ್ಷಿಪಣಿ, ಜಲಾಂತರ್ಗಾಮಿ ನೌಕೆ ಇತ್ಯಾದಿಗಳನ್ನು ನಿರ್ಧರಿಸುತ್ತದೆ.

ಕೇವಲ ತನ್ನ ಮಿಲಿಟರಿ ಸಾಮರ್ಥ್ಯದಿಂದಲೇ 'ಸೂಪರ್ ಪವರ್' ಎಂದು ಕರೆಯಿಸಿಕೊಳ್ಳುವ ದೇಶಗಳು ಈ ವೆಚ್ಚಕ್ಕೆ ತನ್ನ ಸಂಪನ್ಮೂಲಗಳನ್ನು ಸುರಿದು, ಇತ್ತೀಚಿನ ವರ್ಷಗಳಲ್ಲಿ ಆರ್ಥಿಕವಾಗಿ ತೂಕಡಿಸುತ್ತಿವೆ. ಈ ಕಾರಣದಿಂದಲೇ ಅಷ್ಟೇನೂ ಭೂವಿಸ್ತಾರವಿಲ್ಲದ, ಕೇವಲ



ಮಾನವ ಶ್ರಮವನ್ನೂ ಬೆವರನ್ನೇ ನಂಬಿಕೊಂಡ ಜಪಾನ್ ಹಾಗೂ ಪಶ್ಚಿಮ ಜರ್ಮನಿಗಳು ಜಾಗತಿಕ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸುವುದರ ಮೂಲಕ ತಮ್ಮ ಆರ್ಥಿಕ ವ್ಯವಸ್ಥೆಯನ್ನು ಗಣನೀಯವಾಗಿ ಸುಧಾರಿಸಿಕೊಂಡಿವೆ. ಈ ದೇಶಗಳ ತಂತ್ರಜ್ಞಾನದ ಎದುರಿಗೆ ಅಮೇರಿಕದ ತಂತ್ರಜ್ಞಾನ ಈಗ ನಿಲ್ಲುವುದಿಲ್ಲ. ಅದಕ್ಕಾಗಿಯೇ ಜಪಾನ್ ಹಾಗೂ ಜರ್ಮನಿಯು ವಸ್ತುಗ

ಳಿಗೆ ಪ್ರಪಂಚದ ಯಾವುದೇ ಮಾರುಕಟ್ಟೆಯಲ್ಲಾದರೂ ಅಪಾರ ಬೇಡಿಕೆ. ಪರಿಸ್ಥಿತಿ ಹೀಗೆ ಮುಂದುವರಿದರೆ, ಏಕೀಕೃತ ಜರ್ಮನಿ ಆರ್ಥಿಕವಾಗಿ ಅತ್ಯಂತ ಶ್ರೀಮಂತಗೊಂಡು, ದೈತ್ಯ ರಾಷ್ಟ್ರವಾಗುವುದರಲ್ಲಿ ಎರಡು ಮಾತಿಲ್ಲ! ಇದನ್ನೇ ನಿಜವೆಂದು ಭಾವಿಸುವಂತೆಯೂ ಇಲ್ಲ, ಆ ಮಾತು ಬೇರೆ.

ಇದರ ಜತೆಗೆ ಏಕೀಕೃತ ಜರ್ಮನಿಯ ಇನ್ನೊಂದು ಮುಖವನ್ನೂ ಗಮನಿಸಬೇಕು. ಎರಡೂ ಜರ್ಮನಿಗಳು ಒಂದಾದುದು ಒಂದು 'ಪವಾಡ'ವಾಗಿರಬಹುದು. ಆದರೆ ಒಂದಾದ ಮಾತ್ರಕ್ಕೆ ಅಲ್ಲಿ 'ಪವಾಡ'ಗಳೇ ನಡೆಯುತ್ತವೆಯೆಂದು ಲೆಕ್ಕಾಚಾರ ಹಾಕುವುದು ತಪ್ಪು. ಕಾರಣ, ಪೂರ್ವ ಜರ್ಮನಿ ಆರ್ಥಿಕವಾಗಿ ಸಂಪೂರ್ಣವಾಗಿ ಕೃಶಗೊಂಡು, ಹಲವಾರು ಸಮಸ್ಯೆಗಳನ್ನು ತನ್ನ ಮಡಿಲಿಗೆ ಕಟ್ಟಿಕೊಂಡಿರುವ ಸಂದಿಗ್ಧ ಸಮಯದಲ್ಲಿಯೇ 'ಏಕೀಕರಣ'ಗೊಂಡಿದೆ. ಪೂರ್ವ ಜರ್ಮನಿಯಲ್ಲಿ ನಿರುದ್ಯೋಗ ಸಮಸ್ಯೆ ಪರಿಹರಿಸಲಾಗದಷ್ಟು ವಿಕೋಪಕ್ಕೆ ಹೋಗಿದೆ. ಪೂರ್ವ ಜರ್ಮನಿಯ ಅಸಮಂಜಸ ಅರ್ಥ ವ್ಯವಸ್ಥೆಯನ್ನು ಒಂದು ರೂಪಕ್ಕೆ ತರಲು ಮುಂದಿನ ಐದು ವರ್ಷಗಳಲ್ಲಿ ಸುಮಾರು ಒಂದು ಸಾವಿರ ಶತಕೋಟಿ ಡಿ.ಎಂ. (ಡಾಯಿಷ್ ಮಾರ್ಕ್) ಬೇಕಾಗಬಹುದೆಂಬುದು ಒಂದು ಅಂದಾಜು. ವಿದೇಶಿ ಸಾಲ ಹಾಗೂ ಉಳಿದ ಋಣಭಾರವನ್ನು ತೀರಿಸಲು ಸುಮಾರು 450 ಶತಕೋಟಿ ಮಾರ್ಕ್‌ಗಳನ್ನು ಪಶ್ಚಿಮ ಜರ್ಮನಿಯ ಡಿ.ಎಂ.ಗೆ ಪರಿವರ್ತಿಸಬೇಕಾಗಿದೆ. ಇದರ ಜತೆಗೆ ಪರಿಸರ ಸಂರಕ್ಷಣೆಗೆ ಸುಮಾರು 300 ಶತಕೋಟಿ ಡಿ.ಎಂ. ಹಾಗೂ ಸೋವಿಯತ್ ಸೇನೆಯ ವಾಪಸಾತಿ ವೆಚ್ಚವಾಗಿ 15 ಶತಕೋಟಿ ಡಿ.ಎಂ. ಸೇರಿದಂತೆ ಮುನ್ನೂರು ಶತಕೋಟಿ ಡಿ.ಎಂ. ಬೇಕಾಗಬಹುದು. ನಿರುದ್ಯೋಗಿ ವಿಮೆ ನೀತಿಗೆ ಹಾಗೂ ವೃದ್ಧಾಪ್ಯ ಪಿಂಚಣಿಗಾಗಿ ಸುಮಾರು 30 ಶತಕೋಟಿ ಡಿ.ಎಂ.ಗಳು ಬೇರೆ ಬೇಕು. ಈಗಿನ ಪೂರ್ವ ಜರ್ಮನಿಯನ್ನು ಪಶ್ಚಿಮ ಜರ್ಮನಿಯ ಹಾಗೆ ಮಾಡಬೇಕಾದರೆ ಏನಿಲ್ಲವೆಂದರೂ ಕನಿಷ್ಠ 750 ಬಿಲಿಯನ್ ಡಾಲರ್ ಬೇಕಾಗಬಹುದೆಂದು ಅಂದಾಜು ಹಾಕಲಾಗಿದೆ.

ಇವೆಲ್ಲವುಗಳ ಪರಿಣಾಮವಾಗಿ ಜರ್ಮನಿ ಸಮತೋಲನಕ್ಕೆ ಬರಲು ಪ್ರಾರಂಭದ ಹಂತದಲ್ಲಿಯೇ ಸಾಕಷ್ಟು ಹಣವನ್ನು ತೊಡಗಿಸಬೇಕಾಗುವುದು. ಇದು ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸುವುದಲ್ಲದೇ, ವಿಪರೀತ ಹಣದುಬ್ಬರಕ್ಕೂ ಕಾರಣವಾಗಬಹುದು. ಇದರಿಂದ ತೆರಿಗೆ ಹೆಚ್ಚಾಗಿ, ನಾಗರಿಕರು ಬವಣೆ ಪಡುವ ಸಂದರ್ಭ ಬರಬಹುದು. ಈ ಕಾರಣದಿಂದ ಪಶ್ಚಿಮ ಜರ್ಮನಿಯ ನೌಕರರ ಸಂಬಳದಲ್ಲಿ ಶೇ. 28ರಷ್ಟು ಕಡಿಮೆಯಾಗುವ ಲಕ್ಷಣಗಳಿವೆ. ಈ ಸಂಗತಿ ಪಶ್ಚಿಮ ಜರ್ಮನಿಯಲ್ಲಿ ಒಂದು ರೀತಿಯ ದುಗುಡಕ್ಕೆ ಕಾರಣವಾಗಿದ್ದು, ಸಾಮಾಜಿಕ ಕ್ಷೋಭೆಗೂ ಕಾರಣವಾಗಬಹುದೆಂಬುದು



ಓಡಾಡೋ ಕಾರು ಬೇಕು ಅಂದಿದ್ರಲ್ಲಾ, ಇದು ಸಾಕೇ ಅಳಿಯಂದಿರೇ ?

ತಜ್ಞರ ಅಭಿಮತ. ಪೂರ್ವ ಜರ್ಮನ್ನರ ಸಂತೃಪ್ತಿ ಹಾಗೂ ಸುಖ-ಸಮಾಧಾನಕ್ಕಾಗಿ ತಮ್ಮ ಗಳಿಕೆಯ ಕೆಲವು ಪಾಲನ್ನು ಪೂರ್ವ ಜರ್ಮನ್‌ರಿಗೆ ನೀಡಬೇಕೆಂಬ ಭಾವನೆಯೂ ಜನರಲ್ಲಿ ಈಗಾಗಲೇ ಬೇಸರಕ್ಕೆ ಕಾರಣವಾಗಿದೆ. ಇದರ ಜತೆಗೆ ಪೂರ್ವ ಜರ್ಮನಿಯಲ್ಲಿರುವ ನಿರುದ್ಯೋಗಿಗಳು ಸುಮಾರು ಐದು ಲಕ್ಷಕ್ಕೂ ಜಾಸ್ತಿ. ಇವರಿಗೆ ಉದ್ಯೋಗ ಒದಗಿಸಿಕೊಡುವುದು ತಲೆ ನೋವಿನ ಸಂಗತಿ. ಇನ್ನು ಮುಂದೆ ಪೂರ್ವ ಜರ್ಮನ್‌ರಿಗೆ ಪುಕ್ಕಟೆ ರೇಷನ್ ಸಿಗುವುದಿಲ್ಲ. ಅದಲ್ಲದೇ ಮುಂದಿನ ಆರು ತಿಂಗಳ ಅವಧಿಯಲ್ಲಿ ಕಾರ್ಮಿಕರಿಗೆ ಕೆಲಸ ಕಳೆದುಕೊಳ್ಳುವ ಭಯ. ಹೀಗಾಗಿ ಜರ್ಮನಿಯ ಏಕೀಕರಣ ಹಲವಾರು ಸಮಸ್ಯೆಗಳ ಸಂಕಲನವಾಗಿದೆಯೆಂಬ ಮಾತು ರಾಜತಾಂತ್ರಿಕವಲಯಗಳಲ್ಲಿ ಕೇಳಿ ಬರುತ್ತಿದೆ. ಈ ಎಲ್ಲ ಸಮಸ್ಯೆಗಳನ್ನು ಹಾಗೆಯೇ ಬಿಟ್ಟರೆ ಅದರ ಪರಿಣಾಮ ಅಗಾಧ. ಇದೇ ಮುಂದೆ ಆಂತರಿಕ ಕ್ಷೋಭೆಗೆ ಕಾರಣವಾಗಬಹುದು. ಇವೆಲ್ಲವನ್ನೂ ಏಕೀಕೃತ ಜರ್ಮನಿ ಹೇಗೆ ನಿಭಾಯಿಸಬಲ್ಲುದೆಂಬುದೇ ಪ್ರಶ್ನೆ.

ಪೂರ್ವ ಜರ್ಮನಿಯ ಪ್ರಖ್ಯಾತ ಲೇಖಕ ಹಾಗೂ ವಿಚಾರವಾದಿ ಗುಂಥರ್ ಗ್ರಾಸ್ ಅವರ ಮಾತಿನಲ್ಲಿ ಹೇಳುವುದಾದರೆ, 'ಎರಡೂ ಜರ್ಮನಿಗಳು ಐಕ್ಯಗೊಂಡಿರುವುದು ಜಾಗತಿಕ ಶಾಂತಿ ಹಾಗೂ ಸೌಹಾರ್ದದ ಹಿನ್ನೆಲೆಯಲ್ಲಿ ಅತ್ಯಂತ ಆರೋಗ್ಯಕರ ಬೆಳವಣಿಗೆಯಿರಬಹುದು. ಆದರೆ ವಿಲೀನ ಮತ್ತೊಂದು ಮಾನಸಿಕ ವಿಭಜನೆಗೆ ಪ್ರೇರಣೆ ನೀಡಬಹುದು. ಈ ವಿಲೀನ ಒಂದು ಆಧುನಿಕ ದುರಂತವಾದರೆ ಅದರಲ್ಲೇನೂ ಆಶ್ಚರ್ಯವಿಲ್ಲ' ಈ ಅಭಿಪ್ರಾಯ ತುಸು ಭಾವೋದ್ವೇಗ ಹಾಗೂ ತುರುಸಿನ ಅನಿಸಿಕೆಯೆನಿಸಿದರೂ ಈ ಧ್ವನಿಯ ಹಿಂದಿರುವ ಸತ್ಯವನ್ನು ಮರೆಯುವಂತಿಲ್ಲ.

ಹಾಗಾದರೆ, ಈ ಸಂಗತಿಗಳು ಪಶ್ಚಿಮ ಅಥವಾ ಪೂರ್ವ ಜರ್ಮನ್‌ರಿಗೆ ಗೊತ್ತಿಲ್ಲವೇ? ಮುಂದೆ ಆಗುವುದನ್ನು ಲಕ್ಷಿಸದೇ ಈ ವಿಲೀನವನ್ನು ನೆರವೇರಿಸಿದರೇ? ಜರ್ಮನ್ ಪುನರ್ ಏಕೀಕರಣದ ಕುರಿತು ಪಶ್ಚಿಮ ಹಾಗೂ ಪೂರ್ವ ಜರ್ಮನಿಗಳಲ್ಲಿ ದಶಕಗಳ ಕಾಲ ವಿಚಾರಸಂಕಿರಣ, ಗೋಷ್ಠಿಗಳು ನಡೆದಿವೆ. ಸಮಾಜ ವಿಜ್ಞಾನಿಗಳು, ರಾಜತಾಂತ್ರಿಕರು, ಮನಶ್ಶಾಸ್ತ್ರಜ್ಞರು, ಬುದ್ಧಿಜೀವಿಗಳು, ವಿಚಾರವಾದಿಗಳು, ಧರ್ಮಶಾಸ್ತ್ರಜ್ಞರು, ರಾಜಕಾರಣಿಗಳು ಮುಂತಾದವರು ವಿಲೀನದ ಬಗ್ಗೆ ವ್ಯಾಪಕ ಚರ್ಚೆ ನಡೆಸಿ, ನಂತರ ಒಮ್ಮತಕ್ಕೆ ಬಂದ ಪರಿಣಾಮವಾಗಿ ಈ ಏಕೀಕರಣ ಪೂರ್ತಗೊಂಡಿದೆ. ಏಕೀಕರಣಗೊಂಡ ಕೂಡಲೇ ಈ ಸಮಸ್ಯೆಗಳ ಅರಿವು ಅವರಿಗೆ ಇರಲಿಲ್ಲವೆಂದೇನಲ್ಲ. ಪ್ರಾರಂಭದ ಹಂತದ ಕೆಲವು ಓರೆಕೋರೆಗಳನ್ನು ಸರಿಪಡಿಸಿದರೆ, ಮುಂದೆ ಇದರಿಂದ ಯಶಸ್ಸು ದೊರೆಯಬಹುದೆಂಬುದು ಪಶ್ಚಿಮ ಜರ್ಮನ್‌ರ ಲೆಕ್ಕಾಚಾರ.

ಪಶ್ಚಿಮ ಜರ್ಮನಿಯ ತಂತ್ರಜ್ಞಾನ ಹಾಗೂ ಕೈಗಾರಿಕೆಗಳಿಗೆ ಪೂರ್ವಜರ್ಮನಿಯ 16 ಸಾವಿರ ನುರಿತ ಕೆಲಸಗಾರರಿದ್ದಾರೆ. ಪಶ್ಚಿಮ ಜರ್ಮನಿಗಿಂತ ಪೂರ್ವ ಜರ್ಮನಿಯ ಭೂಪ್ರದೇಶ ಶೇ. 45ರಷ್ಟು ಹೆಚ್ಚಿದೆ. ಇದಲ್ಲದೇ ಪೂರ್ವ ಜರ್ಮನಿ ಕಲ್ಲಿದ್ದಲು ಗಣಿಗಳ ಆಗರ. ಕಬ್ಬಿಣ ಹಾಗೂ ನೈಸರ್ಗಿಕ ಅನಿಲ ನಿಕ್ಷೇಪಗಳ ಸಮೃದ್ಧಿಯ ಬೀಡು. ಈ ಕಾರಣಗಳಿಂದಲೇ ಪೂರ್ವ ಜರ್ಮನಿಯಲ್ಲಿ ಕಬ್ಬಿಣದ ಕಾರ್ಖಾನೆಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದು, ಪ್ರತಿ ವರ್ಷ ಸರಾಸರಿ ಹತ್ತು ದಶಲಕ್ಷ ಟನ್‌ಗಳಷ್ಟು ಕಬ್ಬಿಣ ಉತ್ಪಾದನೆಯಾಗುತ್ತದೆ. ಇದು ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಪ್ರೇರಣೆ ನೀಡಲಿದೆ.

ವಿಲೀನದಿಂದಾಗಿ ಜರ್ಮನಿಯ ಆರ್ಥಿಕ ಪ್ರಗತಿಯ ದರ ಶೇ. 3ರಷ್ಟು ಕುಸಿಯಬಹುದೆಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಕುಸಿತ ಮೂರು ವರ್ಷಗಳಲ್ಲಿ ನಿವಾರಣೆಯಾಗಿ 1993ರ ಹೊತ್ತಿಗೆ ಐಕ್ಯ ಜರ್ಮನಿಯ ಪ್ರಗತಿ ಅಥವಾ ಅಭಿವೃದ್ಧಿಯ ದರ ಶೇ.

10ಕ್ಕೆ ಏರಬಹುದೆಂಬುದು ಅವರ ವಾದ. ಹೊಸ ಕೈಗಾರಿಕೋದ್ಯಮಗಳ ಸ್ಥಾಪನೆ, ಪಶ್ಚಿಮ ಜರ್ಮನಿಯ ಖಾಸಗಿ ಸಂಸ್ಥೆಗಳ ಬಂಡವಾಳ ಹೂಡಿಕೆ, ಸರ್ಕಾರದ ಪ್ರೋತ್ಸಾಹ, ಹೊಸ ಹೊಸ ಯೋಜನೆಗಳ ಅನುಷ್ಠಾನ ಹಾಗೂ ಕೈಗಾರಿಕೆಗಳ ನಿರ್ಮಾಣದಿಂದ ಸುಮಾರು ಏಳು ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಲಿವೆ. ಪೂರ್ವ ಜರ್ಮನಿಯ ನಿರುದ್ಯೋಗಿಗಳಿಗೆ ಇದೊಂದು ವರದಾನವಾಗಬಹುದು. ವಿಲೀನ ನಡೆದ ಎರಡು ತಿಂಗಳ ಅವಧಿಯಲ್ಲಿಯೇ ಸಾವಿರಾರು ಮಂದಿ ಉದ್ಯೋಗ ಪಡೆದಿದ್ದಾರೆಂದು 'ಜರ್ಮನ್ ನ್ಯೂಸ್' ವರದಿ ಮಾಡಿದೆ.

ಜರ್ಮನಿಯ ಏಕೀಕರಣದಿಂದಾಗಿ ನ್ಯಾಟೋ ರಾಷ್ಟ್ರಗಳ ಮೇಲೆ ಅಗಾಧ ಪರಿಣಾಮವುಂಟಾಗಲಿದ್ದು, ಈಗಾಗಲೇ ಈ ರಾಷ್ಟ್ರಗಳು ತಮ್ಮ ಭೀತಿಯನ್ನು ವ್ಯಕ್ತಪಡಿಸಿವೆ. ನ್ಯಾಟೋ ರಾಷ್ಟ್ರಗಳ ಸಂಕೀರ್ಣದಿಂದ ಜರ್ಮನಿ ಹೊರಗುಳಿದರೆ, ಭದ್ರತೆಯ ದೃಷ್ಟಿಯಿಂದ ತನ್ನ ಸೈನಿಕ ಸಾಮರ್ಥ್ಯವನ್ನು ಹೆಚ್ಚು ಮಾಡಿಕೊಳ್ಳಲಿದೆಯೆಂಬ ಆತಂಕ ಕೆಲವು ದೇಶಗಳಿಗೆ ಕಾಡುತ್ತಿದೆ. ಈ ಕಾರಣದಿಂದಲೇ 'ಯುರೋಪಿಯನ್ ಭದ್ರತಾ ಮಂಡಲಿ' ರಚನೆಗೆ ಆತಂಕಗೊಂಡ ರಾಷ್ಟ್ರಗಳು ಈಗಾಗಲೇ ಒತ್ತಾಯಿಸಿವೆ. ಜರ್ಮನಿಯ ಏಕೀಕರಣ ಯುರೋಪಿನ ದೇಶಗಳ ಭದ್ರತೆ ಹಾಗೂ ಸಾರ್ವಭೌಮತ್ವಕ್ಕೆ ಕುಂದು ತರಲಾರದೆಂದು ಪಶ್ಚಿಮ ಜರ್ಮನಿಯ ಅಧ್ಯಕ್ಷ ಹೆಲ್ಮೆಟ್ ಕೋಲ್ ಸ್ಪಷ್ಟಪಡಿಸಿದ್ದಾರೆ.

ಇವೆಲ್ಲವುಗಳ ಮಧ್ಯೆ ಒಂದು ಸಂಗತಿಯನ್ನು ಗಮನಿಸಬೇಕು. ಏಕೀಕೃತ ಜರ್ಮನಿಯ ಭೂಭಾಗ ಈಗ ಹೆಚ್ಚಿರುವುದರಿಂದ ರಾಜ್ಯಗಳ ಪುನರ್ವಿಂಗಡಣೆ, ಆಡಳಿತದ ಒಕ್ಕೂಟ ಹಾಗೂ ರಾಜ್ಯ ತತ್ವಗಳ ಜಾರಿಗಳನ್ನು ನಿಭಾಯಿಸುವುದು ಸುಲಭದ ಮಾತಲ್ಲ. ಹಾಗೆಯೇ ವಿದೇಶಾಂಗ ನೀತಿಯನ್ನು ಈಗಿನಂತೆ ಮುಂದುವರಿಸುವುದಾಗಲಿ, ಅಥವಾ ಒಂದೇ ಸಮನೆ ಬದಲಾಯಿಸುವುದಾಗಲಿ ಸುಗಮವಾದುದಲ್ಲ. ಹನ್ನೊಂದು ರಾಜ್ಯಗಳ ಬದಲಾಗಿ ಈಗ 16 ರಾಜ್ಯಗಳ ರಚನೆಯಾಗಿದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ, ಎರಡೂ ದೇಶಗಳ ಜನರ ಭಾವನೆಗೆ ಧಕ್ಕೆಯಾಗದ ರೀತಿಯಲ್ಲಿ ಸರಕಾರವನ್ನು ನಡೆಸಿಕೊಂಡು ಹೋಗಲು ಚಾಣಾಕ್ಷತನ, ದೂರದೃಷ್ಟಿ ಹಾಗೂ ಕೌಶಲ್ಯ ಪೂರ್ಣ ಮುತ್ಸದ್ದಿತನ ಬೇಕೆಬೇಕು. ಹೆಲ್ಮಟ್ ಕೋಲ್ ಈಗ ಸಾರಥ್ಯವನ್ನು ವಹಿಸಿಕೊಂಡಿದ್ದಾರೆ. ಅವರಿಗೆ ಅಂಥ ಸಾಮರ್ಥ್ಯವಿದೆ. ಈ ದಿಸೆಯಲ್ಲಿ ಎರಡೂ ಜರ್ಮನ್‌ರ ಸಹಕಾರ ಅತ್ಯಗತ್ಯ.

ಡಿಸೆಂಬರ್ 3ರಂದು ಪೂರ್ವ ಜರ್ಮನಿ ಪ್ರಜಾಪ್ರಭುತ್ವ ರಾಷ್ಟ್ರವಾಗುವ ಹಿನ್ನೆಲೆಯಲ್ಲಿ ಅಂದು ರಾಷ್ಟ್ರೀಯ ಪಾರ್ಲಿಮೆಂಟ್‌ಗೆ ಏಕೀಕೃತ ಜರ್ಮನಿಯಲ್ಲಿ ಮಹಾ ಚುನಾವಣೆ ನಡೆಯಲಿದೆ. ಈ ಚುನಾವಣೆ ಏಕೀಕೃತ ಜರ್ಮನಿಯ ರಾಜಕೀಯ ಇತಿಹಾಸದಲ್ಲೊಂದು ಮೈಲಿಗಲ್ಲಾಗಲಿದೆ.

ಜರ್ಮನ್ ಏಕೀಕರಣ ಈ ಶತಮಾನದ ಒಂದು ಅದ್ಭುತ. ಮನುಷ್ಯ-ಮನುಷ್ಯರ ನಡುವಿನ ಭಾವನಾತ್ಮಕ ಸಂಬಂಧದ, ರಾಜಕೀಯ ಅಧಃಪತನ, ಸಾಮ್ರಾಜ್ಯಶಾಹಿಗಳ ಏಳುಬೀಳಿನ, ಆತ್ಮೀಯತೆ-ಮಧುರ ಬಾಂಧವ್ಯಗಳ ಸಂಗಮದ, ಗೋಡೆಗಳನ್ನು ಕಟ್ಟಿ ಮನುಷ್ಯ ಸಂಬಂಧವನ್ನು ಬೇರ್ಪಡಿಸುವ ಸಮಯಸಾಧಕರ ಪ್ರತಿದ್ವಂದ್ವ ಹಾಗೂ ಸಂಘರ್ಷಗಳ ರೋಚಕ ಗಾಥೆ ಅಲ್ಲವೇ? ●



ಹಸಿರಿನರಮನೆಯಲ್ಲಿ ಹಸಿದು ಕುಳಿತ

ಕರ್ನಾಟಕದ ಕರಿಯರು: ಸಿದ್ದಿಗಳು

ರವಿ ಬೆಳಗೆರೆ

ಅವರು ಈ ನೆಲದವರಲ್ಲ. ಈ ಕಾಡಿನವರಲ್ಲ. ಎಲ್ಲಿಯೋ ಕೊಳೆತು ಮತ್ತೆಲ್ಲೋ ಚಿಗಿತವರು. ಎಲ್ಲಿಂದಲೋ ಬಂದವರಿಗೆ ಶತಮಾನಗಳು ಸವೆದ ನಂತರವೂ ನೆಲೆ ದೊರೆತಿಲ್ಲ. ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಇವರದು ನಿರಂತರ ಅನ್ನ ಸತ್ಯಾಗ್ರಹ. ಗಾಳಿಯೊಂದಿಗೆ, ಮಳೆಯೊಂದಿಗೆ, ರೋಗ, ಕತ್ತಲು, ಹತಾಶೆ, ಶೋಷಣೆ ಮತ್ತು ಕಳೆದು ಹೋಗುತ್ತಿರುವ ತಮ್ಮ ಇಡೀ ಜನಾಂಗದ ಸತುವಿಗಾಗಿ ನಿರಂತರ ಬಡಿದಾಡುವ ಶಾಪಗ್ರಸ್ತ ಕರಿಯರು.

ಅಲ್ಲಿ, ಅವರ ತವರಿನಲ್ಲಿ ನೆಲ್ಸನ್ ಬಿಡುಗಡೆಯಾದ. ಕರಿಯ ತುಟಿಗಳಲ್ಲಿ ಬೆಳಕು ಅರಳಿತು ನಗುವಿನಂತೆ. ಆದರೆ ಇಲ್ಲಿ ಈ ಕಾಡುಗಳಲ್ಲಿ ಬದುಕು ಚಿಗಿಯಲಿಲ್ಲ. ಅರ್ಧ ಶತಮಾನದಿಂದ ಒಂದೇ ಸವನೆ ಬ್ಯಾಲೆಟ್ ಬಾಕ್ಸಿನೊಳಕ್ಕೆ ಓಟು ತುರುಕಿ ಬಂದರೂ ಈ ಮಲತಾಯಿ ಮಕ್ಕಳ ಭಾಗ್ಯ ಬದಲಾಗಲಿಲ್ಲ. ಅದಕ್ಕೇ ಹೇಳಿದ್ದು, ಇವರು 'ಹಸಿರಿನರಮನೆಯ ನಿರ್ಗತಿಕ ಜೀವಿಗಳು'!.

ಹುಬ್ಬಳ್ಳಿಯಿಂದ ಯಲ್ಲಾಪುರಕ್ಕೆ ಸಾಗುವ ತಾರು ರಸ್ತೆ ಮೂರು ಸಲ ನಿಮ್ಮ ಮೊಬೈಕಿನ

ಚಕ್ರಗಳನ್ನು ಧಡ್ ಧಡಕ್ಕೆಂದು ಎತ್ತಿ ಕುಕ್ಕಿದರೆ, ಆ ಸ್ಪೀಡು ಬ್ರೇಕರುಗಳನ್ನು ದಾಟಿ ಎರಡು ಸಲ ಗೇರು ಬದಲಸುವುದರೊಳಗಾಗಿ ನೀವು ಕಿರುವತ್ತಿಯೆಂಬ ಊರೂ ಅಲ್ಲದ, ಹಳ್ಳಿಯೂ ಅಲ್ಲದ ಮನೆಗಳ ಗುಂಪಿನೊಳಕ್ಕೆ ಬಂದಿರುತ್ತೀರಿ. ಅಲ್ಲಿನ ಅಂಗಡಿಗಳ ಮುಂದೆ, ಬೀದಿಗಳಲ್ಲಿ, ಮರದ ನೆಳಲಿಗೆ, ರಸ್ತೆ ತಿರುವಿಗೆ..... ಹೀಗೆ ಅಲ್ಲೊಂದು ಇಲ್ಲೊಂದು ಕಂಡೀತು 'ಒಂದು ಕೃಷ್ಣ ಸುಂದರ ಜೀವಿ'. ಭಗವಂತ ತನ್ನ ಕಣ್ಣ ಕಾಡಿಗೆಯನ್ನೆಲ್ಲ ತೆಗೆದು ಈ ಜೀವಿಗಳ ಮೈ ಬಣ್ಣವಾಗಿಸಿದನೇನೋ? ಚಪ್ಪಟೆ ಮೂಗು, ಸಾವಿರಾರು ಕಡೆ ಸುಳಿದಿರುಗಿ ನಿಂತ ಗುಂಗುರು ಕೂದಲು, ಉಬ್ಬು ಹಲ್ಲು,



ಜಾರಿದ ಗಡ್ಡ, ಹೊಳೆಯುವ ಕಣ್ಣು ಮತ್ತು ಒಂದು ನಿಷ್ಕಳಂಕ ನಗೆ! ಥಟ್ಟನೆ ನಿಮಗೆ ಮೈಕ್ ಟೈಸನ್ ಅಥವಾ ಪ್ಯಾಟರ್ಸನ್ ನೆನಪಾದರೆ ಅಚ್ಚರಿಯಿಲ್ಲ. ಇವರು ಅದೇ ಬೇರಿನವರು. ನೀಗ್ರೋಯಿಡ್ ಸಂತತಿಯ ಜನ. ಉತ್ತರ ಕನ್ನಡಕ್ಕೆ ಬಂದು ಸಿದ್ದಿಗಳಾಗಿದ್ದಾರೆ.

ಮುಖ ಕಂಡ ತಕ್ಷಣ ಅವರ ಇಡೀ ಸಂಕುಲದ ಬಗ್ಗೆ ಹುಟ್ಟುವ ಕುತೂಹಲಗಳು ನಿಮ್ಮ ಪರೀಕ್ಷೆ, ಪ್ರಶ್ನೆ, ಸಂಶೋಧನೆಗಳೆಲ್ಲ ಮುಗಿಯುವ ಹೊತ್ತಿಗೆ ಒಂದು ಗಾಢವಾದ ನೋವಾಗಿ, ವಿಷಾದವಾಗಿ ಪರಿಣಮಿಸುವುದು ಸಹಜ. ಏಕೆಂದರೆ, ಎಂತೆಂಥ ಪರಕೀಯರನ್ನೋ ಕರೆದು, ಮೈದಡವಿ, ಮನೆಯಲ್ಲಿರಿಸಿಕೊಂಡು, ಅವರ ಉಪಟಳಗಳನ್ನೆಲ್ಲ ಸಹಿಸಿಕೊಂಡ ಭಾರತ ಮಾತೆ, ಈ ಕಪ್ಪು ಗುಲಾಬಿಗಳನ್ನೇಕೋ ಅರಳಲೂ ಬಿಟ್ಟಿಲ್ಲಾ.

ಎಲ್ಲಿಂದಲೋ ಬಂಧವರು

ಉತ್ತರ ಕನ್ನಡ ಜಿಲ್ಲೆಯ ಹಲವಾರು ಅಚ್ಚರಿಗಳಲ್ಲೊಂದಾದ ಈ ಸಿದ್ದಿ ಜನಾಂಗ ಮೂಲತಃ ಇಥಿಯೋಪಿಯಾದಿಂದ ವಲಸೆ ಬಂದ ಅಥವಾ ತರಲಾದ ಸಂತತಿಯೆಂದು ನಂಬಲಾಗಿದೆ. ಆಫ್ರಿಕಾದ ಕಾಡುಗಳಲ್ಲಿ, ತೊರೆಗಳ ಪಕ್ಕದಲ್ಲಿ, ದಟ್ಟ ಬೆಳದಿಂಗಳಿನಲ್ಲಿ ಆಡಿಕೊಂಡಿದ್ದಿರಬಹುದಾದ ಇವರನ್ನು ಪೋರ್ಚುಗೀಸರು, ಅರಬರು, ಅಬಿಸೀನಿಯನ್ ಶ್ರೀಮಂತರು ಹಿಡಿದು ತಂದಿರಬೇಕು. ವ್ಯಾಪಾರಿಗಳು ತಮ್ಮ ಗುಲಾಮರೆಂದೂ, ಯುದ್ಧಕೋರರು ತಮ್ಮ ಸೈನಿಕರೆಂದೂ ಇವರನ್ನು ಕರೆದಿರಬಹುದು. ಇಲ್ಲಿ ಬಂದು ಭಾರತದ ನಾನಾ ಕಡಲ ತೀರಗಳಲ್ಲಿ ಇವರನ್ನಿಳಿಸಿ, ದುಡಿಸಿ, ಸವೆದು ನಾಶವಾಗುವ ಸ್ಥಿತಿ ತಲುಪಿದ ಮೇಲೆ ಬದುಕಿಕೊಳ್ಳಿ ಎಂದು ಕೈಬಿಟ್ಟು ಹೋಗಿರಬಹುದು. ಮೊಜ್ಯಾಂಬಿಕ್, ಮೊರಾಕೋ, ಐವರಿ ಕೋಸ್ಟ್ ಮತ್ತು ಸೋಮಾಲಿಯಾಗಳನ್ನು ಅವರ ಮೂಲ ಮನೆಗಳೆಂದು ಗುರುತಿಸಿದವರೂ ಇದ್ದಾರೆ. ಆಫ್ರಿಕಾದ 'ಸಿದಾಮೊ', 'ಯೋ' ಮತ್ತು 'ಕ್ರೂ' ಸಂತತಿಯ ನೀಗ್ರೋಗಳಿಗೂ ಇಲ್ಲಿನ ಸಿದ್ದಿಗಳಿಗೂ ಸಂಬಂಧ ಹುಡುಕಲಾಗಿದೆ. ಇಥಿಯೋಪಿಯಾದ ಸಿದೋ ಮತ್ತು ಒಮೆಟೋ ಬುಡಕಟ್ಟುಗಳ ನಂಟೂ ಕಲ್ಪಿಸಲಾಗಿದೆ. ಭಾರತ ಮತ್ತು ಆಫ್ರಿಕಾ ನಡುವೆ ವ್ಯಾಪಾರ ಸಂಬಂಧಗಳು ತೀರ ಪ್ರಾಚೀನವಾದವು. ಐಗುಪ್ತದ ಪಶ್ಚಿಮ ತೀರಗಳು, ಅಲೆಕ್ಸಾಂಡ್ರಿಯಾ, ಸಮರ್ ಖಂಡ ಮತ್ತು ಐರೋಪ್ಯದೊಂದಿಗೆ ವಾಣಿಜ್ಯ ಸಂಬಂಧಗಳಿದ್ದುದಲ್ಲದೆ 'ಅಬೀಸೀನಿಯಾ' ಅಂದಿನ 'ದಾರಿ ಪಕ್ಕದ ಊರಿ'ನಂತಿದ್ದರಿಂದ ಅಬಿಸ್ಸಿಗಳು (ಅಬಿಸೀನಿಯಾದವರು) ಈ ವಾಣಿಜ್ಯ ಸರಪಳಿಯ ಭಾಗಗಳಾಗಿ ಸೇರಿಕೊಂಡಿರುವ ಸಾಧ್ಯತೆಗಳಿವೆ. ವ್ಯಾಪಾರ ಮಾಡಲು ತಾಕತ್ತಿಲ್ಲದವರು ವ್ಯಾಪಾರಿಗಳ ಗುಲಾಮರಾಗಿ, ಬಂಟರಾಗಿ, ಸಿಪಾಯಿಗಳಾಗಿ ಹಡಗು ಹತ್ತಿರಬಹುದು. ಅರೇಬಿಯಾದ ರಾಜಕಾರಣದಲ್ಲಿ ಪ್ರಮುಖ ಕೈವಾಡ ಹೊಂದಿದ್ದ ಅಬಿಸೀನಿಯಾ ಕಾಲಾಂತರದಲ್ಲಿ 'ಅಬಿಸ್ಸಿ'ಗಳನ್ನು ಅರಬರೊಂದಿಗೆ ಭಾರತಕ್ಕೆ ಕಳಿಸಿರಲೂಬಹುದು. ಅಂದಿನ ಅಬಿಸ್ಸಿಗಳೇ ಇಂದಿನ ಸಿದ್ದಿಗಳು ಎಂಬ ಅಭಿಪ್ರಾಯವೂ ಇದೆ.


ಒಂದು ವಿಶಾಲವಾದ ಹಸಿರು ಕಾರ್ಪೆಟ್ಟಿನಂತಿರುವ ಉತ್ತರಕನ್ನಡ ಜಿಲ್ಲೆ ಅನೇಕ ಬುಡಕಟ್ಟು ಜನಾಂಗಗಳಿಗೆ ಆಶ್ರಯಕೊಟ್ಟಿದೆ. ಆಫ್ರಿಕಾದ ಕಾಡುಗಳಿಂದ ಹೊರಬಿದ್ದು ಕಬ್ಬಕ್ಕಿಗಳಂತಾದ ಮೂಲ ಸಿದ್ದಿಗಳು ಬಹುಶಃ ಉತ್ತರ ಕನ್ನಡದ ದಟ್ಟಡವಿಗಳನ್ನು ಕಂಡಾಗ ಮತ್ತೆ ಮನೆ ದೊರಕಿತೆನ್ನಿಸಿ ಇಲ್ಲೇ ನೆಲೆಗೊಂಡಿರಬಹುದು. ಹಾಗಂತ ಆಫ್ರಿಕಾದಿಂದ ಹೊರಬಿದ್ದವರೆಲ್ಲಾ ಇಲ್ಲಿಗೇ ಬಂದರೆಂದಲ್ಲ. ಗುಜರಾತ್, ಮಹಾರಾಷ್ಟ್ರದ ಕೆಲ ಊರುಗಳು, ಲಖನೌ, ಕಲ್ಕತ್ತ, ಹೈದರಾಬಾದ್, ಮಲಬಾರ್, ಶ್ರೀಲಂಕಾಗಳಲ್ಲದೆ

ಸೂಡಾನ್, ನೈಜೀರಿಯಾ, ನ್ಯೂಬಾ, ಟುನೀಸಿಯಾ, ಕಾಂಗೋಗಳಲ್ಲೂ ನೆಲೆಗೊಂಡಿದ್ದಾರೆ. ಆದರೆ ಉತ್ತರ ಕನ್ನಡದ ಯಲ್ಲಾಪುರ, ಹಳಿಯಾಳ, ಅಂಕೋಲಾ ಮತ್ತು ಮುಂಡಗೋಡ ತಾಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಗೊಂಡಿದ್ದಾರೆ. ಒಂದು ಅಂದಾಜಿನ ಪ್ರಕಾರ ಉತ್ತರ ಕನ್ನಡದ ಒಂದು ನೂರಾ ಹನ್ನೆರಡು ಹಳ್ಳಿಗಳಲ್ಲಿ ಸಿದ್ದಿಗಳು ನೆಲೆಗೊಂಡಿದ್ದು ಸುಮಾರು ಒಂದು ಸಾವಿರದಾ ಅರವತ್ತು ಕುಟುಂಬಗಳಿವೆ. ಮತ್ತು ಇಲ್ಲಿನ ಸಿದ್ದಿಗಳು ಎಲ್ಲಾ ಸೇರಿದರೂ ಹತ್ತು ಸಾವಿರಕ್ಕಿಂತ ಹೆಚ್ಚು ಜನರಿಲ್ಲ. ಮೂಲತಃ ಅಲೆಮಾರಿಗಳಾದ ಸಿದ್ದಿಗಳು ಈ ಇತ್ತೀಚೆಗೆ ಸ್ಥಿರವಾದ ನೆಲೆಗಳನ್ನು ಕಂಡುಕೊಳ್ಳತೊಡಗಿದ್ದಾರೆ. ಈಗ ವಲಸೆಗಳು ಕಡಿಮೆಯಾಗಿವೆ.

ಈ ಕೃಷ್ಣ ಸುಂದರ ಸಂತತಿ ಭಾರತಕ್ಕೆ ಬಂದದ್ದು ಯಾವಾಗ ಎಂಬುದರ ಬಗ್ಗೆ ಹಲವೆಂಟು ವಾದಗಳಿವೆಯಾದರೂ ಎಂಟನೇ ಶತಮಾನದಲ್ಲಿ ಅರಬರ ಹಡಗುಗಳು ದಕ್ಷಿಣಭಾರತದ ಬಂದರುಗಳಿಗೆ ಬಂದು ನಿಂತಾಗಲೇ ಇವರು ಭಾರತದ ನೆಲ ತುಳಿದಿರಬೇಕು. ಅದೂ ತೀರ ಚಿಕ್ಕ ಸಂಖ್ಯೆಯಲ್ಲಿ. ಮುಂದೆ ೧೪೯೮-೧೫೦೦ರಲ್ಲಿ ತಕ್ಕಡಿ-ಬಂದೂಕುಗಳೆರಡನ್ನೂ ಹಿಡಿದುಕೊಂಡು, ಜೊತೆಗೆ ಶಿಲುಬೆಯನ್ನೂ ಹೊತ್ತು ಬಂದ ಪೋರ್ಚುಗೀಸರು ಹೆಚ್ಚಿನ ಸಂಖ್ಯೆಯಲ್ಲಿ ಸಿದ್ದಿಗಳನ್ನು ತಂದರು. ವಾಸ್ಕೋಡ ಗಾಮ, ಅಲ್ಫಾನ್ಸೋ ಡಿ ಅಲ್ಬುಕರ್ಕ್ ರ ಜೊತೆಯಲ್ಲಿ ನೂರುಗಟ್ಟಲೆ ಕರಿಯರು ಬಂದರೆಂಬ ಉಲ್ಲೇಖಗಳಿವೆ. ಇವತ್ತಿಗೂ ಪೋರ್ಚುಗೀಸಿ ಹೆಸರುಗಳು ಮತ್ತು ಸರ್ನೇಮುಗಳನ್ನು ಹೊಂದಿರುವ ಸಿದ್ದಿಗಳು ಈ ವಾದವನ್ನು ದೃಢಪಡಿಸುತ್ತಾರೆ.

೧೪೪೯ರಲ್ಲಿ ಅಬಿಸೀನಿಯಾದ ವರ್ತಕನೊಬ್ಬ ಭಾರತದ ಪಶ್ಚಿಮಕ್ಕಿರುವ ಚಿಕ್ಕ ದ್ವೀಪವೊಂದಕ್ಕೆ ಬಂದನೆಂದೂ, ಅವನು ಸರಕುಗಳಿರುವುದಾಗಿ ಹೇಳಿ ಒಳ ತಂದ ಮೂನ್ನೂರು ಪೆಟ್ಟಿಗೆಗಳ ತುಂಬ ಸೈನಿಕರಿದ್ದರೆಂದೂ, ಆ ಮೂಲಕ ಆತ ದ್ವೀಪವನ್ನು ವಶಪಡಿಸಿಕೊಂಡನೆಂದೂ ಹೇಳುವ ಕಥೆಯೊಂದಿದೆ. ಹಾಗೆ ಪೆಟ್ಟಿಗೆಗಳಲ್ಲಿ ಬಂದ





ಸೈನಿಕರು ಸಿದ್ದಿಗಳಾಗಿದ್ದರಂತೆ ! ಏನೇ ಇರಲಿ, ತುಂಬ ಶಕ್ತಿಶಾಲಿಗಳೂ, ಹುಂಗುತೊರೆದು ಹೋರಾಡುವವರೂ ಆಗಿದ್ದ ಅಂದಿನ ಕರಿಯರನ್ನು ವಿವಿಧ ಸಂಸ್ಥಾನಗಳ ರಾಜರು ಸೇನೆಗೆ ಸೇರಿಸಿಕೊಂಡಿದ್ದಿರಬೇಕು. ಎರಡನೇ ಮಹಾಯುದ್ಧದಲ್ಲೂ ಸಿದ್ದಿಗಳು ಯುದ್ಧರಂಗದಲ್ಲಿ ಮೆರೆದ ಬಗ್ಗೆ ಕಥೆಗಳಿವೆ.

ಆದರೆ ಉತ್ತರ ಕನ್ನಡದ ಸಿದ್ದಿಗಳನ್ನು 'ನೀವು ಇಲ್ಲಿಯವರಾ ?' ಎಂದು ಕೇಳಿ, 'ಅಲ್ಲ' ಎನ್ನುತ್ತಾರೆ. 'ಮತ್ತೆ ಎಲ್ಲಿಯವರು ?' ಅಂತ ಕೇಳಿದರೆ 'ಅಂಕೋಲದವರೆಂದೋ, ದಾಂಡೇಲಿಯವರೆಂದೋ' ಹೇಳುತ್ತಾರೆ. ಅವರಿಗೆ ತಮ್ಮ ನಿಜವಾದ ಮೂಲವನ್ನೇ ಮರೆತು ಹೋಗಿದೆ. ತಾತ, ಮುತ್ತಾತ, ಮರಿತಾತಂದಿರೆಲ್ಲ ಕಣ್ಣುಬಿಟ್ಟದ್ದು ಈ ಕಾಡುಗಳಲ್ಲೇ !

ಹೀಗೆ ವಲಸೆ ಬಂದ ಸಿದ್ದಿಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ತೀರ ಹಿಂದೆ ಅರಬರೊಂದಿಗೆ ಬಂದ ಸಿದ್ದಿಗಳನ್ನು 'ಮುವಲ್ಲಾಡ'ರು ಎಂದು ಕರೆದು, ನಂತರ ಪೋರ್ಚುಗೀಸರು ತಂದ ಸಿದ್ದಿಗಳನ್ನು 'ವಿಲೈಟ'ರೆನ್ನಲಾಗಿದೆ. ಮುವಲ್ಲಾಡರು ತೀರ ಅನಾಗರೀಕರಾಗಿದ್ದರಿಂದ ಅವರಿಗೆ ವಿಲೈಟರು ಹೆಣ್ಣುಕೊಡುತ್ತಿರಲಿಲ್ಲವೆಂಬ ಮಾತೂ ಇದೆ. ಆದರೆ ಈ ವಿಂಗಡಣೆ ಮುಂಬಯಿ ಸುತ್ತಮುತ್ತಲಿನ ಸಿದ್ದಿಗಳಲ್ಲಿತ್ತೇ ಹೊರತು ಉತ್ತರ ಕನ್ನಡದಲ್ಲಿಲ್ಲ ಮತ್ತು ಇವರಿಗಿದು ಗೊತ್ತೂ ಇಲ್ಲ.

ಇಲ್ಲಿರುವ ಸಿದ್ದಿಗಳು ಇಲ್ಲಿಯವರೇ ಆಗಿಬಿಟ್ಟದ್ದಾರೆ. ಹೊಕ್ಕಳ ಬಳ್ಳಿ ಕಳಚಿ ಹೋಗಿದೆ. ಆದರೆ ಇಲ್ಲಿನ ನೆಲದಲ್ಲಿನ್ನೂ ಕಾಲು ಹೂತುಕೊಂಡಿಲ್ಲ. ಮೂಲ ಜಾತಿ ಮರೆತಿದೆ. ಭಾಷೆ ಕಳೆದು ಹೇಗಿದೆ. ಸಂಸ್ಕಾರಗಳು ಮರೆಯಾ

ಗಿವೆ. ಉಳಿದಿರುವುದು ಬರೀ ಬಣ್ಣ, ರೂಪು! ಅದೂ ಹಾಗೇ ಉಳಿದಿಲ್ಲ. ಬಣ್ಣ ತಿಳಿಯಾಗಿದೆ. ಉಂಗುರ ಬಿಚ್ಚಿಕೊಂಡ ಕೂದಲು ನೀಳವಾಗಿವೆ. ಕಣ್ಣ ಹೊಳಪು ಮರೆಯಾಗಿವೆ. ಸಿದ್ದಿಗಳ ಹೆಣ್ಣು ಮಕ್ಕಳನ್ನು ಇಲ್ಲಿಯುವರೂ, ಇಲ್ಲಿಯುವರ ಹೆಣ್ಣುಮಕ್ಕಳನ್ನು ಸಿದ್ದಿಗಳು ಮದುವೆಯಾದುದರ ಫಲವಿದು. ಕೆಲವರಂತೂ ಅವರಾಗೇ ಹೇಳಿಕೊಂಡಾಗ ನಂಬಬೇಕು, ಅವರು ಸಿದ್ದಿಗಳೆಂದು! ಇದೆಲ್ಲ ಏನೇ ಆಗಿರಲಿ; ಮೂಲತಃ ನಿಗ್ರೋಗಳಲ್ಲಿರುವ ದೈಹಿಕ ಧಾರ್ಢ್ಯ, ಕಸುವು ಮತ್ತು ಮೈಕಟ್ಟು ನಾಶವಾಗಿರುವುದು ಈ ಜನಾಂಗದ ದೊಡ್ಡ ದುರಂತ. ನೈಜೀರಿಯಾದಂತಹ ನಿಗ್ರೋ ರಾಷ್ಟ್ರಗಳಿಂದ ಆಗಾಗ್ಗ ಭಾರತಕ್ಕೆ ಬರುವವರು ತಮ್ಮ ಈ ಸೋದರ ಸಂತತಿಯ ಜನರನ್ನು ಕಂಡು ಅವರಲ್ಲಾಗಿರುವ ಜನಾಂಗೀಯ ಪತನವನ್ನು ಖೇದದಿಂದ ಗಮನಿಸಿದ್ದಾರೆ. ಆಫ್ರಿಕಾದ ತಮ್ಮ ಮೂಲ ಭಾಷೆಯನ್ನು ಮರೆತ್ತೇ ಪೋರ್ಚುಗೀಸರ ತುಪಾಕಿಗಳನ್ನು ಕೈಲಿ ಹಿಡಿದಿರಬಹು



ದಾದ ಸಿದ್ದಿಗಳು ಉತ್ತರ ಕನ್ನಡಕ್ಕೆ ಬಂದು ಕನ್ನಡ, ಕೊಂಕಣಿ, ಮರಾಠಿ ಮತ್ತು ಉರ್ದು ವೆಂದು ಕರೆಯಲ್ಪಡುವ ಮಿಶ್ರಭಾಷೆಯನ್ನು ರೂಢಿಸಿಕೊಂಡಿದ್ದಾರೆ. ಒಂದೇ ಮೂಲದವ ರಾದರೂ ಭಾರತದಂತಹ ಜಾತಿ ವಿಂಗಡಿತ ರಾಷ್ಟ್ರಕ್ಕೆ ಬಂದುದರಿಂದ ಸಿದ್ದಿಯರೂ ಮೂರು ಜಾತಿಗಳಲ್ಲಿ ವಿಂಗಡಿಸಿಹೋಗಿ ದ್ದಾರೆ. ಹಿಂದು ಸಿದ್ದಿ, ಮುಸ್ಲಿಂ ಸಿದ್ದಿ ಮತ್ತು ಕ್ರಿಶ್ಚಿಯನ್ ಸಿದ್ದಿಗಳೆಂಬ ಬೇರೆ ಬೇರೆ ಬಾವು ಟಗಳನ್ನು ಹೊತ್ತಿದ್ದಾರೆ.

ಕ್ರೈಸ್ತ ಸಿದ್ದಿಗಳು ಕ್ಯಾಥೊಲಿಕ್ ಪಂಗಡದ ಅನುಯಾಯಿಗಳು. ಇವರಲ್ಲಿ ಪ್ರೊಟೆಸ್ಟಂಟ್ ಧರ್ಮೀಯರು ತೀರ ಕಡಿಮೆ. ಮಿಶನರಿ ಗಳು, ಚರ್ಚುಗಳು, ವ್ಯಕ್ತಿ ಮತ್ತು ಸಂಸ್ಥೆ ಗಳು ತೋರ್ಪಡಿಸಿದ ಆಸಕ್ತಿಯ ಫಲವಾಗಿ ಇವರಲ್ಲಿ ಕೆಲವರಿಗೆ ಶಿಕ್ಷಣ ದೊರೆತಿದೆ. ಶಿಲುಬೆ ಧರಿಸಿ, ಮನೆಯಲ್ಲಿ ಏಸುವಿನ ಪಟ ವಿಟ್ಟು ಪೂಜೆ ಮಾಡುವ ಈ ಸಿದ್ದಿಗಳು ತಮ್ಮ ಒಟ್ಟಾರೆ ಸಂಸ್ಕೃತಿಯಲ್ಲಿ ಪೋರ್ಚುಗೀ ಸರ ಪಳೆಯುಳಿಕೆಗಳನ್ನುಳಿಸಿಕೊಂಡಿದ್ದಾರೆ. ಇವರ ಪ್ರಾರ್ಥನಾ ವಿಧಾನ ಮತ್ತು ಭಾಷೆ ಯಲ್ಲಿ ಕೊಂಕಣಿಯದು ದೊಡ್ಡ ಪಾತ್ರ.

ಮುಸ್ಲಿಂ ಸಿದ್ದಿಗಳು ಹೆಚ್ಚಾಗಿ ಸುನ್ನಿ ಪಂಥ ದವರು, ಆದರೆ ಅಂಥಾ ಕಟ್ಟಾ ಮುಸ್ಲಿಮ ರಲ್ಲ. ಹಿಂದೂ ಹಬ್ಬಗಳನ್ನು ಮಾಡುತ್ತಾರೆ. ಸಿದ್ದಿಗಳಲ್ಲದ ಮುಸಲ್ಮಾನರೊಂದಿಗೆ ಇವರ ವಿವಾಹಗಳಾಗಿವೆ. ಇವರಲ್ಲಿ ಅನೇಕರು ಅಬಿ ಸ್ಸೀನಿಯಾದ ವರ್ತಕ, ಸನ್ಯಾಸಿಯಾಗಿದ್ದ ಬಾಬಾ ಘೋರ್ ನ ಸಮಾಧಿಯನ್ನು ಪೂಜಿ ಸುತ್ತಾರೆ. ಗುಜರಾತದಲ್ಲಿರುವ ಬಾಬಾ ಘೋರ್ ನ ಸಮಾಧಿಯ ಪ್ರತಿಸ್ವರೂಪವನ್ನು ತಮ್ಮ ತಮ್ಮ ನೆಲೆಗಳ ಬಳಿ ಕಟ್ಟಿಕೊಂಡು ಪೂಜಿಸುತ್ತಾರೆ. ಇವುಗಳನ್ನು ಮೂಲ ಮುಸ್ಲಿಂ ಸಿದ್ದಿಗಳು ಪೂಜಿಸುತ್ತಾರೇ ಹೊರತು ನಂತರದ ಸಿದ್ದಿಗಳಲ್ಲ.

ಇನ್ನು ಹಿಂದೂ ಸಿದ್ದಿಗಳ ಕಥೆ: ಅವರು ಮುಸ್ಲಿಂ ಅಥವಾ ಕ್ರಿಶ್ಚಿಯನ್ನರಲ್ಲವಾದ್ದರಿಂದ ಹಿಂದೂ ಸಿದ್ದಿಗಳು. ಹಿಂದುಗಳ ಚಾತು ರ್ವರ್ಣ ಪದ್ಧತಿಗೂ ಸಿದ್ದಿಗಳಿಗೂ ಸಂಬಂಧ ವಿಲ್ಲ. ಅವರದು ಸಿದ್ದಿ ಜಾತಿ. ಆದರೆ ತಮ್ಮಂ ತೆಯೇ ಕಾಡ ನಡುವಿನ ಬುಡಕಟ್ಟುಗಳ ಜನ ರನ್ನು ನೋಡಿ, ಅವರೊಂದಿಗೆ ಬಾಳಿ-ಬದುಕಿ ಅವರದೇ ಆಚಾರಗಳನ್ನು ರೂಢಿಸಿಕೊಂಡಿ ದ್ದಾರೆ. ಸಿದ್ದಿಗಳನ್ನು ಉಳಿದ ಹಿಂದೂಗಳು ಮದುವೆಯಾಗದೆ ಇರುವುದಕ್ಕೆ ಸಿದ್ದಿಗಳ ಬಣ್ಣವಾಗಲೀ, ರೂಪವಾಗಲೀ ಕಾರಣವಲ್ಲ. ಅವರ ಗುಂಗುರಾದ ತಲೆಗೂದಲು ಅವ ರನ್ನು ಅಸ್ಪೃಶ್ಯರನ್ನಾಗಿಸಿದೆ ಎಂಬುದು ಸ್ವತಃ ಸಿದ್ದಿಗಳ ಅಭಿಪ್ರಾಯ. ಏನೇ ಇರಲಿ, ವಿವಾ ಹಗಳ ಫಲಿತವಾಗಿ ಮಿಶ್ರ ಸಂತತಿ ವಿಪುಲ ವಾಗಿ ಬೆಳೆದಿದೆ.

ಸಿದ್ದಿಗಳ ಹೆಸರುಗಳೂ ಜಾತಿ ಸೂಚಕಗ ಳಾಗಿವೆ. ಆದರೆ ಸರ್ ನೇಮುಗಳಲ್ಲಿ ಪೋರ್ಚುಗೀಸ್ ನಾಮಗಳ ಪ್ರಭಾವ ಮತ್ತು ವೃತ್ತಿ ಸೂಚಕಗಳ ಪ್ರಭಾವ ಕಾಣಿಸುತ್ತದೆ (ಉದಾಃ ದೇಸಾಯಿ, ಪಟೇಲ, ಇನಾಮ್‌ದಾರ್ ಇತ್ಯಾದಿ) ಬಹುಶಃ ಸಿದ್ದಿ ಯರ ಹಿರಿಯರು ಈ ಹಿಂದೆ ಉತ್ತರ ಕನ್ನಡದ ಹಳ್ಳಿಗಳಲ್ಲಿ ಈ ವೃತ್ತಿಗಳನ್ನು ಮಾಡಿ ದ್ದಿರಬಹುದು. ಹಿಂದೂ ಸಿದ್ದಿಗಳು ಮರಾಠಿ ಯನ್ನು (ಮಿಶ್ರಣ ಭಾಷೆ) ರೂಢಿಸಿಕೊಂಡಿ ರುವುದು ಅವರ ಮಹಾರಾಷ್ಟ್ರದ ಮೂಲ ವನ್ನು ಸೂಚಿಸುತ್ತದೆ. ಹೀಗಾಗಿ ಕೆಲಕಾಲ ಇವರು ಶಿವಾಜಿಯ ಸೇನೆಯಲ್ಲಿದ್ದರೆಂಬ ಅಭಿಪ್ರಾಯಗಳೂ ಹಬ್ಬಿವೆ.

ಕಿರುವತ್ತಿಯಿಂದ ಎಡಕ್ಕೆ ಚಿಮ್ಮುವ ಕಾಲುದಾರಿಯಲ್ಲಿ ನಮ್ಮ ದ್ವಿಚಕ್ರ ನೆಗೆನೆಗೆದು ಓಡತೊಡಗಿತು. ದಟ್ಟವಾಗುತ್ತಾ ಹೋಗುವ ಕಾಡನಡುವೆ ಬೈತಲೆಯಂತಹ ಹಾದಿಯಲ್ಲಿ ಹತ್ತು ಹಲವು ಹಳ್ಳ ದಾಟಿ, ನೀರ ತುಳಿದು ಒಂದು ಕಡೆ 'ಉಸ್ಸಂತ' ಗಾಡಿ ನಿಲ್ಲಿಸಿದರೆ ನಮಗೆದುರಾಗಿದ್ದು ಮಧ್ಯಾಹ್ನದ ಕಡುಬಡ

ತನ ಮತ್ತು ಒಂದು ಹತಾಶ ಜನಾಂಗದ ಹತ್ತು ಹದಿನೈದು ಮನೆಗಳು.

ಮನೆಗಳಾ ಅವು ? ಜನ ಉಸಿರಾಡುವ ಗೋರಿಗಳು ! ಹಾಗಿದ್ದವು. ನಮ್ಮಮೊಬೈಕಿನ ಶಬ್ದಕ್ಕೆ ಒಂದು ಹುಡುಗಿ ಕೂಸೊಂದನ್ನೆತ್ತಿ ಕೊಂಡು ಓಡಿ ಬಂದಳು. ಹೂ ಹೂವಿನ ಚೀಟಿ ಬಟ್ಟೆಯ ಲಂಗ ಚೋಳಿ. ಕಣ್ಣಲ್ಲಿ ಶತಮಾನಗಳ ಮುಗ್ಧತೆ. ಅದೇ ಕಪ್ಪು ಬಣ್ಣ ಗುಂಗುರು ಕೂದಲ ಬುಡದಲ್ಲಿ ಜೋತು ಬಿದ್ದ ಮೇಕೆ ಮೊಲೆಯಂತಹ ಎರಡು ಜಡೆ ಗಳು ಮತ್ತು ಬಾಲ್ಯ ಮುಗಿವ ಮೊದಲೇ ಸವೆದು ಹೋದ ಪೀಚಲು ದೇಹ. ಅವಳ ಕಂಕುಳಲ್ಲಿದ್ದ ಆರು ತಿಂಗಳ ಮಗು ಮಿದು ಳಿನ ಸಿಂಬಳವನ್ನೆಲ್ಲಾ ಮೂಗಿಗಿಳಿಸಿಕೊಂಡು ಸೊರಸೊರನೆ ಉಸಿರಾಡುತ್ತಿತ್ತು. ಹಾಲುಗ ಲ್ಲದ ಮೇಲೆ ಹಸಿವು ಕರೆಗಟ್ಟಿತ್ತು. ದೊಡ್ಡ ವರೂ ಬಂದರು. ಸುತ್ತುವರೆದು ನಿಂತರು. ಮಾತನಾಡಿದರು. ಮನೆಗೆ ಕರೆದೊಯ್ದರು. ಡಬ್ಬಿಯಾಳದಲ್ಲಿ ಉಳಿದ ಹೆಕಳೆಗಟ್ಟಿದ ಸಕ್ಕರೆ ಬೆರೆಸಿ ಶರಬತ್ತು ಮಾಡಿಕೊಟ್ಟರು. ಆ ಉರಿ ಮಧ್ಯಾಹ್ನದಲ್ಲಿ 'ಡಮಾಮ್' ಕೈಗೆತ್ತಿಕೊಂಡು 'ಧಮ್ಮು ಲಟಕ್ ಧಮ್ಮುಲ ಟಕ್' ಬಾರಿಸುತ್ತಾ ಸುತ್ತ ತಿರುಗಿ ಹಾಡಿದರು 'ತುಜೇ ಸಾಟ ಕೇಳ ಮಂಡೀಲೋ .... ರಂಗುನಾಥವಾ !' ಹಾಡು ನಿಂತ ಮೇಲೆ ತಮ್ಮ ಸಂಪ್ರದಾಯಗಳ ಕುರಿತು ಮಾತನಾ ಡಿದರು.

'ಸಿದ್ದಿಗರ ಮದುವೆಗಳು ತೀರ ಸರಳ. ಆಫ್ರಿಕಾದ ಯಾವ ಸಾಂಸ್ಕೃತಿಕ ಅಂಶವೂ ಅದರಲ್ಲಿ ಉಳಿದಿಲ್ಲ. ಅದಕ್ಕಿಂತ ಹೆಚ್ಚಾಗಿ ಮದುವೆಗಳಿಗೆ ಪ್ರಾಮುಖ್ಯತೆಯೂ ಇಲ್ಲ. ಹುಡುಗಿಯುನ್ನು ನೋಡಲು ತಂದೆ ತಾಯಿ ಹೋಗುತ್ತಾರೆ. ಅದೊಂದು ದೊಡ್ಡ ಕೆಲ ಸವೇ ! ಅವಳಿಗೆ 'ತೆರ' ಕೊಡಬೇಕು. ಒಮ್ಮೊಮ್ಮೆ ಒಂದು ಸಾವಿರ ರೂಪಾಯಿಗಳ ತನಕ ಬೆಲೆ ಏರುತ್ತದೆ. ಒಂದು ಚೀಲ ಅಕ್ಕಿ, ಬೆಲ್ಲ, ಬಂಧುಗಳಿಗೆ ಉಡುಗೊರೆ, ತಾಳಿ . . . . ಎಲ್ಲಾ ಹುಡುಗನ ಕಡೆಯುವರದೇ. ಹುಡುಗೀನ ನೋಡಿ ಬರುವಾಗ 'ಮತ್ತೆ ಬರ್ತೀವಿ' ಎಂದು ಹೇಳಿಬರುತ್ತಾರೆ. ಸಿದ್ದಿಗ ಳಲ್ಲಿ ನಿಶ್ಚಯ ಶಾಸ್ತ್ರವೆಂದರೆ ಹುಡುಗಿಗೆ ಹೂವು ಮುಡಿಯಲು ಕೊಡುವದಷ್ಟೆ. ಮದುವೆಗೆ ಮುಹೂರ್ತ ಅಂತ ಏನೂ ಇಲ್ಲ. ಮದುವೆಯ ದಿನವಷ್ಟೆ ಖಚಿತ. ಈಗೀಗ ಮುಹೂರ್ತಗಳ ಪರಿಪಾಠ ಬರು ತ್ತಿದೆ. ಹಾಗಾಗಿ ಭಟ್ಟರೂ, ಪುರೋಹಿತರೂ ನುಗ್ಗಿದ್ದಾರೆ. ಮಾವಿನ ತೊಪ್ಪಲು ಕಟ್ಟಿದ ಚಪ್ಪರದಲ್ಲಿ ಸರಳ ಮದುವೆ. ಯಥಾಪ್ರಕಾರ ಹುಡುಗಿಯ ಸೋದರ ಮಾವ ಅವಳನ್ನೆತ್ತಿ ಕೊಂಡು ಬರಬೇಕು. ನಮ್ಮ 'ಕಾಶೀ ಯಾತ್ರೆ'ಯನ್ನು ಹೋಲುವಂತಹ ಸಂಪ್ರದಾ ಯಕ್ಕೆ ಸಿದ್ದಿಗಳು 'ದಂಡಿಗೆ ಹೋಗು'ವುದು ಅನ್ನುತ್ತಾರೆ. ಹುಡುಗನ ಸೋದರಮಾವ ಅವನಿಗೆ ತಲೆಗೂದಲು ತೆಗೆಯುವ ಶಾಸ್ತ್ರ ಮಾಡುತ್ತಾನೆ. ಮಧ್ಯೆ ಒಂದು ಸೆರಗು (ತೆರೆ) ಕಟ್ಟಿ, ಐದು ಸುತ್ತು ತಿರುಗಿ ಆರತಿ ಮಾಡಿದ ನಂತರ ಧಾರೆ ! ಹಾಗೆ ಧಾರೆಯೆರೆಯುವು ದನ್ನು ಹುಡುಗಿಯ ತಾಯಿ ನೋಡಕೂ ಡದು. ನಮ್ಮಲ್ಲಿದ್ದಂತೆಯೇ ಮರುದಿಬ್ಬಣ, ಮತ್ತೆ ನೆಂಟರ ಮನೆಗೆ ಹೋಗುವುದು, ಗುಡಿಸಲೊಳಗಿನ ಗೂಟಕ್ಕೆ ಬಾಸಿಂಗ ಕಟ್ಟು ವುದು .... ಎಲ್ಲ ಯಥಾಪ್ರಕಾರ ನಮ್ಮಂ ತೆಯೇ ! ಈಗ ಹೇಳಿ ಆಫ್ರಿಕಾ, ಇಥಿಯೋ ಪಿಯಾ, ಪರಕೀಯತೆ, ಹೊರಗಿನವರು.... ಇದೆಲ್ಲ ಎಲ್ಲಿಯ ಮಾತುಗಳು ?'

ಸಿದ್ದಿಗಳ ಸಂಪ್ರದಾಯಗಳ ಬಗ್ಗೆ ಆಡು ತ್ತಿದ್ದ ಮಾತು ಫಕ್ಕನೆ ಹೊರಳಿದ್ದು ಜನಾಂ ಗದ ಸ್ಥಿತಿಗತಿಗಳ ಬಗ್ಗೆ. ಆ ಪುಟ್ಟ ಗ್ರಾಮದ ಹಿರಿಯ ಮತ್ತು ಸಿದ್ದಿಗಳ ಸಂಘದ ಅಧ್ಯಕ್ಷ ಸಿಮ್ಯಾವ್ ಬಸ್ತಾಂವ್ ಸಿದ್ದಿ ಇದ್ದಕ್ಕಿದ್ದಂತೆ ಆವೇಶ ಭರಿತನಾದ. 'ಸಿದ್ದೇರು ಅಂದ್ರೆ ಕಾಡು ಜಾತಿ ಸ್ವಾಮೀ' ಎಂದು ಶುರುವಾದ



ಆವೇಶ ನಮ್ಮ ಕಾಲ ಕೆಳಗಿನ ನೆಲ ಅದುರುವಂತಹ ತಾರಕ್ಕೇರಿತ್ತು. ಮೂರು ಜಾತಿಗಳಲ್ಲಿ ಹರಿದು ಹಂಚಿ ಹೋಗಿರುವ ಸಿದ್ದಿಗಳು ಒಂದಾಗಬೇಕು. ಅವರನ್ನು ಒಂದೆಡೆ ಕಲೆಹಾಕುವ ಕೆಲಸ ಈಗ ಆರೇಳು ವರ್ಷಗಳಿಂದ ನಡೆದಿದೆ. ಇಷ್ಟಕ್ಕೂ ಅವರನ್ನೆಲ್ಲ ಸಂಪರ್ಕಿಸುವುದಾದರೂ ಹೇಗೆ. ಉತ್ತರ ಕನ್ನಡದ ಕಾಡುಗಳಲ್ಲಿ ಈ ಆಫ್ರಿಕಾದ ಕೂಸುಗಳು ಕಳೆದು ಹೋಗಿವೆ. ದಾರಿಯೇ ಸಿಗದ ಗ್ರಾಮಗಳೆಷ್ಟೋ ಇವೆ. ಬೆಳೆದ ಹಳ್ಳಿಗಳಲ್ಲಿದ್ದವರೂ ಕೂಡ ಕಂಗಾಲಾದವರೇ. ಕೂಲಿ, ದುಡಿತ ಮತ್ತು ಕುಡಿತಗಳು ಅವರನ್ನು ಕುಗ್ಗಿಸಿವೆ.

ಈ ಮುಂಚೆ ಅಲ್ಲಲ್ಲಿ ಚೂರುಪಾರು ಭೂಮಿ ಗಳಿಸಿಕೊಂಡ ಸಿದ್ದಿಗಳನ್ನು ಇತರೆ ಭೂಮಾಲೀಕರು ವಂಚಿಸಿದ್ದಾರೆ. ಹಳೆ ಸಾಲದ ಲೆಕ್ಕಕ್ಕೆ ಎಲ್ಲವನ್ನೂ ಆಹುತಿ ತೆಗೆದುಕೊಂಡು ಹೆಬ್ಬೆಟ್ಟೊತ್ತಿಸಿಕೊಂಡು ಕಾಡಿಗೆ ನೂಕಿದ್ದಾರೆ. ಎಷ್ಟೋ ಸಲ ಕಳ್ಳತನಗಳ ಆರೋಪ ಹೊತ್ತ ಸಿದ್ದಿಗಳು ಪೋಲೀಸರ ಲಾಠಿಗಳಿಗೆ ಬೆನ್ನುಕೊಟ್ಟು ನುಗ್ಗಾಗಿದ್ದಾರೆ. ಗಂಡ ಸತ್ತ ಮೂರೇ ತಿಂಗಳಲ್ಲಿ ಸಿದ್ದಿ ವಿಧವೆ ಜಮೀನನ್ನು ಕಳೆದುಕೊಂಡು ಗೆಡ್ಡೆ ಗೆಣಸಾರಿಸಲು ಕಾಡಿಗೆ ನಡೆದಿದ್ದಾಳೆ. ಇಂದಿಗೂ ಸಿದ್ದಿಗಳು ಗುಲಾಮಗಿರಿಯಿಂದ ಪಾರಾಗಿಲ್ಲ.

ಪೋರ್ಚುಗೀಸರ ಸರಪಳಿಗಳು ಉತ್ತರಕನ್ನಡಕ್ಕೂ ಹರಿದು ಬಂದವೆ ? ಭೂಮಾಲೀಕರ ಶೋಷಣೆ ಒಂದು ಕಡೆಯಾದರೆ ಕಾಡು ನಂಬಿಕೊಂಡು ಬಾಳುವ ಸಿದ್ದಿಗಳಿಗೆ ನಿಸರ್ಗ ನೀಡುವ ಹಿಂಸೆ ಮತ್ತೊಂದು ಕುತ್ತವೇ. ಮಳೆಗಾಲ ಶುರುವಾದರೆ ಸಾಕು, ಇವರು ವಾಸಿಸುವ ಗುಡಿಸಲುಗಳ ಸಮೂಹ ಇಡೀ ಒಂದು ದ್ವೀಪದಂತಾಗಿ ಬಿಡುತ್ತದೆ. ಹೊರಗೆ ಕೂಲಿಗೆ ಹೋಗುವಂತಿಲ್ಲ. ಹಸೀ ಕಟ್ಟಿಗೆಯಲ್ಲಿ ಒಲೆ ಉರಿಯುವುದಿಲ್ಲ. ಉರಿಯುವುದೇನಿದ್ದರೂ ಹಸಿದ ಹೊಟ್ಟೆ ಮಾತ್ರ. ಜಿಟಿಜಿಟಿ ಮಳೆಯಲ್ಲಿ ದಿಕ್ಕು ತೋಚದೆ ಕೂಡುವ ಸಿದ್ದಿಗಳು ಎಷ್ಟೋ ಸಲ ಖಾಯಿಲೆ ಬಿದ್ದು ಆಸ್ಪತ್ರೆಯನ್ನು ತಲುಪಲಾಗದೆ ಕಾಡಿನಲ್ಲೇ ಮರೆತ ಹಾಡುಗಳಾಗಿ ಹೋಗುತ್ತಾರೆ.

ಮೊದಲು ಹೀಗಿರಲಿಲ್ಲ. ಆ ಕಾಲದಲ್ಲಿ ಹೀಗಿರಲಿಲ್ಲ. ಮೊಲ ನೆಗೆಯುತ್ತಿದ್ದವು. ಜಿಂಕೆ ಕೆನೆಯುತ್ತಿದ್ದವು. ಸಿದ್ದಿಗಳಿಗೆ ಬೇಟೆ ಕೇವಲ ಒಂದು ವಿನೋದವಾಗಿರಲಿಲ್ಲ. ಅನ್ನವಾಗಿತ್ತು. ಆದರೆ ಅವರ ಕಾಡಿನೊಳಕ್ಕೆ ನಾಗರೀಕತೆಯ ಮತ್ಯಾವ ಸೌಲಭ್ಯಗಳು ಬಾರದಿದ್ದರೂ ಅರಣ್ಯ ಇಲಾಖೆಯ ಕಾನೂನುಗಳು ತೆವಳಿಕೊಂಡು ಬಂದಿವೆ. ಈಗ ಬೇಟೆಯಾಡುವಂತಿಲ್ಲ. ಇವರು ಕಷ್ಟಪಟ್ಟು ಬೆಳೆದ ಅಷ್ಟಿಷ್ಟು ಬೆಳೆಯನ್ನೂ ಕೂಡ ಕಾಡುಹಂದಿಗಳು ಅಸಹಾಯಕರಾಗಿ ಕೂತು ನೋಡುತ್ತಾರೆ. ಅಪರೂಪಕ್ಕೆ ಸಿಗುವ ಅರ್ಧ ಕೇಜಿ ತೂಕದ ಹಕ್ಕಿಯೊಂದನ್ನು ಹತ್ತು ಜನ ಕುಳಿತು ತಿಂದು ಕೈತೊಳೆದರೆ ಅದೇ ದೊಡ್ಡ ಬೇಟೆ.

ಬಸ್ತ್ಯಾಂವ್ ಆವೇಶದಿಂದ ಮಾತಾಡುತ್ತಿರುವಾಗಲೇ ಮಧ್ಯೆ ಹುಡುಗನೊಬ್ಬ ಉಡ ಮತ್ತು ಅದರ ಮೊಟ್ಟೆಗಳ ಕುರಿತಾದ ಮಾತು ತೆಗೆದ. ಅವರು ಉಡದ ಮೊಟ್ಟೆ ತಿನ್ನುತ್ತಾರೆ. ಅದನ್ನು ಹುಡುಕಿ ತೆಗೆಯುವುದಂತೂ ನಿಜಕ್ಕೂ ಅಚ್ಚರಿದಾಯಕ ಕ್ರಿಯೆ. ಮೆತ್ತಗಿರುವ ಅದನ್ನು ಸಾರು ಮಾಡುತ್ತಾರೆ. ಇಡ್ಲಿಯ ಥರ ಕುದಿಸಿ ತಿನ್ನುತ್ತಾರೆ. ಕಾಡಲ್ಲಿ ಸಿಗುವ ಮಾಂದಾಗಡ್ಡೆ ಇವರಿಗೆ ಅತ್ಯಂತ ಪ್ರಿಯವಾದ್ದು. ಅದನ್ನು ಕೊಯ್ದು, ಕುದಿಸಿ, ತಣ್ಣೀರಲ್ಲಿ ಹಾಕಿ ಎರಡು ದಿನ ನೆನೆಸುತ್ತಾರೆ. ಮತ್ತೆ ಕುದಿಸಿ ತಿನ್ನುತ್ತಾರೆ. ನೆನೆಸದೆ ತಿಂದರೆ ಯಾವ ವಿಸ್ಕಿಯೂ ಬೇಡ, ಅಂಥಾ ನಶೆಯೇರುತ್ತದೆ ಅಂತ ಹುಡುಗ ಖುಷಿಯಿಂದ ಹೇಳಿದ. ಇದಲ್ಲದೆ ಅಪರೂಪಕ್ಕೆ ಸಿಗುವ ಜಿಂಕೆ, ಕಾಡುಹಂದಿ, ಬರ್ಕ, ಹಕ್ಕಿ, ನವಿಲು, ಪುನುಗಿನ ಬೆಕ್ಕು, ಕಬ್ಬೆಕ್ಕು, ಜವಾದು, ಚಿಪ್ಪಕ್ಕಿ, ಮುಳ್ಳಕ್ಕಿ.... ಇವೆಲ್ಲವುಗಳ ರುಚಿ ಅವರಿಗೆ ಗೊತ್ತು.

'ಹಿಂಗೇ ಕಾಡು ತಿರುಗಿ ನಾವು ಹಾಳಾದ್ವಿ. ನಮ್ಮ ಹುಡುಗರಿಗಾದ್ರೂ ಓದು ಬ್ಯಾಡದಾ ?' ಎಂದು ಕೇಳುವ ಬಸ್ತ್ಯಾಂವ್ ಸಿದ್ದಿ ಕಂಗಳಲ್ಲಿ ಅಗಾಧ ನೋವಿತ್ತು. ಅವರು ವಾಸಿಸುವ ಹಳ್ಳಿಗೆ ರಸ್ತೆಯೇ ಇಲ್ಲವೆಂದ ಮೇಲೆ ಶಾಲೆಗಳು ಹುಟ್ಟುವುದಾದರೂ ಎಲ್ಲಿಂದ ? ಸಿದ್ದಿಗಳ ಒಟ್ಟು ಹತ್ತು ಸಾವಿರ ಜನಸಂಖ್ಯೆಯಲ್ಲಿ ಇಬ್ಬರು ಮಾತ್ರ ಸರಕಾರಿ ನೌಕರಿಯಲ್ಲಿದ್ದಾರೆ. ಶಾಂತಾರಾಮ ಸಿದ್ದಿಯೆಂಬ ಹುಡುಗ ಬಿ.ಎ. ಓದುತ್ತಿದ್ದಾನೆ. ಶಿವಾನಂದ ಸಿದ್ದಿ ಬಿ.ಎಸ್ಸಿಯಲ್ಲಿದ್ದಾನೆ. ಈಗೀಗ ಕೆಲವು ಮಕ್ಕಳು ಓದತೊಡಗಿರುವುದು ಬಿಟ್ಟರೆ, ಒಂದು ಅಂದಾಜಿನ ಪ್ರಕಾರ ೮೯% ಸಿದ್ದಿಗಳು ನಿರಕ್ಷರ ಕುಕ್ಷಿಗಳು ! ಕಳೆದ ಕೆಲ ವರ್ಷಗಳಿಂದ ಅಖಿಲ ಕರ್ನಾಟಕ ಸಿದ್ದಿ ಡೆವಲಪ್ಮೆಂಟ್ ಅಸೋಸಿಯೇಷನ್ (AKSDA) ಕಿರುವತ್ತಿ ಮತ್ತು ಯಲ್ಲಾಪುರಗಳಲ್ಲಿ ನೆಲೆಗೊಂಡು ಸಿದ್ದಿಗಳ ಬದುಕುಗಳನ್ನು ಸುಧಾರಿಸುವ ಯತ್ನ ನಡೆಸಿದೆ. ಈಗೀಗ ಸಿದ್ದಿ ಹುಡುಗರು ನಾಟಕಗಳಲ್ಲಿ ಪಾತ್ರ ಮಾಡುತ್ತಾರೆ. ಆಟೋಟಗಳಲ್ಲಿ ಹೆಸರು ಮಾಡಿದ್ದಾರೆ. ಕೆಲವಷ್ಟು ಜನ ಡೆಮಾಕ್ರಸಿಯ ಬಗ್ಗೆ ಮಾತೂ ಆಡುತ್ತಾರೆ.

ಇತರೆ ಬುಡಕಟ್ಟುಗಳಂತೆ ಸಿದ್ದಿಯರಲ್ಲೂ ಪಂಚಾಯತಿಗಳಿವೆ. ಇವುಗಳನ್ನು ಸಿದ್ದಿ ಸಭೆಗಳೆಂದು ಕರೆಯುತ್ತಾರೆ. ಇದರ ಹಿರಿಯನನ್ನು 'ಬುದ್ಧಿವಂತ' ನೆಂದು ಕರೆಯುವುದು ವಾಡಿಕೆ.

ಮೊದಮೊದಲು ದಟ್ಟ ಕಾಡುಗಳಲ್ಲಿ ಮಾತ್ರ ವಾಸಿಸುತ್ತಿದ್ದ ಸಿದ್ದಿಗಳು ನಾಗರಿಕತೆಗೆ ಸಮೀಪವಾದಂತೆಲ್ಲ ಅವರ ಮೂಲ ಸಂಸ್ಕೃತಿಯೊಂದಿಗೆ ಮನೆತನಗಳ ಸ್ವರೂಪವೂ ಶಿಥಿಲಗೊಂಡಿದೆ. ಮೊದಲು ಅವಿಭಕ್ತ ಕುಟುಂಬಗಳಿದ್ದವು. ಈಗ ಒಬ್ಬಂಟಿ ಬದುಕುಗಳಾಗಿವೆ. ಗಂಡ-ಹೆಂಡತಿ ಅಂತಾದ ಕೂಡಲೆ ಬೇರೆ ಗುಡಿಸಲು ತಲೆಯೆತ್ತುತ್ತದೆ. ಅಣ್ಣ ತಮ್ಮಂದಿರ 'ಹಿಸೆ'ಯಾದಾಗ ಎರಡು ಮನೆಗಳ ನಡುವೆ ಒಂದೇ ಅಡುಗೆಮನೆ ಉಳಿಸಿಕೊಂಡು ಬೇರೆ ಬೇರೆಯಾಗಿ ಬದುಕತೊಡಗುತ್ತಾರೆ. ಮಣ್ಣು, ಹುಲ್ಲು, ಬೊಂಬುಗಳೇ ಸಿದ್ದಿಗಳ 'ಅರೆ'ಮನೆಗೆ ಬಳಸುವ ಸಾಧನಗಳು. ಬಯಲ ಬಚ್ಚಲುಗಳೇ ಸ್ನಾನಗೃಹಗಳು. ಕೆಲವರಿಗೆ ಜನತಾ ಮನೆಗಳು ಸಿಕ್ಕಿವೆ. ಚರ್ಚುಗಳೂ ಮನೆಗಳನ್ನು ಕೊಟ್ಟಿರುವುದುಂಟು.

ಪುರುಷ ಪ್ರಧಾನವಾದ ಕುಟುಂಬಗಳೇ ಆದರೂ ಸಿದ್ದಿ ಹೆಂಗಸರಿಗೆ ಗೌರವಯುತ ಸ್ಥಾನವಿದೆ. ಮದುವೆಯೇ ಇಲ್ಲದೆ ಹುಟ್ಟಿದ ಮಕ್ಕಳಾದರೂ ಅವರು ಬಹಿಷ್ಕೃತರಲ್ಲ. ಹಿಂದು ಮತ್ತು ಕ್ರೈಸ್ತ ಸಿದ್ದಿಗಳಲ್ಲಿ ಕಂಡುಬರದ ಬಹುಪತ್ನಿತ್ವ ಮುಸ್ಲಿಂ ಸಿದ್ದಿಗಳಲ್ಲಿ ಕಾಣಸಿಕೊಳ್ಳುತ್ತದೆ. ಅಂತರ್ಜಾತೀಯ ಮದುವೆಗಳು ಅಪರೂಪವೇ ಆದರೂ ಹಾಗೊಮ್ಮೆ ಮಾಡಿಕೊಂಡಲ್ಲಿ ಗಂಡಸಿನ ಜಾತಿಯೇ ಆ ಕುಟುಂಬದಲ್ಲಿ ಮುಂದುವರೆಯುತ್ತದೆ. ಹಿಂದು ಸಿದ್ದಿಗಳಲ್ಲಿ 'ಬಸವಿ' ಬಿಡುವುದುಂಟು. ಅವಳನ್ನು ದೇವಸ್ಥಾನದ ಹುಡುಗಿಯೆನ್ನುತ್ತಾರೆ. ಇತರೇ ಹಿಂದುಗಳಲ್ಲಿರುವಂತೆಯೇ ಸೋದರ ಮಾವನ ಮಗಳು, ಅಕ್ಕನ ಮಗಳು ವಿವಾಹಕ್ಕೆ ಅರ್ಹಳು.

ಜೇನು ಸಾಕಣೆ ಸಿದ್ದಿಗಳ ಮುಖ್ಯ ಕಸುಬುಗಳಲ್ಲೊಂದು. ಆದರೆ ಅವರಿಗುಳಿಯುವುದು ಬೆರಳು ನೆಕ್ಕುವಷ್ಟು ಜೇನು ಮಾತ್ರ. ಉತ್ತರ ಕನ್ನಡದ ವಿವಿಧ ತಾಲೂಕು, ಸೀಮೆಗಳಲ್ಲಿ ಹಂಚಿಹೋದ ಮೂರೂ ಜಾತಿಯ ಸಿದ್ದಿಗಳಲ್ಲಿ ಕಾಣಬಹುದಾದ ಒಂದೇ ಸಾಮಾನ್ಯ (common) ಅಂಶವೆಂದರೆ - ಬಡತನ ! ಯಲ್ಲಾಪುರ ತಾಲೂಕಿನ ಒಂದು ನೂರಾ ಒಂದು ಸಿದ್ದಿ ಕುಟುಂಬಗಳ ಜನರಿಗೆ ಇರುವ ಒಟ್ಟು ರೇಡಿಯೋಗಳ ಸಂಖ್ಯೆ ಹನ್ನೆರಡು. ಏಳು ಸೈಕಲ್ಲುಗಳಿವೆ. ಐದು ಚಕ್ಕಡಿಗಳಿವೆ. ನಾಲ್ಕು ಕಬ್ಬಿಣದ ನೇಗಿಲೂ, ಮೂವತ್ನಾಲ್ಕು ಮರದ ನೇಗಿಲುಗಳೂ, ಹನ್ನೊಂದು ಕೈಗಡಿಯಾರಗಳೂ ಇವೆ ! ಸಾಲದೇ ಬಡತನದ ಸಮೀಕ್ಷೆ ?

ಒಂದು ಮಾತಿದೆ.

ಅತ್ಯಂತ ಸಹನಶೀಲ ದೇಶವೆಂದು ಹೇಳಿಕೊಳ್ಳುವ ನಾವು, ನಮ್ಮ ಸರ್ಕಾರ, ಅನೇಕ ಸಂದರ್ಭಗಳಲ್ಲಿ ಆ ಸಹನಶೀಲ ವರ್ತನೆಯನ್ನು ಸಾಬೀತುಪಡಿಸಿಕೊಂಡಿದ್ದೇವೆ. ದೇಶ-ವಿದೇಶಗಳ ನಿರಾಶ್ರಿತರಿಗೆ ಮನೆ-ಮಾರು ಕೊಟ್ಟು ಸಲಹಿದ್ದೇವೆ. ತೀರ ಇತ್ತೀಚಿನ ದಿನಗಳಲ್ಲಿ ಟಿಬೆಟ್ ನಿಂದ ವಲಸೆ ಬಂದ ಲಾಮಾ ಶಿಷ್ಯಕೋಟಿಗಾಗಿ ಊರುಗಳನ್ನೂ, ಸೊಸೈಟಿಗಳನ್ನೂ ಕೊಟ್ಟು ರಕ್ಷಿಸಿದ್ದೇವೆ. ಅಂಥದರಲ್ಲಿ ಶತಶತಮಾನಗಳಿಂದ ನಮ್ಮೊಂದಿಗೆ ಬದುಕುತ್ತಿರುವ ಬಡಪಾಯಿ ಸಿದ್ದಿಗಳನ್ನು ಇನ್ನೂ ಕಾಡುಗತ್ತಲೆಯಲ್ಲಿಟ್ಟಿರುವುದು ಯಾವ ನ್ಯಾಯ ?

ಈ ಮೊರೆ ಯಾರಿಗೆ ಕೇಳಿಸಬೇಕು ?

*

ಒಂದು ಪ್ರತಿಕ್ರಿಯೆ

ಕೆ.ಪಿ.ನಂಜುಂಡ ಶರ್ಮಾ

ಏಪ್ರಿಲ್ ೧೯೯೦ರ ಕಸ್ತೂರಿಯಲ್ಲಿ ಪ್ರಕಟವಾದ ಕರಿಗಿರಿ ನರಸಿಂಹಮೂರ್ತಿಯವರ 'ಜ್ಯೋತಿರ್ವರ್ಷ ಬ್ರಹ್ಮಾಂಡ ವರ್ಷಗಳು' ಎಂಬ ಲೇಖನದ ಒಂದೆರಡು ಸಂಗತಿಗಳ ಕುರಿತುಃ-

'ಹಿಂದೂ ಕಾಲ ಗಣನ ಪದ್ಧತಿ' ಶೀರ್ಷಿಕೆಯಡಿ ೧೧ನೇ ಕ್ರಮ ಸಂಖ್ಯೆಯ ಅಂಶ ತಪ್ಪಿನಿಂದ ಕೂಡಿದೆ. ಪುರಾಣಗಳಲ್ಲಿ 'ಯುಗಾನಾಮೇಕ ಸಪ್ತತಿಃ ಮನುರೇಕ ಮಬ್ರವೀತೆ' ಎಂದು ಉಲ್ಲೇಖಿಸಲಾಗಿದೆ. ಈ ಆಧಾರದಂತೆ ೭೧ ಮಹಾಯುಗಗಳಿಗೆ ಒಂದು ಮನ್ವಂತರ ಎಂದು ಹೇಳಲಾಗುತ್ತದೇ. ಲೇಖನದಲ್ಲಿ ತಿಳಿಸಿರುವಂತೆ ೭೨ ಮಹಾಯುಗಗಳಿಗೆ ಒಂದು ಮನ್ವಂತರ ಎನ್ನುವುದು ಸರಿಯಲ್ಲ.

ಹಾಗೆಯೇ ೧೪ ಮನ್ವಂರುಗಳಿಗೆ ಬ್ರಹ್ಮನ ಹಗಲು ಎಂದು ಹೇಳಿದ್ದಾರೆ. ಅದೇನೋ ಸರಿ, ಆದರೆ ಕಂಸದಲ್ಲಿ ೧೦೦೮ ಮಹಾಯುಗಗಳಿಗೆ ಎಂದು ಬರೆದಿರುವುದು ಸರಿಯಲ್ಲ. "ಚತುರ್ಯುಗ ಸಹಸ್ರೇಣಾ ಬ್ರಹ್ಮಣೊ ದಿನ ಮುಚ್ಯತೆ" ಎಂದು ಹೇಳುವಂತೆ ೧೦೦೦ ಮಹಾಯುಗಗಳಿಗೆ ಬ್ರಹ್ಮನ ಒಂದು ದಿನ. ೧೪ ಮನ್ವಂತರಗಳು ಒಂದು ಮಹಾಯುಗದಲ್ಲಿ ಇರುವುದು ಸರಿ. ೭೧ ಮಹಾಯುಗಗಳಿಗೆ ಒಂದು ಮನ್ವಂತರವಾದರೆ ೧೪ ಮನ್ವಂತರಗಳಿಗೆ ೯೯೪ ಮಹಾಯುಗಗಳಾಗುತ್ತವೆ. ಇನ್ನುಳಿದ ೬ ಮಹಾಯುಗಗಳು ಅರ್ಥಾತ್ ೨ ಕೋಟಿ ೫೯ ಲಕ್ಷ ೨೦ ಸಾವಿರ ವರ್ಷಗಳು ಸೇರಿದರೆ ಮಾತ್ರ ಸಹಸ್ರಯುಗವಾದೀತು. ಈ ಕೊರತೆಯನ್ನು ತುಂಬಲು ಕೃತಯುಗ ಪ್ರಮಾಣವಾದ ೧೭ ಲಕ್ಷ ೨೮ ಸಾವಿರ ವರ್ಷಗಳಷ್ಟು ಅವಧಿಯನ್ನು ಪ್ರತಿ ಮನ್ವಂತರ ಕಳೆದು ಮತ್ತೊಂದು ಮನ್ವಂತರ ಮಧ್ಯೆ ಆರಂಭವಾಗುವ ಮಧ್ಯೆ ಸಂಧಿ ಕಾಲವೆಂದು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಮನ್ವಂತರದ ಅಂತ್ಯ ಕಾಲದಲ್ಲಿ ಇಂದ್ರಾದಿ ದೇವತೆಗಳೇ ತಮ್ಮ ಅಧಿಕಾರವನ್ನು ನೂತನ ಅಧಿಕಾರಿ ದೇವತೆಗಳಿಗೆ ಬಿಟ್ಟುಕೊಡುತ್ತಾರೆ ಎಂದು ಹೇಳಿದ್ದಾರೆ. ಇದೂ ಸರಿಯಲ್ಲ. ಏಕೆಂದರೆ ಇಂದ್ರಾದಿ ದೇವತೆಗಳ ಪದವಿ ಅವಧಿಯನ್ನು ೧೨೫ ಮಹಾಯುಗಗಳೆಂದು ಪುರಾಣವೊಂದರಲ್ಲಿ

ಹೇಳಲ್ಪಟ್ಟಿದೆ. ಅಂದರೆ ೫೪ ಕೋಟಿ ೯೦ ಲಕ್ಷ ವರ್ಷಗಳು ಎಂದರ್ಥ.

ಅದೇ ರೀತಿ ೪ ಸಾವಿರದ ೩೨೦ ಶತಮಾನಗಳಿಗೆ ಒಂದು ಯುಗ ಎಂದು ಲೇಖಕರು ಹೇಳಿದ್ದಾರೆ. ಅದು ಎಲ್ಲಾ ಯುಗಗಳ ಪ್ರಮಾಣವಲ್ಲ; ಇದು ಕಲಿಯುಗದ ಪ್ರಮಾಣ ಮಾತ್ರ. ದ್ವಾಪರ ಯುಗದ ಪ್ರಮಾಣ ೮ ಲಕ್ಷ ೬೪ ಸಾವಿರ ವರ್ಷಗಳು. ತ್ರೇತಾಯುಗದ ಪ್ರಮಾಣ ೧೨ ಲಕ್ಷ ೯೬ ಸಾವಿರ ವರ್ಷಗಳು. ಹಾಗೂ ಕೃತಯುಗದ ಪ್ರಮಾಣ ೧೭ ಲಕ್ಷ ೨೮ ಸಾವಿರ ವರ್ಷಗಳು.

೧೦ ಯುಗಗಳಿಗೆ ಒಂದು ಮಹಾಯುಗ ಎಂದು ಹೇಳಿರುವುದೂ ಸರಿಯಲ್ಲ. ಮೇಲೆ ಹೇಳಿರುವಂತೆ ೪ ಯುಗಗಳ ಅವಧಿಯನ್ನು ಒಟ್ಟು ಕೂಡಿದರೆ ೪೩ ಲಕ್ಷ ೨೦ ಸಾವಿರ ವರ್ಷಗಳಾಗುತ್ತವೆ. ಇದರಂತೆ ೪ ಯುಗಗಳು ಒಂದಾವರ್ತಿ ಆದರೆ ಅದನ್ನು ಒಂದು ಮಹಾಯುಗವೆನ್ನುತ್ತಾರೆ. ಇಂತಹ ಮಹಾಯುಗಗಳು ಒಂದು ಸಾವಿರ ಬಾರಿ ಆದರೆ ಅದನ್ನು ಒಂದು ಕಲ್ಪ ಎನ್ನುತ್ತಾರೆ. ಅದು ಬ್ರಹ್ಮನ ಒಂದು ಹಗಲಿನ ಪ್ರಮಾಣ. *

ಸೂರ್ಯನ ಅವಸಾನ

ನಮಗೆ ಬೆಳಕು, ಶಾಖವನ್ನು ನೀಡುತ್ತಿರುವ ಸೂರ್ಯ ಸುಮಾರು 50,000,000 000 ವರ್ಷಗಳ ನಂತರ ಬೆಳಕು ಹಾಗೂ ಶಾಖ ನೀಡುವ ಸಾಮರ್ಥ್ಯ ಕಳೆದುಕೊಳ್ಳುತ್ತಾನೆಂದು ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇದರಂತೆ ವಿಜ್ಞಾನಿಗಳು ಸೂರ್ಯನ ಬಗೆಗೆ ಮತ್ತೊಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಅದೇನೆಂದರೆ, ಸುಮಾರು 10,000,000,000 ವರ್ಷಗಳ ನಂತರ ಸೂರ್ಯನ ಶಾಖದ ಪ್ರಖರತೆ ಹೆಚ್ಚಾಗುತ್ತ ಹೋಗುತ್ತದೆಂದು ಊಹಿಸಿದ್ದಾರೆ. ಯಾವುದೇ ವಸ್ತು ಉರಿಯುವಾಗ ತನ್ನ ಅಂತಿಮ ಘಟ್ಟದಲ್ಲಿ ತೀವ್ರವಾಗಿ ಉರಿಯುವುದನ್ನು ನೀವು ನೋಡಬಹುದು. ಅದರಂತೆ ಸೂರ್ಯನಲ್ಲಿರುವ ಜಲಜನಕ ಹಾಗೂ ಹೀಲಿಯಂ ಹೆಚ್ಚು ಹೆಚ್ಚು ರಸಾಯನಿಕ ಕ್ರಿಯೆಗೆ ಒಳಗಾಗಿ ಹೆಚ್ಚು ಶಾಖ ಹಾಗೂ ಬೆಳಕನ್ನು ನೀಡುತ್ತದೆ. ಈಗ ಇರುವ ಜಲಜನಕದ ಮೂರನೆಯ ಒಂದು ಭಾಗ ಉರಿದ ನಂತರ ಪೃಥ್ವಿಯ ಎರಡು ಧೃವಗಳಲ್ಲಿ (Poles) ಉಷ್ಣತೆಯೂ ತೀವ್ರವಾಗುತ್ತದೆ. ಇದರಿಂದ ಆ ಪ್ರದೇಶದಲ್ಲಿ ಜನವಸತಿಯು ಸಾಧ್ಯವಾಗುವುದಿಲ್ಲ. ಸೂರ್ಯನ ಪ್ರಖರತೆಯಿಂದ ಪೃಥ್ವಿಯ ಎರಡು ಧೃವಗಳಲ್ಲಿ ನದಿ, ಸಮುದ್ರದ ನೀರು ಕುದಿಯುವಷ್ಟು ಉಷ್ಣತೆ ಉಂಟಾಗುತ್ತದೆ. ಆದ್ದರಿಂದ ಇಂತಹ ಪ್ರದೇಶದಲ್ಲಿ ಜನವಸತಿ ಸಾಧ್ಯವಾಗುವುದಿಲ್ಲ.

ಮೊದಲು ಸಾವಕಾಶವಾಗಿ ಪ್ರಾರಂಭವಾಗುವ ಈ ಪ್ರಖರತೆ ನಂತರ ತೀವ್ರಗೊಳ್ಳುತ್ತದೆ. ಸೂರ್ಯನ ಉಷ್ಣ ಹಾಗೂ ಪ್ರಖರತೆ ಸೌರಮಂಡಲದ ಉಳಿದ ಗ್ರಹಗಳ ಮೇಲೂ ಪರಿಣಾಮ ಉಂಟುಮಾಡುತ್ತದೆ. ಸೂರ್ಯನ ಉಷ್ಣತೆ ಹಾಗೂ ಪ್ರಖರತೆ ಹೆಚ್ಚಿದಂತೆ ಅದರ ಗುರುತ್ವಾಕರ್ಷಣ ಶಕ್ತಿಯೂ ಹೆಚ್ಚುತ್ತದೆ ಆಗ ಸೌರಮಂಡಲದ ಒಂದೊಂದೇ ಗ್ರಹಗಳು ಸೂರ್ಯನ ಈ ಗುರುತ್ವಾಕರ್ಷಣ ಶಕ್ತಿಗೆ ಒಳಗಾಗಿ ಸೂರ್ಯನಲ್ಲಿ ವಿಲೀನವಾಗಬಹುದು. ಮೊದಲು ಬುಧ ನಂತರ ಗುರು, ಪೃಥ್ವಿ ಹೀಗೆ ಸೂರ್ಯ ಒಂದೊಂದೇ ಗ್ರಹಗಳನ್ನು ನುಂಗಿ ಹಾಕಬಹುದು. ಹೀಗೆಯೇ ನಮ್ಮ ಈ ಸೌರಮಂಡಲದ ಅಂತ್ಯವು ಆಗಬಹುದೆಂದು ವಿಜ್ಞಾನಿಗಳು ಊಹಿಸಿದ್ದಾರೆ.

(ಸಂಗ್ರಹ)

ಐ.ಎಚ್.ದೇಸಾಯಿ

ಪ್ರಕೃತಿಯ ಭೀಭತ್ಸ ಘಟನೆಗಳು

ಎಸ್. ರವಿಕುಮಾರ, ಮಾಗಳ

ಸಾವು ಮಾನವನ ಹಾಗೂ ಇತರ ಜೀವಿಗಳ ನೈಸರ್ಗಿಕ ಕ್ರಿಯೆ. ಸಾವಿನ ಸ್ವಲ್ಪ ಮೊದಲಿನ ಸಮಯದ ಮನಸ್ಥಿತಿ ಹೇಗಿರುತ್ತದೆ? ನೋವು ಉಂಟಾಗುತ್ತದೆಯೇ? ಸಂತೋಷವಾಗುತ್ತದೆಯೇ? ಮೂರ್ಛೆ ಬರುತ್ತದೆಯೇ?

ಸಾವು ಸಮೀಪಿಸಿದಾಗ ಅಸಹನೀಯ ನೋವು ಉಂಟಾಗುತ್ತದೆಂದು ಸಾಮಾನ್ಯವಾಗಿ ಎಲ್ಲರೂ ಊಹಿಸುತ್ತಾರೆ. ಏಕೆಂದರೆ ಸಾವಿಗೆ ಮೊದಲಿನ ಸಮಯದ ಸ್ಥಿತಿಯನ್ನು ನಾವು ಯಾರೂ ಅನುಭವಿಸಿಲ್ಲ. ಸಾವಿಗೆ ತುಸು ಮುಂಚೆ ಯಾವ ನೋವೂ ಇರುವುದಿಲ್ಲ. ನೋವು ಇರುವುದು ಸಾವಿನ ಹೆದರಿಕೆಯಿಂದ ಮಾತ್ರ.

ಇಡೀ ಪ್ರಕೃತಿಯೇ ಸಾವು ಬದುಕುಗಳ ಒಂದು ಚಕ್ರ. ಒಂದು ಜೀವಿ ಬದುಕಬೇಕಾದರೆ ಹಲವಾರು ಜೀವಿಗಳು ಸಾಯಲೇಬೇಕು. ಉದಾಹರಣೆಗೆ ಗೋಡೆಯ ಮೇಲಿನ ಹಲ್ಲಿ, ಪತಂಗವನ್ನು ಒಂದು ಕ್ಷಣದಲ್ಲಿ ಹಿಡಿದು ತಿಂದು ಹಾಕುತ್ತದೆ. ಅದೇ ರೀತಿ ಹುಲಿಯ ಬಾಯಿಗೆ ಸಿಕ್ಕ ಹಸು ಒಂದರ್ಧ ತಾಸು ಒದ್ದಾಡಿ ಸಾಯುತ್ತದೆ. ಇಲಿ ಬೆಕ್ಕಿನ ಮಧ್ಯ ಸಹ ಇಂತಹುದೇ ಕಾರ್ಯ ಇದೆ.

ಮರಣವನ್ನು ತಪ್ಪಿಸಿಕೊಳ್ಳಲಾಗದ ಹಂತ ತಲುಪಿದ ಮೇಲೆ, ನೋವು ಸಂಕಟಗಳನ್ನು ಪ್ರಕೃತಿ ಉಳಿಸುವುದಿಲ್ಲ. ಮೃತ್ಯುವಿನ ಸಂದರ್ಭದಲ್ಲಿ ಇಲಿಯ ಶರೀರದ ಹೈಪೋತಲಾಮಸ್ ಮತ್ತು ಪಿಟ್ಯೂಟರಿ ಗ್ರಂಥಿಗಳು ಚುರುಕಾಗುತ್ತವೆ. ಎಂಡಾರ್‌ಫಿನ್ ಎಂಬ ಹಾರ್ಮೋನ್ ರಸವನ್ನು ಬಿಡುಗಡೆ ಮಾಡುತ್ತವೆ. ನೋವಿನ ಸಂಕೇತ ಮಿದುಳಿಗೆ ಹೋಗದಂತೆ ಇವು ತಡೆ ಹಿಡಿಯುತ್ತವೆ. ಮಿದುಳಿಗೆ (ಮತ್ತು) ಅಮಲು ಬರಿಸುತ್ತವೆ. ಯಾವ ರೀತಿ ನಿದ್ರೆಗಿಂತ ಮೊದಲು ಜೋಂಪು ಹತ್ತುತ್ತದೋ ಹಾಗೆ ಸಾವಿಗಿಂತ ಮುಂಚೆ ನೋವೂ ಸಹ ಮಾಯವಾಗುತ್ತದೆ.

ಸಾಮಾನ್ಯವಾಗಿ ದೊಡ್ಡ ಪ್ರಾಣಿಗಳಿಗೆ ಮಿದುಳು ಇದೆ. ಅಲ್ಲಿ ಪ್ರಜ್ಞೆ ಇದೆ, ಪ್ರಜ್ಞೆ ತಪ್ಪಿಸುವಂಥ ಅರವಳಿಕೆ ಔಷಧಿ ದೇಹದ ಯಾವ ಯಾವ ಭಾಗದಲ್ಲಿ ಹುಟ್ಟುತ್ತದೆ ಎಂಬುದು ಸಹ ಗೊತ್ತು. ಇಂತಹ ಪ್ರಾಣಿಗಳ ವಿಷಯದಲ್ಲಿ ಹೈಪೋತಲಾಮಸ್



ಈ ತಲೇನೋವಿನ ಮಾತ್ರೆ ಹಾಕ್ಕೊಳ್ಳಮ್ಮಾ. ಆಮೇಲೆ ನಾನು ಏನೋ ಒಂದನ್ನು ತೋರಿಸಬೇಕಾಗಿದೆ!

ಎಂಡಾರ್‌ಫಿನ್ ರಸಾಯನದ ಬಗ್ಗೆ ನಿಖರವಾಗಿ ಹೇಳಬಹುದು.

ಜೀವಲೋಕದ ಇತರ ಕ್ಷುದ್ರ ಜಂತುಗಳಿಗೆ ಮತ್ತು ಸಸ್ಯಗಳಿಗೆ ಪ್ರಾಣ ಹೋಗುವಾಗ ಹೇಗಾಗುತ್ತದೆ? ಊಜಿ ನೊಣಗಳು ರೇಷ್ಮೆ ಹುಳುಗಳ ಪಾಲಿಗೆ ಪ್ರಳಯಾಂತಕಕಾರಿಯಾಗಿದೆ. (ಜಪಾನ್‌ನಿಂದ ಬಂಗಾಳ, ಬಂಗಾಳದಿಂದ ಕರ್ನಾಟಕಕ್ಕೆ ಊಜಿ ನೊಣ ಬಂತು) ಹೆಣ್ಣು ಊಜಿ ನೊಣ ಹಾರುತ್ತಾ ಬಂದು ರೇಷ್ಮೆ ಹುಳದ ಬೆನ್ನಮೇಲೆ ಕೂತು ತನ್ನ ಶರೀರದ ಹಿಂಭಾಗದ ಚೂಪು ಕೊಳವೆಯಿಂದ ರೇಷ್ಮೆ ಹುಳದ ಮೇಲೆ ತೂತು ಕೊರೆದು ಮೊಟ್ಟೆಯಿಟ್ಟು ಹಾರಿ ಹೋಗುತ್ತದೆ. ರೇಷ್ಮೆ ಹುಳಕ್ಕೆ ಇದು ಗೊತ್ತಾಗುವುದಿಲ್ಲ.

ಒಂದೆರಡು ದಿನಗಳಲ್ಲೇ ಊಜಿ ನೊಣದ ಮೊಟ್ಟೆ ಒಡೆದು ಲಾರ್ವಾ ಮರಿಗಳು ಹೊರ ಬರುತ್ತವೆ. ರೇಷ್ಮೆ ಹುಳದ ದೇಹವನ್ನು ಕೊರೆದು ತಿನ್ನಲಾರಂಭಿಸುತ್ತವೆ. ನುಣುಪು ದೇಹದ ಕಂಬಳಿ ಹುಳ ಒದ್ದಾಡುತ್ತದೆ. ಆದರೆ ತಕ್ಷಣ ಸಾಯುವುದಿಲ್ಲ. ಅದರ ದೇಹವನ್ನು ಕಿತ್ತು ತಿನ್ನುವ ಲಾರ್ವಾ ಮರಿ ಮೊದಲು ಕೊಬ್ಬಿನ ಭಾಗವನ್ನು ತಿನ್ನುತ್ತದೆ. ಕೊಬ್ಬು ತೀರಿದ ಮೇಲೆ ರೇಷ್ಮೆ ಹುಳದ ಇತರ ಅಂಗಾಂಶಗಳನ್ನು ತಿನ್ನಲು ಆರಂಭಿಸುತ್ತದೆ. ಮೈಯೆಲ್ಲಾ ವೇದನೆ ಅನುಭವಿಸುವ ರೇಷ್ಮೆ ಹುಳ ಒದ್ದಾಡುತ್ತಾ ಅರೆ ಜೀವವಾಗಿ ಸಾವನ್ನು ಎದುರು ನೋಡುತ್ತದೆ. ಆದರೆ ಅದರ ಹೃದಯ, ಶ್ವಾಸನಾಳ, ಮೆದುಳು, ಜೀವಂತ ಇರುತ್ತದೆ. ಕೊನೆಗೆ ಊಜಿ ಲಾರ್ವಾ ಇವುಗಳನ್ನು ಸಹ ತಿಂದು ವಿಶ್ರಾಂತಿ ಪಡೆಯುತ್ತದೆ. ಆಮೇಲೆ ಊಜಿ ನೊಣವಾಗಿ ಪರಿವರ್ತನೆಗೊಂಡು ಗೂಡಿನಿಂದ ಹೊರ ಬಿದ್ದು ಪ್ರಣಯದಾಟವಾಡಿ ಗರ್ಭಧರಿಸಿ ಮೊಟ್ಟೆ ಇಡಲೆಂದು ಇನ್ನೊಂದು ರೇಷ್ಮೆ ಹುಳವನ್ನು ಹುಡುಕುತ್ತಾ ಹೋಗುತ್ತದೆ.

೧೮೬೦ರಲ್ಲಿ ನಿಸರ್ಗದ ಈ ವಿದ್ರಾವಕ ಘಟನೆಯ ಬಗ್ಗೆ ವಾದ-ವಿವಾದಗಳು ನಡೆದವು. ಈ ದಾರುಣ ಘಟನೆಯ ಆಧಾರದ ಮೇಲೆ ದೈವೀಶಕ್ತಿಯ ಅಸ್ತಿತ್ವದ ಬಗ್ಗೆ ಸಹ ಚರ್ಚೆ ನಡೆದವು. ರೇಷ್ಮೆ ಹುಳಕ್ಕೆ ಈ ರೀತಿ ನಿಸರ್ಗ ಏಕೆ ಚಿತ್ರಹಿಂಸೆ ನೀಡುತ್ತದೆ? ಊಜಿ ಹುಳ ಬೇರೆ ಜೀವಿಯ ದೇಹದ ಮೇಲೆ ಏಕೆ ಮೊಟ್ಟೆ ಇಡಬೇಕು? ದೇವರು ಕೆಲವು ಜೀವಿಗಳ ವಿಷಯದಲ್ಲಿ ನಿರ್ದಯನಾಗುವುದು ಸರಿಯೆ? ಕೆಳಹಂತದ ಈ ಜೀವಿಗಳ ವಿಷಯದಲ್ಲಿ ಪಾಪ-ಪುಣ್ಯ ಎಂಬ ಶಬ್ದಕ್ಕೆ ಅರ್ಥವಿದೆಯೇ? ಈ ಪ್ರಶ್ನೆಗಳಿಗೆ ಉತ್ತರವಾಗಿ ೧೮೬೦ರಲ್ಲಿ ಬ್ರಿಟನ್ನಿನ ಫ್ರಾನ್ಸಿಸ್ ಹೆನ್ರಿ ಎಂಬಾತ ಒಂದು ಪುಸ್ತಕವನ್ನೇ ಬರೆದ. ಎಷ್ಟೋ ನಿಸರ್ಗ ವಿಜ್ಞಾನಿಗಳು ಈ ವಿಚಾರವಾಗಿ ಸಂಶೋಧನೆಗಳನ್ನು ನಡೆ

ಸಿದರು. ಆದರೆ ಅವರು ಕೇವಲ ಊಜಿ ನೊಣದ ಮಾತೃವಾತ್ಸಲ್ಯವನ್ನು ಕೊಂಡಾಡಿದರು. ರೇಷ್ಮೆ ಹುಳದ ವೇದನಾಮಯ ಬದುಕನ್ನು ಕಡೆಗಣಿಸಿದರು.

೧೯೮೮ರಲ್ಲಿ "ಸೈನ್ಸ-೮೫" ಎಂಬ ಪತ್ರಿಕೆಯಲ್ಲಿ ವರದಿಯಾದಂತೆ ಹೆಬ್ಬೆರಳು ಗಾತ್ರದ "ಪೆಪ್‌ಸಿಸ್" ಎಂಬ ಕಣಜದ ಹುಳು ತನ್ನ ಸಂತಾನ ವೃದ್ಧಿಗೆಂದು ಮಾಡುವ ಸಾಹಸಗಳನ್ನು ವಿವರಿಸಲಾಗಿದೆ.

ಅಮೇರಿಕದ ಅರಿಸೋನಾ ಮರುಭೂಮಿಯಲ್ಲಿ "ಟರಾಂಟುಲಾ" ಎಂಬ ಭಯಾನಕ ಜೇಡರ ಹುಳು ವಾಸಿಸುತ್ತದೆ. ಅಂಗೈ ಗಾತ್ರದ ಈ ವಿಷಯುಕ್ತ ಜೇಡಕ್ಕೆ ಮೈ ಮೇಲೆಲ್ಲಾ ಕೂದಲು ಇದು ನೆಲದಲ್ಲಿ ಕಲ್ಲು ಬಂಡೆಗಳ ಸಂದುಗಳಲ್ಲಿ ಒಂದೆರಡು ಅಡಿ ಆಳಕ್ಕೆ ತೂತು ಕೊರೆದು ಬಾಗಿಲಲ್ಲಿ ಬಲೆ ನಿರ್ಮಿಸಿ ಬಲಿ ಪಶುವಿಗಾಗಿ ಕಾಯುತ್ತಿರುತ್ತದೆ. ಬಲೆಯ ದೂರದ ಒಂದು ಎಳೆ ಅಲುಗಾಡಿದರೂ ತಕ್ಷಣ ಹಾರಿಬಂದು ಕೀಟವನ್ನು ಹಿಡಿದು, ವಿಷದ ಕೊಂಡಿಯನ್ನು ಚುಚ್ಚಿ ಮೂರ್ಛೆ ಬರಿಸಿ ತನ್ನ ಸುರಂಗಕ್ಕೆ ಎಳೆದುಕೊಂಡು ಹೋಗುತ್ತದೆ.

ಇಷ್ಟೊಂದು ಅಪಾಯದ ಜೇಡನನ್ನು ಕೆಣಕಲೆಂದು ಪೆಪ್ಸಿನೊಣ ಬರುತ್ತದೆ. ಜೇಡನ ಸುರಂಗದ ಬಳಿ ಬಂದು ಬಲೆಯ ಎಳೆಯನ್ನು ಅಲುಗಾಡಿಸಿ ಜೇಡನನ್ನು ಕೆಣಕುತ್ತದೆ.

ಪೆಪ್ಸಿ ನೊಣಕ್ಕೆ ಕೂಡಾ ಊಜಿ ನೊಣದ ಹಾಗೆಯೇ ಮೊಟ್ಟೆ ಇಡಲು ಜೀವಂತ ಪ್ರಾಣಿಯ ದೇಹವೇ ಬೇಕು. ಅದರಲ್ಲೂ ಟರಾಂಟುಲಾ ಜೇಡನೇ ಬೇಕು.

ಸುರಂಗದಿಂದ ನೆಗೆದು ಬಂದ ಜೇಡನ ಜೊತೆ ಪೆಪ್ಸಿ ನೊಣ ಭೀಕರ ಕಾದಾಟ ನಡೆಸುತ್ತದೆ. ಜೇಡ ತನ್ನ ನಾಲ್ಕು ಮುಂಗಾಲನ್ನು ಎತ್ತುವಂತೆ ಮಾಡಿದರೆ, ಪೆಪ್ಸಿ ನೊಣ ಅರೆಕ್ಷಣದಲ್ಲೇ ಜೇಡನ ಕಿಬ್ಬೊಟ್ಟೆಯ ಕೆಳ

ಭಾಗಕ್ಕೆ ತನ್ನ ಪೃಷ್ಠವನ್ನೊತ್ತಿ ಒಮ್ಮೆ ಕುಟುಕುತ್ತದೆ. ನಂತರದ ನಾಲ್ಕಾರು ನಿಮಿಷಗಳಲ್ಲಿ ಜೇಡ ಮೂರ್ಛೆ ಹೊಂದುತ್ತದೆ.

ತನಗಿಂತ ಹತ್ತಾರು ಪಟ್ಟು ಭಾರವಾದ ಜೇಡನ ಶರೀರವನ್ನು ಪೆಪ್ಸಿನೊಣ ಸುರಕ್ಷಿತ ಸ್ಥಳಕ್ಕೆ ಒಯ್ಯುತ್ತದೆ. ಮೂರ್ಛೆ (ಬಂದು ಬಿದ್ದ) ಹೋದ ಜೇಡನ ಸೊಂಟದ ಮೇಲೆ ಚಿಕ್ಕ ರಂಧ್ರಮಾಡಿ ಒಂದೇ ಒಂದು ಮೊಟ್ಟೆ ಇಡುತ್ತದೆ. ನಂತರ ಇನ್ನೊಂದು ಜೇಡನನ್ನು ಹುಡುಕಿಕೊಂಡು ಹೋಗುತ್ತದೆ. ತನ್ನ ದೇಹದ ಮೇಲೆ ಮೊಟ್ಟೆ ಹಾಕಿಸಿಕೊಂಡ ಜೇಡ ಪ್ರಜ್ಞೆ ಇದ್ದರೂ ಲಕ್ವಾ ಹೊಡೆದಂತೆ ಹಾಗೆಯೇ ಬಿದ್ದಿರುತ್ತದೆ. ಎರಡು ಮೂರು ದಿನಗಳ ನಂತರ ಪೆಪ್ಸಿ ನೊಣದ ಮೊಟ್ಟೆ ಒಡೆದು ಹುಳ ಹೊರ ಬರುತ್ತದೆ. ಜೇಡ ಜೀವಂತ ಇದ್ದಂತೆಯೇ ಅದರ ಅಂಗಾಂಗಗಳನ್ನು ಕೊರೆದು ತಿನ್ನುತ್ತದೆ. ಶರೀರದ ಎಲ್ಲಾ ಭಾಗಗಳನ್ನು ತಿಂದ ಮೇಲೆ ಜೇಡನ ನರ ಕೋಶ, ಶ್ವಾಸಕೋಶ ಹಾಗೂ ಹೃದಯವನ್ನು ತಿಂದು, (ಮರಣ ಹೊಂದಿದ) ಜೇಡನ ದೇಹದಲ್ಲಿ ವಿಶ್ರಾಂತಿ ಪಡೆಯುತ್ತದೆ.

ಕೀಟ ಪ್ರಪಂಚದ ಈ ರೌದ್ರಮಯ ನಾಟಕ ನಡದೇ ಇರುತ್ತದೆ. ಇದು ಪ್ರಕೃತಿಯ ಭೀಭತ್ಸ ಕ್ರಮಗಳಲ್ಲಿ ಒಂದಾಗಿದೆ. ಇಕ್ನೊಮಸ್ ಪ್ರಭೇದದ ಅನೇಕ ಸಹಸ್ರ ಜಾತಿಯ ನೊಣಗಳು ಹೀಗೆ ಭೀಕರ ಪರಾವಲಂಬಿ ಜೀವನ ನಡೆಸುತ್ತವೆ. ಇದಕ್ಕೆಲ್ಲಾ "ಹಿಂಸೆ" ಎಂಬ ಹಣೆಪಟ್ಟಿ ಹಚ್ಚುವದೇ ನಿರರ್ಥಕ ಎಂದು ಖ್ಯಾತ ವೈದ್ಯ ವಿಜ್ಞಾನಿ ಡಾ. ಲೀವಿಸ್ ಥಾಮಸ್ ಹೇಳುತ್ತಾರೆ.

ಹಾಗಿದ್ದರೆ ನೋವು, ದುಃಖ, ದಯೆ, ಕರುಣೆ ಇವುಗಳಿಗೆ ನಿಸರ್ಗದಲ್ಲಿ ಸ್ಥಾನ ಇಲ್ಲವೇ ? ಮನುಷ್ಯರು ತಮ್ಮ ಅನುಕೂಲಕ್ಕೆ ಮಾತ್ರ ಸೃಷ್ಟಿಸಿಕೊಂಡ ಮೌಲ್ಯಗಳೇ ಇವು ? ಇದೇ ರೀತಿಯ ಭೀಕರ ನೋವು ನಲಿವುಗಳು ಸಸ್ಯಗಳಲ್ಲಿ ಸಹ ಕಂಡುಬರುತ್ತವೆ.

(ಆಧಾರ: ಸೈನ್ಸ ಟಿಜಿ)

*

ಕಾಂಗರೂ ಇಲಿ

ಅಮೇರಿಕದ ಮರಳುಗಾಡಿನಲ್ಲಿ ಒಂದು ಬಗೆಯ ವಿಚಿತ್ರವಾದ 'ಕಾಂಗರೂ ಇಲಿ' ವಾಸಿಸುತ್ತೆ. ಇದು ವಾಸ್ತವಿಕವಾಗಿ ಕಾಂಗರೂವು ಅಲ್ಲ, ಇಲಿಯೂ ಅಲ್ಲ. ಇದಕ್ಕೆ ಈ ನಾಮಾಂಕಿತ ಇದರ ಉದ್ದವಾದ ಕಾಂಗರೂಗಿರುವಂತಿರುವ ಕಾಲುಗಳಿಂದ ಬಂದಿದೆ. ಇದರ ಸಹಾಯದಿಂದ ಒಂದು ಸಲಕ್ಕೆ ಹತ್ತಡಿ ದೂರ ಎಗರಬಲ್ಲದು. ಇದರ ಉದ್ದನೆಯ ಬಾಲ ಹಾಗೂ ಅದರ ಬಿಳಿ ಬ್ರಷ್‌ನಂತಿರುವ ತುದಿ, ಹಾರುವಾಗ ದಿಕ್ಕು ಬದಲಾಯಿಸಲು ಸಹಾಯ ಮಾಡುತ್ತೆ. ಇದರ ಬಾಲ ಬಡಿಯುವುದರಿಂದ ಇದರ ದಿಕ್ಕು ಬದಲಾಯಿಸಿ ಹಾವು ಹಾಗೂ ಗೂಬೆಯಿಂದ ಪಾರಾಗುತ್ತೆ.


ಇದು ಎಷ್ಟು ವಿಚಿತ್ರ ಪ್ರಾಣಿಯೆಂದರೆ ತನ್ನ ಇಡೀ ಜೀವಮಾನದಲ್ಲಿ ಒಂದು ಬೊಟ್ಟು ನೀರು ತೆಗೆದುಕೊಳ್ಳುವುದಿಲ್ಲ. ನೀರು ಕುಡಿಯದೆ ಬದುಕಿರುತ್ತೆ. ಮಳೆಗಾಲದಲ್ಲಿ ತನ್ನ ಬಿಲದಲ್ಲಿ ಸುರಕ್ಷಿತವಾಗಿರುತ್ತೆ. ಇದು ರಸಭರಿತವಾದ ಹಣ್ಣುಗಳನ್ನೂ ತಿನ್ನುವುದಿಲ್ಲ. ಕೇವಲ ಒಣಗಿದ ಬೀಜಗಳನ್ನು ತಿನ್ನುತ್ತೆ.

ಇದಕ್ಕೆ ಬೇಕಾಗುವ ನೀರು ಇದರ ಜಠರದಲ್ಲೆ ಉದ್ಭವಿಸುತ್ತೆ. ಇಲ್ಲಿ ಆಮ್ಲಜನಕ ಹಾಗು ಜಲಜನಕ ಕೂಡಿ, ನೀರು ತಯಾರಾಗುತ್ತೆ. ಕಾಂಗರೂ ಇಲಿ ಆಮ್ಲಜನಕವನ್ನು ಶ್ವಾಸದ ಮೂಲಕ ಹಾಗು ಜಲಜನಕವನ್ನು ಇದು ತಿನ್ನುವ ಒಣ ಬೀಜಗಳಿಂದ ಪಡೆಯುತ್ತೆ.

ಒಂದು ಡಜನ್ ಕಾಂಗರೂ ಇಲಿ ಜಾತಿಯನ್ನು ಬಿಟ್ಟರೆ ನೀರು ಕುಡಿಯದೆ ಬದುಕುವ ಕೇವಲ ಮತ್ತೊಂದು ಜಂತುವೆಂದರೆ 'ಫೋಸ್ಟ್ ಬೀಟಲ್'. ಇದು ಸತ್ತ ಮರ ತಿಂದು ಬದುಕುತ್ತೆ.

ಟೇಕಲ್ ಗೋಪಾಲಕೃಷ್ಣ

ಕರುಣಾಮಯಿ



ಇಂಗ್ಲೀಷ್ ಮೂಲ: **ಖುಷ್‌ವಂತ್ ಸಿಂಗ್**
ಅನುವಾದ: **ಕೋವರ್‌ಕೊಲ್ಲಿ ಕರುಣಾಕರನ್**

ಎಲ್ಲರಿಗೆ ಇರುವಂತೆ ನನಗೂ ಒಬ್ಬಳು ಅಜ್ಜಿ ಇದ್ದಳು. ನಾನು ವಯಸ್ಸಿಗೆ ಬಂದಾಗಲೇ ಅಕೆಗೆ ತುಂಬಾ ಪ್ರಾಯವಾಗಿತ್ತು. ಅವಳ ಒಳ್ಳೆಯ ವಯಸ್ಸಿನಲ್ಲಿ ಆಕೆ ತುಂಬಾ ಸುಂದರಿಯೂ ಮುಗ್ದೆಯೂ ಆಗಿದ್ದಳಂತೆ ಎಂದು ಸುತ್ತಮುತ್ತಲಿನ ತಿಳಿದ ಮಂದಿ ಆಡಿಕೊಳ್ಳುತ್ತಿದ್ದರು. ಅಜ್ಜಿಗೆ ತುಸು ತಾರುಣ್ಯ ಇರುವಾಗ ಅಜ್ಜ ಮಾತ್ರ ಮುದುಕನಂತೆ ಇದ್ದರಂತೆ! ವಯಸ್ಸಿಗೆ ತಕ್ಕುದಾಗಿ ಅವರ ವೇಷ ಭೂಷಣಗಳು; ಒಬ್ಬ ಸನ್ಯಾಸಿಯಂತೆ

ಕಾಣುತ್ತಿದ್ದವಂತೆ. ತುಂಬು ತೋಳಿನ ಒಂದು ದೊಳ ದೊಳ ಅಂಗಿ, ಅದಕ್ಕೆ ಒಪ್ಪುವಂತಹ ಒಳ್ಳೆಯ ಪೈಜಾಮು. ಮುಖದಲ್ಲಿ ಮಾತ್ರ ಗಂಭೀರವಾದ ಕಳೆ ಇತ್ತೋ ಇಲ್ಲವೋ ಎಂದು ಕಂಡು ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಮುಖ ತುಂಬಾ ಗಡ್ಡ ತುಂಬಿರುವುದರಿಂದಾಗಿ ಅದು ಉದ್ದನೆ ಬೆಳೆದು ಗಂಟಲಿನವರೆಗೆ ಇಳಿಬಿದ್ದಿತ್ತು. ಅದನ್ನು ಬಲು ಹುಲುಸಾಗಿ ಬೆಳೆಸಿದ್ದರಂತೆ. ಅಂತಯೇ ಅವರ ಮುಖದ ಭಾವ ಸಹ ನಮ್ಮಿಂದ ಕಂಡುಹಿಡಿಯಲು ಅಸಾಧ್ಯವಾಗಿತ್ತು. ಯಾರು ನೋಡಿದರೂ ಇವರಿಗೆ ಎಷ್ಟೋ ಮೊಮ್ಮಕ್ಕಳಿರುವಂತೆ ಅನಿಸಿತ್ತಿತ್ತು. ಆದರೆ ಅವರಿಗೆ ಇದ್ದ ಮೊಮ್ಮಗ ನಾನೊಬ್ಬ ಮಾತ್ರ ಆಗಿದ್ದೆ. ಅಜ್ಜನ ವರ್ಣನೆ ಹಾಗಿದ್ದರೂ ನನ್ನ ಅಜ್ಜಿ ಮಾತ್ರ ಬಹಳ ಸುಂದರಿಯಾಗಿದ್ದಳಂತೆ ಆ ದಿನಗಳಲ್ಲಿ.

ನನ್ನ ಅಜ್ಜಿ ಆಕೆಯ ಒಳ್ಳೆಯ ಪ್ರಾಯದಲ್ಲಿ ಆಡುತ್ತಿದ್ದ ಪ್ರತಿಯೊಂದು ಆಟಗಳನ್ನು ನನ್ನೆದುರು ಕುಳಿತು ಮೈಮರೆತು ಸಂತೋಷದಿಂದ ನನಗೆ ವಿವರಿಸುತ್ತಿದ್ದಳು. ಆವಾಗಲೆಲ್ಲಾ ನನ್ನ ಶರೀರ ಕಿವಿಯಾಗುತ್ತಿತ್ತು. ಆದರೆ ಈಗ ವರ್ಷಗಳು ಬಲಿತಂತೆ ಅಜ್ಜಿಯ ಕೂದಲುತುಂಬಾ ಬೆಳ್ಳಗಾಗಿದೆ. ಅಂದು ಆಡಿದ ಆಟಗಳನ್ನು ಆಡಿ ತೋರಿಸುತ್ತಿರುದಿಲ್ಲ. ಹಾಳು ಲೋಕ ಅಜ್ಜಿಯನ್ನು ಇಷ್ಟು ಬೇಗನೆ ಮುದುಕಿಯನ್ನಾಗಿ ಮಾಡಬಾರದಿತ್ತು. ಆಕೆಗೆ ಇಂದಿಗೂ ಹದಿನೆಂಟೋ ಇಪ್ಪತ್ತೋ ಆಗಿದ್ದರೆ ನನಗೆ ಎಂದೂ ವಸಂತವಾಗಿರುತ್ತಿತ್ತು. ಅವಳು ಅಂದಿನ ದಿನಗಳಲ್ಲಿ ಆಡಿ ಮನ ತಣಿಸಿದ ಒಂದೊಂದು ಆನಂದದ ಚೆಂದದ ಆಟಿಕೆಗಳೊಡನೆ ನನ್ನನ್ನು ಮೈಮರೆಸುತ್ತಿದ್ದಳು. ಅವಳಲ್ಲಿ ಅಂದಿನ ಹದಿನೆಂಟು ಇಂದಿಗೂ ಪ್ರಜ್ವಲಿಸುತ್ತಿದ್ದರೆ ಅದೆಷ್ಟು ಸುಂದರಿಯಾಗಿರುತ್ತಿದ್ದಳು !

ಆಕೆಯ ತಾರುಣ್ಯದ ಅಂದಿನ ವಸಂತಗಳ ಶೋಭೆಯ ಮಾಸಿದ ಛಾಯೆ ಈಗಲೂ ಮುಖದಲ್ಲಿ ಸ್ಪಷ್ಟವಾಗುತ್ತಿತ್ತು. ತುಸು ಬಾಗಿದ ಸೊಂಟ,ನೆರಿಗೆ ಹಿಡಿದ ಮುಖವಾಗಿದ್ದರೂ ಅದರಲ್ಲಿ ಪ್ರಜ್ವಲಿಸಿವ ಕಳೆ, ಕೆಂಪು ರಂಗಿನ ಕದಪುಗಳು, ನೆತ್ತರು ಬತ್ತಿ ಬಿಳಿಚಿದ ತುಟಿಗಳಲ್ಲಿ ಸಿಡಿದ ಅಡ್ಡ ಗೀರುಗಳು. ಆಕೆಯ ಕೆದರಿದ ಕುರುಳು ಮುಖ ತುಂಬಾ ಹರಿದಾಡುತ್ತಿತ್ತು. ಮೂಗಿನ ಮೇಲೆ ಹರಿದಾಡುವ ಬೆಳ್ಳಿ ಕೂದಲನ್ನು ಆಗಾಗ ಹಿಂದಕ್ಕೆ ಸರಿಸುತ್ತಿರುವಳು.

ಆಕೆಯ ತುಟಿಗಳು ಮಾತ್ರ ಯಾವುದೊ ಮಂತ್ರವನ್ನು ಪಟಿಸುವಂತೆ ಅನಿಸುತ್ತಿತ್ತು. ಆ ಮಂತ್ರ ಬೇರೆ ಯಾರಿಗೂ ಕೇಳಿಸುತ್ತಿರಲಿಲ್ಲ. ಅವಳ ಆತ್ಮ ತೃಪ್ತಿಗಾಗಿ ಮಾತ್ರ ನನ್ನ ಅಜ್ಜಿ ಆ ಮಂತ್ರವನ್ನು ಪಠಿಸುತ್ತಿದ್ದಳಂತೆ. ಮಂತ್ರ ಪಠಿಸುತ್ತಿದ್ದಾಗ ಅವಳನ್ನು ನೋಡಲು ಸಂತೋಷವಾಗುತ್ತಿತ್ತು.

ನಾನು ನನ್ನ ಅಜ್ಜಿಯೂ ಬಹಳಾ ಸಲಿಗೆಯಿಂದ ಇದ್ದೆವು. ತಂದೆ ನೌಕರಿಯ ಮೇಲೆ ನಗರಕ್ಕೆ ತೆರಳಿದಾಗ ನಾನು ಅಜ್ಜಿಯೊಡನೆ ಉಳಿಯಬೇಕಾಗಿದ್ದು ಅನಿವಾರ್ಯವಾಯಿತು. ದಿನ ಬೆಳಗಾದರೆ ನನ್ನನ್ನು ಬೇಗನೆ ಎಬ್ಬಿಸಿ, ಸ್ನಾನ ಮಾಡಿಸುವಾಗ, ಉಡುಪು ಒಪ್ಪಲಿಸುವಾಗಲೆಲ್ಲಾ ಏನೋ ದೇವರ ಮಂತ್ರದ ಪಲ್ಲವಿ ನಿರರ್ಗಳವಾಗಿ ಅವಳ ತುಟಿಗಳಿಂದ ಹೊರಬರುತ್ತಿತ್ತು. ಅದನ್ನು ಕೇಳುತ್ತಾ ಇರುವಾಗ ನನ್ನ ಮನಸ್ಸಿಗೂ ಏನೋ ಒಂದು ಆನಂದ ಉಂಟಾಗುತ್ತಿತ್ತು. ಕೆಲವೊಮ್ಮೆ ನಾನು ಸಹ ಅಜ್ಜಿಯೊಡನೆ ದನಿಗೂಡಿಸುತ್ತಿದ್ದೆ. ಅಜ್ಜಿಯಂತೆ ನಾನು ಕೂಡ ಆ ಪುನೀತವಾದ ದೇವರ ಮಂತ್ರವನ್ನು ಕಲಿಯಬೇಕೆಂದೆನಿಸಿತು.

ಬೆಳಗಿನ ಪುಣ್ಯ ಕರ್ಮಗಳೆಲ್ಲಾ ಮುಗಿದೊಡನೆ ಕಪ್ಪು ಸ್ಲೇಟನ್ನು ಹಿಡಿದು ಅಜ್ಜಿಯ ಎದುರು ಕುಳಿತುಕೊಳ್ಳುತ್ತಿದ್ದೆ. ಹಳದಿ ಶೀಮೆ ಸುಣ್ಣದಿಂದ ಸ್ಲೇಟಿನಲ್ಲಿ ಒಂದೆರಡು ದೇವರ

ಮಂತ್ರಗಳನ್ನು ಬರೆದು ನನ್ನ ಎಳೆಯ ಗಲ್ಲವನ್ನು ತಟ್ಟಿ, ಕೈಗೆ ಕೊಡುವಳು. ಬಳಿಕ ನನ್ನನ್ನು ನೋಡಿ ನಸುನಗುತ್ತಿದ್ದಳು. ಇವೆಲ್ಲವೂ ಮುಗಿದ ಬಳಿಕ ದಿನಂಪ್ರತಿ ನನ್ನನ್ನು ಶಾಲೆಗೆ ಕರೆದೊಯ್ಯುತ್ತಿದ್ದಳು. ಅವಳ ಕೈಯಲ್ಲಿ ಸದಾ ಹಳಸಿದ ನಾಲ್ಕು ಐದು ಚಪಾತಿಗಳಿರುತ್ತಿದ್ದವು. ಅವುಗಳಿಗೆ ತುಪ್ಪ ಸಹ ಸವರುತ್ತಿದ್ದಳು.

'ಇದು ಯಾಕೆ ಅಜ್ಜಿ ದಿನಾಲೂ ತೆಗೆದುಕೊಳ್ತಿಯಾ?' ಎಂದು ಒಂದು ದಿನ ಕೇಳಿದಾಗ ಆಕೆಯ ತುಟಿಗಳಿಂದ ಸಂತಸದ ದನಿಯೊಂದು ಹೊರಸೂಸಿತು.

'ಬಾಯಿ ಬರದವರಿಗೆ' ಎಂದಳು.

ನನ್ನ ಹೃದಯದಲ್ಲಿ ಅಚ್ಚರಿ ಕುತೂಹಲ ಮೂಡುತ್ತಿತ್ತು.

ಆಕೆಯ ಕೈಯಲ್ಲಿ ಸುತ್ತಿದ್ದ ಕಾಗದದ ಪೊಟ್ಟಣದಲ್ಲಿದ್ದ ತುಪ್ಪ ಸವರಿದ ಚಪಾತಿಗಳು ದಾರಿಗುಂಟ ಇದ್ದ ಹಳ್ಳಿ ನಾಯಿಗಳಿಗೆ ಎಂದು ಸ್ಪಷ್ಟವಾಯಿತು. ಅಜ್ಜಿ ದಿನಂಪ್ರತಿ ನನ್ನೊಡನೆ ಶಾಲೆಗೆ ಬರುತ್ತಿದ್ದುದಕ್ಕೆ ಒಂದು ಕಾರಣವಿತ್ತು. ಶಾಲೆಯ ಪಕ್ಕದಲ್ಲಿದ್ದ ಈಶ್ವರ ದೇವಾಲಯದಲ್ಲಿ ಆಕೆಯ ಪ್ರಾರ್ಥನೆ, ಭಜನೆಯು ಮುಗಿಯುತ್ತಿತ್ತು. ಆ ದೇಗುಲದಲ್ಲಿ ಬೆಳಗಿನ ಜಾವ ಅಜ್ಜಿಯಂತೆ ಹಲವು ಭಕ್ತರು ಸೇರುತ್ತಿದ್ದರು.ಆ ದೇವಾಲಯದಿಂದ ಕೇಳಿ ಬರುತ್ತಿದ್ದ ಭಜನೆಯ ಮಧುರ ನಿನಾದ ಕೇಳಲು ಎರಡು ಕಿವಿಗಳು ಸಾಕಾಗುತ್ತಿರಲಿಲ್ಲ. ಇದನ್ನು ಆಲಿಸುತ್ತಿದ್ದ ನನ್ನ ಎಳೆಯ ಹೃದಯದಲ್ಲಿ ಹೊಸ ಅನುಭವದ ಬದಲಾವಣೆ ಆಗುತ್ತಿರುವಂತೆ ಅನಿಸುತ್ತಿತ್ತು. ಈಶ್ವರ ದೇವಾಲಯ ಅಜ್ಜಿಯ ಆರಾಧನಾ ಕೇಂದ್ರ. ಸಮೀಪದ ಪುಟ್ಟ ಶಾಲೆ ನನ್ನ ವಿದ್ಯಾಭ್ಯಾಸದ ಕೇಂದ್ರ. ಈ ಕಾರಣ ಅಜ್ಜಿಗೆ ಯಾವ ತೊಂದರೆಯೂ ಉಂಟಾಗುತ್ತಿರಲಿಲ್ಲ.

ನಾವು ಶಾಲೆಯಿಂದ ಮರಳಿ ಬರುವಾಗ ಹಲವು ಹಳ್ಳಿ ನಾಯಿಗಳು ನಮ್ಮನ್ನು ಹಿಂಬಾಲಿಸುತ್ತಾ ಬರುವವು. ಅವು ಬೊಗಳದೆ ಸಂತೋಷದಿಂದ ಬಾಲ ಆಡಿಸುತ್ತಾ ಬರುತ್ತಿರುವುವು. ಅಜ್ಜಿ ತನ್ನ ಪೊಟ್ಟಣವನ್ನು ಬಿಚ್ಚಿ ಅವುಗಳಿಗೆ ತಾನು ತಂದಿದ್ದ ಚಪಾತಿಗಳನ್ನು ಚೂರು ಮಾಡುತ್ತಾ ದಾರಿಗುಂಟ ಹಾಕುತ್ತಾ ಬರುವಳು. ಅವುಗಳು ಒಂದರ ಮೇಲೆ



ಒಂದು ಬಿದ್ದು ಕಚ್ಚಾಡಿ ಕಸಿದಾಡಿ ಜಗಳ ಕಾದು ತಿನ್ನುತ್ತಿದ್ದುವು. ಆ ಸನ್ನಿವೇಶವನ್ನು ನೋಡುತ್ತಿದ್ದಂತೆ ನನ್ನ ಮನಸ್ಸಿಗೆ ಏನೋ ತೃಪ್ತಿ ಉಂಟಾಗುತ್ತಿತ್ತು. ಅಜ್ಜಿಯ ಪೂಜೆ, ಭಜನೆ ಮತ್ತು ನನ್ನ ಶಾಲೆಯ ಪಾಠ ಪ್ರವ ಚನಗಳೊಂದಿಗೆ ನಾಯಿಗೆ ಚಪಾತಿ ಹಾಕು ವುದು, ಚೂರು ರೊಟ್ಟಿಗಾಗಿ ಅವು ಮಾಡು ತ್ತಿದ್ದ ರಂಪ ಇವೆಲ್ಲ ದೈನಂದಿನ ಒಂದು ಪರಿಪಾಟವಾಗಿತ್ತು.

** ** ** **

ವರ್ಷಗಳು ಕಳೆದಂತೆ ನನ್ನ ಇಂಗ್ಲೀಷ್ ವ್ಯಾಸಂಗಕ್ಕೆ ನಮ್ಮ ಹಳ್ಳಿಯನ್ನು ಬಿಟ್ಟು ಅಪ್ಪ ನೌಕರಿಯಲ್ಲಿದ್ದ ಪಟ್ಟಣದಲ್ಲಿ ಇರಬೇಕಾ ಯಿತು. ಆದರೂ ಅಜ್ಜಿ ನನ್ನನ್ನು ಬಿಟ್ಟಿರಲಿಲ್ಲ. ಒಂದು ಬೇಸರವೆಂದರೆ, ಅಜ್ಜಿ ನನ್ನೊಡನೆ ಶಾಲೆಗೆ ಬರದೇ ಇರುತ್ತಿದ್ದದ್ದು. ಮತ್ತು ಹಳಸಿದ ಚಪಾತಿ ಚೂರುಗಳನ್ನು ಹಾಕಲು ನಾಯಿಗಳು ಇಲ್ಲದೇ ಇದ್ದದ್ದು. ಅದರ ಬದಲು ನಮ್ಮ ಮನೆಯ ಸುತ್ತಲೂ ಬಿಳಿಯ ಪಾರಿವಾಳಗಳು ಹಾರಾಡುತ್ತಿದ್ದವು. ಅವುಗ ಳಿಗೆ ಅಜ್ಜಿ ದಿನಂಪ್ರತಿ ಕಾಳುಗಳನ್ನು ಹಾಕು ತ್ತಿದ್ದಳು. ಆ ಪಾರಿವಾಳಗಳ ಗುಂಪು ನಮ್ಮ ಮನೆ ಬಿಟ್ಟು ಬೇರೆ ಎಲ್ಲೂ ಹೋಗುತ್ತಿರ ಲಿಲ್ಲ.

ದಿನಗಳು ಉರುಳಿದಂತೆ ಅಜ್ಜಿಯೊಡನಿದ್ದ ನನ್ನ ಸಲಿಗೆ ತುಸು ದೂರವಾಯಿತು. ನಾನು ದೂರದ ಪ್ರೌಢಶಾಲೆಗೆ ಹೋಗುತ್ತಿದ್ದೆ. ಸಂಜೆ ಕೆಲವೊಮ್ಮೆ ನನ್ನ ಕೊಠಡಿಯಲ್ಲಿ ಬಂದು ಕುಳಿತುಕೊಳ್ಳುವಳು. ಆಗಲೂ ಆಕೆಯ ತುಟಿಗಳಲ್ಲಿ ದೇವರ ಮಂತ್ರ ಕ್ಷೀಣ ಸ್ವರದಲ್ಲಿ ಕೇಳಿ ಬರುತ್ತಿತ್ತು. ಕೆಲವು ಬಾರಿ ಶಾಲೆಯ ಪಾಠ ಪ್ರವಚನದ ಬಗ್ಗೆ ಕೇಳಿ ವಿಚಾರಿಸುವಳು.ಕೇಳಲು ಅವಳಲ್ಲಿ ಒಂದು ಕುತೂಹಲವಿರುತ್ತಿತ್ತು. ನಾನು ಪ್ರೌಢಶಾ ಲೆಯ ವಿದ್ಯಾರ್ಥಿ; ಪಾಶ್ಚಾತ್ಯ ಸಂಸ್ಕೃತಿ, ವಿಜ್ಞಾನ, ಆರ್ಕಿಮಿಡೀಸ್‌ನ ತತ್ವಗಳು, ಭೂಮಿ ಗೋಲವಾಗಿದೆ.... ಇತ್ಯಾದಿ ಇತ್ಯಾದಿ.... ಹೇಳುವೆನು. ಇವೆಲ್ಲವನ್ನೂ ಕೇಳುವಾಗ ಅಜ್ಜಿಯಲ್ಲಿ ಯಾವೊಂದು ಉತ್ಸಾಹವೂ ಇರುತ್ತಿರಲಿಲ್ಲ, ಕೇವಲ ನೀರ ಸದ ನಿಟ್ಟುಸಿರು ಬಿಡುತ್ತಿದ್ದಳು. ಇಂಗ್ಲೀಷ್ ಶಾಲೆಗಳಲ್ಲಿ ಹೇಳಿಕೊಡುವ ವಿಷಯಗಳ ಬಗ್ಗೆ ಆಕೆಗೆ ಅಷ್ಟೊಂದು ನಂಬಿಕೆ ಇರುತ್ತಿರ ಲಿಲ್ಲ. ನಾನು ಹೇಳುತ್ತಿದ್ದ ಪಾಠಗಳ ಕಡೆ ಗಮನ ಕೊಡುತ್ತಿರಲಿಲ್ಲ.ಆಗ ನನಗೆ ತಟ್ಟನೆ ಬಾಲ್ಯದ ನೆನಪಾಗದೇ ಇರುತ್ತಿರಲಿಲ್ಲ.ನನ್ನ ಸ್ಲೇಟನ್ನು ತೊಳೆದು ಸೀಮೆ ಸುಣ್ಣದಿಂದ ಅದರಲ್ಲಿ ಅಂದವಾಗಿ ಬರೆದು ಕೊಡುತ್ತಿದ್ದ ದೇವರ ಮಂತ್ರಗಳು....

ಬಳಿಕ ಕೇಳುವಳು- 'ನಿಮ್ಮ ಶಾಲೆಯಲ್ಲಿ ದೇವರ ಜಪತಪ ಏನೂ ಹೇಳಿ ಕೊಡೋ ದಿಲ್ವಾ?' ಎಂದು. ನಾನು 'ಇಲ್ಲ ಅಜ್ಜಿ' ಎನ್ನುತ್ತಿದ್ದಂತೆ ಆಕೆಯು ಬಿಳಿ ರೋಮ ತುಂಬಿದ ಕಣ್ಣ ರೆಪ್ಪೆಗಳನ್ನು ಒಮ್ಮೆ ಮುಚ್ಚಿ ನಿರಾಶೆಯಿಂದ ಮೌನಿಯಾಗುತ್ತಿದ್ದಳು.

ಕ್ರಮೇಣ ನಾನು ಕಾಲೇಜು ಸೇರಿದಾಗ ನನ್ನ ತಂದೆ, ತಾಯಿ ಮತ್ತು ಅಜ್ಜಿಯಿಂದ ಬಹಳಾ ದೂರಾಗಿ ಇರಬೇಕಾಯಿತು. ನಮ್ಮಿ ಬ್ಬರ ಮಧ್ಯದ ಸಲಿಗೆ ತಟ್ಟನೆ ನಿಂತಿತು. ನಾನು ಬಹಳಾ ಅಪರೂಪವಾಗಿ ರಜಾದಲ್ಲಿ ಮನೆಗೆ ಬಂದಾಗ ಮಾತ್ರ ಅಜ್ಜಿಯನ್ನು ಕಂಡು ಮಾತನಾಡುತ್ತಿದ್ದೆ. ಅಂದೆಲ್ಲಾ ಅಜ್ಜಿ ನೂಲುವ ಚರಕದ ಎದುರು ಹಜಾರದಲ್ಲಿ ಕುಳಿತುಕೊಂಡಿರುವಳು. ಅಜ್ಜಿಯ ಸುತ್ತಲೂ ಪಾರಿವಾಳಗಳು ಕುಳಿತು ಆಕೆಯ ಬಾಯಿಂದ ಹೊರ ಬರುತ್ತಿದ್ದ ಮಂತ್ರವನ್ನು ತಾವು ಜಪಿ ಸುತ್ತಿರುವಂತೆ ಧ್ವನಿಗೂಡಿಸುತ್ತಿದ್ದವು. ಈ ಪಾರಿವಾಳಗಳು ಧ್ವನಿಗೂಡಿಸುತ್ತಿದ್ದ ಪಲ್ಲವಿ ಯನ್ನು ಆಲಿಸುತ್ತಿದ್ದಂತೆ ಅಜ್ಜಿಯ ಹೃದಯ ತುಂಬಿ ಬರುತ್ತಿತ್ತು. ಅದರಲ್ಲೂ ಕೆಲವು ಪಾರಿವಾಳಗಳು ಆಕೆಯ ಹೆಗಲ ಮೇಲೇರಿ ಕುಳಿತುಕೊಂಡಿರುವವು. ಆದರೂ ಅಜ್ಜಿ

ಅವುಗಳನ್ನು ಓಡಿಸಲಾರಳು.

ನನ್ನ ಕಾಲೇಜು ವ್ಯಾಸಂಗ ಮುಗಿದ ಮೇಲೆ ನನ್ನ ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೋಗಬೇಕಾಯಿತು. ನನ್ನನ್ನು ಬೀಳ್ಕೊಡಲು ಅಜ್ಜಿ ಅಂದು ರೈಲ್ವೆ ನಿಲ್ದಾಣಕ್ಕೆ ಬಂದಿದ್ದಳು. ಆಕೆ ನನ್ನೊಡನೆ ಏನನ್ನೂ ಮಾತನಾಡಲಿಲ್ಲ. ಆದರೆ ಆಕೆಯ ಅಂತರಂಗ ಯಾವುದೋ ಪರಿಶುದ್ಧವಾದ ವಿವೇಚನೆಯಲ್ಲಿತ್ತು. ತುಟಿಗಳು ಮಾತ್ರ ಏನನ್ನೋ ಎಣಿಸುವಂತಿದ್ದವು. ಅಜ್ಜಿ ನನ್ನ ಸಮೀಪಕ್ಕೆ ಬಂದು ಮೆದುವಾಗಿ ನನ್ನ ತಲೆಯನ್ನು ಆಕೆಯ ತುಟಿಗಳೆಡೆಗೆ ಎಳೆದು ನನ್ನ ಗುಂಗುರು ಕೂದಲ ಮೇಲೆ ಕ್ಷಣ ಬೆರಳಾಡಿಸಿ ಹಣೆಯ ಮೇಲೆ ಮುತ್ತಿಟ್ಟಳು. ನಾನು ಬಾಗಿ ಅಜ್ಜಿಯ ಪಾದ ಮುಟ್ಟಿ ನಮಸ್ಕರಿಸಿ ಬಂಡಿ ಏರಿದೆ. ನಾನು ಇನ್ನೂ ಐದು ವರ್ಷಗಳವರೆಗೆ ಸ್ವದೇಶಕ್ಕೆ ಮರಳಿ ಅಜ್ಜಿಯನ್ನು ಕಾಣುವಂತಿರಲಿಲ್ಲ. ಬಹುಶಃ ಈ ಭೇಟಿ ನನ್ನ ಮತ್ತು ಅಜ್ಜಿಯ ಅಂತಿಮ ದರ್ಶನ ಆಗಿರಬೇಕು-ಇರಲಾರದು ಎಂದೆನಿಸಿತು.

** ** ** **

ವಿದೇಶದ ಉನ್ನತ ವ್ಯಾಸಂಗವನ್ನು ಮುಗಿಸಿ ಐದು ವರ್ಷಗಳ ಬಳಿಕ ಸಂತಸದ ಮುಖ ಹೊತ್ತು ಮನೆಗೆ ಮೊದಲು ಬಂದೊಡನೆ ನನ್ನ ಅಜ್ಜಿಯನ್ನು ನೋಡಿದೆ. ಆದರೆ ಅತಿಶಯವೆಂದರೆ, ಶಾರೀರಿಕವಾಗಿ ಅವಳಲ್ಲಿ ಯಾವ ಬದಲಾವಣೆಯನ್ನು ಕಾಣದೇ ಇದ್ದದ್ದು. ನಾನು ಹೋಗುವಾಗ ಹೇಗಿದ್ದಳೋ ಹಾಗೇ ಇದ್ದಳು-ಐದು ವರ್ಷಗಳ ಬಳಿಕವೂ ! ಆದರಲ್ಲಿ ಇನ್ನೊಂದು ಅತಿಶಯವೆಂದರೆ-ಸದಾ ಜಪ ತಪ ದೇವರ ಮಂತ್ರದ ಪಠನೆಯಲ್ಲಿ ಇರುತ್ತಿದ್ದ ಅಜ್ಜಿಯಲ್ಲಿ ಕಂಡ ದಿಢೀರ್ ಬದಲಾವಣೆ. ಅಕ್ಕಪಕ್ಕದ ಸ್ತ್ರೀಯರೊಡನೆ ಹರಟೆ ಹೊಡೆಯುತ್ತಾ ಕುಳಿತಿರುತಿದ್ದಳು.

ಹೀಗೆ ಆಕೆಯ ಉದಾಸೀನದಿಂದ ಹರಟುತ್ತಾ ಕುಳಿತಿರುತ್ತಿದ್ದದ್ದು ಬಹುಶಃ ನಾನು ಕಂಡಿದ್ದು ಇದೇ ಮೊದಲು ಆಗಿತ್ತೋ.

ವಿಷಾದ ತರುವ ಸಂಗತಿಯೆಂದರೆ ಮಾರನೇ ದಿನ ಬೆಳಗ್ಗೆಯಿಂದಲೇ ಅಜ್ಜಿ ವ್ಯಾಧಿಯಿಂದ ಮಲಗಿದಳು. ಶರೀರವೆಲ್ಲಾ ಸುಡುವ ಕೆಂಡದಂತೆ, ಜ್ವರ. ನಾವು ಡಾಕ್ಟರನ್ನು ಕರೆ ತಂದು ಶುಶ್ರೂಷೆ ಮಾಡಿದೆವು. ಆದರೆ ಅಜ್ಜಿ ಆಡಿದ ಮಾತು ನಮಗೆ ಕುತೂಹಲವನ್ನು ಉಂಟು ಮಾಡಿತು.

'ನನ್ನ ಸಮಯ ಸಮೀಪಿಸುತ್ತಿದೆ' ಎಂದು ಮೃದುವಾಗಿ ಉಸುರಿದ ಆಕೆ ಎದೆಗಳನ್ನು ಮುಚ್ಚಿ ದೇವರ ಧ್ಯಾನದಲ್ಲಿ ಮುಳುಗಿದಳು. ತುಟಿಗಳು ಮಾತ್ರ ಮೆದುವಾಗಿ ಅಲುಗುತ್ತಿದ್ದವು. ಕ್ಷಣದಲ್ಲಿ ಆ ಹಣ್ಣು ಮುಖದಲ್ಲಿ ಪ್ರಜ್ವಲಿಸುವ ಪ್ರಕಾಶವೊಂದು ಗೋಚರಿಸಿತು. ಅಲುಗುತ್ತಿದ್ದ ತುಟಿಗಳು ಸ್ತಬ್ಧವಾದವು. ಒಡನೆ ವಕ್ಷದ ಮೇಲಿಟ್ಟ ಕೈ ಬೆರಳುಗಳು ಅಲುಗುತ್ತಾ ಕೆಳಜಾರಿದವು. ಅಜ್ಜಿ ನಮ್ಮಿಂದ ದೂರ ಹೋದಳು. ಕೂಡಲೆ ಕಂಬಳಿಯನ್ನು ಎಳೆದು ಮುಖವನ್ನು ಮುಚ್ಚಿದೆವು.

ಕೆಲವು ಗಂಟೆಗಳು ಉರುಳಿದೊಡನೆ ಅಜ್ಜಿಯ ಮರಣದ ಉತ್ತರಕ್ರಿಯೆಗೆ ಬೇಕಾದ ಏರ್ಪಾಡು ಮಾಡಿದೆವು. ಮುಸ್ಸಂಜೆಯ ಸೂರ್ಯನ ಕ್ಷೀಣ ಪ್ರಾಕಾಶ ಕಿಟಕಿಯ ಸಂಧಿಯಿಂದ ಅಜ್ಜಿಯ ಮೃತ ದೇಹವನ್ನು ಅಂತ್ಯ ಘಳಿಗೆಯ ನೋಟವೆಂಬಂತೆ ಇಣುಕಿತು. ವೆರಾಂಡದ ಉದ್ದಕ್ಕೂ ಹಲವು ಪಾರಿವಾಳಗಳು ಸಾಲಾಗಿ ಕುಳಿತ್ತಿದ್ದವು. ಅಂದು ಮಾತ್ರ ಅವು ದನಿ ತೆಗೆಯಲಿಲ್ಲ. ಅವುಗಳ ಗುಂಪನ್ನು ಗಮನಿಸಿದ ತಾಯಿ ಕಾಳು ಹಾಕಿದಳು. ಆದರೆ ಪಾರಿವಾಳಗಳು ಕಾಳನ್ನು ಮುಟ್ಟಲಿಲ್ಲ.

ಮರಣೋತ್ತರ ಪುಣ್ಯ ಕ್ರಿಯೆಗಳೆಲ್ಲವನ್ನು ಮುಗಿಸಿದ ಬಳಿಕ ಅಜ್ಜಿಯ ಮೃತದೇಹವನ್ನು ಹೊತ್ತು ಮಸಣದ ಕಡೆಗೆ ತೆರಳಿದೆವು. *

ಕರ್ನಾಟಕ ಜನತೆಗೆ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.
ಈ ರಾಜ್ಯೋತ್ಸವವು ಸುಖ, ಶಾಂತಿ, ಸಮೃದ್ಧಿಯನ್ನು ತರಲಿ..

ಮನವಿ

ನಮ್ಮ ರಾಷ್ಟ್ರವು ಇಂದು ಅತ್ಯಂತ ಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಯಾವ ದೇಶ ತನ್ನ ಸರ್ವಧರ್ಮಸಮನ್ವಯಕ್ಕೆ ಹೆಮ್ಮೆಪಡುತ್ತದೆಯೋ ಅದು ಈಗ ಅಪಾಯಕಾರಿ ಸ್ಥಿತಿಯಲ್ಲಿದೆ. ಇದೆಲ್ಲ ನಡೆಯುತ್ತಿರುವುದು ಧರ್ಮದ ಹೆಸರಿನಲ್ಲಿ. ಹೌದು ಇದು ನಿಜಕ್ಕೂ ಅತ್ಯಂತ ದೊಡ್ಡ ಸವಾಲಾಗಿದೆ.

ಮತೀಯ ಸೌಹಾರ್ದತೆ ಹಾಗೂ ಧಾರ್ಮಿಕ ಸಹಬಾಳ್ವೆಗೆ ಕರ್ನಾಟಕ ರಾಜ್ಯ ಹೆಸರಾಗಿದೆ. ಇಲ್ಲಿ ಎಲ್ಲ ಜಾತಿ, ಮತ ಹಾಗೂ ಧರ್ಮದ ಜನರು ಶಾಂತಿಯಿಂದ ಒಟ್ಟಿಗೆ ಸ್ನೇಹಿತರಂತೆ ಬಾಳುತ್ತಿದ್ದು, ರಾಜ್ಯದ, ದೇಶದ ಪ್ರಗತಿಗೆ ಕೊಡುಗೆ ನೀಡಿದ್ದಾರೆ.

ಕೆಲವೊಂದು ಮತೀಯ ಗಲಭೆಗಳು ದೇಶದ ಜನರ ನಡುವೆ ಬಾಂಧವ್ಯ ಹಾಗೂ ಪ್ರೀತಿ ವಿಶ್ವಾಸಗಳನ್ನು ಹಾಳು ಮಾಡಬೇಕೇ ? ಧರ್ಮದ ಭೇದ ಭಾವಗಳು ಜನರ ನಡುವೆ ಅಡ್ಡಗೋಡೆಯಾಗಬೇಕೆ ? ಮತೀಯ ಗಲಭೆಗಳು ನಮ್ಮ ರಾಜ್ಯದ ಹಾಗೂ ದೇಶದ ಪ್ರಗತಿಗೆ ಅಡ್ಡಿ ಉಂಟುಮಾಡಲು ಅವಕಾಶವೀಯಬೇಕೆ ? ಈ ರಾಜ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕದ ಜನತೆಗೆ ವಿನಂತಿಸುವುದೇನೆಂದರೆ ಹಿಂಸಾಚಾರ ಹಾಗೂ ದ್ವೇಷವನ್ನು ಹತ್ತಿಕ್ಕಿ ನಾವೆಲ್ಲರು ಒಮ್ಮತದಿಂದ ಬಾಳೋಣ. ಜಾತಿ ಹಾಗೂ ಮತೀಯ ಭೇದಗಳು ನಮ್ಮನ್ನು ಅಗಲಿಸದಿರಲಿ. ನಾವೆಲ್ಲರು ಒಂದೇ ಎಂಬ ಸಿದ್ಧಾಂತ ಗೆಲ್ಲಲಿ. ನಮ್ಮ ಚೈತನ್ಯವು ಸಧೃಡ ಹಾಗೂ ಜಾತ್ಯಾತೀತ ರಾಜ್ಯ ನಿರ್ಮಾಣಕ್ಕೆ ಸಹಕಾರಿಯಾಗಲಿ. ಮತೀಯ ಸೌಹಾರ್ದತೆ ಹಾಗೂ ಶಾಂತಿ ಕಾಪಾಡುವಲ್ಲಿ ನಮ್ಮ ರಾಜ್ಯ ಮೇಲ್ಪಂಕ್ತಿಯಾಗಲಿ. ಎಲ್ಲರೂ ಹೆಮ್ಮೆಪಡುವಂತ ರಾಜ್ಯವಾಗಿರಲಿ. ಶಾಂತಿಗೆ ಸದಾವಕಾಶವನ್ನು ನೀಡೋಣ.


ಎಸ್. ಬಂಗಾರಪ್ಪ
ಮುಖ್ಯ ಮಂತ್ರಿ

" ಕರ್ನಾಟಕ ವಾರ್ತೆ "

ಡಿಪಿಎ 97/1990.

ಕಾರ್

ಮಲೆಯಾಳಂ ಮೂಲ: ಶ್ರೀಮತಿ ಶೋಭಾ ವಾರಿಯರ್
ಕನ್ನಡಕ್ಕೆ: ಶ್ರೀಮತಿ ಶರ್ವಾಣಿ



ನೀಲಿ ಬಣ್ಣದ ಗೇಟಿದ್ದ ಮನೆಯ ಮುಂದೆ ನನ್ನ ಕಾರನ್ನು ನಿಲ್ಲಿಸಿ, ಮತ್ತೊಂದು ಸಲ ಪರಿಶೀಲಿಸಿ ನೋಡಿದೆ. ಹೌದು .. ಆತ ಹೇಳಿದ ಗುರ್ತುಗಳೆಲ್ಲಾ ಸರಿಯಾಗಿವೆ. ಇದೇ ಮನೆ. ಅನುಮಾನವೇನೂ ಇಲ್ಲ. ಆತ ಹೇಳಿದಂತೆ ಗೇಟು ಸಹ ಹೆಚ್ಚು ಎತ್ತರವಾಗಿರಲಿಲ್ಲ.

ಕಾರಿನಿಂದ ಇಳಿಯುತ್ತಿರುವಾಗಲೇ 'ಅದು' ನನ್ನ ಕಣ್ಣಿಗೆ ಬಿತ್ತು. ಆಲೋಚಿಸುತ್ತಿದ್ದಂತೆ ನೋಡುತ್ತಿದ್ದ ಕಣ್ಣುಗಳು ಜೋತಾಡುವಂತಿದ್ದ

ಕಿವಿಗಳು ..... ಆ ದೊಡ್ಡ ನಾಯಿಯನ್ನು ಮನೆಯ ಮುಂದೆ ನೋಡಿದಾಕ್ಷಣ ಇದ್ದಲ್ಲಿಯೇ ನಿಂತುಬಿಟ್ಟೆ ನಾನು. ಮುಂದಕ್ಕಡಿಯಿಡಲೂ ಸಾಧ್ಯವಾಗಲಿಲ್ಲ ನನ್ನಿಂದ. ಅದು ಒಂದು ಕ್ಷಣ ನೆಟ್ಟ ನೋಟದಿಂದ ನನ್ನ ಕಡೆ ನೋಡಿತು. ಮರುಕ್ಷಣದಲ್ಲಿಯೇ ಮೇಲಕ್ಕೆ ನೆಗೆದು, ಗೇಟಿನ ಮೇಲಿದ್ದ ಅಗುಳಿಯನ್ನು ತೆಗೆಯಿತು- ನನ್ನನ್ನು ಆಹ್ವಾನಿಸುತ್ತಿದ್ದಂತೆ. ಅನಂತರ ಬಾಲ ಅಲ್ಲಾಡಿಸುತ್ತಾ ನಿಂತುಕೊಂಡಿದ್ದರಿಂದ ನನ್ನ ಹೆದರಿಕೆ ಕೊಂಚ ಕಡಿಮೆಯಾಯಿತು.

ಆತನಿಗೆ ಇಂತಹ ನಾಯಿ ಏಕೋ ಕಾಣೆ. ಬಹುಶಃ ತನ್ನ ಮನೆಗೆ ಬಂದವರನ್ನು ಬೆದರಿಸುವುದಕ್ಕಾಗಿಯೇ ಅಂತಹ ಭಯಂಕರವಾದ ನಾಯಿಯನ್ನು ಸಾಕಿಕೊಂಡಿದಾನೇನೋ ಅನ್ನಿಸಿತು. ನಾನು ಅತ್ತ ತಿರುಗಿ ಕಾರಿನ ಡೋರ್ ಲಾಕ್ ಮಾಡುವ ವೇಳೆಗೆ ಆ ನಾಯಿ ಒಳಕ್ಕೆ ಹೊರಟು ಹೋಗಿರುತ್ತದೆಯೆಂದು ಕೊಂಡಿದ್ದ ನನ್ನ ಭಾವನೆಯನ್ನು ಸುಳ್ಳಾಗಿಸಿ ಅದಿನ್ನೂ ಬಾಲ ಅಲ್ಲಾಡಿಸುತ್ತಾ ಅಲ್ಲಿಯೇ ನಿಂತಿತ್ತು.

ಇನ್ನು ವಿಧಿಯಿಲ್ಲದೆ ಹೆದರುತ್ತಲೇ ಮುಂದಡಿಯಿಟ್ಟೆ. ಆತನನ್ನು ಭೇಟಿಯಾಗಬೇಕಾದರೆ ಈ ಕಷ್ಟವನ್ನು ಅನುಭವಿಸಲೇಬೇಕೇನೋ ಅಂದುಕೊಂಡೆ. ಅಷ್ಟರಲ್ಲಿ ಆ ನಾಯಿ ಮುಂದೆ ಬಂದು ನನ್ನ ಚಪ್ಪಲಿಗಳನ್ನು ನೆಕ್ಕಲಾರಂಭಿಸಿದಾಗ ನನ್ನ ಎದೆಯ ಬಡಿತ ನಿಂತುಹೋಯಿತೇನೋ ಎಂಬಷ್ಟು ಭೀತಿಯುಂಟಾಯಿತು. ಉಸಿರು ಬಿಗಿಹಿಡಿದು ಸ್ಥಾನುಪಿನಂತೆ ನಿಂತುಬಿಟ್ಟೆ. ನನ್ನ ಅಸಹಾಯ ಪರಿಸ್ಥಿತಿಗೆ ನನಗೆ ಅಳುಬಂದು ಬಿಟ್ಟಿತು.

ಅದು ನಾಯಿ ಎಂದು ನನಗೆ ಗೊತ್ತಿತ್ತು. ಆದರೆ ಅದು ಸಿಂಹ, ಹುಲಿ, ದೆವ್ವ ಈ ಮೂರನ್ನೂ ಸೇರಿಸಿ ತಯಾರಿಸಿದಂತೆ ಇತ್ತು. ಮನೆಗೆ ಕರೆದು ಹೀಗೆಯೇ ಸ್ವಾಗತಿಸುವುದು? ಹಿಂತಿರುಗಿ ಓಡಿ ಹೋಗೋಣವೇ ಎನ್ನಿಸಿತು. ಆದರೆ ಹಾಗೇಕೆ ಮಾಡಲಾರದೆ ಹೋದೆನೆಂಬುದು ನನಗೇ ಅರ್ಥವಾಗದಂತಾಗಿತ್ತು. ಯಾವುದೋ ಅಜ್ಞಾತ ಶಕ್ತಿ ನನ್ನನ್ನು ಹಿಡಿದು ನಿಲ್ಲಿಸಿದಂತಹ ಅನುಭವ ....

ನನ್ನ ಮುಂದೆ ಇದ್ದ ಮನೆಯ ಕಡೆ ನೋಡಿದೆ. ಆವರಣದಲ್ಲಿ ದೊಡ್ಡ ದೊಡ್ಡ ವೃಕ್ಷಗಳಿದ್ದವು. ಅವು ದಟ್ಟವಾಗಿದ್ದುದರಿಂದ ಮನೆಯೊಳಕ್ಕೆ ಬಿಸಿಲು ಸಹ ಬೀಳುವಂತಿರಲಿಲ್ಲ. ಆ ದೊಡ್ಡ ವೃಕ್ಷಗಳ ಕೆಳಗೆ ಹಸುರೆಲೆಗಳೂ, ಒಣ ಎಲೆಗಳೂ ಅಸ್ತವ್ಯಸ್ತವಾಗಿ ಬಿದ್ದಿದ್ದುವು. ಮಧ್ಯದಲ್ಲಿ ಮೂರಂತಸ್ತಿನಷ್ಟು ಎತ್ತರನಾಗಿದ್ದ ಹೆಂಚು ಹೊದಿಸಿದ ದೊಡ್ಡ ಬಂಗಲೆ. ಆತ ಈ ಪ್ರದೇಶವನ್ನು ಏಕಿಷ್ಟು ಅಪರಿಶುಭ್ರವಾಗಿರಿಸಿಕೊಂಡಿದಾನೆ, ಕೆಲಸದವರನ್ನು ಇಟ್ಟು ಇದನ್ನೆಲ್ಲಾ ಚೊಕ್ಕಟ ಮಾಡಿಸಬಹುದಲ್ಲಾ! ನೆಲದ ಮೇಲೆ ಹೆಚ್ಚು ಕಡಿಮೆ ಎರಡಂಗುಲದಷ್ಟು ದಪ್ಪನಾಗಿ ಕುಳಿತಿದ್ದುವು ಎಲೆಗಳು. ಒಣಗಿದ ಎಲೆಗಳು ಉದುರಿ ಬಿದ್ದಿರುವುದೇನೋ ಸಹಜವೇ, ಆದರೆ ಹಸುರೆಲೆಗಳು ಕೂಡಾ ಕೆಳಗೆ ಬಿದ್ದಿವೆಯೇಕೆಂಬುದೇ ಅರ್ಥವಾಗಲಿಲ್ಲ ನನಗೆ. ಆತನನ್ನು ಕೇಳಿ ತಿಳಿದುಕೊಳ್ಳಬೇಕೆನಿಸಿತು.

ವರಾಂಡದಲ್ಲಿ ನಿಂತು ಡ್ರಾಯಿಂಗ್ ರೂಮಿನ ಕಡೆ ನೋಡಿದೆ. ಅಲ್ಲಿ ಒಬ್ಬಾಕೆ ಕುಷನ್ ಕುರ್ಚಿಯಲ್ಲಿ ಕುಳಿತು ಶೂನ್ಯವನ್ನು ದಿಟ್ಟಿಸುತ್ತಿದ್ದಳು. ನಾನು ಅಲ್ಲಿಗೆ ಬಂದ ವಿಷಯ ಸಹ ಆಕೆಗೆ ಗೊತ್ತಾದಂತಿರಲಿಲ್ಲ. ನಾನು ಕರೆಗಂಟೆಯನ್ನು ಒತ್ತುತ್ತಾ ಆಕೆಯ ಕಡೆ ನೋಡಿದೆ. ಆ ಸದ್ದಿಗೆ ಆಕೆ ಬೆಚ್ಚಿಬಿದ್ದಳು. ಆದರೆ ಅದು ಕ್ಷಣಕಾಲ ಮಾತ್ರ. ಮರುಕ್ಷಣದಲ್ಲಿ ಅಂದವಾದ ಮಂದಹಾಸವನ್ನು ಬೀರುತ್ತಾ ನನ್ನನ್ನು ಒಳಕ್ಕೆ ಕರೆದೊಯ್ದಳು.

''ಆತ ಮನೆಯಲ್ಲಿಲ್ಲವೇನು?'' ಮೆಲುದನಿಯಲ್ಲಿ ಕೇಳಿದೆ ನಾನು.

''ಸ್ವಲ್ಪ ಹೊತ್ತು ಕುಳಿತುಕೊಳ್ಳಿ. ಇದೀಗ ಬರ್ತಾನೆ ಆತ, ನಾನು ಸ್ವಲ್ಪ ಮುಂಚಿತವಾಗಿ ಬಂದೆ ಅಷ್ಟೆ.''

ನನಗಿದು ವಿಚಿತ್ರವಾಗಿ ಕಾಣಿಸಿತು. ಅಂದರೆ ಆಕೆ ಸಹ ಒಬ್ಬ ಅತಿಥಿಯಾಗಿಯೇ ನನ್ನಂತೆಯೇ ಬಂದಿದಾಳೆಂದಾಯಿತು. ಮತ್ತಾರನ್ನೂ ಮನೆಗೆ

ಆಹ್ವಾನಿಸಿದಂತೆ ಆತ ಹೇಳಲೇ ಇಲ್ಲವಲ್ಲಾ! ಇಷ್ಟು ಹೊತ್ತು ನನ್ನನ್ನು ಮಾತ್ರವೇ ಕರೆದಿರಬೇಕೆಂಬ ಭಾವನೆಯಲ್ಲಿದ್ದ ನನಗೆ ಸ್ವಲ್ಪ ನಿರುತ್ಸಾಹವುಂಟಾಯಿತು.

ನಾನು ಆಕೆಯಿಂದ ದೂರವಾಗಿ ಕೋಣೆಯಲ್ಲಿ ಮತ್ತೊಂದು ಕಡೆ ಕುಳಿತುಕೊಂಡೆ. ಆಕೆ ಮತ್ತೆ ಮೇಲಿನ ಸೂರಿನ ಕಡೆ ದಿಟ್ಟಿಸುತ್ತಾ ಕುಳಿತಳು. ಆಕೆಗೆ ಸುಮಾರು ನಲವತ್ತೈದು ವರ್ಷ ಇರಬಹುದು. ಗುಂಗುರು ಕೂದಲನ್ನು ಸಡಿಲವಾಗಿ ಹೆಣೆದುಕೊಂಡಿದ್ದಳು. ನೋಡುವುದಕ್ಕೆ ಕವಯಿತ್ರಿಯಂತೆ ಕಾಣುತ್ತಿದ್ದಳು. ದೀರ್ಘಾಲೋಚನೆಯಲ್ಲಿದ್ದಂತಿದ್ದಳು. ಇಷ್ಟಕ್ಕೂ ಯಾರೀಕೆ? ಆತನ ಗೆಳತಿಯಿರಬಹುದೇ? ಏನೋ ಮತ್ತೆ ....

ನಮ್ಮ ಮಧ್ಯೆ ನೆಲೆಸಿದ ನಿಶ್ಯಬ್ಧ, ನೀರವತೆಯನ್ನು ಸಹಿಸಲಾರದೆ ನಾನೇ ಆಕೆಯನ್ನು ಮಾತನಾಡಿಸಿದೆ. 'ಇಲ್ಲಿಗೆ ಹೇಗೆ ಬಂದಿರಿ ನೀವು?' ಎಂದು.

''ಹಾಂ ...... ನಾನೇ ..... ಇಲ್ಲಿಗೇ ...... ಅದೇ ..... ಆಟೋದಲ್ಲಿ ಬಂದೆ'' ಎಂದಳಾಕೆ ತಡವರಿಸುತ್ತಾ,

''ಮನೆ ಗುರ್ತು ಹಿಡಿಯೋದು ಕಷ್ಟವಾಯಿತೇ?''

''ಹಾಂ ..... ಹೂಂ ......'' ಹೌದು, ಅಲ್ಲ ಎನ್ನುವಂತಿತ್ತು ಆಕೆಯ ಗೊಣಗುವಿಕೆ.

ಆಕೆ ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳದಂತೆ ಪ್ರವರ್ತಿಸುತ್ತಿದ್ದುದನ್ನು ಕಂಡು ನನಗೆ ಬೇಸರ, ಕೋಪ ಎರಡೂ ಉಂಟಾಯಿತು.

''ಹಾಂ ..... ಏನೆಂದಿರಿ ನೀವು? ಮನೆ ಗುರ್ತು ಹಿಡಿಯೋದು ಏನೂ ಕಷ್ಟವಾಗಲಿಲ್ಲ ..... ನಾನು ಏನೋ ಆಲೋಚನೆಯಲ್ಲಿದ್ದೆ. ಏನೂ ಅಂದುಕೋಬೇಡಿ ನೀವು ....'' ಎಂದ

''ಕಾವ್ಯದ ಬೆಲೆ''

ಲೋಕಪ್ರಿಯತೆಯ ಶಿಖರದ ಮೇಲಿದ್ದ ಕನ್ನಡ ಕವಿ ಕುವೆಂಪು ಅವರನ್ನು ಕಾಣಲು ಅಭಿಮಾನಿಯೊಬ್ಬ ಅವರಲ್ಲಿಗೆ ಹೋಗಿದ್ದ. ಮಾತುಕತೆ ಆದಾಗಲೇ ಪ್ರಕಟವಾಗಿದ್ದ ಅವರ 'ರಾಮಾಯಣ ದರ್ಶನಂ'ದ ಕುರಿತು ನಡೆದಿತ್ತು. ಆ ಬೃಹತ್ಕೃತಿಯನ್ನು ಮನಸಾರೆ ಹೊಗಳಿದ ನಂತರ ಆ ಅಭಿಮಾನಿ ಏನೋ ನೆನಪಾದಂತೆ ತಡೆದು ಸ್ವಲ್ಪ ಆಕ್ಷೇಪದ ಧ್ವನಿಯಲ್ಲಿ ''ಅದೆಲ್ಲ ಸರಿ ಪುಟ್ಟಪ್ಪನವರೇ, ಆದರೆ ತಮ್ಮ ಆ ಪುಸ್ತಕದ ಬೆಲೆ ಮಾತ್ರ ಬಹಳೇ ಹೆಚ್ಚು- ಸಾಮಾನ್ಯನಿಗೆ ನಿಲುಕದಷ್ಟು ಆಯಿತು'' ಎಂದನು. ವಿನಯಶಾಲಿ ಪುಟ್ಟಪ್ಪ ಮರುಮಾತನಾಡದೆ ಮುಗುಳು ನಕ್ಕುಬಿಟ್ಟರು.

ಮಾತು ಸಾಗಿದಂತೆ ಪುಟ್ಟಪ್ಪನವರ ದೃಷ್ಟಿ ಆ ಅಭಿಮಾನಿಯ ಕಾಲೆಡೆ ಹೋಯಿತು. ಅವನು ಹೊಚ್ಚಹೊಸದಾದ ಬೂಟನ್ನು ಹಾಕಿಕೊಂಡು ಬಂದಿದ್ದ. ಪುಟ್ಟಪ್ಪ ಸ್ವಲ್ಪ ತಡೆದು, ''ಅಲ್ಲರೀ, ನಿಮ್ಮ ಬೂಟ್ಸು ಬಹಳ ಸೊಗಸಾಗಿವೆಯಲ್ಲ! ಎಷ್ಟಕ್ಕೆ ಕೊಂಡಿರಿ?'' ಎಂದರು.

''ಬೂಟ್ಸೇ, ಇದೀಗ ಹದಿನಾರು ರೂಪಾಯಿ ಕೊಟ್ಟು ತೆಗೆದುಕೊಂಡೆ'' ಎಂದ.

ಆಗ ಪುಟ್ಟಪ್ಪನವರು ಬಿಟ್ಟರು ನುಡಿಬಾಣ. ''ಓಹೋ, ಹಾಗಾದರೆ ನನ್ನ ಪುಸ್ತಕದ ಬೆಲೆಗಿಂತ ಹೆಚ್ಚೇ ಆಯಿತಲ್ಲ! ಈ ಬೂಟ್ಸು ಹೆಚ್ಚೆಂದರೆ ಒಂದು ವರ್ಷ ತಾಳಿದರೆ ಆ ಪುಸ್ತಕ ನೀವಿರುವಷ್ಟು ಕಾಲ ನಿಮ್ಮದಾಗಿ ನಿಮಗೆ ಆನಂದ ಕೊಡುವುದಲ್ಲ?''

(ಸಂಗ್ರಹ) *ಚಂದ್ರಶೇಖರ ಜೋಯ್ಸ*

ಳಾಕೆ ನಗುತ್ತಾ,

''ಪರವಾಗಿಲ್ಲ ಬಿಡಿ ... ಅದಕ್ಕೇನಂತೆ?'' ಎಂದೆ ನಾನು. ಆಕೆಯ ನಗುವಿನಲ್ಲಿ ಎಂತ ಹುದೋ ಮೋಡಿ ಇದ್ದಂತಿತ್ತು. ಮುಗ್ಧ ಮನೋಹರವಾಗಿತ್ತದು.

''ಆತ ಎಲ್ಲಿಗೆ ಹೋಗಿದಾರೆಂದು ಗೊತ್ತೇ ನಿಮಗೆ?'' ಇನ್ನು ಸುಮ್ಮನಿರಲಾಗದೆ ಆಕೆ ಯನ್ನು ಕೇಳಿದೆ.

''ಸ್ವಲ್ಪ ತಾಳಿಕೊಳ್ಳಮ್ಮಾ, ಈ ಕಾಲದ ಹುಡುಗಿಯರೆಲ್ಲಾ ಇಷ್ಟೆ! ನಾನೂ ಒಂದು ಕಾಲ ದಲ್ಲಿ ನಿನ್ನಂತೆಯೇ ಇದ್ದೆ. ಅದಕ್ಕೇ ಹೇಳ್ತಿದೀನಿ. ಸ್ವಲ್ಪ ತಾಳ್ಮೆ ಇರಬೇಕೂಂತ ....''

ನಾನು ಮೌನವಹಿಸಿದೆ.

ಅಷ್ಟರಲ್ಲಿ ಕಾರು ಬರುತ್ತಿರುವ ಸದ್ದಾ ಯಿತು. ಅದು ಈ ಮನೆಯ ಮುಂದೆಯೇ ಬಂದು ನಿಂತಿತು.

''ಅದೋ ಕಾರು ಬಂತು. ಆಕೆ ಬಂದಂತಿದೆ. '' ಎಂದೆ ಸಂತೋಷದಿಂದ.

''ಸ್ವಲ್ಪ ಸಹನೆಯಿಂದಿರಬೇಕೆಂದು ಹೇಳ್ತೇದಿ ನಲ್ಲಾ ಮತ್ತೆ ....'' ಆಕೆ ತನ್ನ ಸೀರೆಯ ನೆರಿಗೆ, ಸೆರಗುಗಳನ್ನು ಸರಿಪಡಿಸಿಕೊಳ್ಳತೊಡಗಿದಳು. ಆಕೆ ಸಹ ಒಂದು ತೆರನಾದ ಅಸಹನೆಯಿಂದಿ ದ್ದಂತೆ ಭಾಸವಾಯಿತು ನನಗೆ. ಅದೊಂದು ವಿಧವಾದ ತಮಾಷೆಯಾಗಿ ಕಾಣಿಸಿತು ಸಹಾ!

''ನೀವು ಕೂಡಾ ಅಸಹನೆಯಿಂದಿದೀರ ಅನ್ನಿ ಸುತ್ತಿದೆ ನನಗೆ ......'' ಎಂದೆ.

''ಇಲ್ಲವಲ್ಲಾ .... ಅಂತದ್ದೇನಿಲ್ಲ, ಸೀರೆ ಮುದುಡಿಕೊಂಡಿತ್ತು. ಸರಿಪಡಿಸಿಕೊಂಡೆ, ಅಷ್ಟೆ '' ಎಂದಳಾಕೆ.

ಅಂದರೆ ಆಕೆಗೆ ತಾನೇನು ಮಾಡುತ್ತಿದ್ದಾ ಳೆಂಬ ವಿಷಯ ಗೊತ್ತಿದೆ ಎಂದಾಯಿತು.

''ನೀವು ಒಂದು ವಿಷಯ ಗಮನಿಸಿದೀರಾ? ಅಲ್ಲಿದೆಯಲ್ಲಾ ಆ ನಾಯಿ ಹೊಸಬರನ್ನು ನೋಡಿದ ಕೂಡಲೇ ಮಾಮೂಲು ನಾಯಿಗ ಳಂತೆ ಬೊಗಳುವುದೇ ಇಲ್ಲ. ಇಂತಹ ನಾಯಿಗಳಿದ್ದೇನು ಪ್ರಯೋಜ ನ?'' ಎಂದೆ ಆಕೆಯೊಂದಿಗೆ.

''ಊಹೂಂ ..... ಹಾಗೆ ನಿರ್ಲಕ್ಷ ಮಾಡೋಹಾಗಿಲ್ಲ ಕಣಮ್ಮಾ! ಅದು ಬಹಳ ಭಯಂಕರವಾದ ನಾಯಿ, ಗೊತ್ತೇನು? ನಾಯಿ ಗಳನ್ನು ಕುರಿತು ನನಗೆ ಚೆನ್ನಾಗಿ ಗೊತ್ತು. ಇಲ್ಲಿರುವುದು ಬೇಟೆ ನಾಯಿ. ಅದು ಬೇಕೆಂದು ಕೊಂಡಲ್ಲಿ ಮನುಷ್ಯರನ್ನು ಸಹ ತಿಂದುಬಿಡಬ ಲ್ಲದು.''

''ನಾನು ನಂಬೊಲ್ಲಪ್ಪ, ನಾನಿಲ್ಲಿಗೆ ಬಂದ ಕೂಡಲೇ ಅದು ನನ್ನ ಪಾದಗಳನ್ನು ನೆಕ್ಕಿತು. ನನ್ನ ನೋಡಿದಾಗಿನಿಂದ ಬಾಲ ಅಲ್ಲಾಡಿಸ್ತಾನೇ ಇದೆ, ಗೊತ್ತೇನು?''

''ನಾನು ಹೇಳ್ತಾ ಇರೋದು ಅದು ಮಾಮೂಲಾಗಿದ್ದಾಗಿನ ಮಾತಲ್ಲ. ಅದಕ್ಕೆ ಕೋಪ ಬಂದಾಗ ನಿನ್ನನ್ನು ಹರಿದು ತಿಂದುಬಿಡ ಬಲ್ಲದು, ತಿಳಿಯಿತೇ?''

''ನೀವೇನು ಹೇಳಿದರೂ ಸರಿ, ನಾನು ನಂಬ ಲಾರೆ.''

''ನೀನಿನ್ನೂ ಹುಡುಗಿ, ನಿನಗಿಂತ ಹೆಚ್ಚಾಗಿ ಬದುಕನ್ನು ಕಂಡಿದೀನಿ. ಹಿರಿಯರು ಹೇಳಿದ ಮಾತನ್ನು ನಂಬುವುದು ತಪ್ಪೇನಲ್ಲ .... ನೀನು ಆ ರೀತಿ ಮುಖ ತಿರುಗಿಸಿಕೋಬೇಡ ಮತ್ತೆ .... ಅದೋ .... ಮುಖ ದುಮ್ಮಿಸಿಕೋತಾ ಇದೀಯಾ ..... ಈಗಿನ ಕಾಲದ ಮಕ್ಕಳೆಲ್ಲಾ ಅಷ್ಟೇ ಅಲ್ಲವೇ?''

ತಾನೇ ಹೆಚ್ಚು ಅನುಭವಸ್ಥಳು ಅಂತ ನನಗೆ ಪಾಠ ಹೇಳೋಕೆ ಶುರುಮಾಡಿದ್ದು ನನಗೇನೂ ಹಿಡಿಸಲಿಲ್ಲ. ಮೈ ಉರಿ ಬಂದಂತಾಯಿತು. ಆದರೆ ಆಕೆಯನ್ನು ಹೇಗೆ ಅವಾಯ್ಡ್ ಮಾಡಬೇ ಕೆಂಬುದೇ ತಿಳಿಯದಾಯಿತು. ಹೋಗಲಿ, ಕಿಟಕಿ ಯಿಂದ ಹೊರಕ್ಕೆ ನೋಡುತ್ತಾ ಕಾಲ ಕಳೆ ಯೋಣ ಅಂದರೆ ಅದೂ ಸಾಧ್ಯವಿಲ್ಲದಂತೆ ಕಿಟಕಿಗಳಿಗೆಲ್ಲಾ ದಪ್ಪವಾದ ತೆರೆಗಳು ಹಾಕಲ್ಪಟ್ಟಿ ದ್ದುವು.

''ಓ ..... ಎಲ್ಲರೂ ಬಂದುಬಿಟ್ಟಿದೀರ ....''

ಕಂಪಿಸುತ್ತಿದ್ದ ಆ ಹೊಸ ಕಂಠವನ್ನು ಕೇಳಿ ಇಬ್ಬರೂ ಬೆಚ್ಚಿಬಿದ್ದೆವು. ತಲೆಯೆತ್ತಿ ನೋಡಿದಾಗ ಆಗ ತಾನೇ ಒಳಕ್ಕೆ ಬರುತ್ತಾ ಮಾತನಾಡಿದ ವೃದ್ಧ ಸ್ತ್ರೀ ಕಾಣಿಸಿದಳು. ಬಿಳಿಯ ರೇಷ್ಮೆಯಂತೆ ನೆರೆತ ಕೂದಲು. ಶುಭ್ರವಾದ ಬಿಳಿಯ ಸೀರೆಯನ್ನುಟ್ಟು ಠೀವಿಯಾಗಿದ್ದಳಾಕೆ.

''ನಾವಿಲ್ಲಿದೀವಿ ಅಂತ ನಿಮಗೆ ಹೇಗೆ ಗೊತ್ತು?'' ಮಧ್ಯ ವಯಸ್ಸಿನ ಸ್ತ್ರೀ ಕೇಳಿದಳು.

''ನನಗೆಲ್ಲಾ ಗೊತ್ತು ...... ನೀವು ಬರ್ತೀರಿ ಅನ್ನೋ ವಿಷಯ ನನಗೆ ಗೊತ್ತು .....'' ಎನ್ನುತ್ತಾ ಒಂದು ಕುರ್ಚಿಯಲ್ಲಿ ಕುಳಿತಳಾಕೆ.

ನಾನಾದರೋ ನಾನೂ ಆತ ಮಾತ್ರವೇ ಇಲ್ಲಿ ಭೆಟ್ಟಿಯಾಗುತ್ತೇವೆ ಎಂದುಕೊಂಡಿದ್ದೆ. ಆದರೆ ಇವರಿಗೆ ಮಾತ್ರ ಯಾರು ಯಾರು ಬರುತ್ತಾರೆಂದು ಮೊದಲೇ ತಿಳಿದಂತಿದೆ.


''ಯಾಕೆ ಹುಡುಗೀ ..... ಹಾಗೆ ಹೆದರ್ತಿದೀಯಿಕೆ?'' ಆಕೆ ಕೇಳಿದಳು.

''ಇಲ್ಲವಲ್ಲಾ .... ನಾನೇನು ಹೆದರುತ್ತಿಲ್ಲ ......''

''ಈಗಿನ ಹುಡುಗಿಯರೆಲ್ಲಾ ಇಷ್ಟೆ. ಇವರನ್ನು ನೋಡಿದರೆ ಅಯ್ಯೋ ಅನ್ನಿಸತ್ತೆ. ನಮ್ಮ ಮಾತಿನ ಮೇಲೆ ನಂಬಿಕೆ ಇರೊಲ್ಲ. ಅಷ್ಟೇ ಅಲ್ಲದೆ ಯಾರನ್ನು ನೋಡಿದರೂ ಏನನ್ನು ನೋಡಿದರೂ ಗಾಬರೀನೇ! ಈಗ ತಾನೇ ನಾನು ಅದೇ ವಿಷಯ ಹೇಳ್ತಿದ್ದೆ. ಮತ್ತೊಂದು ಸಲ ಸೀರೆ ಸರಿಪಡಿಸಿಕೊಳ್ಳುತ್ತಾ ಹೇಳಿದಳು ಮಧ್ಯ ವಯಸ್ಸಿನಾಕೆ.

''ನನಗ್ಯಾಕೋ ಈ ಹುಡುಗಿಯನ್ನು ನೋಡಿದರೆ ಹಾಗನ್ನಿಸುತ್ತಾ ಇಲ್ಲವಲ್ಲಾ .... ಏನಮ್ಮಾ ನೀನು ಒಳ್ಳೆ ಧೈರ್ಯವಂತಳಂತೆ ಕಾಣುತ್ತೀ ಅಲ್ಲವೇ?'' ಅನುನಯದಿಂದ ಕೇಳಿದಳು ವೃದ್ಧ ಸ್ತ್ರೀ.

ಅನಂತರ ಪುಟ್ಟ ಪುಸ್ತಕವೊಂದನ್ನು ತೆಗೆದು ಮೃದುವಾಗಿ, ಮೆಲುದನಿಯಲ್ಲಿ ಓದತೊಡಗಿದಳು. ನನಗೆ ಆಕೆಯ ಕಂಠದಿಂದ ಸಂಗೀತ



ಹೊರಹೊಮ್ಮುತ್ತಿದ್ದಂತೆ ಅನ್ನಿಸಿತು.

''ಯಾವ ಪುಸ್ತಕ ನೀವು ಓದುತ್ತಿರೋದು?'' ಆಕೆಯನ್ನು ಕೇಳಿದೆ.

''ಓ ..... ಇದೇ ಭಗವದ್ಗೀತೆ''

''ಹೌದೇ ..... ಸ್ವಲ್ಪ ಗಟ್ಟಿಯಾಗಿ ಓದಿ, ನಾನೂ ಕೇಳ್ತೀನಿ. ಸಂಸ್ಕೃತ ನನಗರ್ಥ ಆಗೋಲ್ಲ ಅಂತಿಟ್ಟುಕೊಳ್ಳಿ. ಆದರೂ ನೀವು ಓದುತ್ತಿದ್ದರೆ ಇಂಪಾಗಿದೆ, ಕೇಳೋಣ ಅನ್ನಿಸುತ್ತಿದೆ''

''ಊಹೂಂ ...... ಆಕೆ ಭಗವದ್ಗೀತೆಯನ್ನು ಗಟ್ಟಿಯಾಗಿ ಓದೋದು ನನಗಿಷ್ಟವಿಲ್ಲ. ನಿಮಗಿಷ್ಟಾಗಿ ಕೇಳಬೇಕೆನಿಸಿದರೆ ಆ ಮೂಲೆಯಲ್ಲಿ ಕೂಡುವ ಬದಲು ಹತ್ತಿರ ಹೋಗಿ ಕುಳಿತು ಕೇಳಬಹುದಲ್ಲಾ'' ಎಂದಳು ಮಧ್ಯ ವಯಸ್ಸಿನಾಕೆ, ಬೇಸರದಿಂದ. ಹಾಗೆ ಹೇಳಿ ತನ್ನ ಕೆಲಸ ಆಯಿತೆಂಬಂತೆ ಮತ್ತೆ ಸೂರಿನಕಡೆ ನೋಡುತ್ತಾ ಕುಳಿತುಬಿಟ್ಟಳು. ಹಾಗೆ ಮೇಲೆ ನೋಡುತ್ತಿದ್ದರೆ ಇನ್ನಾವ ಸದ್ದೂ ಆಕೆಗೆ ಕೇಳಿಸೋಲ್ಲ ಅಂತ ಗೊತ್ತು ನನಗೆ.

ನನ್ನ ಬೇಡಿಕೆಯನ್ನು ಮನ್ನಿಸಿ ಆ ವೃದ್ಧಸ್ತ್ರೀ ಭಗವದ್ಗೀತೆಯನ್ನು ಗಟ್ಟಿಯಾಗಿ ಓದಿ ಹೇಳತೊಡಗಿದಳು. ಅದನ್ನು ಕೇಳುತ್ತಿದ್ದಂತೆ ಎಂದೂ ನೋಡದ ಹೊಸ ಪ್ರಪಂಚದೊಳಕ್ಕೆ ಪ್ರವೇಶಿಸುತ್ತಿದ್ದಂತೆ ಅನ್ನಿಸತೊಡಗಿತು. ಆ ಮಧುರ ಕಂಠವನ್ನು ಕೇಳುತ್ತಾ ಕಣ್ಣು ಮುಚ್ಚಿಕೊಂಡೆ. ಎಲ್ಲಿಯೋ ತೇಲಿಹೋಗುತ್ತಿರುವ ಸುಖದ ಅನುಭೂತಿ, ಅನುಭವ ನನ್ನನ್ನು ವಿವಶಗೊಳಿಸಿತು.

''ಛೀ! ಹಾಳು ನಾಯಿ! ನನ್ನನ್ನು ನೆಕ್ಕಬೇಡವೇ ..... ಅಯ್ಯೋ, ನೋಡ್ರೀ, ಯಾರಾದರೂ ನನ್ನನ್ನು ಈ ನಾಯಿಯಿಂದ ಕಾಪಾಡಿ .....'' ಎನ್ನುತ್ತಾ ಬಿರುಗಾಳಿಯಂತೆ ಓಡಿ ಬಂದಳಾಕೆ. ಕೋಣೆಯ ಮಧ್ಯದಲ್ಲಿ ನಿಂತು, ದಣಿವಾರಿಸಿಕೊಳ್ಳುತ್ತಾ ಸುತ್ತಲೂ ನೋಡಿದಳು. ಮಧ್ಯವಯಸ್ಸಿನಾಕೆಯನ್ನು ನೋಡಿದಾಕ್ಷಣ 'ಓ ...' ಎಂಬಂತೆ ತಲೆ ಆಡಿಸಿದಳು. ಆಶ್ಚರ್ಯದಿಂದ ಬಾಯಿಗೆ ಕೈ ಅಡ್ಡ ಇಟ್ಟುಕೊಂಡು ಅವಳೆಡೆಗೆ ಓಡಿದಳು. ಆದರೆ ಮಧ್ಯವಯಸ್ಸಿನಾಕೆ ಈ ಲೋಕದಲ್ಲಿದ್ದರೆ ತಾನೆ? ಹೊಸದಾಗಿ ಬಂದಾಕೆ, ಆಕೆಯನ್ನು ಮೂರುನಾಲ್ಕು ಬಾರಿ ತಟ್ಟಿ ಅಲುಗಾಡಿಸಿದ ಮೇಲೆ ಆಕೆ ಇತ್ತ ನೋಡಿದಳು.

''ಅರುಂಧತೀ ..... ನೀನೇನೆ? ನಿಜವಾಗಿಯೂ ಇಲ್ಲಿ ನಿನ್ನನ್ನು ನೋಡ್ತಿದೀನಾ? ನನ್ನ ಕಣ್ಣುಗಳನ್ನೇ ನಂಬಲಾಗುತ್ತಿಲ್ಲವಲ್ಲೇ ....'' ಆನಂದತುಂದಿಲಳಾಗಿ ಒಂದೇ ಸವನೆ ಮಾತನಾಡುತ್ತಿದ್ದಳಾಕೆ.

ವೃದ್ಧಸ್ತ್ರೀ ಓದುತ್ತಿದ್ದ ಗೀತೆಯನ್ನು ನಿಲ್ಲಿಸಿ ಆಕೆಯ ಕಡೆ ನೋಡಿದಳು.

ಅರುಂಧತಿ ಎಂದು ಕರೆಸಿಕೊಂಡ ನಡುವಯಸ್ಸಿನ ಆ ಹೆಂಗಸು ಈ ಪ್ರಪಂಚಕ್ಕೆ ಇಳಿದು ಬಂದಳು. ತನ್ನನ್ನು ಮಾತನಾಡಿಸಿದಾಕೆಯನ್ನು ಗುರ್ತಿಸಿ ಅಪ್ಪಿಕೊಂಡಳು. ಇಬ್ಬರೂ ಒಬ್ಬರನ್ನೊಬ್ಬರು ತಡವಿಕೊಂಡರು. ಬೆನ್ನಿನ ಮೇಲೆ ತಟ್ಟಿಕೊಂಡರು. ಕೆನ್ನೆ ಹಿಂಡಿಕೊಂಡರು. ಅವರಿಬ್ಬರೂ ಕಾಲೇಜಿನ ಹುಡುಗಿಯರಂತೆ ತುಂಟ ಮಕ್ಕಳಂತೆ ಗಲಾಟೆ ಮಾಡುತ್ತಿದ್ದರೆ ನೋಡಲು ನನಗೇ ನಾಚಿಕೆಯೆನಿಸಿತು.

''ಅಬ್ಬಾ! ಎಷ್ಟು ಆಶ್ಚರ್ಯ ಆಗ್ತಿದೆ ಅಂತ ನನಗೆ! ಇಪ್ಪತ್ತೈದು ವರ್ಷಗಳ ನಂತರ ಮತ್ತೆ ಇಲ್ಲಿ .... ಹೀಗೆ ....''

ಇದೀಗ ವಿಷಯ ಅರ್ಥವಾಗಿತ್ತು. ಇಪ್ಪತ್ತೈದು ವರ್ಷಗಳ ನಂತರ ಮತ್ತೆ ಈಗ ತಾನೇ ಒಬ್ಬರನ್ನೊಬ್ಬರು ಭೇಟಿಯಾಗಿದಾರೆ. ಅದೂ ಅವರ ಸಂತೋಷಕ್ಕೆ ಕಾರಣ. ಅವರ ಸಂಭಾಷಣೆಯನ್ನು ಕೇಳಬೇಕೆನಿಸಿತು ನನಗೆ. ಅವರು ಏನು ಮಾತನಾಡಿಕೊಳ್ಳುತ್ತಾರೆ? ಏನು ಮಾಡುತ್ತಾರೆ? ತಮ್ಮ ಕಥೆಗಳನ್ನು ಒಬ್ಬರಿಗೊಬ್ಬರು ಈಗಲೇ ಹೇಳಿಕೊಳ್ಳುತ್ತಾರೆಯೇ?

''ಲಕ್ಷ್ಮೀ ...... ನೀನು ಬಂದಿದೀ ಅಂದರೆ ನನಗಿನ್ನೂ ನಂಬಲಾಗುತ್ತಲೇ ಇಲ್ಲ ಕಣೆ, ಅದರಲ್ಲಿಯೂ ಇಲ್ಲಿ ನನ್ನ ಪಕ್ಕದಲ್ಲಿ ಕುಳಿತಿದೀ ಅಂದರೆ ಕನಸೋ ನನಸೋ ತಿಳಿಯುತ್ತಿಲ್ಲ. ಹೋಗಲಿ ಬಿಡು ..... ಆತ ಬರುವವರೆಗೂ ಹಾಯಾಗಿ ಇಬ್ಬರೂ ಮಾತನಾಡಿಕೊಳ್ಳೋಣ. '' ಎನ್ನುತ್ತಾ ಅರುಂಧತಿ, ಲಕ್ಷ್ಮಿ ಎಂಬ ಆಕೆಯನ್ನು ತನ್ನ ಬಳಿಯಲ್ಲಿಯೇ ಆರೆಂಜ್ ಬಣ್ಣದ ಕುಷನ್ ಇದ್ದ ಕುರ್ಚಿಯಲ್ಲಿ ಕೂಡಿಸಿದಳು.

''ಲಕ್ಷ್ಮಿ, ನೀನು ತುಂಬಾ ಬದಲಾಗಿಬಿಟ್ಟಿದೀಯ, ನಿನ್ನ ತಲೆ ನೆರೆತಿದೆ, ವಯಸ್ಸಾದವಳಂತೆ ಕಾಣುತ್ತಿದೀಯಲ್ಲಾ!'' ಎಂದಳು.

ಈ ಮಾತುಗಳನ್ನು ಕೇಳುತ್ತಾ ಲಕ್ಷ್ಮಿ ತನ್ನ ಕೂದಲಿನಲ್ಲಿ ಬೆರಳಾಡಿಸುತ್ತಾ, ನೆರೆತ ಕೂದಲನ್ನು ಸವರಿಕೊಳ್ಳುತ್ತಾ ಅರುಂಧತಿಯ ಕಡೆ ನೋಡಿದಳು. ದಟ್ಟವಾಗಿದ್ದ ಆಕೆಯ ಕಪ್ಪು ಬಣ್ಣದ ಕೂದಲು ಮಿರಮಿರನೆ ಹೊಳೆಯುತ್ತಿತ್ತು. ಅದನ್ನು ನೋಡಿದಾಕ್ಷಣ ಲಕ್ಷ್ಮಿಯ ಕಣ್ಣುಗಳಲ್ಲಿ ಅಸೂಯೆ ಇಣಕಿ ನೋಡಿದಂತೆನಿಸಿತು ನನಗೆ.

''ಕೂದಲಿಗೆ ಬಣ್ಣ ಹಾಕ್ತೀಯೇನೇ?'' ಎಂದು ಸ್ವಲ್ಪ ಅಳುಕಿನಿಂದಲೇ ಅರುಂಧತಿಯನ್ನು ಕೇಳಿದಳು.

''ಊಹೂಂ..... ನಾನು ಬಣ್ಣ ಹಾಕೊಲ್ಲಮ್ಮಾ. ಆದರೆ ನನಗೆ ಜೀವನದಲ್ಲಿ ಎಂತಹ ಕೊರತೆಯೂ ಇಲ್ಲ, ಸಂತೋಷವಾಗಿ, ಹಾಯಾಗಿದೇನೆ. ನಾನಿಲ್ಲಿಗೆ ಬರುತ್ತಲೇ ಇರಲಿಲ್ಲ. ಆತನ ಬಲವಂತದಿಂದ ಬರಬೇಕಾಯಿತಷ್ಟೆ. ಅವರನ್ನು ಒಂಟಿಯಾಗಿ ಬಿಟ್ಟು ಬರೋದು ಅಂದ್ರೆ ಆಗೊಲ್ಲ ನನಗೆ'' ಎಂದಳು ಅರುಂಧತಿ.

''ನಾನು ಒಂಟಿಯಾದಾಗಿನಿಂದ ನನ್ನ ಕೂದಲು ನೆರೆತುಹೋಯಿತು ಕಣೇ ....'' ಎಂದಳು ಲಕ್ಷ್ಮೀ.

''ಅಯ್ಯೋ .....ನೀನು ಒಬ್ಬಂಟಿಗಳಾಗಿಬಿಟ್ಟೆಯೇನೇ?''

''ಹೌದು ...... ಅವರಿಲ್ಲ .... ನಾನು ಒಬ್ಬಳೇ ಒಂಟಿಯಾಗಿ ಉಳಿದಿದೀನಿ.''

''ಎಷ್ಟು ದಿನ ಆಯಿತು ಹೀಗಾಗಿ?'' ಕಂಠ ತಗ್ಗಿಸಿ ಕೇಳಿದಳು ಅರುಂಧತಿ.

''ನಾವು ಆಗ ಅಮೇರಿಕಾದಲ್ಲಿದ್ದೆವು. ಅವರದು ಒಳ್ಳೇ ಆರೋಗ್ಯ ..... ಕಾಯಿಲೆ ಕಸಾಲೆ ಎಂದೂ ಮಲಗಿದೋರಲ್ಲ. ಅಂತಹದ್ದು ಒಂದು ಸಲ ....''

''ಹಾಂ .... ಹಾರ್ಟ್ ಅಟ್ಯಾಕ್ ಆಗಿರಬೇಕಲ್ಲವೇ?''

''ಹೌದು, ಅವರು ಹಾಗೆ ಚಲನವಿಲ್ಲದೆ ಮಲಗಿದ್ದನ್ನು ನೋಡಿ ಹೆದರಿಕೆಯಾಯಿತು. ಡಾಕ್ಟರ್ ಹೇಳಿದರು ಅವರನ್ನು ಮಾತನಾಡಿಸಬೇಡಿ ಅಂತ .... ಆದರೆ ಅವರು ಕಣ್ಣು ತೆರೆದು ನನ್ನ ಕಡೆ ನೋಡಿದರು ಪ್ರೀತಿಯಿಂದ ....''

''ಹ್ಞು ..... ಆಮೇಲೆ''

''ಇನ್ನೇನಿದೆ. ಅವರು ತೀರಿಕೊಂಡರು. ನಾನು ವಿದಾಯ ಹೇಳಲೂ ಸಾಧ್ಯವಾಗಲಿಲ್ಲ. ಏನೇನೋ ಹೇಳಬೇಕೆನ್ನಿಸಿತು. ನಿಮ್ಮನ್ನು ಪ್ರಾಣಪ್ರದವಾಗಿ ಪ್ರೀತಿಸ್ತೀದಿನಿ ನಾನು. ನೀವು ನನ್ನನ್ನು ಎಷ್ಟೋ ಚೆನ್ನಾಗಿ ನೋಡಿಕೊಂಡಿರಿ. ನನ್ನನ್ನು ಸಂತೋಷವಾಗಿಡಲು ನಿಮ್ಮ ಕೈಲಾದಷ್ಟು ಪ್ರಯತ್ನಿಸಿದಿರಿ. ಆದರೆ ನನಗೇ ಪ್ರಾಪ್ತವಿಲ್ಲದೆ ಹೋಯಿತು ಅಂತೆಲ್ಲಾ ಅಂದುಕೊಳ್ಳುತ್ತಾ ಕೊನೆಯ ಬಾರಿ ಅವರ ಕಡೆ ನೋಡಿದೆ. ಅಷ್ಟೆ .... ಅವರು ನನ್ನನ್ನು ಬಿಟ್ಟುಹೋದರು.''

ಕೈಗಳಿಂದ ಮುಖ ಮುಚ್ಚಿಕೊಂಡು ಅಳುತ್ತಾ ಕುಳಿತುಬಿಟ್ಟಳು. ಅಲ್ಲಿ ಬೇರೆಯವರಿದಾರೆಂಬ ವಿಷಯವನ್ನು ಮರೆತಂತಿತ್ತು. ಆ ದೃಶ್ಯವನ್ನು ನೋಡುತ್ತಿದ್ದಂತೆ ನನ್ನ ಕಣ್ಣಲ್ಲಿ ನೀರು ತುಂಬಿ ಬಂತು. ಇದೆಲ್ಲವನ್ನೂ ಸ್ವಲ್ಪವೂ ಲೆಕ್ಕಿಸದೆ ತನ್ನ ಪಾಡಿಗೆ ತಾನಿದ್ದುದು ಆ ವೃದ್ಧಸ್ತ್ರೀ ಮಾತ್ರವೇ! ಆಕೆ ತನ್ನ ಪಾಡಿಗೆ ತಾನು ಭಗವದ್ಗೀತೆಯನ್ನು ಓದುವುದರಲ್ಲಿಯೇ ನಿಮಗ್ನಳಾಗಿದ್ದಳು.

''ಅಳಬೇಡ ಲಕ್ಷ್ಮೀ ....'' ಎಂದು ಸಂತೈಸುತ್ತಿದ್ದಳು ಆಕೆಯ ಸ್ನೇಹಿತೆ ಅರುಂಧತಿ. ಯಾರೆಷ್ಟು ಹೇಳಿದರೂ ಅವಳ ದುಃಖ ಕಡಿಮೆಯಾಗುವುದೇನಲ್ಲ ಅನಿಸಿತು ನನಗೆ.

''ಅಂದ ಹಾಗೆ ಅವರ ತಾಯಿ ಇನ್ನೂ ಬದುಕಿದಾರೆ ಗೊತ್ತಾ?''

''ಅಯ್ಯೋ ಮಗ ಹೋಗಿ, ತಾಯಿ ಬಧುಕಿದ್ದಾಳೆಯೇ? ಅಯ್ಯೋ ಪಾಪ, ಮಗನ ಸಾವಿನಿಂದ ಎಷ್ಟು ಕೊರಗುತ್ತಿದ್ದಾಳೋ ಏನೋ ..... ಅಲ್ಲವೇ?''

''ಹೌದು ..... ಎಲ್ಲರೂ ಹಾಗೆಯೇ ಅಂದುಕೊಂಡರು. ಮಗನ ಸಾವಿನ ವಾರ್ತೆ ಕೇಳಿದಾಕ್ಷಣ ಮುಖದಲ್ಲಿ ಯಾವ ಭಾವನೆಯನ್ನೂ ತೋರ್ಪಡಿಸದೆ ನಿಶ್ಚಲವಾಗಿದ್ದುಬಿಟ್ಟಳು. ಸ್ವಲ್ಪ ಹೊತ್ತಾದ ನಂತರ 'ಅವನ ಬದಲು ನನ್ನನ್ನು ಕರೆದು ಕೊಳ್ಳಬಾರದಿತ್ತೇ, ದೇವರೆ' ಎಂದಳು ಮಾತ್ರ.''

''ಅಂದರೆ ಆಕೆ ಗಟ್ಟಿಗುಂಡಿಗೆಯವಳಾಗಿರಬೇಕು. ಧೈರ್ಯಸ್ಥೆ. ಅಲ್ಲವೇ?''

''ಹಳೆಯ ಕಾಲದವರನ್ನು ನೀವು ಎಂದಿಗೂ ಅರ್ಥ ಮಾಡಿಕೊಳ್ಳಲಾರಿರಿ. ಅವರು ಬದುಕಿನಲ್ಲಿನ ಎಷ್ಟೋ ಏರು-ಪೇರುಗಳನ್ನು ಕಂಡವರು, ಅನುಭವಿಸಿದವರು. ಆದ್ದರಿಂದಲೇ ಅವರು ಎಂತಹ ಪೆಟ್ಟುಗಳನ್ನಾದರೂ ಸಹಿಸಿ ನಿಲ್ಲಬಲ್ಲರು. ಅದು ಸಾವಾದರೂ ಸರಿ ....'' ಎಂದಳು ವೃದ್ಧ ಸ್ತ್ರೀ ಅವರ ಕಡೆ ನೋಡುತ್ತಾ.

ಆಕೆಯ ಮಾತು ಅವರಿಗೇನೂ ಹಿಡಿಸಿದಂತೆ ಕಾಣಲಿಲ್ಲ. ಒಂದು ಸಲ ಆಕೆಯ ಕಡೆ ನೋಡಿ ಮತ್ತೆ ತಮ್ಮ ಮಾತುಗಳಲ್ಲಿ ನಿಮಗ್ನರಾದರು.

''ನಿನಗೆ ಮೊಮ್ಮಕ್ಕಳು ಇದಾರೆಯೇ?'' ತನ್ನ ಸ್ನೇಹಿತೆಯ ಕೈಯನ್ನು ಹಿಡಿದುಕೊಂಡು ಕೇಳಿದಳು, ಅರುಂಧತಿ.

''ಓ ..... ನಾಲ್ಕು ಮಂದಿ ಇದಾರೆ''

''ಅಜ್ಜಿಯಾದಾಗ ನಿನಗೆ ಏನೆನ್ನಿಸಿತೇ?''

''ಅದರಲ್ಲಿ ವಿಶೇಷವೇನಿದೆ? ಮಾಮೂಲೇ ತಾನೇ?'' ಎಂದಳು ವೃದ್ಧ ಸ್ತ್ರೀ ತಲೆಯೆತ್ತ ದೆಯೇ.

''ಮೊಮ್ಮಕ್ಕಳು ಇದ್ದರೆ ಎಷ್ಟು ಚೆನ್ನಾಗಿ ರುತ್ತೆ ಅಲ್ಲವಾ? ನನ್ನ ಮಗಳ ಮಗಳನ್ನು ನಾಲ್ಕು ವರ್ಷ ನಾನೇ ಸಾಕಿದ್ದು. ಕೊನೆಗೆ ಅವ ಳನ್ನು ಅವರಮ್ಮನ ಹತ್ತಿರ ಬಿಟ್ಟು ಬರಬೇಕಾದರೆ .... ಎದೆ ಭಾರವಾಗಿ ಎಷ್ಟು ಸಂಕಟ ಆಯಿತೋ ಹೇಳಲಾರೆ. ಆಗ ನನ್ನ ಮೊಮ್ಮಗಳು 'ಯಾಕಜ್ಜೀ, ನನ್ನ ಬಿಟ್ಟುಹೋಗ್ತೀದೀ, ನಿನ್ನನ್ನು ಕಂಡರೆ ನಂಗೆ ತುಂಬಾ ಇಷ್ಟ' ಅಂತಿದ್ರೆ, ಬಿಟ್ಟು ಬರೋದೇ ಕಷ್ಟ ಆಯಿತು.'' ಹಾಗೆ ಹೇಳುವಾಗ ಆಕೆಯ ಕಂಠ ದುಃಖದಿಂದ ಬಿಗಿದು ಬಂತು. ಕಣ್ಣಲ್ಲಿ ನೀರೂರಿತು.

''ಏಕಳ್ತೀದೀಯಮ್ಮಾ. ಇಷ್ಟಕ್ಕೆಲ್ಲಾ ಅಳ್ತಾ ರೆಯೇ?'' ಎಂದಳು ವೃದ್ಧಸ್ತ್ರೀ ಸಂತೈಸುವಂತೆ. ಅವರಿಬ್ಬರೂ ಮುದುಕಿಯ ಮಾತನ್ನು ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ.

ಆಗ ಗಮನಿಸಿದರೆ ನಾನು ಹೊತ್ತು ಮೀರಿ ಕತ್ತಲಾಗುತ್ತಿದ್ದುದನ್ನು.

''ಆತ ಇನ್ನೂ ಬರಲೇ ಇಲ್ಲ'' ಎಂದೆ ಗಟ್ಟಿಯಾಗಿ. ಯಾರೂ ನನ್ನ ಮಾತನ್ನು ಕೇಳಿಸಿ ಕೊಂಡಂತೆ ಕಾಣಲಿಲ್ಲ.

''ಆತ ಯಾಕೆ ಇನ್ನೂ ಬಂದಿಲ್ಲ?'' ಎಂದೆ, ಮತ್ತೆ.

ವೃದ್ಧಸ್ತ್ರೀ ನನ್ನ ಕಡೆ ನೋಡಿ ನಕ್ಕಳು. ''ನಿನಗೆ ಮೊದಲೇ ಹೇಳಿದೀನಲ್ವಾ'' ಎಂದಳು.

''ಹಾಗಲ್ಲ ..... ನಾನು ಮತ್ತೆ ವಾಪಸ್ಸು ಹೋಗಬೇಕು. ಆತನನ್ನು ನೋಡಿ, ಮಾತನಾಡಿ ಹೊರಟುಹೋಗೋಣಾಂತ ಬಂದೆ ಇಲ್ಲಿಗೆ''

''ಮತ್ತೆ ಆತ ಬರೋವರೆಗೂ ಇರು''

''ಇಲ್ಲ ..... ಬೇಗ ಹೋಗಬೇಕು ನಾನು''

''ಅದು ಹೇಗಾಗುತ್ತೆ? ಯಾರೂ ಹಾಗೆ ಹೋಗಬಾರದಮ್ಮಾ'' ಅನುನಯದಿಂದ ಹೇಳಿ ದಳಾಕೆ.

''ನಾನಿನ್ನು ಆತನಿಗೋಸ್ಕರ ಎದುರು ನೋಡಲಾರೆ. ಹಾಗಂತ ಈ ಕತ್ತಲಲ್ಲಿ ಒಬ್ಬಳೇ ಹೋಗಲೂ ಆರೆ''

''ಹಾಗಾದರೆ ಇಲ್ಲಿಗೇಕೆ ಬಂದೆ? ಹೋಗಲಿ ಹೇಗೂ ಬಂದಾಗಿದೆ. ಆತ ಬರೋವರೆಗೂ ಇರು. ಧೈರ್ಯವಾಗಿರುವವರನ್ನು ಕಂಡರೆ ಇಷ್ಟ ಪಡ್ತಾನೆ ಆತ ....''

''ಊಹೂಂ .... ಇನ್ನು ನನ್ನಿಂದಾಗದು. ಅಬ್ಬಾ! ಎಷ್ಟು ಕತ್ತಲಾಗಿಬಿಟ್ಟದೆ. ನಾನು ಹೊರ ಡಲೇ ಬೇಕಿನ್ನು.''

''ಯಾಕೆ ನಿನ್ನ ಕಾರಿಗೆ ಹೆಡ್‌ಲೈಟ್ಸ್ ಇಲ್ಲ ವೇನು?'' ಎಂದಳು ಅರುಂಧತಿ ಹಾಸ್ಯ ಮಾಡು ವವಳಂತೆ.

''ನಾನು ಹೋಗಲೇಬೇಕು'' ಎಂದವಳೇ ತಟ್ಟನೆದ್ದು ಕಿಟಕಿಯ ಕರ್ಟನನ್ನು ಪಕ್ಕಕ್ಕೆ ಸರಿ ಸಿದೆ. ಆದರೆ ಹೊರಗೆ ಏನೂ ಕಾಣಿಸಲಿಲ್ಲ. ಕತ್ತಲು-ಬರೀ ಕತ್ತಲು .....

''ಹುಡುಗೀ, ಆತನ ಭೇಟಿ ಮಾಡದೇನೇ ಹೋಗಬಲ್ಲೆಯಾ ನೀನು? ಆಹಾ, ಆತ ಎಷ್ಟು ಆಕರ್ಷಣೀಯವಾಗಿರ್ತಾನೇಂತ! ಎಪ್ಪತ್ತು ವರ್ಷ ಆದರೇನಂತೆ? ತಲೆಯ ಕೂದಲು ನೆರೆತ ರೇನಂತೆ? ಎಂತಹ ಸಾಧು ಆತ!!'' ಎಂದಳು ವೃದ್ಧಸ್ತ್ರೀ ಕನಸು ಕಾಣುತ್ತಿರುವವಳಂತೆ.

''ಆತ ಮುದುಕನೇ? ಅಸಂಭವ? ಆತ ಯುವಕ. ಇದರಲ್ಲೇನೋ ತಪ್ಪು ತಿಳುವಳಿಕೆ ಇದ್ದಂತಿದೆ.''

''ಹುಚ್ಚೀ.. ಆತ ಯುವಕನೂ ಅಲ್ಲ. ವೃದ್ಧನೂ ಅಲ್ಲ'' ಎಂದರು ನಡುವಯಸ್ಸಿನ ಸ್ತ್ರೀಯರಿಬ್ಬರೂ ನಗುತ್ತಾ,

''ಆತ ಯಾರಾದರೇನಂತೆ? ನೀನೊಮ್ಮೆ ಆತನೊಂದಿಗೆ ಮಾತನಾಡಿದರೆ ಸಾಕು. ಮತ್ತೆ ಬಿಟ್ಟು ಹೋಗಬೇಕೆಂದೇ ಅನ್ನಿಸುವುದಿಲ್ಲ.'' ವೃದ್ಧ ಸ್ತ್ರೀಯ ಮಾತಿನಲ್ಲಿ ತಡವರಿಕೆ, ಕಂಪನ. ಅದನ್ನು ಮುಚ್ಚಿಕೊಳ್ಳುವುದಕ್ಕಾಗಿ ಕೈಯಲ್ಲಿದ್ದ ಭಗವದ್ಗೀತೆಯನ್ನು ತೆರೆಯುತ್ತಾ, ಮುಚ್ಚುತ್ತಾ ಇದ್ದುಬಿಟ್ಟಳು.

''ಊಹೂಂ... ನಾನೊಂದು ಕ್ಷಣ ಸಹ ಇರಲಾರೆ. ಇದೋ ಹೊರಟೆ'' ಎಂದು ಮೇಲೆದ್ದೆ. ವೃದ್ಧಸ್ತ್ರೀ ಕೋಪದಿಂದ ಏನೋ ಹೇಳುತ್ತಿದ್ದಂತಿತ್ತು. ಆದರೆ ನಾನದನ್ನು ಕೇಳಿಸಿಕೊಳ್ಳಲಿಲ್ಲ. ನಾನಿನ್ನು ಅಲ್ಲಿ ಇರಬಾರದೆಂದು ನಿಶ್ಚಯಿಸಿಕೊಂಡೆ. ಇಷ್ಟು ಹೊತ್ತೂ ಎಲ್ಲರನ್ನೂ ಹುಚ್ಚರಂತೆ ತನಗಾಗಿ ಎದುರು ನೋಡುವಂತೆ ಮಾಡಿದ್ದ ಆತ. ಸಾಯಂಕಾಲ ಮಾಡಬೇಕಾದ ಕೆಲಸಗಳು ಬೇಕಾದಷ್ಟಿದ್ದುವು. ಅನಾವಶ್ಯಕವಾಗಿ ಸಮಯ ಹಾಳಾಗಿತ್ತು.

''ನಾನು ಹೋಗ್ತಿದೀನಿ. ನಾನು ಹೇಳಿದ್ದು ಕೇಳಿಸ್ತಿದೆಯೇ ನಿಮಗೆ?'' ಎಂದೆ ಜೋರಾಗಿ.

''ಒಂದು ವೇಳೆ ನಿನ್ನ ಕಾರು ಸ್ಟಾರ್ಟ್ ಆಗಲಿಲ್ಲ ಅಂತಿಟ್ಟುಕೋ, ಆಗೇನು ಮಾಡುತ್ತೀ?'' ಎಂದರು ಮಧ್ಯವಯಸ್ಕರಿಬ್ಬರೂ.

''ಏಕೆ? ನನ್ನ ಕಾರೇಕೆ ಸ್ಟಾರ್ಟ್ ಆಗೋಲ್ಲ? ಅದರಲ್ಲೇನೂ ಲೋಪವಿಲ್ಲವಲ್ಲಾ'' ಎಂದೆ ಕೋಪದಿಂದ.

''ಅಂದರೆ ನೀನು ತಪ್ಪಿಸಿಕೊಂಡು ಹೋಗೋಣ ಅಂತಿದೀಯೇನು?'' ಎಂದಳು ವೃದ್ಧಸ್ತ್ರೀ ಸಿಟ್ಟಿನಿಂದ ಉರಿದು ಬೀಳುತ್ತಾ.

''ತಪ್ಪಿಸಿಕೊಂಡು ಹೋಗೋದೇನು ಬಂತು? ನನ್ನ ಮನೆಗೆ ನಾನು ಹೋಗ್ತಿದೀನಷ್ಟೆ!'' ಎಂದು ತಟ್ಟನೆದ್ದು ಓಡಿಹೋಗಿ ಗೇಟನ್ನು ತೆರೆಯಲು ಪ್ರಯತ್ನಿಸುತ್ತಿರುವಾಗಲೇ ನೋಡಿದೆ. ಆ ನಾಯಿ ನನ್ನ ಕಡೆ ತೀಕ್ಷ್ಣವಾಗಿ ನೋಡುತ್ತಿದೆಯೆಂದು ಮರುಕ್ಷಣದಲ್ಲಿ ಅದು ಬೊಗಳುತ್ತಾ ನನ್ನ ಹಿಂದೆ ಬಂದಿತ್ತು. ನಾನು ಹಿಂದಿರುಗಿ ಅದರ ಕಡೆ ನೋಡಿದೆ. ಅದರ ಕಣ್ಣಿನಲ್ಲಿ ಹಸಿವು, ಜೊಲ್ಲು ಸುರಿಸುತ್ತಿದ್ದ ನಾಲಗೆ, ದೆವ್ವಗಳ ಸೀನಿನಲ್ಲಿ ಭಯಂಕರವಾದ ದೃಶ್ಯದಂತೆ ಇತ್ತದು.

ಸಾಯುತ್ತಾ ಬೀಳುತ್ತಾ ಓಡಿಹೋಗಿ ಕಾರಿನ ಬಾಗಿಲನ್ನು ತೆಗೆದು ಕುಸಿದುಕುಳಿತೆ ಅದರ ಕೈಗೆ ಸಿಗದಂತೆ. ನಾನು ತುಂಬಾ ಹೆದರಿಕೊಂಡಿದ್ದೆ. ಕೆಲವು ಕ್ಷಣ ಕಣ್ಣುಮುಚ್ಚಿ ಸುಮ್ಮನೆ ಕುಳಿತುಬಿಟ್ಟೆ. ಮತ್ತೆ ನಾನು ಕಣ್ಣು ತೆರೆದಾಗ, ಆ ನಾಯಿ ಕಾರಿನ ಬಾಗಿಲ ಬಳಿ ನಿಂತಿತ್ತು. ಅದರ ಕಣ್ಣುಗಳು ಉರಿಯುತ್ತಿದ್ದ ಕೆಂಡದುಂಡೆಗಳಂತಿದ್ದುವು.

ನಾನು ಕಾರನ್ನು ಸ್ಟಾರ್ಟ್ ಮಾಡಬೇಕೆಂದು ಪ್ರಯತ್ನಿಸದೆ. ಆದರೆ ಇಂಜನ್ನಿನಲ್ಲಿ ಚಲನೆಯೇ ಇರಲಿಲ್ಲ. ದಿಕ್ಕು ತೋಚದಂತಾಯಿತು ನನಗೆ.

ಅದರ ಮುಂದಿನ ಎರಡು ಕಾಲುಗಳನ್ನೂ ಕಾರಿನ ಕಿಟಕಿಯ ಮೇಲಿಟ್ಟು ನೆಟ್ಟ ನೋಟದಿಂದ ನನ್ನನ್ನೇ ನೋಡುತ್ತಿತ್ತು ಆ ನಾಯಿ. ಅದರ ಚೂಪಾದ ಉಗುರು, ಜೊಲ್ಲು ಸುರಿಸುತ್ತಿದ್ದ ನಾಲಗೆ, ಹಸಿದ ನೋಟ ಇದನ್ನೆಲ್ಲಾ ನೋಡ ನೋಡುತ್ತಿದ್ದಂತೆಯೇ ನಿಸ್ಸಹಾಯಕತೆಯಿಂದ ಅಳುಬರುವಂತಾಯಿತು, ನನಗೆ.

ಇಗ್ನಿಷನ್‌ಕೀ ಮತ್ತೆ ಮತ್ತೆ ತಿರುಗಿಸಿದೆ. ಆದರೂ ಪ್ರಯೋಜನವಿಲ್ಲವಾಯಿತು. ನಾಯಿಯ ಮೇಲಿನ ನನ್ನ ನೋಟವನ್ನು ಬದಲಾಯಿಸದೆಯೇ ಮತ್ತೆ ಮತ್ತೆ ಪ್ರಯತ್ನಿಸಿದೆ. ಆದರೆ ಕಾರು ಮಾತ್ರ ಕದಲಲಿಲ್ಲ ......

ಆಗ .... ಆ ಭವನದಲ್ಲಿದ್ದವರೆಲ್ಲಾ ಪಕಪಕನೆ ನಗುತ್ತಿರುವಂತೆನಿಸಿತು ನನಗೆ. *

ಈತ ಅನ್ಯಗ್ರಹದ ಜೀವಿಯೊಂದಿಗೆ ಕಾಲ ಕಳೆದನೇ ?

ಎಚ್. ಪ್ರೇಮಾನಂದ ಕಾಮತ್

ಈ ವಸುಂಧರೆಯನ್ನು ಹೊರತು ಪಡಿಸಿ ಅನಂತ ವಿಶ್ವದ ಇನ್ನಿತರ ಗ್ರಹಗಳಲ್ಲೂ ಜೀವಿಗಳ ವಾಸ್ತವ್ಯ ಇದ್ದಿರಬಹುದೇ ಎಂಬುದು ಇನ್ನೂ ಉತ್ತರ ಸಿಗದ ಪ್ರಶ್ನೆಗಳ ಸಾಲಿನಲ್ಲೇ ಇದೆ. ಇದರ ಬಗ್ಗೆ ಅನೇಕಾನೇಕ ಪ್ರಯತ್ನಗಳು ಮುಂದುವರಿಯುತ್ತಲೇ ಇರುವ ಇಂದಿನ ವಿಜ್ಞಾನ ಯುಗದಲ್ಲಿ, ಸಂಶೋಧಕನೊಬ್ಬ, ತಾನು ಅನ್ಯಗ್ರಹದ ಜೀವಿಯೊಂದಿಗೆ ಆರು ತಿಂಗಳನ್ನು ಕಳೆದ ಅಂದರೆ ಅದು ನಮ್ಮಂಥ ಸಾಮಾನ್ಯರಿಗೆ 'ಅಸಂಗತ' ಎನಿಸಿದರೂ ವಿಜ್ಞಾನಿಗಳ, ಸಂಶೋಧಕರುಗಳ ಕುತೂಹಲವನ್ನು ಪರಾಕಾಷ್ಠೆಗೆ ಒಯ್ಯುವುದಂತೂ ನಿಸ್ಸಂಶಯ. ಅಂತಹ ಘಟನೆಯೊಂದು ಇಲ್ಲಿದೆ.

೩೮ ವರ್ಷ ಪ್ರಾಯದ ಆರ್ಥರ್ ಮೆಲೆನೌ ಆಸ್ಟ್ರೇಲಿಯಾದ ಒಬ್ಬ ಸಂಶೋಧಕ. ಸಾಕಷ್ಟು ಅನುಭವಿ. ಕೆಲವು ವರ್ಷದ ಹಿಂದೆ ಈತ ತನ್ನದೇ ಸಂಶೋಧನಾ ನೌಕೆಯಲ್ಲಿ ಸಮುದ್ರ ಪರ್ಯಟನೆಯನ್ನು ಆರಂಭಿಸಿದ್ದ. ಸ್ವಲ್ಪ ಸಮಯದವರೆಗೆ ನಿಶ್ಚಿಂತೆಯಿಂದ ಪ್ರಯಾಣ ಸಾಗಿತು. ಆದರೆ ನೌಕೆ ಫಿಜಿ ದ್ವೀಪದ ಪೂರ್ವಭಾಗದತ್ತ ಸಾಗುತ್ತಿದ್ದಂತೆ ಭಯಂಕರವಾದ ತೂಫಾನೊಂದು ಸಮುದ್ರದಲ್ಲಿ ಕಾಣಿಸಿಕೊಂಡಿತು. ಇದರ ಸುಳಿಗೆ ಸಿಕ್ಕ ಮೆಲೆನೌನ ನೌಕೆ ಹೋಳು ಹೋಳಾಯಿತು. ಸುದೈವದಿಂದ ಪ್ರಾಣ ಉಳಿಸಿಕೊಂಡ ಮೆಲೆನೌ ನಡುಗಡ್ಡೆಯೊಂದನ್ನು ಸೇರಿಕೊಂಡ.

ಅದೊಂದು ನಿರ್ಜನವಾದ ದ್ವೀಪ. ಸಾಕಷ್ಟು ವಿಶಾಲವೂ ಆಗಿತ್ತು. ಅಲ್ಲಿ ಆತನ ಸಂಶೋಧನಾ ಮೆದುಳಿಗೆ ಗ್ರಾಸವನ್ನೊದಗಿಸುವಂತಹ ಅದ್ಭುತವೊಂದು ನಡೆಯಿತು. ಹಾಗೆಯೇ ಸುತ್ತಾಡುತ್ತಿದ್ದಾಗ ಅತ್ತ ಪ್ರಾಣಿಯೂ ಅಲ್ಲದ, ಇತ್ತ ಮಾನವನೂ ಅಲ್ಲದ ವಿಚಿತ್ರ ಜೀವಿಯೊಂದನ್ನು ಮೆಲೆನೌ ಕಂಡ. ಹೋಲಿಕೆಯಲ್ಲದು ಬೇರ್‍ಯಾವುದೋ ಲೋಕದ ಕಾಲ್ಪನಿಕ ಜೀವಿಯಂತಿತ್ತು!

ಎರಡು ಕಾಲುಗಳನ್ನೂರಿ ನೆಟ್ಟಗೆ ನಿಂತಿದ್ದ ಆ ಜೀವಿ ಮೃದಂಗದ ಮೇಲೆ ಬಿಗಿದ ದುಂಡಗಿನ ಚರ್ಮದಂತಿರುವ ಹಸಿರು ಬಣ್ಣದ ಎರಡು ಕಣ್ಣುಗಳಿಂದ ಆತನನ್ನೇ ದಿಟ್ಟಿಸಲಾರಂಭಿಸಿತು. ಈ ನೋಡುವಿಕೆ ಸತತವಾಗಿ ಮೂರ್‍ನಾಲ್ಕು ನಿಮಿಷದವರೆಗೆ ವಿಸ್ತರಿಸಲ್ಪಟ್ಟಾಗ ಮೆಲೆನೌ ಆ ಜೀವಿಯ ಆಪಾದ ಮಸ್ತಕದವರೆಗಿನ ರಚನೆಗಳನ್ನೆಲ್ಲ ಕಣ್ಣಿನಲ್ಲಿ ಸೆರೆಹಿಡಿದುಕೊಂಡ. ನಾಲ್ಕಡಿ

ಉದ್ದದ ಶರೀರ, ಗೋಲಾಕಾರವಾದ ವಿಶಾಲ ಶಿರ, ಹಳದಿ ವರ್ಣದ ಮೈಚರ್ಮ, ಇಳಿಬಿಟ್ಟ ಎರಡೂ ಕೈಗಳಿಂದ ಉದ್ದುದ್ದಕ್ಕೆ ಬೆಳೆದಂತಿರುವ ಮೂರು ಮೂರು ಬೆರಳುಗಳು, ಯಾವುದೋ ಅದ್ಭುತ ರಸಾಯನದಿಂದ ಮುಚ್ಚಲ್ಪಟ್ಟಿದ್ದ ಮೈಭಾಗ!

ಈ ಜೀವಿಯನ್ನು ನೋಡಿದ ಆರಂಭದ ಕ್ಷಣದಲ್ಲಿ ಬೆಚ್ಚಿಬಿದ್ದಿದ್ದ ಮೆಲೆನೌಗೆ ಈಗ ಎಲ್ಲಿಲ್ಲದ ಧೈರ್ಯ ಬಂದಿತ್ತು. ಅದೂ ಕೂಡ ಈ ಸಂಶೋಧಕನನ್ನು ಕಂಡು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದಿದ್ದುದು ಮೆಲೆನೌಗೆ ಅನುಕೂಲವಾಗೇ ಪರಿಣಮಿಸಿತು. ಆತ ಆ ಜೀವಿಯೊಡನೆ ಸಂಪರ್ಕ ಸಾಧಿಸಲು ಪ್ರಯತ್ನಪಟ್ಟ. ಏನಾಶ್ಚರ್ಯ.... ಆತನ ಮಾತುಗಳು ಆ ಜೀವಿಗೆ ಅರ್ಥವಾದವೋ, ಇಲ್ಲವೋ; ಅದೂ ಸಹ ಮೆಲೆನೌನ ಗೆಳೆತನವನ್ನು ಬಯಸಲು ಮುಂದಾಗಿತ್ತು! ಆ ಜೀವಿ ತನ್ನ ಅಂಗಾಂಗಳಿಂದ ಸನ್ನೆ ಮಾಡುತ್ತಾ ತನ್ನ ವೃತ್ತಾಂತವನ್ನು ಮನನಗೊಳಿಸಲು ಯತ್ನಿಸಿತು. ಆಗ ಮೆಲೆನೌಗೆ ಇದು ಅನ್ಯಗ್ರಹದ ಜೀವಿಯೆಂದೂ, ಅದರ ಹಾರುವ ಶಕ್ತಿ ನಷ್ಟವಾದ್ದರಿಂದ ಈ ದ್ವೀಪದಲ್ಲಿ ಬಿದ್ದಿತೆಂಬ ವಿಷಯಗಳೂ ತಿಳಿಯಲ್ಪಟ್ಟವು. ಇದಕ್ಕಾತ 'ಫ್ರೈಡೆ' ಎಂಬ ಹೆಸರನ್ನಿಟ್ಟ.

ದಿನಗಳುರುಳಿದವು. ತಿಂಗಳುಗಳೂ ಜಾರಿದವು. ಮೆಲೆನೌ ಮತ್ತು ಫ್ರೈಡೆ ತಮ್ಮ ನಂಟನ್ನು ವೃದ್ಧಿಸಿಕೊಂಡರೂ ಭಾಷೆಯ ಸಮಸ್ಯೆ ಎನ್ನುವುದು ಆತನ ವಿಸ್ತೃತ ಅಧ್ಯಯನಕ್ಕೆ ತಡೆಗೋಡೆಯಾಯಿತು. ಆ ವೇಳೆಯಲ್ಲಿ ಸುಮ್ಮನಿರದ ಫ್ರೈಡೆ ರೇಡಿಯೋದಂತ ಒಂದು ಚಿಕ್ಕ ಉಪಕರಣದಿಂದ ತನ್ನ ಸಂಬಂಧಿಕರೊಂದಿಗೆ ಸಂಪರ್ಕ ಸಾಧಿಸಲು ಪ್ರಯತ್ನ ಮಾಡುತ್ತಲೇ ಇದ್ದಿತ್ತು. ಅಂತಿಮವಾಗಿ ಒಂದು ದಿನ ಈ ಪ್ರಯತ್ನ ಫಲ ಕೊಟ್ಟಿತು. ಗೋಲಾಕಾರದ ಆಕಾಶ ನೌಕೆಯೊಂದು ಆ ದ್ವೀಪಕ್ಕೆ ಬಂದಿಳಿದಿತ್ತು!

ಅದರಲ್ಲೂ ಅಷ್ಟೇ; ಫ್ರೈಡೆಯನ್ನೇ ಹೋಲುವ ಮತ್ತಷ್ಟು ಜೀವಿಗಳು! ಆ ನೌಕೆಯನ್ನೇರುವಾಗ ಫ್ರೈಡೆ ತನ್ನ ದೋಸ್ತಿಯನ್ನು ಮರೆಯಲಿಲ್ಲ. ಆತನನ್ನು ಅದು ಆಹ್ವಾನಿಸಿತು! ನ್ಯೂಜಿಲ್ಯಾಂಡಿನಲ್ಲಿ ತನ್ನನ್ನು ಇಳಿಸಿದ ಬಳಿಕ ಆ ನೌಕೆಗೆ ಅದರಲ್ಲಿನ ಜೀವಿಗಳಿಗೆ ಮೆಲೆನೌ ವಿದಾಯ ಹೇಳಿದ.

ಇದಿಷ್ಟು ಆರು ತಿಂಗಳಾವಧಿಯಲ್ಲಿ ಘಟಿಸಿದ ವಿದ್ಯಮಾನಗಳು. ಆರ್ಥರ್ ಮೆಲೆನೌನ ಬಾಯಿಂದಲೇ ಹೊರಹೊಮ್ಮಿದ ಘಟನಾವಳಿಯ ನಿರೂಪಣೆ. ಈಗ ನಮ್ಮ ಮನದಲ್ಲೇ ಸುಳಿದಾಡುವ ಪ್ರಶ್ನೆಗಳು ನೂರಾರು. ನಿಜವಾಗಿಯೂ ಮೆಲೆನೌ ಅಪರಿಚಿತ ಜೀವಿಯೊಂದಿಗೆ ಕಾಲ ಕಳೆದನೇ? ಅದು ಖಂಡಿತವಾಗಿಯೂ ಅನ್ಯಗ್ರಹದ ಜೀವಿಯೇ? ಅಷ್ಟು ತಿಂಗಳುಗಳ ಕಾಲ ಆಹಾರಕ್ಕಾಗಿ ಆತ ಏನು ಮಾಡಿದ???.....

ಆಸ್ಟ್ರೇಲಿಯಾಕ್ಕೆ ತಲುಪಿದೊಡನೆ ಆರ್ಥರ್ ಮೆಲೆನೌ ತನ್ನ ಮಿತ್ರರೊಂದಿಗೆ ಇದನ್ನು ಹೇಳಿಕೊಂಡಾಗ ಆತನಿಗೆ ತಮಾಷೆ ಮಾಡಿದ ಮಂದಿಯೇ ಅಧಿಕ. ತನ್ನ ನೌಕೆಯನ್ನು ಕಳೆದುಕೊಂಡ ನಿಮಿತ್ತ ಮೆಲೆನೌಗೆ ಹುಚ್ಚು ಹಿಡಿದಿದೆ ಎಂಬುದು ಮತ್ತೆ ಕೆಲವರ ತೀರ್ಮಾನ! ಆದರೆ ಮೆಲೆನೌ ಮಾತ್ರ ತನ್ನ ಉಕ್ತಿಯನ್ನು ಬದಲಾಯಿಸಲಿಲ್ಲ. ಇದಕ್ಕೆ ಆತನ ಆತ್ಮೀಯನಾದ ಮಾಲ್ಕಂ ಕ್ರೆಲೌ ಎಂಬಾತನ ಬಲವಾದ ಬೆಂಬಲವೂ ಇದೆ. ಇದಕ್ಕೊಂದು ಕಾರಣವೂ ಇದ್ದಿತ್ತು. ಅದೆಂದರೆ ಆರ್ಥರ್‌ನ ನೌಕೆಯನ್ನಾತ ಫಿಜಿ ದ್ವೀಪದ ಸಮೀಪ ಸ್ವತಃ ಕಂಡಿದ್ದ. ಅಂದ ಮೇಲೆ ಈ ಮಿತ್ರ ಮಿಥ್ಯವನ್ನು ನುಡಿಯಲಾರ ಎಂಬ ದೃಢ

ನಂಬಿಕೆ ಕ್ರೇಲ್‌ನದ್ದು.

ಆದರೆ ಈ ಬಗ್ಗೆ ಎಲ್ಲಾ ಸಾಕ್ಷ್ಯಾಧಾರಗಳಿಲ್ಲದಿರುವುದರಿಂದ ಮೆಲೆನೌನ ಮಾತನ್ನು ನಂಬಲು ಯಾರಿಗೂ ಧೈರ್ಯ ಸಾಲುತ್ತಿಲ್ಲ. ಆದ್ದರಿಂದ ಕೊನೆಯಲ್ಲಿ ಉಳಿಯುವುದು ಮತ್ತದೇ ಪ್ರಶ್ನೆ- ಈತ ಅನ್ಯಗ್ರಹದ ಜೀವಿಯೊಂದಿಗೆ ಕಾಲ ಕಳೆದನೇ ?

(ಆಧಾರ: ಡಿಸೆಂಬರ್ ೮೯ರ 'ಮನೋಹರ್ ಕಹಾನಿಯಾ'ದ ಬಾಕ್ಸ್ ಐಟಂನಲ್ಲಿ ಪ್ರಕಟವಾದ ಬರಹ- ಛ: ಮಹಿನೆ ಉಢನನಶ್ತರೀ ಕೆ ಏಸ್ ಯಾತ್ರೀ ಕೆ ಸಾಥ್.)

*

ತಿಗಣೆ ಪುರಾಣ!

ಮನುಷ್ಯನ ದೇಹದೊಳಗೆ ರಕ್ತ ಉತ್ಪಾದನೆಗೊಳ್ಳಲು ಎಷ್ಟೆಲ್ಲಾ ಹಂತದ ಪ್ರಕ್ರಿಯೆ ನಡೆಯುತ್ತದೆ. ಆದರೆ ಉಪಾಯಗಾರ ತಿಗಣೆಗೆ ನೇರವಾಗಿ ರಕ್ತವನ್ನೇ ಹೀರಿ ಬದುಕುವ ಚಪಲ. ಚಪ್ಪಟೆ ಶರೀರದ, ರೆಕ್ಕೆಗಳಿಲ್ಲದ ಈ ಪುಟ್ಟ ಜೀವಿ ಮನೆ ಹೊಕ್ಕಿತೆಂದರೆ ಆ ಮನೆಯವರು ತಮ್ಮ ದೇಹದೊಳಗಿನ ರಕ್ತದ ಕೆಲಭಾಗವನ್ನು ತೆಗೆದಿರಿಸಿದಂತೆಯೇ ಲೆಕ್ಕ. ಮಾನವ, ಬಾವುಲಿ ಹಾಗೂ ಪಕ್ಷಿಗಳ ರಕ್ತವನ್ನು ಕಬಳಿಸಲು ಈ ತಿಗಣೆ ತನ್ನ ಸೂಜಿಯಂತಹ ನಳಿಕೆಯನ್ನು ಚರ್ಮದೊಳಗೆ ಇಳಿಬಿಟ್ಟು ತಲೆಯೊಳಗಿರುವ ಪಂಪ್‌ನಿಂದ ರಕ್ತ ಹೀರುತ್ತದೆ.

ತಿಗಣೆ ಚರ್ಮವನ್ನು ಚುಚ್ಚಿದ ತಕ್ಷಣ ಒಂದು ಬಗೆಯ ಜೊಲ್ಲು ಸುರಿಸಿ ರಕ್ತ ಗಟ್ಟಿಯಾಗದಂತೆ ತಡೆಯುತ್ತದೆ. ಇದರಿಂದಾಗಿಯೇ ಕಚ್ಚಿದಾಗ ಮತ್ತು ರಕ್ತ ಹೀರುವಾಗ ನೋವಾಗುವುದಿಲ್ಲ. ಇದರ ಪರಿಣಾಮದ ಅರಿವಾಗಲು 24 ಗಂಟೆಗಳು ಬೇಕು. ಹೆಣ್ಣು ತಿಗಣೆಯೇ ಗಂಡಿಗಿಂತ ಹೆಚ್ಚು ರಕ್ತ ಹೀರುವುದು. ಆರೋಗ್ಯವಂತ ಮನುಷ್ಯನಲ್ಲಿರುವ 4.5 ಲೀಟರ್ ರಕ್ತ ಎರಡೂವರೆ ಲಕ್ಷ ತಿಗಣೆಗಳಿಗೆ ಒಂದು ದಿನದ ಆಹಾರ. ತಿಗಣೆಗಳು 500 ಸಲ ಮಗುವನ್ನು ಕಚ್ಚಿದರೆ ಸಾಕು, ಆ ಮಗುವಿಗೆ ಎನಿಮಯಾ ಉಂಟಾಗುತ್ತದೆ.

ಎಂತಹ ವಿರುದ್ಧ ವಾತಾವರಣದಲ್ಲೂ ಜೀವಿಸಬಲ್ಲ ತಿಗಣೆಗೆ ಒಂದು ವರ್ಷ ಆಹಾರ ಇಲ್ಲದಿದ್ದರೂ ಆದೀತು. ಮರುಭೂಮಿ, ದಕ್ಷಿಣ ಧೃವ ಹಾಗೂ ಉತ್ತರ ಧೃವ ಬಿಟ್ಟು ತಗಣೆ ಪ್ರಪಂಚದ ಎಲ್ಲೆಡೆ ಇರುತ್ತದೆ. ತಿಗಣೆ ಅತಿ ಶೀತವಾತಾವರಣದಲ್ಲೂ ಏಳು ತಿಂಗಳವರೆಗೆ ಜೀವ ಹಿಡಿದುಕೊಂಡಿರಬಲ್ಲದು. ಪ್ರತಿ ನೂರು ಸಲ ತಿಗಣೆ ಕಚ್ಚಿದಾಗ ಮಗುವಿನಲ್ಲಿ 0.73 ಮಿ.ಗ್ರಾಂನಷ್ಟು ಐರನ್ ನಷ್ಟವಾಗುತ್ತೆ.

ತಿಗಣೆಗಳು ಈಗ ಡಿ.ಡಿ.ಟಿ.ಯಿಂದಲೂ ಸಾಯುವುದಿಲ್ಲ. ಆಧುನಿಕ ರೀತಿಯಿಂದ ಅದರಲ್ಲಿನ ರಾಸಾಯನವನ್ನೇ ಅದರ ಮೇಲೆ ಪ್ರಯೋಗಿಸಿ ಸಾಯಿಸಬೇಕಾಗುತ್ತದೆ. ತಿಗಣೆಗಳು ಒಂದು ತರಹ ಸೇಂಟನ್ನು ಬಿಡುತ್ತವೆ. ಆದ್ದರಿಂದಲೇ ಅವು ಗುಂಪಾಗಿರಲು ಸಾಧ್ಯ.

ನಾಯಿ ಬಾಲ

ಕೆ.ಚಂದ್ರಮೌಳಿ

ಡೊಂಕು! ಏನೇ ಮಾಡಿದರೂ, ಎಷ್ಟೇ ಸರಿ ಮಾಡಿದರೂ ನಾಯಿಬಾಲ ಡೊಂಕೇ! ಬೇಡಾಂದಿದ್ದು ಮಾಡ್ತಾ ಇದ್ದರೆ, ಎಷ್ಟು ಹೇಳಿದರೂ, ಎಷ್ಟು ತಿದ್ದಿದರೂ ಮಾಡಿದ ತಪ್ಪೇ ಮಾಡ್ತಾ ಇದ್ದರೆ, ಎಷ್ಟು ಪ್ರಯತ್ನ ಮಾಡಿದರೂ ಸರಿ ಹೋಗದಿದ್ದರೆ, ಎಷ್ಟು ನೆಟ್ಟಗೆ ಮಾಡಿದರೂ ಕುಸಿತರೆ, ಎಷ್ಟು ಮನಸ್ಸು ಗಟ್ಟಿ ಮಾಡಿದರೂ ಸೋತರೆ ...... ಆಗ ನಾಯಿ ಬಾಲ ಡೊಂಕೇ!

ಹುಡುಗ ಶುದ್ಧಶುಂಠಿ, ಹೇಳಿದ ಮಾತು ಕೇಳಲ್ಲ, ಬಲು ಹಠಮಾರಿ, ಏನು ಹೇಳಿದರೂ ಕೇಳಲ್ಲ ಎಂದು ಹುಡುಗತನದಲ್ಲಿ; ಸಿಗರೇಟು ಸೇದುವ ಹವ್ಯಾಸದ ಜೊತೆ ಕುಡಿಯುವ ಹವ್ಯಾಸಾನೂ ಬೆಳೆಸಿಕೊಂಡಿದ್ದಾನೆ ಎಂದು ಯುವಕತನದಲ್ಲಿ; ಗಾಂಜಾ - ಅಫೀಮು, ಇಸ್ಪೀಟಾಟ, ಕುದುರೆ ಓಟ, ಜೂಜಾಟ, ಸೂಳೆಗೇರಿ ಎಂದು ಮನುಷ್ಯನಲ್ಲಿ ಜೋರಾಗಿ ಅಂಟಿಕೊಳ್ಳುವ, ಜಿಗಣೆಯಂತೆ ಕಚ್ಚಿಕೊಳ್ಳುವ ಗೀಳುಗಳು. ಇವುಗಳಿಂದ ಬಿಡಿಸಿಕೊಳ್ಳುವುದಕ್ಕೆ ಭಗೀರಥ ಪ್ರಯತ್ನ ಮಾಡಬೇಕು. ಏನೇ ಪ್ರಯತ್ನಪಟ್ಟರೂ, ಎಲ್ಲೋ ಒಂದು ನಿಮಿಷ ಎಚ್ಚರ ತಪ್ಪಿದಾಗ, ಜೊಂಪು ಹತ್ತಿದಾಗ ಆ ಗೀಳು ಮತ್ತೆ ಎಲ್ಲಿಂದಲೋ ನುಣುಚಿಕೊಂಡು ಬಂದು ನಿಮ್ಮನ್ನು ಹಿಡಿದುಬರುತ್ತದೆ - ಬೆನ್ನು ಬಿಡದ ಬೇತಾಳದಂತೆ. ಲಂಗೋಟಿ ಉಳಿಸಲು ಹೋಗಿ ಬೆಕ್ಕು ಸಾಕಿದ ಸನ್ಯಾಸಿ ಸಂಸಾರಿಗನಾದ ಕಥೆ ನೀವು ಕೇಳೇ ಇರುತ್ತೀರಿ. ಮಹಾತಪಸ್ವಿ ಋಷಿಯೊಬ್ಬ ತನ್ನ ಪದವಿ ಬಯಸಬಹುದೆಂಬ ಹೆದರಿಕೆಯಿಂದ ದೇವೇಂದ್ರ, ಅವನ ಬಳಿ ಒಂದು ಹರಿತವಾದ ಕತ್ತಿಯನ್ನು ಜೋಪಾನವಾಗಿಟ್ಟುಕೊಂಡಿರಲು ಕೊಟ್ಟು ಬಂದನಂತೆ. ಹಾಗೇ ಇಟ್ಟರೆ ತುಕ್ಕು ಹಿಡಿಯಬಹುದೆಂದು ಆ ಋಷಿ ಕತ್ತಿಯ ಅಲಗನ್ನು ಹರಿತ ಮಾಡಿದ್ದು, ಆಗ ಅವನ ಕೈಯ ರಕ್ತ ಚಿಮ್ಮಿದ್ದು, ಅರೆ ಎಷ್ಟು ಹರಿತವಾಗಿದೆ ಇದರಿಂದ ಪ್ರಾಣಿಯೊಂದನ್ನು ಒಂದೇ ಏಟಿಗೆ ತುಂಡರಿಸಬಹುದೇ ಅಂದುಕೊಂಡಿದ್ದು, ಅಲ್ಲಿಂದ ಕ್ರಮೇಣ ಆ ಋಷಿ ತನ್ನ ಸಾತ್ವಿಕ ಬುದ್ಧಿಯನ್ನು ಬಿಟ್ಟು ಕ್ರೂರಿಯಾಗಿ ತನ್ನ ತಪಸ್ಸಿನ ಬಲವನ್ನೆಲ್ಲಾ ಕಳೆದುಕೊಂಡಿದ್ದು ಈ ಕಥೆಯನ್ನು ಕೇಳಿರಬಹುದು. ನಾಯಿಬಾಲ ಡೊಂಕು ಅನ್ನುವುದಕ್ಕೆ ಹೀಗೆ ನೂರು ಕಥೆಗಳನ್ನು ಹೇಳಬಹುದು. ಕಾಶಿಗೆ ಹೋಗಿ ಸಿಟ್ಟು ಬಿಟ್ಟು ಬಂದವನ ಕಥೆ ಎಲ್ಲರಿಗೂ ಗೊತ್ತು. ಆದರೆ ಈಗ ನಾನು ಹೇಳುತ್ತಿರುವುದು ಹೊಸದು. ಈ ಮನುಷ್ಯ ಏನೇ ಆದರೂ ಸಿಟ್ಟು ಮಾಡಿಕೊಳ್ಳೋಲ್ಲವೆಂದು ಬಲು ಗಟ್ಟಿ ಮನಸ್ಸು ಮಾಡಿಬಿಟ್ಟಿದ್ದನಂತೆ. ಇವನ ಕಠೋರ ನಿಶ್ಚಯ ಕೇಳಿ ಎಲ್ಲರೂ ಇವನ ಸ್ಥಿತಿಯನ್ನು ದುರುಪಯೋಗ ಮಾಡಿಕೊಳ್ಳಲು ಶುರು ಮಾಡಿದರು. ಸಾತ್ವಿಕನಾದ ನಾಗರ ಹಾವಿಗೆ ಎಲ್ಲರೂ ಕಲ್ಲು ಹೊಡೆಯುತ್ತಿದ್ದುದನ್ನು ಕೇಳಿ ಕನಿಕರಗೊಂಡ ಸನ್ಯಾಸಿ 'ಅರೆ, ಕಚ್ಚಬೇಡಾಂದೆ, ಆದರೆ ನಿನಗೆ ಬುಸುಗುಡುವುದಕ್ಕೇನು?' ಎಂದು ಹೇಳಿದ ಕಥೆ ನಮ್ಮ ಸಿಟ್ಟು ಬಿಟ್ಟ ಮನುಷ್ಯನಿಗೂ ಯಾರೋ ಹೇಳಿದರು. ಈ ಕಥೆ ಕೇಳಿದ ಈತ ತಾನು 'ಸಿಟ್ಟು ಮಾಡಿಕೊಳ್ಳೋಲ್ಲ, ಆದ್ರೆ ಸಿಟ್ಟುಮಾಡಿಕೊಂಡ ಹಾಗೇ ಆಡ್ತೀನಿ, ಕೂಗ್ತೀನಿ. ಒಳಗೆ ಮಾತ್ರ ತಣ್ಣಗೇ ಇರ್ತೀನಿ, ಒಳಗೊಳಗೇ ನಗ್ತೀನಿ' ಅಂದ್ಕೊಂಡು ಕೂಗಿದನಂತೆ. ಹೀಗೇ ನಾಲ್ಕಾರು ಸಲ ಕೂಗಾಡಿದ ಮೇಲೆ, ಅದೇ ಅವನಿಗೆ ಅಭ್ಯಾಸವಾಗಿ

ಬಿಟ್ಟಿತು. ಕೊನೆಕೊನೆಗೆ ಯಾವುದು ನಿಜ, ಯಾವುದು ನಾಟಕ ಅನ್ನೋದೇ, ಅವನಿಗೇ ಗೊತ್ತಾಗದೆ ತನ್ನ ಜಾಲದಲ್ಲಿ ತಾನೇ ಸಿಕ್ಕಿಹಾಕಿಕೊಂಡನಂತೆ - ಬಾಲ ತಾನಾಗೇ ಡೊಂಕಾಗಿ ಬಿಟ್ಟಿತಂತೆ!

ನಾಯಿ ಬಾಲ ಡೊಂಕು ಅನ್ನುವುದನ್ನು ನಾವು ದಿನ ನಿತ್ಯವೂ ನೋಡಬಹುದು. ಸಿಗರೇಟು ಬಿಟ್ಟೆ, ಕುಡಿಯೋದು ಬಿಟ್ಟೆ ಎಂದು ಹೇಳುವವರು ಎಷ್ಟೋ ಜನ, ಎಷ್ಟೋ ಸಲ. ಆದರೆ ಕೊನೆಗೆ ಅವರು ಬಿಡುವುದು ಹೊಗೆ ಅಥವಾ ಗುಟುರು. ಬೊಜ್ಜು ಇಳಿಸಬೇಕೂಂತ ಯೋಗಾಭ್ಯಾಸ ಶುರುಮಾಡ್ತೀರಿ, 'ಈಗ ನನ್ನ ಮೈ ಎಷ್ಟು ಹಗುರಾಂತೀಯ' ಎಂದು ಜಂಭ ಕೊಚ್ಚುತ್ತೀರಿ. ಎಲ್ಲಾ ನಾಲ್ಕು ದಿನ, ಆಮೇಲೆ ಎಂದೋ ಒಂದು ದಿನ ಯೋಗ ಹೋಗಿ ಭೋಗವಾಗಿರುತ್ತದೆ. ದಿನ ಬೆಳಗಾಗೆದ್ದು ಶುಚಿಯಾಗಿ ಸ್ನಾನ ಮಾಡಿ, ಪಟ್ಟೆ ವಿಭೂತಿ ಇಟ್ಟು, ಗಂಟೆಗಟ್ಟಲೆ ಪೂಜೆ ಮಾಡಿ, ಅಹಾ, ಮನಸ್ಸು ಎಷ್ಟು ಪ್ರಫುಲ್ಲವಾಗಿದೆ ಅಂದುಕೊಳ್ಳುವುದು. ಈ ಒಂದು ಕ್ಷಣದ ಉನ್ನತ ಉತ್ತುಂಗ ಮನಃಸ್ಥಿತಿ ಇನ್ನೊಂದು ಕ್ಷಣಕ್ಕಿರುವುದಿಲ್ಲ. ಅಷ್ಟರೊಳಗಾಗಲೇ ಮನದ ಡೊಂಕು ಉತ್ತುಂಗತೆಯನ್ನು ಕೊಂಕಿಸಿರುತ್ತದೆ. ಗಂಧ ತೀಡಿ ಬಂದ ಪಂಡಾ, ಅಗರಬತ್ತಿ ಹತ್ತಿಸಿ ಬಂದ ಬನಿಯಾ ಒಂದೇ ನಿಮಿಷದಲ್ಲಿ ತಮಗೆ ಸಿಕ್ಕಿದ ಬಕರಾಗಳನ್ನು ಓಂಡಿ ಹಾಕುವುದು ನೋಡಿದಾಗೆಲ್ಲಾ ನಾಯಿ ಬಾಲದ ಯೋಚನೆ ಬರುತ್ತೆ. ನಾನು ಹೀಗಂದಾಗ, ಒಬ್ಬ ಬನಿಯಾ ನನಗೆ ಸಮಾಧಾನ ಹೇಳಿದ 'ಅದು ಪೂಜೆ, ಇದು ವ್ಯವಹಾರ. ವ್ಯವಹಾರದಲ್ಲಿ ಹೀಗೆಲ್ಲಾ ನಡೆಯೋದೇ ಸರಿ! ಎರಡಕ್ಕೂ ಮೋಸ ಮಾಡ್ಬಾರದು, ನೋಡಿ'! ಇದೇ ರೀತಿ ಯಾವುದಾದರೂ ಪ್ರವಚನ ಅಥವಾ ಅಧ್ಯಾತ್ಮ ವಿಚಾರ ಕೇಳಿ 'ಎಲ್ಲಾ ತಿಳಿನೀರ ಹಾಗೆ ಅರ್ಥವಾಗುತ್ತೆ. ನೋಡಿ ಇದೆಲ್ಲಾ ಮಾಯ. ನಾವೇಕೆ ಸುಮ್ಮನೆ ಒದ್ದಾಡಬೇಕು' ಎಂದೆಲ್ಲಾ ವೈರಾಗ್ಯ ತುಂಬಿದ ಮಾತುಗಳನ್ನೇ ಆಡುತ್ತೀರಿ. ಕೇವಲ ನಾಲ್ಕಾರು ದಿನ. ಇನ್ನೂ ಹೊಸವರ್ಷದ ನಿರ್ಧಾರಗಳನ್ನೇ ನೋಡಿ, ಯುಗಾದಿಯ ಶುಭಾಶಯಗಳನ್ನು ನೋಡಿ, ದೀಪಾವಳಿಯ ಸಂತೋಷದ ಹೊನಲನ್ನು ನೋಡಿ, ದಸರಾದ ಸೌಹಾರ್ದತೆ ಪ್ರೀತಿಯನ್ನು ನೋಡಿ ..... ಎಲ್ಲ ಕ್ಷಣಿಕ. ಮಾರನೆಯ ದಿನಕ್ಕೇ ಎಲ್ಲ ಮರೆತು ಹೋಗಿರುತ್ತದೆ. ಸ್ಮಶಾನ ವೈರಾಗ್ಯ, ಪ್ರಸವವೈರಾಗ್ಯದ ಹಾಗೆ. ನಾವು ಮಾಡಿದ ನಿರ್ಧಾರಗಳೇ ಹೀಗಾದರೆ ಇನ್ನು ಹುಟ್ಟು ಬುದ್ಧಿಯನ್ನಂತೂ ಕೇಳಲೇ ಬೇಡಿ. ಮೊದಲೇ ಹುಟ್ಟು ಬುದ್ಧಿ ಸುಟ್ಟರೂ ಬಿಡಲ್ಲ ಅನ್ನುವ ಗಾದೆಯೇ ಇದೆ. ಹಿರಣ್ಯಾಕ್ಷ, ಹಿರಣ್ಯಕಶಿಪು, ಬಲಿ, ರಾವಣ, ಕುಂಭಕರ್ಣ ಇವರು ಏನೇನಾಗಿ ಹುಟ್ಟಿದರೂ ಕೊಂಕುಬುದ್ಧಿ ಮಾತ್ರ ಜನ್ಮಜನ್ಮಕ್ಕೂ ಅಂಟಿಕೊಂಡೇ ಬಂದಿತ್ತು.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ...... ಈ ಬೇಡಗಳ ಪಟ್ಟಿಯನ್ನು ವಿವಿಧ ರೀತಿಯಲ್ಲಿ, ವಿಧವಿಧವಾಗಿ ತಯಾರಿಸಿದವರು ಎಷ್ಟೋ ಜನ. ಕೃಷ್ಣ, ಬುದ್ಧ, ಶಂಕರ, ಬಸವಣ್ಣ, ರಾಮಕೃಷ್ಣ ...... ಇತ್ಯಾದಿ ಎಲ್ಲಾ ಮಹಾಪುರುಷರೂ, ಸಂತರೂ, ಸಜ್ಜನರೂ ಸುಧಾರಕರೂ ಈ ಪಟ್ಟಿಯ ವಿವರಗಳನ್ನು ತರಹಾವರಿಯಾಗಿ ಹೇಳಿದ್ದೇ ಹೇಳಿದ್ದು. ಗೀತೆಯಾಗಿ, ಧರ್ಮಪದವಾಗಿ, ಮಂತ್ರವಾಗಿ, ವಚನವಾಗಿ, ಮುಗ್ಧಕತೆಯಾಗಿ, ಪಾಂಡಿತ್ಯ ತುಂಬಿ ...... ಎಲ್ಲಾ ರೀತಿಗಳಲ್ಲೂ ಬೇಕು ಬೇಡಗಳನ್ನು ಹೇಳಿದರು. ಅವರ ಹಿಂಬಾಲಕರಲ್ಲಿ ಎಲ್ಲರೂ ಕೇಳಿದರು, ಹಲವರು ಪ್ರಚಾರಮಾಡಿದರು, ಕೆಲವರು ಅರ್ಥಮಾಡಿಕೊಂಡರು, ಒಂದಿಬ್ಬರು ಪಾಲಿಸಿದರು ಮತ್ತಿನ್ನೆಲ್ಲಾ ಮರೆತರು. ಒಟ್ಟಿನಲ್ಲಿ ಮರೆತವರೇ ಜಾಸ್ತಿ. ಒಬ್ಬ 'ಬೇಡ'ಗಳ ಪಟ್ಟಿ ತಯಾರಿಸಿದರೆ, ಒಂದು ಲಕ್ಷ ಜನ 'ಬೇಕು'ಗಳ ಪಟ್ಟಿ ತಯಾರಿಸುತ್ತಾರೆ. ಇದೇ ರೀತಿ ದೊಡ್ಡವರು ಹೇಳಿದ್ದನ್ನು ಮರೆತವರೇ ಜಾಸ್ತಿ. ಬುದ್ಧ ಮೂರ್ತಿ ಪೂಜೆ ಬೇಡಾಂದ, ಅವನನ್ನೇ ಪೂಜಿಸಿದರು. ಬಸವಣ್ಣ ಜಾತಿಬೇಧ

ಬೇಡಾಂದ .... ಅಂತೂ ಬಲು ಬೇಗ Fool Stop ಅನ್ನುವಂತೆ ಆ ಮಹನೀಯರ ಆಚಾರ--ವಿಚಾರಕ್ಕೆ ಒಂದು ದೊಡ್ಡ ಪೂರ್ಣವಿರಾಮ ಕೊಟ್ಟರು. ಮತ್ತೊಬ್ಬ ಮಹನೀಯ ಬಂದು ದಾರಿ ತೋರುವವರೆಗೂ. ಆಮೇಲೆ ಅವನಿಗೂ ಪೂರ್ಣವಿರಾಮ. ಇದಕ್ಕೆಲ್ಲ ಕಾರಣ ನಮ್ಮ ನಾಯಿಬಾಲ ಡೊಂಕಿನಂತಹ ಗುಣ, ಬುದ್ಧಿ. ಹೀಗಾಗಿ ನಮ್ಮ ಪುರಾಣ, ಇತಿಹಾಸ, ಚರಿತ್ರೆ ಜೀವನದ ಪುಟಗಳನ್ನು ತಿರುವಿಹಾಕಿದರೆ ಎಲ್ಲೆಲ್ಲೂ ಬರಹಗಳಿಗಿಂತ ಪೂರ್ಣವಿರಾಮಗಳೇ ಕಾಣುತ್ತಿವೆ. ಆ ಪೂರ್ಣವಿರಾಮದ ಬಿಂದುವಿನಲ್ಲೇ ನಮ್ಮ ಸಂಸಾರ ಚಕ್ರ ಉರುಳುತ್ತಿದೆ ರಾಗದ್ವೇಶಾದಿ ಅರಿಷಡ್ವರ್ಗಗಳು ನಾಗಾಲೋಟ ಓಡುತ್ತಿವೆ. ಇವರಿಂದಲೇ ಪ್ರಪಂಚ ಓಡೋದು, ಎಲ್ಲಾ ಸೀದಾ ಇದ್ದರೆ ಸ್ಥಿತಪ್ರಜ್ಞರಾಗಿದ್ದರೆ ಎಲ್ಲಾ ಸ್ಥಗಿತ, ಏನೂ ನಡೆಯೊಲ್ಲ, ಓಡೋಲ್ಲ, ಆದ್ದರಿಂದ ಡೊಂಕು ಬುದ್ಧಿಯಿರಬೇಕೆಂದು ಇನ್ನೊಂದು ವಾದ.

ನಮ್ಮ ಜೀವನ ಚಕ್ರ ನಡೆಯುತ್ತಿರುವುದೇ ಈ ಡೊಂಕಿನಿಂದ. ದಿನನಿತ್ಯದ ಜೀವನ ಚಕ್ರ ಅಥವಾ cycle ನ್ನೇ ನೋಡಿ. ಬೆಳಗಾಗೆದ್ದರೆ ಹಲ್ಲುಜ್ಜು, ಸ್ನಾನ ಮಾಡು, ಓದು, ಬರಿ, ಶಾಲೆಗೆ ಹೋಗು...... ಅರೆ, ಎಲ್ಲಾ ವಂಶಾನುಗತವಾಗಿ (hereditraryಯಾಗಿ) ಬರುತ್ತೆ ಅಂದ ಮೇಲೆ ನಮ್ಮಪ್ಪ ಓದಿದ್ದೆಲ್ಲಾ ನಮಗೆ ಹಾಗೇ ಬರಬೇಕು, ನೆನಪಿರಬೇಕು. ಅವರು ಓದದೇ ಬಿಟ್ಟದ್ದು ಮಾತ್ರ ನಾವು ಮುಂದಕ್ಕೋದಬೇಕು. ಇವತ್ತಿನಂತೆ ನಾಳೆ, ನಾಳೆಯಂತೆ ನಾಡಿದ್ದು ......, ಇವತ್ತು ಹುಟ್ಟು, ನಾಳೆ ಬೆಳವಣಿಗೆ, ನಾಡಿದ್ದು ಕುಸಿತ, ಆಮೇಲೆ ಸಾವು, ಮತ್ತಿನ್ನೆಲ್ಲೋ ಹುಟ್ಟು ..... ಇದಕ್ಕೆಲ್ಲಾ ಕಾರಣ ನಮ್ಮ ಜೀವನದಲ್ಲಿ ಎಲ್ಲೋ ಇರುವ ಡೊಂಕು. ಅದರಿಂದಲೇ ಈ ಸುತ್ತು, ಈ ಚಕ್ರ, ಈ cycle. ಡೊಂಕಿಲ್ಲದೆ ಸೀದಾ ನೇರವಾಗಿದ್ದರೆ ..... ನಾವೂ ಹಿಂತಿರುಗದೆ ಮುಂದೆ ಮುಂದೆ ಹೋಗಿಬಿಡುತ್ತಿದ್ದೆವು.

ನಾಯಿ ಬಾಲ ಡೊಂಕು. ಸರಿ, ಈ ಬಾಲ ಇದ್ದರೆ ತಾನೇ ಡೊಂಕಾಗುವ ಸಮಸ್ಯೆ ಎಂದು ಬಾಲಾನೇ ಕತ್ತರಿಸಿದರೆ ಏನಾಗುತ್ತದೆ. ಆಗುವುದೇನು, ಮತ್ತೆ ಚಿಗುರುತ್ತದೆ, ಗಿಡ ಕಸಿ ಮಾಡಿದ ಹಾಗೆ, ಒಂದು ಕಾಂಡದಿಂದ ನಾಲ್ಕು ಚಿಗುರು ಟಿಸಲೊಡೆದ ಹಾಗೆ, ನಾಲ್ಕು ಬಾಲ ಬೆಳೆದಾವು. ಈ ಬಾಲವೇ ಅಹಂ ಅಥವಾ ಅಭಿಮಾನ. ಅಹಂನ್ನೂ ಪೂರ್ತಾ ಹೋಗಿಸಿಕೊಂಡ ಮಹಾತ್ಮರಿಗೆ ಮಾತ್ರ ಡೊಂಕಿಲ್ಲ. ಅವರಿಗೆ ಎಲ್ಲರೂ ಒಂದೇ, ಎಲ್ಲವೂ ಒಂದೇ.

ಒಮ್ಮೆ ನಾಯಿಗೆ ತನ್ನ ಡೊಂಕು ಬಾಲದ ಮೇಲೆ ಬೇಜಾರಾಯ್ತುಂತೆ; ಎಲ್ಲರೂ ಡೊಂಕು ಎಂದು ಹಾಸ್ಯ ಮಾಡುತ್ತಿದ್ದಾಗ ಬೇಜಾರಾಗದೆ ಇನ್ನೇನು? ಅದು ದೇವರನ್ನು ಬೇಡಿಕೊಂಡು, ತನ್ನ ಡೊಂಕು ಬಾಲ ನೆಟ್ಟಗಾಗುವಂತೆ ವರ ಕೇಳಿಕೊಂಡಿತಂತೆ. ದೇವರು ಕರುಣಾಮಯಿ, ನಾಯಿಗೆ ವರ ಕೊಟ್ಟ, ಜೊತೆಗೆ ಒಂದು ಮಾತನ್ನೂ ಹೇಳಿದ ''ನೋಡಪ್ಪಾ, ನಿನ್ನ ಬಾಲ ನೆಟ್ಟಗೆ ಮಾಡಿದ್ರೆ ನೀನು ಬೊಗಳೋದು ನಿಂತು ಹೋಗುತ್ತೆ.....'' ನಾಯಿಯ ಬಾಲ ನೆಟ್ಟಗಾದಾಗ ಬಲು ಖುಷಿಯಿಂದ ಎರಡು ದಿನ ಎಲ್ಲಾ ಕಡೆಯೂ ಬಾಲ ಎತ್ತಿಕೊಂಡೇ ಓಡಾಡಿತಂತೆ, ಆದ್ರೆ ಬಾಯಿ ತೆಗೆದರೆ ಬೊಗಳಲು ಆಗುತ್ತಲೇ ಇರುತ್ತಿರಲಿಲ್ಲವಂತೆ. ಆಗ ನಾಯಿ ಮತ್ತೆ ದೇವರಲ್ಲಿ ಮೊರೆಯಿಟ್ಟು ''ದೇವಾ, ನನ್ನ ಬಾಲ ಡೊಂಕಾಗೇ ಇರಲಿ ಪರವಾಗಿಲ್ಲ, ಆದ್ರೆ ಬೊಗಳದಿದ್ದರೆ ನನ್ನ ಜೀವನವೇ ಹಾಳು.....'' ಎಂದು ಹೇಳಿ ಮತ್ತೆ ತನ್ನ ಡೊಂಕು ಬಾಲ ಪಡೆಯಿತಂತೆ! ಈ ಬೊಗಳುವಿಕೆಯೇ ಅಹಂ. ಅಹಂ ಇದ್ದರೇ ಬಾಲ ಡೊಂಕಾಗಿರುವುದು. ಅಹಂ ಇಲ್ಲದಿದ್ದರೆ ಬಾಲ ಸೀದಾ, ಆದರೆ ಏನೂ ಬೊಗಳೂಕ್ಕಾಗಲ್ಲ, ಎಲ್ಲಕ್ಕೂ ಸ್ಥಿತಪ್ರಜ್ಞರಾಗಿರಬೇಕು! ಅಂದ್ರೆ, ಬೊಗಳೂಕ್ಕಾಗಬೇಕು ಅಂದಾಗ ಬಾಲ ಬೇಕೂಂತ ಅರ್ಥ. ಮತ್ತೆ ಆ ಬಾಲ ನಾಯಿಯ ಬಾಲದ ತರಹ ಡೊಂಕೇ ಡೊಂಕು!! ●

ಒಂದು ಹೊಸ ತಳಿಯ ಮುಂಗನ ಶೋಧ

ಇತ್ತೀಚೆಗೆ ಒಂದು ಹೊಸ ತಳಿಯ ಮಂಗಗಳ ಶೋಧವಾಗಿದೆಯೆಂದು ಬ್ರೆಝಿಲ್‌ನ ವಿಜ್ಞಾನಿಗಳಿಂದ ವರದಿಯಾಗಿದೆ. ಈ ವರೆಗೆ ಈ ಜಾತಿಯ ಮಂಗಗಳು ಪ್ರಪಂಚದ ಬೇರೆ ಯಾವ ಪ್ರದೇಶದಲ್ಲೂ ಕಾಣ ಸಿಕ್ಕಿಲ್ಲವೆಂದೂ, ಅದು ನೋಡಲು ಚಿಕ್ಕದಾಗಿಯೂ ಚಿನ್ನದ ಬಣ್ಣದ ಮೈಯಿಂದಲೂ ಕೂಡಿದ್ದು, ಅಟ್ಲಾಂಟಿಕ್ ಸಾಗರದ ದಕ್ಷಿಣ ಬ್ರೆಝಿಲ್‌ನ ಬಳಿಯಿರುವ ಸುಪರಾಖಿ ಎಂಬ 14,000 ಹೆಕ್ಟೇರುಗಳಷ್ಟು ವಿಸ್ತೀರ್ಣವಿರುವ ಅತ್ಯಂತ ಜನನಿಬಿಡ ದ್ವೀಪದಲ್ಲಿ ಕಾಣಸಿಕ್ಕಿವೆಯೆಂದು ವರದಿ. ಈ ದ್ವೀಪವು ದಕ್ಷಿಣ ಅಮೇರಿಕದ ಬ್ರೆಝಿಲ್‌ನ ಪರಾನಾ ಮತ್ತು ನಾಪೋಪೌಲೋ ಪ್ರದೇಶಗಳ ಗಡಿಯಲ್ಲಿದೆ. ಬ್ರೆಝಿಲ್‌ನ ರಾಷ್ಟ್ರೀಯ ವಸ್ತು ಸಂಗ್ರಹಾಲಯವು ನಡೆಸಿದ ಈ ಶೋಧವು ಪ್ರಾಣಿಶಾಸ್ತ್ರ ವಿಭಾಗದಲ್ಲಿ ನಡೆದ ಅತಿ ಅಪರೂಪದ ಒಂದು ಘಟನೆಯೆಂದು ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಅತ್ಯಂತ ಆಶ್ಚರ್ಯಕರವಾದ ವಿಷಯವೆಂದರೆ ಈ ಹೊಸ ತಳಿಯ ಮಂಗಗಳು ಅತ್ಯಂತ ಹೆಚ್ಚಿದ ಜನಸಂಖ್ಯೆಯಿರುವ ಬ್ರೆಝಿಲ್‌ನ ಕರಾವಳಿಯಲ್ಲಿ ಕಾಣಸಿಕ್ಕಿದುದೆಂದು ಅಮೇರಿಕದ ವಿಜ್ಞಾನಿಗಳು ಅಭಿಪ್ರಾಯ ಹೊಂದಿದ್ದಾರೆ. ಬ್ರೆಝಿಲ್‌ನಲ್ಲಿರುವ ಉಷ್ಣವಲಯದ ಅರಣ್ಯದಲ್ಲಿರುವ ಮರಗಳನ್ನು ಕಡಿಯುವುದರಿಂದಾಗಿ ವಿನಾಶದ ಅಂಚಿನಲ್ಲಿದ್ದು ಹಿಂದೆ ಇದ್ದುದಕ್ಕಿಂತ ಶೇಕಡಾ ಒಂದರಿಂದ ಐದು ಅಂಶಗಳಷ್ಟು ಮಾತ್ರ ಉಳಿದಿವೆಯಂತೆ. ಉಳಿದಿರುವ ಅರಣ್ಯದ ಈ ಅಂಶವು ಸಂಪೂರ್ಣ ನಾಶವಾಗುವ ಮೊದಲೇ ಈ ಉಷ್ಣವಲಯದ ಕಾಡು ಪ್ರದೇಶಗಳಲ್ಲಿರುವ ಪ್ರಾಣಿ ಮತ್ತು ಸಸ್ಯ ವರ್ಗಗಳ ಶೋಧ ಮಾಡಿ ವರ್ಗೀಕರಿಸಿಡುವುದು ಅಗತ್ಯವೆಂದು ಈ ಹೊಸ ಶೋಧದಿಂದಾಗಿ ಅಮೇರಿಕದ ವಿಜ್ಞಾನಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವರೆಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಈ ಹೊಸ ತಳಿಯ ಮಂಗಗಳ ಸಂಖ್ಯೆ ಮಾತ್ರ ಅತೀ ಕಡಿಮೆಯಾಗಿದ್ದು ಹೆಚ್ಚೆಂದರೆ ಕೆಲವು ಡಜನುಗಳಷ್ಟು ಮಾತ್ರ ಇರಬಹುದೆಂದು ಅಂದಾಜು ಮಾಡಲಾಗಿದೆ. ಪರಾನಾದ ಕ್ಯುರಿಟಿಬಾ (curitiba) ದಲ್ಲಿರುವ ಕಪಾವೋ-ಡ-ಇಂಬುಯಿಯಾ ರಾಷ್ಟ್ರೀಯ ವಸ್ತು ಸಂಗ್ರಹಾಲಯದ ಪ್ರಕೃತಿ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಕಶೇರುಕಗಳ ಅಧ್ಯಯನ ಶಾಖೆಯ ಮುಖಂಡರಾದ ಡಾ. ಡಾಂಟೆ ಮಾರ್ಟಿನ್ಸ್ ಟೆಕ್ಸಿಯೆರಾ (Dr. Dante Martins Texiera)ರವರು ವಿವರಿಸುತ್ತಾ ಈ ಹೊಸ ತಳಿಯ ಮಂಗಗಳ ಶೋಧಕರು ಅಲ್ಲಿನ ಪ್ರಾಣಿಶಾಸ್ತ್ರದ ಪ್ರೊಫೆಸರುಗಳಾದ ಮರಿಯಾ ಲುಸಿಯಾ ಲೊರಿನಿ ಹಮಚಲಾ ಹವಟಲುಲ) ಮತ್ತು ವನಿಸ್ಸಾ ಗುವೆರಾ ಪರ್ಸ್ಸನ್ ಎಂಬುವರುಗಳಾಗಿದ್ದಾರೆಂದು ತಿಳಿಸಿರುತ್ತಾರೆ. ವಿಶಿಷ್ಟ ಜಂತುವರ್ಗಗಳ ರಕ್ಷಣಾ ಸಂಘ ಸಂಸ್ಥೆಗಳ ಅಂತಾರಾಷ್ಟ್ರೀಯ ಅಧ್ಯಕ್ಷರಾದ ಡಾ. ರಸ್ಸೆಲ್ - ಎ ಮಿಟ್ಟರ್ಮಿಯರ್ ಕೂಡಾ 'ಇದೊಂದು ಅತ್ಯಂತ ಆಶ್ಚರ್ಯಕರವಾದ ಶೋಧನೆ' ಎಂದು

ಅಮೇರಿಕಾಕ್ಕೆ ತಿಳಿಸಿರುತ್ತಾರೆಂದು ವರದಿ. ಅಟ್ಲಾಂಟಿಕ್ ಸಾಗರದ ದಕ್ಷಿಣದಲ್ಲಿರುವ ಬ್ರೆಝಿಲ್‌ನ ಕರಾವಳಿ ಅತ್ಯಂತ ಪ್ರಗತಿ ಹೊಂದಿದ ಅತೀ ಜನಸಂಖ್ಯೆ ಹೊಂದಿದ ಭೂಭಾಗ. ಅಲ್ಲಿ ಈ ಹೊಸ ತಳಿಯ ಮಂಗಗಳ ಶೋಧವಾದುದೇ ಒಂದು ಆಶ್ಚರ್ಯಕರ ಘಟನೆ. ಇದರಿಂದ ತಿಳಿದು ಬರುವುದೇನೆಂದರೆ ಉಷ್ಣವಲಯದ ಅರಣ್ಯ ಜೀವಿಗಳ ಬಗ್ಗೆಯಿರುವ ವೈವಿಧ್ಯವು ನಮಗಿಂದು ಎಷ್ಟು ತಿಳಿದಿದ್ದರೂ ಅದಿನ್ನೂ ಅಲ್ಪವೇ ಆಗಿದೆ ಎಂದಾಗಿದೆ. ಇದು ಅಮೇರಿಕದ ಅತ್ಯಂತ ಪ್ರಗತಿ ಪರ ಲಾಸ್ ಎಂಜಲ್ಸ್ ನಗರದ ಬಳಿ ಹೊಸ ತಳಿಯ ಜೀವಿಯೊಂದನ್ನು ಕಂಡು ಹಿಡಿದ ಪ್ರಾಮುಖ್ಯವುಳ್ಳ ಸಂಗತಿ ಎಂದು ಅವರು ಅಭಿಪ್ರಾಯ ಪಡುತ್ತಾರೆ. ಈ ಮಂಗಗಳ ಹೊಸ ತಳಿ ಸಾಮಾನ್ಯ ಮಂಗಗಳ ವರ್ಗಕ್ಕೆ ಸೇರದೆ ಈವರೆಗೆ ಕಂಡು ಬರದ 'ಲಯನ್ ಟಮರಿಲ್' (lion tamarin) ಎಂಬ ತಳಿ ವರ್ಗಕ್ಕೆ ಸೇರಿದೆಯೆಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಅವರು ಕೊಡುವ ಕಾರಣವೆಂದರೆ ಈ ಹೊಸ ತಳಿಯ ಮಂಗಗಳಲ್ಲಿ ಕಂಡು ಬರುವ ವಿಶಿಷ್ಟ ಗುಣಲಕ್ಷಣಗಳಾಗಿವೆ. ಅದು ಸಾಮಾನ್ಯ ಮಂಗಗಳ ಒಂದು ಉಪಜಾತಿಗೆ ಸೇರಿದುದಲ್ಲವೆಂದು ಅವರ ಅಭಿಪ್ರಾಯ. ಅದು ಜೀವಿಗಳ ಅಂಗ ರಚನಾ ಶಾಸ್ತ್ರಕ್ಕನುಸಾರವಾಗಿ (morphologically) ಇತರ ಮಂಗಗಳ ಜಾತಿಗಿಂತ ಭಿನ್ನವಾಗಿದೆಯೆಂದೂ, ಅದರ ತಲೆಬುರುಡೆಯ ರಚನೆ ಮತ್ತು ವಸಡು ಹಲ್ಲುಗಳ ರಚನೆ ಇತ್ಯಾದಿಗಳು ಇದನ್ನು ಪ್ರತ್ಯೇಕವಾಗಿರಿಸುತ್ತದೆಂದೂ ಆದುದರಿಂದ ಇದು ಲಯನ್ ಟಮರಿನ್ (lion tamarin) ಎಂಬ ಅಪೂರ್ವ ತಳಿಗೆ ಸೇರಿದ ಜೀವಿಯೆಂದೂ, ಆ ಕುರಿತು ಅದು ಈವರೆಗೆ ಕಂಡು ಹಿಡಿಯದ ವರ್ಗಕ್ಕೆ ಸೇರಿದುದೆಂದೂ ವಿಜ್ಞಾನಿಗಳ ಅಭಿಪ್ರಾಯ. ಚಿನ್ನದ ಬಣ್ಣದ ಮೈ, ಕಪ್ಪು ಬಾಲ, ಕಪ್ಪು ಮುಸುಡಿ ಹಾಗೂ ಕಪ್ಪು ಮುಂಗಾಲುಗಳಿಂದ ಕೂಡಿದ ಈ ಜೀವಿಯನ್ನು ಅಲ್ಲಿನ ಸ್ಥಳೀಯ ನಿವಾಸಿಗಳು 'ಕರಿ ಮುಸುಡ'ನೆಂದು ಅರ್ಥ ಬರುವ ರೀತಿಯಲ್ಲಿ ಕರೆಯುತ್ತಾರಂತೆ. ಬ್ರೆಝಿಲ್‌ನ ಕರಾವಳಿಯ ಬೆಸ್ತರ ಹೆಸರಾದ ಕೆಲಕರಾಸ್ ಎಂಬ ಪದದ ಆಧಾರದಿಂದ ಈ ಹೊಸತಳಿಯ ಮಂಗನಿಗೆ 'ಲಿಯೋಂಟೋಪಿತ್-ಇಕಸ್ ಕೈಸ್ಸಾರಾ' (Leontopith-ecus caissara) ಅಂದರೆ 'ಕರಿ ಮುಸುಡಿನ ಲಯನ್ ಟಮರಿನ್' ಎಂಬುದಾಗಿ ನಾಮಕರಣ ಮಾಡಿದ್ದಾರೆ.

(ನ್ಯೂಯಾರ್ಕ್ ಟೈಮ್ಸ್ ವರದಿ ಆಧಾರದಿಂದ)

ಎಂ. ಶಿವರಾಮ ಆಚಾರ್

ನುಡಿಮುತ್ತುಗಳು

● ಬಹಳಷ್ಟು ಲೇಖಕರು ಸತ್ಯವನ್ನು ಅಮೂಲ್ಯವೆಂದು ಭಾವಿಸುತ್ತಾರೆ. ಆದ್ದರಿಂದ ಅದನ್ನು ಜಿಪುಣತನದಿಂದ ಖರ್ಚು ಮಾಡುತ್ತಾರೆ.

- ಮಾರ್ಕ್‌ಟ್ವೇನ್

● ಕುಸಿಯುತ್ತಿರುವ ಆಧಾರವನ್ನು ಗಟ್ಟಿಯಾಗಿ ಹಿಡಿದುಕೊಂಡಷ್ಟು ಅದು ಬೇಗ ಕುಸಿಯುತ್ತದೆ.

- ರವೀಂದ್ರನಾಥ ಟ್ಯಾಗೋರ್

● ಸಾವಿರ ಮೈಲುಗಳ ಪ್ರವಾಸವೂ ಒಂದು ಹೆಜ್ಜೆಯಿಂದ ಪ್ರಾರಂಭವಾಗುತ್ತದೆ.

- ಜಪಾನ್ ಗಾದೆ

● ಸಿಂಹ ಕೂಡ ನೊಣದಿಂದ ತನ್ನನ್ನು ಸಂರಕ್ಷಿಸಿಕೊಳ್ಳಬೇಕಾಗುತ್ತದೆ.

- ಜರ್ಮನಿ ಗಾದೆ

(ಸಂಗ್ರಹ) - *ಕೇಶವ ದೇಶಪಾಂಡೆ*

ಅಂಬಾ

* ಶ್ರೀಮತಿ

ಒಣಗಿದ ಕಟ್ಟಿಗೆಗಳನ್ನು ಆಯ್ದುಕೊಳ್ಳುತ್ತಿದ್ದ ಆ ಹುಡುಗ ಅವಳನ್ನು ಮಿಕಿಮಿಕಿ ನೋಡಿದ್ದ. ಅವಳವನಿಗೆ ಹೇಗೆ ಕಂಡಳೋ! ಪ್ರಾಯಶಃ ಗೊತ್ತುಗುರಿಯಿಲ್ಲದೆ ಅಲೆಯುತ್ತಿರುವ ಹುಚ್ಚಿಯಂತೆ! ಒಂದೇ ಕ್ಷಣ! ಆಮೇಲೆ ಪುನಃ ಅವನು ಕಟ್ಟಿಗೆಯನ್ನಾಯುವ ತನ್ನ ಕೆಲಸದಲ್ಲಿ ಮುಳುಗಿದ್ದ. ಅವಳು ಮುಂದುವರಿದಿದ್ದಳು. ಆ ಇನ್ನೊಬ್ಬ ಹುಡುಗ ದನ ಮೇಯಿಸುತ್ತಿದ್ದವನು ಅವಳನ್ನು ಕುತೂಹಲದಿಂದ ದೃಷ್ಟಿಸಿದ್ದ. ಕುತೂಹಲ ಬಹು ಬೇಗನೇ ಇನ್ನಾವುದರಲ್ಲಿಯೋ



ಪರಿವರ್ತಿತವಾಗಿತ್ತೆಂದು ಅವಳಿಗೆನಿಸಿತ್ತು. ಕರುಣೆಯೇ? ಅವಳು ವಿಚಾರಿಸುತ್ತಿದ್ದಂತೆಯೇ ಆ ಹುಡುಗ ನಕ್ಕಿದ್ದ ಒಂದು ಸ್ನೇಹಭರಿತ ನಗೆ! ಆ ಒಂದು ಕ್ಷಣದಲ್ಲಿ, ಅವನೊಂದಿಗೆ ಕುಳಿತುಕೊಳ್ಳಬೇಕು, ಅವನೊಂದಿಗೆ ಮಾತನಾಡಬೇಕು, ಎಂದೆನಿಸಿತ್ತು ಅವಳಿಗೆ. ಆದರೆ ಅವನು ಮರಳಿ ಹೊರಟು ಹೋಗಿದ್ದ. ಅವಳು ತನ್ನಲ್ಲಿಯ ಏಕಾಕಿತನದೊಂದಿಗೆ ಮುಂದುವರಿದಿದ್ದಳು.


ವಿಚಿತ್ರವಲ್ಲವೆ! ಈಗ ತೀರ ಕ್ಷುಲ್ಲಕ ವಿಷಯಗಳೂ ದೊಡ್ಡವಾಗಿ ತೋರುತ್ತಿವೆ ..... ಅವಳ ಕಾಲಿಗೆ ಚುಚ್ಚುತ್ತಿರುವ ಮುಳ್ಳುಗಳು, ಅವಳ ಬತ್ತಿ ಹೋದ ನಾಲಿಗೆ, ಗಂಟಲು, ಉರಿಯುತ್ತಿರುವ ಕಣ್ಣುಗಳು ಹಾಗೂ ಯಾತನೆ ಅನುಭವಿಸುತ್ತಿರುವ ಮಾಂಸಖಂಡಗಳು! ಅಭಿಮಾನ, ಕ್ರೋಧ, ದ್ವೇಷ, ಸೇಡು ...... ಅವೆಲ್ಲವುಗಳನ್ನು ಇವುಗಳೊಂದಿಗೆ ಹೋಲಿಸಿ ನೋಡಿದಾಗ, ಏನಾಗುತ್ತವೆ! ಈಗ, ಅವುಗಳೆಲ್ಲವೂ ತಾನು ಇದುವರೆಗೂ ಭದ್ರವಾಗಿ ಹಿಡಿದುಕೊಂಡು ಆಟವಾಡಿದ, ಮುದುಡಿದ, ಆಟಿಕೆಯ ವಸ್ತುಗಳಾಗಿ ಸಂಕುಚಿತಗೊಂಡಿವೆ! ಆ ಆಲೋಚನೆ - ಮಗುವೊಂದು ತನ್ನನ್ನು ನೋಡಿ ನಕ್ಕಾಗ ಆ ಆಲೋಚನೆ ಪಳಕ್ಕನೆ ಮಿಂಚಿತ್ತು. ''ಭೀಷ್ಮನಿಂದಲ್ಲದಿದ್ದರೆ, ನನಗೂ ಮಕ್ಕಳಾಗಬಹುದಾಗಿತ್ತು!......'' ಅದು ಕೂಡ ಅವಳಿಗೆ ವ್ಯಥೆಯನ್ನುಂಟುಮಾಡಿರಲಿಲ್ಲ. ಅವಳಿಗೀಗ, ಈ ಬದುಕಿನಲ್ಲಿ ತಾನೂ ಮಕ್ಕಳನ್ನು ಪಡೆಯಬೇಕೆಂಬ ಆಸೆಯೂ ಉಳಿದಿಲ್ಲ. ಅದೂ, ಎಂಥ ಮಗು!...... ಹುಡುಗನೊಬ್ಬ ದೊಡ್ಡವನಾಗಿ ಯುವಕನಾದಾಗ, ಬಹಳ ಹಿಂದೆಯೇ ಸತ್ತು ಹೋದ ಮನುಷ್ಯರು ಮಾಡಿಟ್ಟಿದ್ದ ಹುಚ್ಚು ಕಾಯ್ದೆಕಾನೂನುಗಳನ್ನೇ ಅನುಸರಿಸುವ ಆಟವನ್ನಾಡುವವ ಮತ್ತು ಆ ಪ್ರಯತ್ನದಲ್ಲಿಯೇ ತನ್ನ ಸ್ವಂತಿಕೆಯನ್ನೇ ಕಳೆದುಕೊಳ್ಳುವವ! ಅಥವಾ...... ತನಗೆ ಒಬ್ಬ ಮಗಳೇ ಆಗಿದ್ದಿದ್ದರೆ! ...... ಅವಳೂ ಅಷ್ಟೆ! ಅದೇ ಆಟದಲ್ಲಿಯೇ, ಅದೇ ಹುಚ್ಚು ಕಾಯ್ದೆ ಕಾನೂನುಗಳಿಗನುಗುಣವಾಗಿ ಬದಲಾಯಿಸಲ್ಪಡುವ ಅಥವಾ ತ್ಯಜಿಸಲ್ಪಡುವ ಒಂದು ಆಟದ ಬೊಂಬೆಯಾಗಿ ಉಳಿಯುತ್ತಿದ್ದಳು. ಅಬ್ಬ! ಮಕ್ಕಳಾಗಲಿಲ್ಲವೆಂಬುದು ಈಗ ಒಂದು ಬಗೆಯ ಸಂತೋಷವೇ ಆಯಿತು. ಒಂದು ಕ್ಷಣ ಅವಳು ತನ್ನ ತಾಯಿ'ಯನ್ನು ಕುರಿತು ಯೋಚಿಸಿದಳು...... ತಾಯಿ! ..... ಮುದುಕನೊಬ್ಬ ತನ್ನ ಹೆಣ್ಣುಮಕ್ಕಳನ್ನು ಹೊತ್ತುಕೊಂಡು ಹೋಗುತ್ತಿದ್ದುದನ್ನು ನೋಡುತ್ತಿದ್ದವಳು..... ಅವಳು ಅತ್ತಿದ್ದಳೇ? ಪ್ರತಿಭಟಿಸಿದ್ದಳೇ?..... ಏನಾಗಿದ್ದರೂ, ಅವಳ ಕಣ್ಣೀರಾಗಲೀ, ಅವಳ ಪ್ರತಿಭಟನೆಯಾಗಲೀ, ಅರ್ಥಶೂನ್ಯವಾದವುಗಳಾಗಿರುತ್ತಿದ್ದವು; ಏಕೆಂದರೆ ಅವುಗಳು ಅವಳ ಅಂತಃಪುರದಾಚೆಯ ಪ್ರಪಂಚವನ್ನು ಪ್ರವೇಶಿಸುತ್ತಲೇ ಇರಲಿಲ್ಲ.

ಆ ಅಂತಃಪುರ! ಅವಳು ಅದೆಷ್ಟು ತೀವ್ರವಾಗಿ ಅದನ್ನು ದ್ವೇಷಿಸಿದ್ದಳು! ಆದರೆ ಚಿಕ್ಕ ಹುಡುಗಿಯಾಗಿದ್ದಾಗ, ಅದು ಹೇಗೆ ಇಡೀ ಜಗತ್ತನ್ನೇ ತನ್ನದೆಂದು ಭಾವಿಸಿದ್ದಳು? ನಿಧಾನವಾಗಿ, ನಿಷ್ಕರುಣವಾಗಿ, ''ಬೇಡ, ಬೇಡ, ಇದು ನಿನಗಲ್ಲ'' ಎನ್ನುತ್ತ ಜಗತ್ತು ಅವಳನ್ನು ಅಂತಃಪುರದಲ್ಲಿ ತಳ್ಳುತ್ತಲೇ, ಅವಳ ಪಾಲಿಗೆ ಇಲ್ಲವಾಗಿತ್ತು. ಆಗ ..... ಮೊದಲಿನಿಂದಲೂ ತಾನಲ್ಲಿ ಬಂದಿಯಾಗಿದ್ದೇನೆಂಬ ಭಾವನೆಯೇ ಅವಳಲ್ಲಿ ಉಂಟಾಗಿದ್ದುದು! ಇವತ್ತು, ಅಲ್ಲಿಂದೀಚೆಗೆ ಹೊರಬಂದಾಗ, ಹಾಗೆ ಬರುವುದು ಅದೆಷ್ಟು ಸುಲಭವಾಗಿತ್ತೆಂಬುದನ್ನು ನೆನೆಸಿಕೊಂಡಾಗ, ಅವಳಿಗೆಯೇ ಆಶ್ಚರ್ಯವಾಗಿತ್ತು. ಅದೊಂದು ಬಗೆಯ ಶಾಂತಿ ಅವಳನ್ನಾವರಿಸಿಕೊಂಡಿತ್ತು. ತಾನೇಕೆ ಈ ಕೆಲಸವನ್ನು ಈ ಮೊದಲೇ ಮಾಡಲಿಲ್ಲ?

ಒಮ್ಮೆ; ಹೊರಬಂದ ಮೇಲೆ, ಆ ಮೊದಲು ಕಂಡರಿಯದ ಸ್ವಾತಂತ್ರ್ಯ ದೊರೆತಾಗ, ಅದು ಅವಳ ತಲೆಗೇರಿತ್ತು. ಬಹಳ ಹೊತ್ತಿನವರೆಗೆ, ಹಾಗೆಯೇ ನಡೆಯುತ್ತಿದ್ದಂತೆಯೇ, ಆಮೇಲೆ ತಾನೇನು ಮಾಡಬೇಕೆಂಬುದರ ಆಲೋಚನೆಯೇ ಅವಳನ್ನಾವರಿಸಿಕೊಂಡಿತ್ತು. ಅದರೊಂ

ದಿಗೆಯೇ ತಾನು ಅದುವರೆಗೂ ಮರೆತೇಬಿಟ್ಟಂತಿದ್ದ ಸಂತಸದ ಭಾವನೆಯಲ್ಲಿಯೇ ಅವಳು ಮುಳುಗಿದಂತಿದ್ದಳು. ಅವಳು ಮತ್ತೆ ಯೋಚಿಸ ತೊಡಗಿದಳು. ''ನಾನೆಂಥ ಹುಚ್ಚಿಯಾಗಿದ್ದೆ! ನನ್ನ ಸಂತೋಷವು ಬೇರೆಯವರನ್ನು ಅವಲಂಬಿಸಲು ಆಸ್ಪದ ಕೊಟ್ಟಿದ್ದೆ! ಮೊಟ್ಟ ಮೊದಲು, ನನ್ನ ದಾಯಿ, ನಂತರ ನನ್ನ ತಾಯಿ, ನನ್ನ ತಂದೆ, ನನ್ನ ತಂಗಿಯರು - ಆಮೇಲೆ, ಕೊನೆಗೆ, ಸಾಲ್ವ! ಅಬ್ಬ! ಅದೆಂತಹ ಹೊಣೆ ಬೇರೆಯವರ ಮೇಲೆ ಹೊರಿಸಲು!...... ಸ್ವಂತ ಸಂತೋಷದ ಹೊಣೆ!.....'' ಅವಳಿಗೆ ಒಂದೇ ಒಂದು ಕ್ಷಣ ತನ್ನ ತಂಗಿಯರ ಮೇಲೆ ಕರುಣೆಯುಂಟಾಯಿತು. ತಂಗಿಯರು! ತಾನು ತಪ್ಪಿಸಿಕೊಂಡು ಬಂದ, ಆ ಅಂತಃಪುರದಲ್ಲಿಯೇ ಉಳಿದುಹೋಗಿರುವ ತಂಗಿಯರು! ಪುತ್ರ ಸಂತಾನವನ್ನು ಪಡೆಯುವ ಒಂದೇ ಒಂದು ಆಕಾಂಕ್ಷೆಯಿಂದ ಪತಿಯ ಅತಿಕಾಮುಕ ಆಕ್ರಮಣಗಳೆಲ್ಲವನ್ನೂ ಒಂದು ಬಗೆಯ ವಿರಕ್ತತೆಯಿಂದ ಸಹಿಸಿಕೊಳ್ಳುತ್ತಿದ್ದವರು! ಅಬ್ಬಾ! ತಾನಾದರೋ ಅಂತಹ ಅಧಃಪತನದಿಂದ ತಪ್ಪಿಸಿಕೊಂಡವಳು- ಸಭಾಮಧ್ಯದಲ್ಲಿಯೇ ಅದೇ ಪತಿಯನ್ನು ತಿರಸ್ಕರಿಸಿದುದರಿಂದ!

ಈಗ, ಪುನಃ ಅವಳ ಕಣ್ಣೆದುರು ಬಂದಿತು- ಅವನ ಅದೇ ಮುಖ, ತಾನಾಡಿದ ಮಾತುಗಳನ್ನು ಕೇಳಿದಾಗಿನ ಅವನ ಮುಖ ನೊಂದ, ಅವಮಾನಿತ ಹಾಗೂ ಕೊನೆಗೆ ಕ್ರೋಧ ಸಂತಪ್ತ! ಆ ಕ್ರೋಧವೋ! ಅದು ತನಗಿಂತ ಎಷ್ಟೋ ಶಕ್ತಿಶಾಲಿ ವ್ಯಕ್ತಿಯ ನೆರಳಲ್ಲಿ ಜೀವಮಾನವಿಡೀ ಕಳೆದ ಒಬ್ಬ ಅಸಹಾಯ ವ್ಯಕ್ತಿಯ ಕ್ರೋಧ! ಪಾಪ! ವಿಚಿತ್ರವೀರ್ಯ! ತನ್ನನ್ನು ತಾನೇ ರಾಜನೆಂದು ಕರೆದುಕೊಂಡವನು! ಆದರೂ ತನ್ನೊಳಗೇ ತಾನು, ತನಗಿಂತ ಎಷ್ಟೋ ದೊಡ್ಡವನಾದ ಮಲ-ಅಣ್ಣ ಭೀಷ್ಮನ ಕೈಗೊಂಬೆಯಾಗಿದ್ದವನೆಂದು ಅರಿತವನು! ಆದರೆ...... ಚಿತ್ರಾಂಗದನೂ ಸಹ! ಇವನಿಗಿಂತ ಎಷ್ಟೋ ಪಾಲು ಧೈರ್ಯಶಾಲಿಯಾಗಿದ್ದ, ವಿಶಿಷ್ಟ ವ್ಯಕ್ತಿ



ತ್ವವುಳ್ಳವನಾಗಿದ್ದ, ಇವನಿಗಿಂತ ಕೆಲ ಸಮಯ ಮೊದಲು ಸ್ವಲ್ಪ ಕಾಲದವರೆಗೆ ಮಾತ್ರ ರಾಜನಾಗಿದ್ದವ ...... ಅವನೂ ಕೂಡ ಭೀಷ್ಮನ ಕೈಗೊಂಬೆಯಾಗಿದ್ದವನೇ! ಅಕಸ್ಮಾತ್ ಅವಳಿಗೆ ಭೀಷ್ಮನ ''ತ್ಯಾಗ''ವೆಂಬ ''ಮಹಾ'' ಕಾರ್ಯದ ನಿಜಸ್ವರೂಪವು ಹೊಳೆಯಿತು. ಅಥವಾ ''ಅದು ಹಾಗೆಯೇ'' - ಅವಳೆಂದುಕೊಂಡಳು. ಸಿಂಹಾಸನದ ಮೇಲಿನ ತನ್ನ ಹಕ್ಕನ್ನೂ, ಸ್ವಂತ ಮಕ್ಕಳನ್ನು ಪಡೆಯುವ ಹಕ್ಕನ್ನೂ ತ್ಯಾಗ ಮಾಡುವುದರ ಮೂಲಕ, ತಂದೆ ಶಂತನು ಆ ಮೀನುಗಾರನ ಮಗಳು ಸತ್ಯವತಿಯನ್ನು ಮದುವೆಯಾಗುವ ಅವಕಾಶವನ್ನು ಕಲ್ಪಿಸಿಕೊಟ್ಟು, ಭೀಷ್ಮನು ಜಳ್ಳನ್ನು ತೂರಿ ಗಟ್ಟಿಯಾಗಿರುವುದನ್ನು ಕಬಳಿಸಿದ್ದ. ಅವರೆಲ್ಲರ ಮೇಲೂ ತನ್ನ ತಂದೆ, ಮಲತಾಯಿ ಹಾಗೂ ಅವರಿಬ್ಬರ ಮಕ್ಕಳು ತನ್ನ ಅಧಿಕಾರವನ್ನು ಸ್ಥಾಪಿಸಿದ್ದ. ಅಧಿಕಾರಮದದಿಂದ ಇತರರನ್ನು ಹೇಗೆ ಬಲಿಕೊಡುತ್ತಿರುವೆನೆಂಬುದರ ಪರಿವೆಯಿಲ್ಲದೇ, ಗರ್ವಿಷ್ಠನಾಗಿದ್ದ. ವಿಚಿತ್ರವೀರ್ಯನನ್ನು ಕಂಡಾಗ ಅವಳೆಣಿಸಿದ್ದು ''ನನ್ನನ್ನೂ ನನ್ನ ತಂಗಿಯರನ್ನೂ ಈ

ಪೆದ್ದನ ಹಾಸಿಗೆಯ ಸಂಗಾತಿಗಳನ್ನಾಗಿಸಲು ಎಳೆದುಕೊಂಡು ಬಂದಿರುವನಲ್ಲ! ಎಷ್ಟು ಧೈರ್ಯ! ಎಷ್ಟು ಧೈರ್ಯ ಇವನಿಗೆ!''

ಅವಳ ತಂಗಿಯರೋ! ಮೌನವಾಗಿಯೇ ಮಣಿದಿದ್ದರು. ಆದರೆ ತಾನು! ''ನಾನು ಈ ಮನುಷ್ಯನನ್ನು ಮದುವೆಯಾಗಲಾರೆ'' ಎಂದು ಸಿಟ್ಟಿನಿಂದ ಸಾರಿದ್ದಳು. ಮತ್ತು ಆಗ, ಈಗ ಯಾವುದು ಊಹಾತೀತವೆಂದು ತನಗೆನಿಸುತ್ತದೆಯೋ ಅದನ್ನೇ - ಅದನ್ನೇ ಮಾಡಿದ್ದಳು; ಅವರೇ ಮಾಡಿದ್ದ ಕಾನೂನುಗಳನ್ನು ತನ್ನ ಸಹಾಯಕ್ಕಾಗಿ ಉಪಯೋಗಿಸಿಕೊಂಡಿದ್ದಳು. ''ನಾನು ಆಗಲೇ ನನ್ನನ್ನು ಇಲ್ಲಿಗೆ ಕರೆತರುವ ಮೊದಲೇ, ಸೌಭದ ದೊರೆ ಸಾಲ್ವನನ್ನು ಆರಿಸಿದ್ದೆ. ಅವನಿಗೆ ನನ್ನನ್ನು ಒಪ್ಪಿಸಿಕೊಳ್ಳುವ ಭಾಷೆ ಇಟ್ಟುಕೊಂಡಿದ್ದೆ. ''ನಿನಗೆ ನನ್ನನ್ನು ಇಲ್ಲಿ ಕರೆತರಲು ಏನೂ ಹಕ್ಕಿಲ್ಲ.'' ಎಂದಿದ್ದಳು. ಸಭಾಪನ್ನ ತಲೆಗಳನೇಕವು ಅರೆಮನಸ್ಸಿನ ಒಪ್ಪಿಗೆ ಸೂಚಿಸುವಂತೆ ಅಲ್ಲಾಡಿದ್ದವು. ಅವುಗಳೆಡೆಗೆ ನೋಡುತ್ತಲೇ ಭೀಷ್ಮ ಅವಳನ್ನು ಹೋಗಗೊಟ್ಟಿದ್ದ. ಆಗ ಅವಳಿಗೆ ಅದೆಂಥ ಹರ್ಷದುನ್ಮಾದ! ಅವಳು ಗೆದ್ದಿದ್ದಳು! ಗೆಲವು ಅದೆಷ್ಟು ಸುಲಭವಾಗಿ ಬಂದಿತ್ತು!

ಆದರೆ ..... ಆದರೆ ಅವಳು ನಿಜವಾಗಿಯೂ ಮೂರ್ಖಳಾಗಿದ್ದಳು. ಆ ಗೆಲವು ಸ್ವಂಯವರ ಕಾಲಕ್ಕೆ ತನ್ನ ಜೀವಿತವು ತನ್ನ ಕೈಯಲ್ಲಿಯೇ ಇದೆಯೆಂಬ ನಂಬುಗೆಯಷ್ಟೇ ಭ್ರಾಂತಿಕಾರಕವಾಗಿತ್ತು. ಓ! ತಾನು ಯಾವಾಗ, ಹೇಗೆ, ಸಾಲ್ವನನ್ನು ಕುರಿತು ಕನಸು ಕಾಣತೊಡಗಿದ್ದುದು! ಅದೀಗ ಬಹಳ ಹಿಂದಿನ ಸಂಗತಿ ಹೇಗೆ ಪ್ರಾರಂಭವಾಯಿತೆಂಬುದೂ ಮರೆತುಹೋಗಿದೆ. ಆದರೆ ಇನ್ನೂ ನೆನಪಿರುವುದು ಸ್ವಂಯವರ ಹತ್ತಿರವಾಗುತ್ತಿದ್ದಂತೆ ಬೆಳೆಯುತ್ತಿದ್ದ ತನ್ನ ಕಾತರ! ಆಗ ತಾನೆಂದುಕೊಂಡಿದ್ದೇನು! ''ಈಗ ಈ ಅವಕಾಶ ನನ್ನ ಕೈಯಲ್ಲಿದೆ. ನಾನವನಿಗೆ ಮಾಲೆ ಹಾಕುತ್ತೇನೆ, ಅವನ ಮಡದಿಯಾಗುತ್ತೇನೆ. ಆಗ ಅವರಾರೂ 'ಬೇಡ ನೀನು ಹಾಗೆ ಮಾಡಲಾರೆ' ಎನ್ನಲಾರರು.'' ಜಗಮಗಿಸುತ್ತಿರುವ ಆ ಜನನಿಬಿಡ ಸಭೆಯನ್ನು ತನ್ನ ಹಿಂದೆ ಬರುತ್ತಿರುವ ತಂಗಿಯರೊಡನೆ ಪ್ರವೇಶಿಸುತ್ತಿರುವಾಗ, ಅವಳಿಗೆ ತನ್ನ ಕೈಯಲ್ಲಿದ್ದ ಮಾಲೆಯ ಮೃದು ಸ್ಪರ್ಶದ ಅರಿವು ಮಾತ್ರವೇ ಉಳಿದಿದ್ದುದು! ಓಹ್! ಆ ನಿಧಾನದ ನಡಿಗೆ, ನೆಲದಲ್ಲಿ ನೆಟ್ಟದಿಟ್ಟಿ- ಸಹಜವಾಗಿಯೇ ಎಂಬಂತಿರುವ ಆ ನಟನೆಯನ್ನು ನಟಿಸುವುದು ತನಗೆ ಅದೆಷ್ಟು ಕಷ್ಟವಾಗಿತ್ತು! ತಂಗಿಯರು ತಮ್ಮತಮ್ಮಲ್ಲಿಯೇ ಪಿಸುಗುಟ್ಟುತ್ತಿರುವುದನ್ನು ಅವಳು ಕೇಳಿಸಿಕೊಂಡೇ ಇರಲಿಲ್ಲ; ಅವಳಿಗೆ ಹಾಗೆಂದು ಭಾಸವಾಗಿತ್ತು. ಅಷ್ಟೆ! ಅವರಿಬ್ಬರೂ ಓರೆನೋಟದಿಂದ ರಾಜಕುಮಾರರನ್ನು ನೋಡುತ್ತಿದ್ದಾರೆಂಬುದೂ ಅವಳಿಗೆ ತಿಳಿದಿತ್ತು. ಆದರೆ ಆ ಗಂಡಸರೋ! ಅವರಿಗೇನು ಈ ಮೂವರನ್ನು ಓರೆನೋಟದಿಂದ ನೋಡಬೇಕಾದ ಅವಶ್ಯಕತೆ ಇರಲಿಲ್ಲವಲ್ಲ! ಅವರ ದಿಟ್ಟ ನೋಟಗಳು ತನ್ನನ್ನು ಛೇಧಿಸುತ್ತಿವೆಯೆಂದು ಅವಳಿಗೆ ಅನಿಸುತ್ತಿತ್ತು.

ಅಂದರೆ, ಈ ವಿಷಯಗಳ ಬಗ್ಗೆ ಅವಳಿಗೇನೂ ವಿಶೇಷವೆನಿಸಿರಲಿಲ್ಲವೆಂದಲ್ಲ! ಆದರೆ ಸಾಲ್ವನ ಹೆಸರು ಘೋಷಿತವಾಗುವುದನ್ನು ಕೇಳಲು ಅವಳು ಆತುರಳಾಗಿದ್ದಳಷ್ಟೆ! ಆದರೂ; ''ರಾಜಾ ಶಂತನುವಿನ ಮಗ ಬೀಷ್ಮ'' ಎಂಬ ಘೋಷಣೆಯನ್ನು ಕೇಳಿದೊಡನೆ ಅವಳು ತನ್ನ ಅನ್ಯಮನಸ್ಕತೆಯಿಂದ ಹಠಾತ್ತಾಗಿ ಹೊರಬಂದಿದ್ದಳು. ಭೀಷ್ಮ! ಜೀವನ ಪರ್ಯಂತ ಬ್ರಹ್ಮಚಾರಿಯೆಂದೆನಿಸಿಕೊಂಡ ಭೀಷ್ಮ! ಅವನೇಕೆ ಇಲ್ಲಿ! ಆ ಹೆಸರಿನ ಘೋಷಣೆಗೆ ಎದ್ದ ಅಟ್ಟಹಾಸದ ಅಲೆಗಳಲ್ಲಿ ಕೆಲವೇ ಕೆಲವು ಕ್ರುದ್ಧ ಪಿಸುನುಡಿಗಳು ಮುಳುಗಿಹೋಗಿದ್ದವು. ಆ ದೊಡ್ಡ ಗದ್ದಲದಲ್ಲಿಯೂ ಅಂಬಿಕೆ ಮುಸಿಮುಸಿ ನಗುತ್ತ ಅಂಬಾಲಿಕೆಗೆ, ''ಮಗುವೇ ಹೋಗು, ಅವನಿಗೆ ಮಾಲೆ ಹಾಕು'' ಎಂದಿದ್ದು ತನಗೆ ಕೇಳಿಸಿತ್ತು. ''ಓಹೋ ನನಗಲ್ಲ ಅವನು; ಅಂಬೆಗೆ. ಅವಳಲ್ಲವೆ ಜೇಷ್ಠೆ!'' ಅಂಬಾಲಿಕೆಯ ತಾತ್ಸಾರದ ನುಡಿಯನ್ನು ಕಡೆಗಣಿಸಿದ್ದಳು. ಏಕೆಂದರೆ ಅವ

ಳಾಗ ಭೀಷ್ಮನ ಮುಖದ ಮೇಲೆ ಒಡಮೂಡಿದ ಅವಮಾನಿತ ಅಹಂಭಾವ ಹಾಗೂ ಕ್ರೋಧಗಳ ಸಮ್ಮಿಳನವನ್ನು ನೋಡುವುದರಲ್ಲಿ ಮಗ್ನಳಾಗಿದ್ದಳು. ಆತನಲ್ಲಿ ಸಹಾನುಭೂತಿ ತೋರಿದ್ದಳು. ಹೌದು, ಭರ್ತ್ಸನೆ ಹಾಗೂ ಅವಮಾನಗಳನ್ನು ಸಹಿಸಿಕೊಳ್ಳುವುದು ಬಲು ಕಷ್ಟ! ಆದರೆ ಆ ಬಗೆಯ ಸಹಾನುಭೂತಿಯ ಕ್ಷಣಗಳು ಪುನಃ ಮತ್ತೆಂದೂ ಉದ್ಭವಿಸಿರಲಿಲ್ಲ. ಏಕೆಂದರೆ ಮುಂದಿನ ಕೆಲ ಸಮಯದಲ್ಲಿಯೇ, ಅವಳ ಜೀವನದ ಎಲ್ಲ ಭಾವನೆಗಳನ್ನೂ ತೊಡೆದು ಹಾಕಿದ ಆ ''ದ್ವೇಷ'' ಹುಟ್ಟಿಬಿಟ್ಟಿತ್ತು. ಮೊದಮೊದಲಿಗೇನೋ· ಬರೀ ಕ್ರೋಧವೇ ತುಂಬಿಕೊಂಡಿತ್ತು. ಆತನು ತನ್ನ ರಥದಲ್ಲಿ ಆ ಮೂವರನ್ನು ಹಾಕಿಕೊಂಡು ಹೊರಟಾಗಲೂ, ತಾವು ಮೂವರು ಅದರಲ್ಲಿ ಕುಪ್ಪೆಯಾಗಿ ಬಿದ್ದಿದ್ದಾಗಲೂ ಬರೀ ಕ್ರೋಧವೇ ತುಂಬಿಕೊಂಡಿತ್ತು. ಅಂಬಿಕೆಯು ಕಣ್ಣೀರು ಸುರಿಸುತ್ತಿದ್ದಳು. ಅಂಬಾಲಿಕೆಯು ವಿಹ್ವಲೆಯಾಗಿದ್ದಳು; ಆದರೆ ತಾನು! ಕೋಪಾತಿಶಯದಿಂದ ನಡುಗುತ್ತ ತಾನು''ನಿಲ್ಲಿಸು, ಮುದಿಯನೇ ನಿಲ್ಲಿಸು!'' ಎಂದು ಕೂಗಿದ್ದಳು. ಅವನು ಅವಳನ್ನು ಗಣನೆಗೇ ತಂದುಕೊಂಡಿರಲಿಲ್ಲ. ತಾನು ಉದ್ದೇಶಪೂರಿತವಾಗಿಯೇ ಉಪಯೋಗಿಸಿದ ''ಮುದಿಯ''ನೆಂಬ ಪದವೂ ಅವನನ್ನು ವಿಚಲಿತಗೊಳಿಸಿಲಿಲ್ಲ. ಗಾಳಿಗೆ ಹಾರಾಡುತ್ತಿರುವ ತನ್ನ ಕೂದಲುಗಳೊಡನೆ ಅವನು ಮುಂದೆ ಮುಂದೆ ಧಾವಿಸಿದ್ದ.

ಆಗ.... ಆಗ ಅವಳಲ್ಲಿಯ ಕೋಪ ಭುಗಿಲೆದ್ದಿತ್ತು. ತನ್ನ ಕೋಪವನ್ನು ಗಣನೆಗೆ ತಂದುಕೊಳ್ಳದಿರುವುದರ ಮೂಲಕ ಅವನು ಅದಕ್ಕೆ ಬೆಲೆಯನ್ನೇ ಕೊಟ್ಟಿಲ್ಲವೆಂಬುದು ಅವಳಿಗೆ ತಿಳಿದಿತ್ತು. ಅವಳು! ಬರೀ ಒಬ್ಬ ಹೆಂಗಸು! ಉಪೇಕ್ಷೆಯಿಂದ ಕಡೆಗಣಿಸಲ್ಪಡಬೇಕಾದವಳು! ಅವಳ



ಇಚ್ಛೆ! ಅವಳ ನಿರ್ಧಾರ! ಇವೆಲ್ಲವುಗಳನ್ನೂ ಅಪ್ರಸ್ತುತಗಳೆಂದು ಬದಿಗೊತ್ತಬಹುದು! ಕೇವಲ ಅವಳು ಹೆಂಗಸಾಗಿದ್ದರಿಂದ. ಆದರೆ ಅವರನ್ನು ಹಿಂಬಾಲಿಸುತ್ತಿದ್ದ ಸಾಲ್ವನಿಂದ ಹೊರಟ ಒಂದು - ಒಂದೇ ಒಂದು - ಕೂಗು ಭೀಷ್ಮನು ಹಠಾತ್ತಾಗಿ ರಥವನ್ನು ನಿಲ್ಲಿಸುವಂತೆ ಮಾಡಿತ್ತು - ಆಗ ಉಂಟಾದ ಗಡಗಡ ಶಬ್ದದೊಂದಿಗೆ ರಥವು ಮುಗ್ಗರಿಸಿದಾಗ ಅವಳ ತಲೆಯಲ್ಲಿ ಕರ್ಕಶತೆಯ ಕರಕೆಯುಂಟಾಗಿತ್ತು.ಆಗಲೇ ತಲೆಯು ಯಾವುದಕ್ಕೋ ಅಪ್ಪಳಿಸಿದಾಗ ಕಣ್ಣುಕತ್ತಲಿಟ್ಟು ಕೆಲ ಹೊತ್ತಿನ ನಂತರ ನೋವುಂಟಾಗಿತ್ತು. ಆಗ ಕಂಡುದೇನು! ಪರಾಜಿತನಾದ ಸಾಲ್ವ ತಲೆ ತಗ್ಗಿಸಿಕೊಂಡು ಮರಳಿ ಹೋಗುತ್ತಿದ್ದುದು! ಮೆಲ್ಲಗೆ, ಬಹು ಮೆಲ್ಲಗೆ ರೋಧಿಸುತ್ತಿರುವ ಅಂಬಿಕೆ! ಇಷ್ಟಾದರ। ಇವರೊಂದಿಗೆ ಒಂದು ಮಾತನ್ನೂ ಆಡದೇ ಮತ್ತೆ ಲಗಾಮು ಹಿಡಿದುಕೊಂಡು ರಥ ನಡೆಸುತ್ತಿದ್ದ ಭೀಷ್ಮ!

ಒಬ್ಬ ಗಂಡಸಿನ ಪರಾಜಯಕ್ಕೂ ಕೂಡ ಪರಿಣಾಮಗಳು ಇವೆ. ಅವಳಿಗೀಗ ಅರ್ಥವಾಗಿತ್ತು - ತಮ್ಮ ಮೂವರ ಮೇಲೆಯೂ ಭೀಷ್ಮನ ಹಕ್ಕು ಸ್ಥಾಪಿತವಾಗಿತ್ತೆಂದು - ಅಥವಾ ವಿಚಿತ್ರವೀರ್ಯನ ಹಕ್ಕು! (ಅವನ ಪರವಾಗಿಯೆ ಅಲ್ಲವೆ ಭೀಷ್ಮನು ಹೋರಾಡಿದ್ದು!)

''ಈ ಕೈಲಾಗದ ಹೇಡಿ!.... ಹುಡುಗು ಪ್ರಾಣಿ ....ನಾನು, ಕಾಶೀ ರಾಜಕುಮಾರಿ, ಅದು ಹೇಗೆ ಮದುವೆಯಾಗಬಲ್ಲೆ!'' .... ತಿರಸ್ಕಾರದ ನಗು ನಕ್ಕಿದ್ದಳು, ತಾನಾಗ! ಆ ''ಹುಡುಗು ಪ್ರಾಣಿ'' ಕಣ್ಣು ಕಣ್ಣು ಬಿಟ್ಟಿತ್ತು. ಆದರೆ ಭೀಷ್ಮ! ಅವನು ಕೇಳಿಸಿಕೊಂಡಿದ್ದ, ತನ್ನಲ್ಲಿಯೂ ತನ್ನ ಅಧಿಕಾರದಲ್ಲಿಯೂ ನಿಸ್ಸಂದೇಹತೆಯನ್ನು ಹೊಂದಿದ್ದ ಭೀಷ್ಮ! ಬಹುಶಃ ಅವನೆಣಿಸಿದ್ದುದು- ಅವಳು ಶೀಘ್ರವೇ ಮತ್ತೆ ತನ್ನ ಚಿತ್ತಸ್ವಾಸ್ಥ್ಯವನ್ನು ಪಡೆದುಕೊಳ್ಳುವಳೆಂದು! ಹೌದು, ತಾನಾದರೂ ಎಲ್ಲಿಗೆ ಹೋಗಬಹುದಾಗಿತ್ತು? ''ನನ್ನನ್ನು ಸಾಲ್ವನೆಡೆಗೆ ಕಳುಹಿಸಿರಿ. ಅವನೇ ನಾನು ಆರಿಸಿಕೊಂಡ ಗಂಡ!'' - ಅವಳು ಹೇಳಿದ್ದಳು.

ಆಗ ..... ಆಗ, ವಿಧಿಯ ಅಣಕವೋ ಎಂಬಂತೆ, ಯಾವ ಕಾನೂನುಗಳನ್ನು ತನ್ನ ರಕ್ಷಣೆಗಾಗಿ ಅವಳು ಪ್ರತಿಪಾದಿಸಿದ್ದಳೋ ಅದೇ ಕಾನೂನುಗಳು ಅವಳ ವಿರುದ್ಧ ಸಿಡಿದೆದ್ದಿದ್ದವು.

ಸಾಲ್ವ ನುಡಿದಿದ್ದ, ''ನಿನ್ನನ್ನು ನಾನು ಮದುವೆಯಾಗಲಾರೆ. ಯುದ್ಧದಲ್ಲಿ ನಾನು ಭೀಷ್ಮನಿಂದ ಪರಾಜಿತನಾದೆ. ನೀನೀಗ ಅವನಿಗೆ ಸೇರಿದವಳು. ನಿನ್ನನ್ನು ನಾನು ಮದುವೆಯಾದರೆ ನನಗೆ ಅಪಕೀರ್ತಿ.''

ಆಗವನ ಮುಖ ತನಗೆ ಹೇಗೆ ಕಂಡಿತ್ತು! ಸಿಡುಕಿದ, ಉದ್ವಿಗ್ನನಾದ ಹುಡುಗನೊಬ್ಬನ ಮುಖ! ಅಯ್ಯೋ! ತಾನು ಆವರೆಗೆ ಕನಸು ಕಾಣುತ್ತಿದ್ದುದು ಈ ಮುಖವನ್ನು ಕುರಿತೇ!

ಮರಳಿ ಭೀಷ್ಮನೆಡೆಗೆ ಸಾಗುತ್ತಿದ್ದಾಗ .... ಅವಳ ಪಲ್ಲಕ್ಕಿಯ ಸುತ್ತಲೂ ಕವಿದ ಧೂಳು ಅವಳನ್ನಾವರಿಸಿಕೊಂಡ ಅವಮಾನದ ಆವರಣವೆಂಬಂತೆ ಭಾಸವಾಗಿತ್ತು - ಮರ್ಯಾದೆ, ಅವ

ಮರ್ಯಾದೆ, ಉಚಿತ, ಅನುಚಿತ - ಈ ಎಲ್ಲ ಪದಗಳಿಗೆ ಅರ್ಥವಿದೆಯೆ! ಇವೆಲ್ಲವುಗಳೂ ತಮ್ಮ ನಿಜವಾದ ಭಾವನೆಗಳನ್ನು ಮರೆಮಾಚಲು ಈ ಗಂಡಸರು ಉಪಯೋಗಿಸುವ ಪದಗಳ ಲ್ಲವೆ! ಭೀಷ್ಮನಿಗೆ ಕ್ರೋಧ! ವಿಚಿತ್ರವೀರ್ಯನಿಗೆ ಅಗೌರವ, ಮತ್ತೀಗ ಸಾಲ್ವನಿಗೆ ಅವಮಾನ! ಈಗೆಲ್ಲಿದೆ ಮರ್ಯಾದೆ, ಅವಮರ್ಯಾದೆ!

ಆ ಹುಡುಗ! ಕಣ್ಣಲ್ಲಿ ವಿಚಿತ್ರವಾದ ಗೆಲವನ್ನು ಕುಣಿಸುತ್ತ ಕೇಳಿದ್ದ!''ಸೌಭದ ರಾಜ ನಿನ್ನನ್ನು ನಿರಾಕರಿಸಿದನೆ? ಆದುದರಿಂದ ನೀನು ಮತ್ತೆ ನನ್ನಲ್ಲಿಗೆ ಬಂದೆಯಾ? ಆದರೆ ನೀನು ನನ್ನನ್ನು ವರಿಸಲಾರೆ. ನೀನು ಬೇರೆಯವರನ್ನು ಪ್ರೀತಿಸಿರುವಾಗ ನಾನು ಹೇಗೆ ನಿನ್ನನ್ನು ವರಿಸಲಿ?''

ಆಗ ಮತ್ತೆ ತಲೆಗಳಲ್ಲಾಡಿದ್ದವು. ''ಹೌದು ಅವನು ಹೇಳುವುದು ಉಚಿತ. ಅವನು ಹೇಳುತ್ತಿರುವುದು ಗೌರವಾನ್ವಿತ!''

ಉಚಿತ! ... ಗೌರವಾನ್ವಿತ! ಅದು ಹೇಗೆ ಈ ಪದಗಳು ಅವಳನ್ನು ಸಿಟ್ಟಿಗೆಬ್ಬಿಸಿದ್ದವು! ಅವಮಾನಿತನಾದ ಹುಡುಗನೊಬ್ಬನ ತೀರ ಕ್ಷುಲ್ಲಕ ರೀತಿಯ ಸೇಡು ಅದಾಗಿತ್ತು! '' ಇಷ್ಟೂ ಗೊತ್ತಾಗುವುದಿಲ್ಲವೆ ಇವರಿಗೆ!'' ಅವಳು ತಿರಸ್ಕಾರದಿಂದ ಯೋಚಿಸುತ್ತ ಆಶ್ಚರ್ಯ ಪಟ್ಟಿದ್ದಳು. ಅರ್ಥ ಶೂನ್ಯವಾದ ಆ ಶಬ್ದವ್ಯೂಹದಿಂದ ಭೇದಿಸಿಕೊಂಡು ಹೊರಬರುವ ಅದಮ್ಯ ಆಕಾಂಕ್ಷೆಯಿಂದ ಅವಳು ಭೀಷ್ಮನನ್ನು ಕೇಳಿದ್ದಳು.

ಹಾಗಾದರೆ ನೀನೇ ನನ್ನನ್ನು ಮದುವೆಯಾಗು. ನನಗೆ ಈ ಅವಸ್ಥೆಯನ್ನು ತಂದವನು ನೀನೆ. ಆದುದರಿಂದ ನೀನೇ ಇದನ್ನು ಸರಿಪಡಿಸು.''

ಒಂದೇ ಒಂದು ಕ್ಷಣ ಅವನ ಕಣ್ಣುಗಳಲ್ಲಿ ಏನನ್ನೋ ಕಂಡಿದ್ದಳು ಅವಳು. ಭಯ? ಯಾವುದರ ಭಯ? .... ಮರುಕ್ಷಣದಲ್ಲಿಯೇ ತೆರೆಯೆಳೆಯಲ್ಪಟ್ಟಿತ್ತು. ವಿಮರ್ಶಾತೀತವಾದ, ಭಾವನಾರಹಿತವಾದ, ಕಣ್ಣುಗಳಿಂದ ಅವನು ಅವಳೆಡೆಗೆ ನೋಡಿದ್ದ.

''ನನ್ನ ಬ್ರಹ್ಮಚರ್ಯ ವ್ರತವನ್ನು ನೀನು ಮರೆತಂತೆ ತೋರುತ್ತದೆ. ನಾನದನ್ನು ಭಂಗ ಮಾಡಲಾರೆ. ನನಗೆ ಅದು ಅಗೌರವ.''

ಮುಖವಾಡವು ಒಂದೇ ಒಂದು ಅತಿ ಸೂಕ್ಷ್ಮವಾದ ಕ್ಷಣಮಾತ್ರ ಕಳಚಿಕೊಂಡಿತ್ತು. ಇನ್ನೆಂದಿಗೂ ಹಾಗಾಗಲಾರದು. ಅವನು ಮತ್ತೆ ಮೊದಲಿನಂತಾಗಿದ್ದ. ಕಾಮನೆಗಳು ಹಾಗೂ ಭಾವನೆಗಳಿಗೆ ಬದಲಾಗಿ ವಿಚಾರಗಳು ಹಾಗೂ ಶಬ್ದಗಳು ಇರುವವೆಂಬ ತಿಳುವಳಿಕೆಯಲ್ಲಿ ಅವುಗಳನ್ನೇ ತನ್ನಲ್ಲಿ ತರುಕಿಕೊಂಡ. ತನ್ನನ್ನು ತಾನೇ ಮೋಸಗೊಳಿಸಲು ಯತ್ನಿಸುತ್ತಿರುವ, ಒಂದು ಬೊಂಬೆ! ಆಗವಳಿಗೆ ಅರ್ಥವಾಗಿತ್ತು - ಅವನೂ ಕೂಡ ಸಿಕ್ಕಿಹಾಕಿಕೊಂಡವನೆಂದು! - ಭಾವನೆಗಳ ಜಾಲದಲ್ಲಿ ತಾನು ಸಿಕ್ಕಿಹಾಕಿಕೊಂಡಂತೆ ಶಬ್ದಗಳ ಜಾಲದಲ್ಲಿ ಭೀಷ್ಮ ಸಿಕ್ಕಿಹಾಕಿಕೊಂಡಿದ್ದಾನೆ. ತನ್ನ ಸುತ್ತ ನೇಯ್ದ ಬಲೆಯಿಂದ ತಾನು ಹೇಗೆ ಹೊರಗೆ ಬರಲಾರಳೋ ಹಾಗೆಯೇ ಅವನೂ ಸಹ! ಹೀಗಿರುವಾಗ ಅವನೊಂದಿಗೆ ತನ್ನ ವಿಚಾರವಿನಿಮಯ ಹೇಗೆ ಸಾಧ್ಯ? ತಾವಿಬ್ಬರೂ ಪರಸ್ಪರರನ್ನು ಅರಿತುಕೊಳ್ಳುವುದು ಅಸಾಧ್ಯ ಅಸಂಭವ!

ಅನಂತರ ಅವಳಿಗಾಗಿ ಇನ್ನೇನೂ ಉಳಿದಿರಲಿಲ್ಲ..... ದ್ವೇಷವೊಂದನ್ನು ಬಿಟ್ಟು! ಜೀವನದಲ್ಲಿ ಬೇರಿನ್ನಾವುದೂ ತುಂಬಿರಲಾರದಷ್ಟು ಆ ದ್ವೇಷ - ಭೀಷ್ಮನ ಬಗೆಗೆ - ಅವಳಲ್ಲಿ ತುಂಬಿಕೊಂಡಿತ್ತು. ಅದರೆದುರಿಗೆ ಸಾಲ್ವನ ಬಗೆಗಿನ ಅವಳ ಪ್ರೀತಿ ಹುಡುಗಾಟದ ಹುಚ್ಚು ಕನಸಾಗಿತ್ತು.

''ನೀನು ನನ್ನ ಸರ್ವನಾಶ ಮಾಡಿರುವೆ. ನಾನು ನಿನ್ನೊಂದಿಗೆ ಹೋರಾಡುವೆ'' - ಭೀಷ್ಮನಿಗೆ ಅವಳು ನುಡಿದಿದ್ದಳು.


''ನಾನು ಹೆಂಗಸರೊಡನೆ ಕಾದುವುದಿಲ್ಲ.''

ಓ ದೇವರೆ! ಇದೆಂಥ ಇದ್ದೂ ಇಲ್ಲದಿರುವಿಕೆ! ಮಾತನಾಡಿಯೂ ಆ ಮಾತುಗಳಿಗೆ ಬೆಲೆಯಿಲ್ಲದಿರುವಿಕೆ! ಹಿಂದೆ ಚಿಕ್ಕಂದಿನಲ್ಲಿ ಯಾವುದರ

ವಿರುದ್ಧ ಪ್ರತಿಭಟಿಸಿದ್ದಳೋ ಅದೇ ಅಂತಃಪುರದಲ್ಲಿ ಮತ್ತೆ ಬಂದಿಯಾದಂತೆ ಭಾಸವಾಗಿತ್ತು.

ಈಗ ..... ತಾನು ಸಾಕಷ್ಟು ದೂರ ನಡೆದಿರುವೆನೆಂಬ. ಅನಿಸಿಕೆಯೊಂದಿಗೆ ಅವಳು ತಡೆದಳು; ಈ ಪ್ರಯಾಣ ತನ್ನ ಜೀವನದ ಕೊನೆಯ ಪ್ರಯಾಣವೇ ಆಗಬಹುದೆಂಬ ಅರಿವಿನೊಂದಿಗೆ, ತನ್ನ ಮಟ್ಟಿಗೆ ಇನ್ನೇನೂ ಉಳಿದಿಲ್ಲವೆಂಬ ಅರಿವೂ ಉಂಟಾಗಿತ್ತು. ಮೊದಲ ತಾರೆ ಮೂಡುವ ಮೊದಲು ಬರಿದೋ ಬರಿದಾಗಿರುವ ಆಕಾಶದಂತೆ ಅವಳ ಮನಸ್ಸು ಬರಿದಾಗಿತ್ತು. ತನ್ನ ತನ್ನತನವನ್ನೇ ಆವರಿಸಿದ್ದ ಆ ದ್ವೇಷ ..... ಅದು ಕೂಡ ಈಗ ಇಲ್ಲವಾಗಿತ್ತು. ಅವಳು ಮತ್ತೆ ಅದನ್ನ ತನ್ನ ಮನಸ್ಸಿನಲ್ಲಿ ತುಂಬಲೆತ್ನಿಸಿದಳು. ಆದರೆ .... ಆದರೆ ಅದು ಕೂಡ ಬಹು ಹಿಂದೆಯೇ ಉಳಿದುಬಿಟ್ಟಿತ್ತು.

ಇಲ್ಲ! ಇನ್ನೇನೂ ಉಳಿದಿರಲಿಲ್ಲ! - ತನ್ನತನವೊಂದನ್ನು ಬಿಟ್ಟು ಇನ್ನೇನೂ ಉಳಿದಿರಲಿಲ್ಲ! ಆದರೆ .... ತಾನಾರು? ಕಾಶೀರಾಜನ ಮಗಳು! ಕಾಶೀರಾಜಕುಮಾರಿ ಅಂಬಾ!! ಹಿಂದೊಮ್ಮೆ ಈ ಶಬ್ದಗಳಲ್ಲಿ ಅಭಿಮಾನ ಅಡಕವಾಗಿತ್ತು. ಈಗ .... ಈಗ ಅವೇ ಶಬ್ದಗಳಿಗೆ ತನ್ನೊಂದಿಗೆ ಯಾವ ಬಗೆಯ ಸಂಪರ್ಕವೂ ಉಳಿದಿರಲಿಲ್ಲವೆಂಬುದರ ಅರಿವು ಅವಳಿಗೆ ಆಶ್ಚರ್ಯಘಾತವನ್ನುಂಟುಮಾಡಿತು. ಈಗವಳು ಮಗಳೂ ಅಲ್ಲ! ಹೆಂಡತಿಯೂ ಅಲ್ಲ!! ತಾಯಿಯೂ ಅಲ್ಲ!!! ಹಾಗಾದರೆ ತಾನಾರು? ''ಅಂಬಾ .... ಅಂಬಾ .... ಅಂಬಾ!''.... ಆ ಹೆಸರು ದೂರದಿಂದೆಲ್ಲೋ ಪ್ರತಿಧ್ವನಿಸಿದಂತಾಯಿತು. ಮುಂದೆ ಮುಂದೆ ಓಡುತ್ತಿರುವವರಾರು? ಹಿಂದಿನಿಂದ ಕರೆಯುತ್ತಿರುವವರಾರು? ಓಡುತ್ತಿರುವವಳು ಅಂಬೆಯೆ? ಅಥವಾ ಕರೆಯುತ್ತಿರುವವಳು ಅಂಬೆಯೆ? .... ಬಹು ಪ್ರಯಾಸದಿಂದ ಈ ಎಲ್ಲ ವಿಚಾರಗಳನ್ನವಳು ತೊಡೆದು ಹಾಕಿದಳು. ಈಗ ... ಇಷ್ಟು ತಡವಾಗಿ ... ಅಂಥ ವಿಷಯಗಳ ಬಗ್ಗೆ ವಿಚಾರಿಸುವುದು ಅನವಶ್ಯಕ. ಅಲ್ಲದೇ ಅವಳಿಗೀಗ ತುಂಬಾ ಆಯಾಸವಾಗಿತ್ತು. ಆ ಆಯಾಸವೇ ಈಗವಳಿಗೆ ತಾನು ಕೊನೆಯವರೆಗೂ ಕಳೆದುಕೊಂಡಿದ್ದೇನೆಂದು ಭಾವಿಸಿದ್ದ. ಶಾಂತಿಯನ್ನು ತಂದುಕೊಟ್ಟಿತು. ಈಗ ತಾನೇನು ಮಾತಾಡಬೇಕೆಂಬ ಆಲೋಚನೆಯು ಅವಳಲ್ಲಿ ಮೂಡಿದಾಗ ಪ್ರಶಾಂತವಾದ ನೀರಿನಲ್ಲಿ ಒಂದು ಚಿಕ್ಕ ರೆಂಬೆ ಬಿದ್ದಂತಾಯಿತು. ಆಗ ಹೊರಪೊ



ಮ್ಮಿದ ಅಲೆಗಳು ಅವಳನ್ನು ಮುತ್ತಿಕೊಂಡವು. ಆದರೂ ಯಾವುದೇ ಬಗೆಯ ಗೊಂದಲವಿಲ್ಲ! ಆ ಅಲೆಗಳನ್ನು ಕೂಡ ತನ್ನಲ್ಲಿ ಅಡಗಿಸಿಕೊಂಡ ಸ್ಥಿರತೆ, ಶಾಂತಿ ಅದಾಗಿತ್ತು.

ಹೌದು, ಈಗ ಸರಿಯಾದ ಸಮಯ ಸನ್ನಿಹಿತವಾಗಿದೆ - ಸ್ಥಳವೂ ಸಹ! ಮಾನವರಿಂದ ಸಾಕಷ್ಟು ದೂರವೇ ಬಂದಿದ್ದಾಳೆ. ಕಾಡಿನಲ್ಲಿಯ ಆ ಕಪ್ಪು ಮನುಷ್ಯರನ್ನು ಕಂಡಾಗಿನಿಂದ ಗಂಟೆಗಳೇ ಕಳೆದಿವೆ. ಅವಳೆಡೆಗೆ ಅವರು ವಿಚಿತ್ರವಾಗಿ ನೋಡಿದ್ದರು. ಆ ನೋಟ ಅವಳ ಒಂಟಿತನವನ್ನು ಹೆಚ್ಚಿಸಿತ್ತು. ಅವರ ಪ್ರಪಂಚಕ್ಕೆ ಅವಳು ಸೇರಿರಲಿಲ್ಲ! ತಾನು ಹಿಂದೆ ಬಿಟ್ಟು ಬಂದ ಪ್ರಪಂಚಕ್ಕೂ ಅವಳು ಸೇರಿರಲ್ಲಿ! - ಆ ಪ್ರಪಂಚ! ತನ್ನ ಪ್ರಕಾರ, ಅರ್ಥಶೂನ್ಯವಾದ ನಿಯಮಾವಳಿಗನುಸಾರವಾಗಿ ಬದುಕು ಸಾಗಿಸುತ್ತಿರುವ ಆ ಪ್ರಪಂಚ! ಆ ಎಲ್ಲಾ ನಿಯಮಾವಳಿಗಳನ್ನವಳು ಭಂಗಿಸಿದ್ದಳು. ಆದರೇನು! ಹಾಗೆ ಮಾಡಿದ್ದುದರಿಂದ ಕೂಡ ಅವುಗಳ ಆಟದಲ್ಲಿಯ ಬೊಂಬೆಯಾಗುವುದು ತನಗೆ ತಪ್ಪಿರಲಿಲ್ಲ!

''ಆಗಲಿ'' - ಎದ್ದು ಒಣಗಿದ ಕಟ್ಟಿಗೆಯ ತುಂಡುಗಳನ್ನು ಆರಿಸುತ್ತಿದ್ದಂತೆಯೇ ಅವಳು ಯೋಚಿಸಿದಳು. - ''ಆ ಬೊಂಬೆಯನ್ನು ನಾನೇ ಆಹುತಿ ಕೊಡುತ್ತೇನೆ.'' ಆ ಕಾರ್ಯ ತನ್ನದೇ ಆಗಿರುತ್ತದೆ. ಕಡೆಯ ಪಕ್ಷ, ಇದಾದರೂ ಅವಳು ತಾನಾಗಿಯೇ ಆರಿಸಿಕೊಂಡ, ತನಗೆ ಇಷ್ಟ ಬಂದ ರೀತಿಯಲ್ಲಿ, ತಾನು ಇಷ್ಟ ಪಟ್ಟ ಸಮಯದಲ್ಲಿ ಮಾಡುವ ಕಾರ್ಯ!

ತನ್ನ ಸುತ್ತಲೂ ಒಣಗಿದ ಕಟ್ಟಿಗೆಗಳನ್ನು ಸರಿಯಾಗಿ ಜೋಡಿಸುತ್ತಿರುವಾಗ, ಮಧ್ಯಮಧ್ಯ ತರಗೆಲೆಗಳನ್ನು ಹಾಕುತ್ತಿರುವಾಗ, ಈ ಆಲೋಚನೆಗಳು ಅವಳನ್ನು ಆವರಿಸಿಕೊಂಡಿದ್ದವು. ಈಗ ಪುನಃ ಸಣ್ಣದೊಂದು ಕ್ಲೇಶವು ಬೃಹದಾಕಾರ ತಾಳಿತು. ಚೂಪಾಗಿರುವ ರೆಂಬೆಗಳು ಅವಳ ಶರೀರವನ್ನು ಚುಚ್ಚತೊಡಗಿದವು. ತಲೆಗೂದಲು ಎಲ್ಲಿಯೋ ಸಿಕ್ಕಿಹಾಕಿಕೊಂಡಿತು. ಈ ಚಿಕ್ಕ ತೊಂದರೆಗಳಿಂದ ತಪ್ಪಿಸಿಕೊಳ್ಳುವ ಆತುರದಲ್ಲಿ ಅವಳು ಬೆಂಕಿಯನ್ನಂಟಿಸುವ ಕಾರ್ಯಕ್ಕೆ ಉದ್ಯುಕ್ತಳಾದಳು.

ಒಂದು ಕಿಡಿ ... ಒಂದು ಸಣ್ಣ ಜ್ವಾಲೆ .... ಸಹಸಾ ಅವಳು ಜ್ವಾಲೆಗಳಿಂದ ಆವೃತಳಾದಳು. ತಾನು ಪುನಃ ಬಂದಿಯಾದೆನೆಂದು ತಿಳಿದಾಗ ಅವಳು ಕಂಗೆಟ್ಟಳು. ಆದರೆ .... ಹೋಗುವುದಾದರೂ ಎಲ್ಲಿ?

ಅವಳು ನೋಟಗಳ ವಿರುದ್ಧ ಕಣ್ಣುಗಳನ್ನು ಮುಚ್ಚಿಕೊಂಡಳು. ಧ್ವನಿಗಳ ವಿರುದ್ಧ ಕಿವಿಗಳನ್ನು ಮುಚ್ಚಿಕೊಂಡಳು. ಭಯ ... ಶಂಕೆಗಳ ವಿರುದ್ಧ ಮನಸ್ಸನ್ನೇ ಮುಚ್ಚಿಕೊಂಡಳು - ಶೂನ್ಯದೊಡನೆ ಶೂನ್ಯವಾದಳು.

ಬೇಸಿಗೆಯ ಬಿರುಬಿಸಿಲಿಗೆ ಒಣಗಿದ ಕಟ್ಟಿಗೆ ಬಲವಾಗಿ ಉರಿಯುತೊಡಗಿತು. ಜ್ವಾಲೆಗಳು ತನ್ನನ್ನು ತಟ್ಟುವ ವರೆಗೂ ಅವಳು ಶಾಂತವಾಗಿದ್ದಳು. ನಂತರ ಚೀತ್ಕರಿಸತೊಡಗಿದಳು. ತಾನು ಕೋಪಾತಿಶಯದಿಂದ ತಿರಸ್ಕರಿಸಿದ್ದ ಈ ಲೋಕದೊಂದಿಗಿನ ಕೊನೆಯ ಸೂಕ್ಷ್ಮ ಸಂಬಂಧವೋ ಎಂಬಂತಹ ಕರ್ಕಶವಾದ, ಯಾತನಾಭರಿತ, ವಿಹ್ವಲ ಚೀತ್ಕಾರಗಳು!

ಕೆಲ ಹೊತ್ತಿನಲ್ಲಿಯೇ ಚೀತ್ಕಾರಗಳು ಶಾಂತವಾದವು. ಬಿರಿಯುವ ಶಬ್ದಗಳು ನಿಂತವು. ಮತ್ತೆ ಎಲ್ಲೆಲ್ಲಿಯೂ ನಿಶ್ಶಬ್ದ. ●


ಬಿಲ್ಲು ಬಾಣ, ಕತ್ತಿ, ಗದೆ

ದೂರದರ್ಶನದಲ್ಲಿ ರಾಮಾಯಣ ಮಹಾಭಾರತ ಪ್ರಸಾರದಿಂದಾಗಿ ಪ್ರಾಚೀನ ಶಸ್ತ್ರಾಸ್ತ್ರಗಳ ಶೌರ್ಯ ಗಮನ ಸೆಳೆಯುವಂತಾಯಿತು. ಊರೂರಿನಲ್ಲಿ ಮಕ್ಕಳು ಬಿಲ್ಲು ಬಾಣಗಳನ್ನು ಹೂಡಿ ಹೆದರಿಕೆಯನ್ನೇ ಹುಟ್ಟಿಸಿದರು. ಕೆಲವರು ಕಣ್ಣು ಕಳೆದುಕೊಂಡ ವರದಿಗಳು ಬಂದವು. ನಮಗೆಲ್ಲ ತಿಳಿದಿರುವಂತೆ ರಾಮಾಯಣದ ಶ್ರೀರಾಮ ಹಾಗೂ ಮಹಾಭಾರತದ ಅರ್ಜುನ ಬಿಲ್ಲುಗಾರಿಕೆಯ ಟೂರ್ನಮೆಂಟಿನಲ್ಲಿಯೇ ಸುಂದರ ಸಂಗಾತಿಗಳನ್ನು ಪಡೆದದ್ದು.

ಬಳಕೆ-ಬೆಳವಣಿಗೆ

ಪ್ರಾಚೀನ ಸಮರ ಶಸ್ತ್ರಾಸ್ತ್ರಗಳಲ್ಲಿ ಬಿಲ್ಲು ಬಾಣಕ್ಕೆ ಪ್ರಥಮ ಸ್ಥಾನ. ಎರಡನೆಯದು ಉದ್ದನೆಯ ಕತ್ತಿ (ಊರ್ಮಿ). ಮೂರನೆಯದು ಸಾಮನ್ಯ ಕತ್ತಿ ಅಥವಾ ಖಡ್ಗ.

ಎಂ.ಎ. ಶರ್ಮಾ ತದ್ದಲಸೆ



ಕೊನೆಯದು ಮುಷ್ಟಿ ಅಥವಾ ಗದೆ. ಬಿಲ್ಲು ಮತ್ತು ಬಾಣ ಎಲ್ಲಿ, ಹೇಗೆ, ಯಾವಾಗ ಹುಟ್ಟಿತೆಂದು ಹೇಳುವುದು ಕಷ್ಟವಾದರೂ ಭಾರತದಲ್ಲಿ ಕ್ರಿಸ್ತಪೂರ್ವ ೩೦೦೦ ವರ್ಷಗಳಿಗೂ ಹಿಂದೆಯೇ ಬಿಲ್ಲುಗಾರಿಕೆ ಬಳಕೆಯಲ್ಲಿತ್ತು ಎಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಆದಿಮಾನವ ಆಹಾರಕ್ಕಾಗಿ ಬೇಟೆಯಾಡಿ ಜೀವಿಗಳನ್ನು ಕೊಂದು ತಿಂದು ಬದುಕುತ್ತಿದ್ದ. ಪ್ರಾಣಿಗಳನ್ನು ಕೊಲ್ಲಲು ಕಲ್ಲುಗಳು ಮತ್ತು ಮೊನಚಾದ ದೊಣ್ಣೆಗಳನ್ನು ಭರ್ಚಿಯಾಗಿ ದೊಣ್ಣೆಯ ಕೊನೆಗೆ ಚೂಪಾದ ಕಲ್ಲನ್ನು ಸಿಕ್ಕಿಸಿ ಓಡುತ್ತಿದ್ದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದ. ಕಾಲಕ್ರಮೇಣ ಬುದ್ಧಿವಂತನೊಬ್ಬ ಬಳಕುವ ಮರದ ತುಂಡಿನ ಎರಡೂ ತುದಿಗಳಿಗೆ ಸುಲಭವಾಗಿ ತುಂಡಾದ ನಾರನ್ನು ಕಟ್ಟಿ ಅದರಿಂದ ಮರದ ಮೊನಚಾದ ಕೋಲು ಇಲ್ಲವೆ ಚೂಪು ಮೊನೆಯ ಕಲ್ಲುಗಳನ್ನು ಕರಾರುವಕ್ಕಾಗಿ ಹೊಡೆಯುವ ತಂತ್ರವನ್ನು ಕಂಡಿರಬೇಕು. ಕಾಲ ಹೋದಂತೆ ಬಿಲ್ಲು ಮತ್ತು ಬಾಣದ ರಚನೆ ವಿನ್ಯಾಸವೂ ಅಭಿವೃದ್ಧಿ ಹೊಂದಿ ಕೇವಲ ಬೇಟೆಯಾಡುವ ಮಾಧ್ಯಮವಾಗಿ ಉಳಿಯದೆ ಶಕ್ತಿ, ಶೌರ್ಯ, ಚಾಕಚಕ್ಯತೆಯ ಪ್ರಯೋಗವಾಗಿ ಬೆಳೆಯಿತು. ಅಲ್ಲದೆ ಸಮರದಲ್ಲಿ ಶತ್ರುಗಳನ್ನು ಸದೆ ಬಡಿಯುವ ಮಹಾಸಾಧನವಾಗಿ ಪರಿವರ್ತನೆಗೊಂಡಿತು.

ಕ್ರಿ.ಶ. ೧೬೦೦ ರವರೆಗೂ ಯುದ್ಧಗಳಿಗೆ ಬಿಲ್ಲು ಬಾಣಗಳೇ ಮುಖ್ಯ ಆಯುಧಗಳಾಗಿದ್ದವು. ಚಕ್ರವರ್ತಿ ಜಹಾಂಗೀರನು ಕ್ರಿ.ಶ. ೧೬೨೦ ರಲ್ಲಿ ಚಕಮುಕಿ ಕಿಡಿಯಿಂದ ಹೊತ್ತಿಕೊಂಡು ಹಾರುವ ತುಪಾಕಿಯನ್ನು ಜಾರಿಗೆ ತಂದನಂತರ ಬಿಲ್ಲು ಬಾಣ ತನ್ನ ಪ್ರಾಧಾನ್ಯವನ್ನು ಕಳೆದುಕೊಳ್ಳಲಾರಂಭಿಸಿತು. ಆದರೂ ಆಧುನಿಕ ಅಸ್ತ್ರಗಳನ್ನು ಇನ್ನೂ ಕಾಣದಿರುವ ಭಾರತದ ಗುಡ್ಡಗಾಡು ಜನರು ಈಗಲೂ ಬಿಲ್ಲು ಬಾಣಗಳನ್ನೇ ತಮ್ಮ ಅಸ್ತ್ರವನ್ನಾಗಿ ಬಳಸುತ್ತಾರೆ. ಬಿಹಾರ, ಒರಿಸ್ಸಾ, ಅಸ್ಸಾಂ, ನಾಗಾಲ್ಯಾಂಡ್, ಮಣಿಪುರ ಮತ್ತು ಹಿಮಾಚಲ ತಡಿಗಳಲ್ಲಿರುವ ಆದಿವಾಸಿಗಳಿಗೆ ಇಂದಿಗೂ ಬಿಲ್ಲ ಬಾಣಗಳೇ ಮುಖ್ಯ ಅಸ್ತ್ರಗಳಾಗಿವೆ. ಬಿಲ್ಲುಗಾರಿಕೆ ಭಾರತದಲ್ಲೇ ಹುಟ್ಟಿ ಹರಡಿದ್ದೆಂದು ಹೇಳಲು ಆಧಾರಗಳಿಲ್ಲ. ಹಳೆಯ ಇತಿಹಾಸ ಗ್ರಂಥಗಳ ಪುಟಗಳನ್ನು ತಿರುವಿ ಹಾಕಿದಾಗ ಗ್ರೀಕರು, ರೋಮನ್ನರು ಹಲವು ಸಹಸ್ರ ವರ್ಷಗಳಷ್ಟು ಹಿಂದೆಯೇ ಬಿಲ್ಲು ಬಾಣಗಳನ್ನು ಬೇಟೆ ಮತ್ತು ಯುದ್ಧಗಳಿಗೆ ಬಳಸುತ್ತಿದ್ದುದು ಕಂಡುಬರುತ್ತದೆ. ಇಂದಿಗೂ ಆಫ್ರಿಕದ ಕಾಡುಜನರು ಬಿಲ್ಲು ಬಾಣಗಳಲ್ಲೇ ಬಲಶಾಲಿಗಳಾಗಿದ್ದಾರೆ. ಬಿಲ್ಲು ಬಾಣಗಳು ಈಗಲೂ ಗೆರಿಲ್ಲಾಗಳ ಮುಖ್ಯ ಅಸ್ತ್ರವಾಗಿದೆ. ದಕ್ಷಿಣ ಅಮೆರಿಕಾದ ಕಾಡುನಿವಾಸಿಗಳಂತೂ ವಿಷಪೂರಿತ ಬಾಣಗಳನ್ನು ಬಿಡುವುದರಲ್ಲಿ ನಿಸ್ಸೀಮರು.

ಕಲೆ ಕ್ರೀಡೆ

ಬಿಲ್ಲು ಬಾಣಗಳು ಈಗ ಶಸ್ತಾಸ್ತ್ರವಾಗಿ ಮಾಯವಾಗಿದ್ದರೂ ಬಿಲ್ಲುಗಾರಿಕೆ ವಿದ್ಯೆಯನ್ನು ಕ್ರೀಡೆಯಾಗಿ ಕ್ರಿಯಾಶೀಲಗೊಳಿಸಲಾಗಿದೆ. ೧೭೮೧ ರಲ್ಲಿ ಸರ್ ಆ್ಯಷ್ಟನ್ ಲೀವರ್ ಎಂಬುವರು ಬ್ರಿಟನ್‌ನಲ್ಲಿ ಬಿಲ್ಲುಗಾರಿಕೆ ಸಂಸ್ಥೆಯೊಂದನ್ನು ಸ್ಥಾಪಿಸಿದರು. ರಾಜಕುಮಾರ ನಾಲ್ಕನೇ ಜಾರ್ಜ್ ಇವರು ೧೭೮೭ ರಲ್ಲಿ ಆ ಸಂಸ್ಥೆಯ ಪೋಷಕರಾದ ನಂತರ ಬಿಲ್ಲುಗಾರಿಕೆ ವಿದ್ಯೆಗೆ ರಾಜಗೌರವ ಸಂದಿತು. ಆ ಸಂಸ್ಥೆಯನ್ನು ರಾಯಲ್ ಟಾಕ್ಸಾಫಿಲೈಟ್ ಸೊಸೈಟಿ ಎಂದೇ ಕರೆಯಲಾಯಿತು. ಬ್ರಿಟನ್‌ನಲ್ಲಿ ಬಿಲ್ಲುಗಾರಿಕೆ ಕ್ರೀಡೆಗೆ ಸಂಬಂಧಿಸಿದಂತೆ ಆ ಸೊಸೈಟಿ ಇಂದಿಗೂ ಅಧಿಕೃತ ಮನ್ನಣೆ ಪಡೆದ ಸಂಸ್ಥೆಯಾಗಿದೆ. ಸುಮಾರು ನೂರು ವರ್ಷಗಳ ಹಿಂದೆ ಸ್ಕಾಟಲೆಂಡಿನ ರಾಜನ ಅಂಗರಕ್ಷಕ ಪಡೆಯಾಗಿ

ಸ್ಥಾಪನೆಗೊಂಡ ಎಡಿನ್ ಬರೋದ ರಾಯಲ್ ಕಂಪನಿ ಆಫ್ ಆರ್ಚರ್ಸ ಇಂದಿಗೂ ಅಸ್ತಿತ್ವದಲ್ಲಿದೆ. ಯುರೋಪ ರಾಷ್ಟ್ರಗಳಿಂದ ವಲಸೆ ಹೋದವರು ಅಮೆರಿಕಾ ಮತ್ತು ಕೆನಡಾಗಳಲ್ಲಿ ಬಿಲ್ಲುಗಾರಿಕೆಯನ್ನು ಕ್ರೀಡಾಸ್ಪರ್ಧೆಯಾಗಿ ಬಳಸಲಾರಂಭಿಸಿದರು. ಅಮೆರಿಕೆಯ ರಾಷ್ಟ್ರೀಯ ಬಿಲ್ಲುಗಾರಿಕೆ ಸಂಸ್ಥೆ ಇಂಡಿಯಾನಾದ ಕ್ರಾಫರ್ಡವಿಲ್‌ನಲ್ಲಿ ೧೮೭೯ರ ಜನವರಿಯಲ್ಲಿ ಸ್ಥಾಪನೆಗೊಂಡಿತು. ಅಮೆರಿಕದಲ್ಲಿ ಪ್ರತಿ ವರ್ಷವೂ ರಾಷ್ಟ್ರೀಯ ಬಿಲ್ಲುಗಾರಿಕೆ ಸ್ಪರ್ಧೆಗಳು ವೈಭವಪೂರ್ಣವಾಗಿ ನಡೆಯುತ್ತವೆ. ಇಲ್ಲಿ ಬಿಲ್ಲುಗಾರಿಕೆ ವೀರನನ್ನು ನಿರ್ಧರಿಸಲಾಗುತ್ತದೆ. ೧೯೧೪ಕ್ಕೆ ಮೊದಲು ಆಂಗ್ಲೋ-ಫ್ರೆಂಚ್ ಪಂದ್ಯಗಳೊಂದಿಗೆ ಬಿಲ್ಲುಗಾರಿಕೆಯಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆಗಳು ಆರಂಭವಾದವು. ಯುರೋಪ್‌ನಲ್ಲಿ ವಾರ್ಷಿಕ ಬಿಲ್ಲುಗಾರಿಕೆ ಟೂರ್ನಮೆಂಟಗಳನ್ನು ನಡೆಸಲು ೧೯೩೧ ರಲ್ಲಿ ಫೆಡರೇಷನ್ ಇಂಟರನ್ಯಾಶನಲ್ ಡಿಟಿಆರ್‌ಎಲ್ ಆರ್ಕ ಎಂಬ ಸಂಸ್ಥೆ ಸ್ಥಾಪನೆಗೊಂಡಿತು.

ಪ್ರಾಮುಖ್ಯತೆ

೧೯೦೪ ರಲ್ಲಿ ಸೆಂಟಲೂಯಿಯಲ್ಲಿ ನಡೆದ ಒಲಂಪಿಕ ಕ್ರೀಡಾಕೂಟದಲ್ಲಿ ಬಿಲ್ಲುಗಾರಿಕೆ ಸ್ಪರ್ಧೆ ಪ್ರವೇಶಿಸಿತು. ಪುರುಷರ ವಿಭಾಗದ ಸಿಂಗಲ್ಸ್ ಸ್ಪರ್ಧೆಯಲ್ಲಿ ಅಮೆರಿಕದ ಫಿಲ್ ಬ್ರಿಯಂಟ್ ಎಂಬುವರು ಮೊದಲ ಒಲಂಪಿಕ್ ಸ್ವರ್ಣ ಗೆದ್ದರು. ಅಮೆರಿಕ ಒಲಂಪಿಕ್ ಬಿಲ್ಲುಗಾರಿಕೆ ಸ್ಪರ್ಧೆಗಳಲ್ಲಿ ಟೀಮ್ ಪ್ರಶಸ್ತಿ ಗೆದ್ದ ಮೊದಲ ರಾಷ್ಟ್ರವೆನಿಸಿತು. ೧೯೨೦ರ ನಂತರ ಬಿಲ್ಲುಗಾರಿಕೆ ಸ್ಪರ್ಧೆ ಒಲಂಪಿಕ್ಸ್‌ನಲ್ಲಿ ಸ್ಥಾನವನ್ನು ಕಳೆದುಕೊಂ



ಡಿತು. ೧೯೭೪ಳ ರಲ್ಲಿ ಮತ್ತೆ ಒಲಂಪಿಕ್ಸ್‌ನಲ್ಲಿ ಪ್ರವೇಶ ಪಡೆದ ಬಿಲ್ಲುಗಾರಿಕೆ ಈಗ ಅನೇಕ ರಾಷ್ಟ್ರಗಳಲ್ಲಿ ಜನಪ್ರಿಯವಾಗತೊಡಗಿತು. ಆದರೆ ಅಮೆರಿಕವೇ ಮೇಲುಗೈ ಸಾಧಿಸಿ ಸ್ವರ್ಣ ಗಳಿಸುವದಾಯಿತು.

ಬಿಲ್ಲು ಮತ್ತು ಬಾಣಗಳ ಉದ್ದ ಮತ್ತು ಗಾತ್ರ ಇಂತಿಷ್ಟೇ ಇರಬೇಕೆಂಬ ನಿರ್ದಿಷ್ಟ ನಿಯಮಗಳಿಲ್ಲ. ಆಕಾರ ಸಾಮಾನ್ಯವಾಗಿ ಒಂದೇ ರೀತಿಯದ್ದಾಗಿರುತ್ತದೆ. ಬಾಣಗಳನ್ನು ಪ್ರಯೋಗಿಸುವ ರೀತಿಯೂ ಒಂದೇ ತೆರನಾದದ್ದು. ಉದ್ದ ಮತ್ತು ಗಾತ್ರ ಸ್ಪರ್ಧಿಯು ಬಿಲ್ಲಿನ ಹುರಿಯನ್ನು ಎಳೆಯುವ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಭಾರತದ ಮತ್ತು ಇತರ ರಾಷ್ಟ್ರಗಳ ಗುಡ್ಡಗಾಡು ಜನರು ಮುರಿಯದ ಮರ ಇಲ್ಲವೇ ಬಿದಿರಿನ ಕಾಂಡವನ್ನು ಬಿಲ್ಲಿಗೆ ಬಳಸುತ್ತಾರೆ. ಹುರಿಗೆ ನಾರನ್ನು ಉಪಯೋಗಿಸುತ್ತಾರೆ. ತೂಕವಿರುವ ಮರದ ಸರಳುಗಳನ್ನು ಬಾಣಗಳಿಗೆ ಬಳಸುತ್ತಾರೆ. ಬಾಣಗಳ ಚೂಪಾದ ತುದಿಗಳಿಗೆ ಚೂಪಾದ ಕಲ್ಲು ಅಥವಾ ಕಬ್ಬಿಣಗಳನ್ನು ಸೇರಿಸುತ್ತಾರೆ. ಆದರೆ ಆಧುನಿಕ ಬಿಲ್ಲುಗಾರಿಕೆಯಲ್ಲಿ ಬಿಲ್ಲುಗಳಿಗೆ ಫೈಬರ್ ಗ್ಲಾಸ್, ಲ್ಯಾಮಿನೇಟೆಡ್ ಪ್ಲಾಸ್ಟಿಕ್ ಹಾಗೂ ಅಲ್ಯುಮಿನಿಯಂಗಳನ್ನು ಉಪಯೋಗಿಸಲಾಗುತ್ತಿದೆ. ಗುರಿಗಾಗಿ ದೊಡ್ಡ ಚೌಕಾಕಾರದ ಹಲಗೆ, ಹಲಗೆಯ ಮೇಲೆ ಹಲವು ವರ್ತುಲಗಳು. ಪ್ರತಿಯೊಂದು ವರ್ತುಲವೂ ಒಂದೊಂದು ಬಣ್ಣದಿಂದ ಕೂಡಿರುತ್ತದೆ. ೪೦ರಿಂದ ೧೦೦ ಗಜ ದೂರದ ಹಲಗೆಯ ಕಡೆ ಗುರಿ ನೋಡಿ ಬಾಣ ಬಿಡುವದೆ ಬಿಲ್ಲುಗಾರಿಕೆ ಸ್ಪರ್ಧೆ. ವಿವಿಧ ವರ್ತುಲಗಳ ಬಣ್ಣಗಳಿಗೆ ವಿವಿಧ ಪ್ರಕಾರದ ಪಾಯಿಂಟ್‌ಗಳನ್ನು ಕೊಡ

ಲಾಗುತ್ತದೆ. ಭಾರತದಲ್ಲಿ ಹದಿನೇಳು ವರ್ಷಗಳ ಹಿಂದೆ ತಾನೇ ರಾಷ್ಟ್ರೀಯ ಬಿಲ್ಲುಗಾರಿಕೆ ಫೆಡರೇಷನ್ ಪ್ರಾರಂಭವಾಗಿದೆ. ದೆಹಲಿಯ ಸಮೀಪದಲ್ಲಿರುವ ಒಂದು ಕಾರ್ಖಾನೆ ಮಾತ್ರ ಸದ್ಯಕ್ಕೆ ಆಧುನಿಕ ರೀತಿಯ ಬಿಲ್ಲುಬಾಣಗಳನ್ನು ತಯಾರಿಸುತ್ತಿದೆ. ಬಿಲ್ಲುಗಳಿಂದ ಕರಾರುವಕ್ಕಾಗಿ ಬಾಣಗಳನ್ನು ಬಿಡುವದೇ ಇದರ ಮರ್ಮವಾಗಿರುವದರಿಂದ ಇದಕ್ಕೆ ವಯಸ್ಸಿನ ಭೇದವೇನೂ ಆಗದು.

ಕಳೆಗುಂದಿದೆ

ಪ್ರಾಚೀನ ಶಸ್ತ್ರಾಸ್ತ್ರಗಳ ಪೈಕಿ ಕತ್ತಿ ಗದೆಗಳಲ್ಲಿ ಹೋರಾಡುವ ತಂತ್ರಗಳಲ್ಲಿ ಸ್ಥಿರ ಹಾಗೂ ಚಲನಾತ್ಮಕ ಎಂದು ಎರಡು ವಿಧಗಳುಂಟು. ಸ್ಥಿರ ತಂತ್ರ ತೂಕದ ಸ್ಥೂಲಕಾಯದ ದೇಹದವರಿಗಾಗಿ. ಅವರು ನಿಂತಲ್ಲೇ ಭದ್ರವಾಗಿ ನಿಂತು ಗದೆಯೇ ಮೊದಲಾದ ಭಾರವಾದ ಆಯುಧಗಳನ್ನು ಬಳಸಿ ಹೋರಾಡುವದು. ಕಿಬ್ಬೊಟ್ಟೆಯ ಕೆಳಗೆ ಹೊಡೆಯಬಹುದು. ಚಕಚಕನೆ ಚಲಿಸಲಾಗದ ಕಾರಣ ಅವರು ಎದುರಾಳಿಯನ್ನು ಕೆಲವೇ ಕ್ಷಣಗಳಲ್ಲಿ ಹೊಡೆದು ಕೆಡವಬೇಕು. ಕುಂಭ ಪ್ರಾಣಾಯಾಮದ ಮೂಲಕ ಉಸಿರನ್ನು ಬಲವಾಗಿ ಹಿಡಿದು ಹೊಟ್ಟೆಯ ಹಾಗೂ ಎದೆಯ ಮಾಂಸಖಂಡಗಳ ಸಂಕೋಚನ ಮಾಡಿಕೊಳ್ಳಬೇಕು. ನೆಲಕ್ಕೆ ಕಾಲು ಬೆರಳುಗಳನ್ನು ಭದ್ರವಾಗಿ ಊರಿ ನೆಲದಿಂದ ಶಕ್ತಿಯನ್ನು ಸಂಚಯಿಸಿಕೊಳ್ಳಬೇಕು. ಚೀನಾ ಮತ್ತು ಜಪಾನ ಸಮರ ತಂತ್ರಗಳಲ್ಲೂ ಈ ರೀತಿಯ ಶಕ್ತಿಸಂಚಯನ ಉಂಟು.

ಚಲನಾತ್ಮಕ ಅಥವಾ ಚರತಂತ್ರ ತೆಳು ದೇಹದವರಿಗಾಗಿ. ಕಾರಣ ಅವರು ವೇಗವಾಗಿ ಚಲಿಸಬಲ್ಲರು. ನೆಲದಿಂದ ಮೇಲಕ್ಕೆ ಜಿಗಿದು ಎದುರಾಳಿಯ ದೇಹದ ಮೇಲ್ಭಾಗಕ್ಕೆ ಒದೆಯಬಲ್ಲರು. ಈ ಚರತಂತ್ರ ಮಾರ್ಗಕ್ಕೆ ಯೋಗಾಸನಗಳು ಮೂಲ. ರಾಮಾಯಣದಲ್ಲಿ ವಾಲಿ ಮಾಡಿದಂತೆ ಎದುರಾಳಿಯ ಶಕ್ತಿಯನ್ನೇ ತನ್ನ ಲಾಭಕ್ಕೆ ಉಪಯೋಗಿಸಿಕೊಳ್ಳಬೇಕು. ಪ್ರತಿಯೊಂದು ಹೊಡೆತವೂ ಮರಣಾಂತಕ. ಈ ಚರತಂತ್ರವನ್ನು ಇವತ್ತಿಗೂ ಭಾರತೀಯ ಕುಸ್ತಿಯಲ್ಲಿ 'ಹನುಮಂತ ತಂತ್ರ' ಎನ್ನುತ್ತಾರೆ. ಜಪಾನ ಮತ್ತು ಚೀನಾಗಳಲ್ಲಿ ಇದನ್ನು ವೃತ್ತಚಲನೆಯೆನ್ನುತ್ತಾರೆ. ಕ್ಷತ್ರಿಯ ಧರ್ಮದಲ್ಲಿ ಹೋರಾಟಕ್ಕೆ ಮುನ್ನ ನಾಯಕ ತನ್ನ ಎದುರಾಳಿಗೆ ಗೌರವ ಸೂಚಿಸುತ್ತಾನೆ. ಅವನನ್ನು ಕೊಂದ ಮೇಲೂ ಗೌರವ ಸಲ್ಲಿಸುತ್ತಾನೆ. ಪಾಪವನ್ನು ಮಾತ್ರ ದ್ವೇಷಿಸಿ ಪಾಪ ಮಾಡಿದವರನ್ನು ಗೌರವಿಸುವದು ಧರ್ಮ.

ದ್ವಾಪರಯುಗದಲ್ಲಿ ಶ್ರೀಕೃಷ್ಣ ಸುದರ್ಶನ ಚಕ್ರವನ್ನು ಆಯುಧವಾಗಿ ಉಪಯೋಗಿಸಿದನಷ್ಟೇ. ಅದು ಅವನೊಂದಿಗೇ ಕೊನೆಗೊಳ್ಳಲಿಲ್ಲ. ಚಕ್ರಾಯುಧವನ್ನು ಬಳಸುವದು ಅನಂತರವೂ ಮುಂದುವರಿಯಿತು. ಧಾರವಾಡದ ಬಳಿಯ ನವಲೂರಿನಲ್ಲಿ ಇಂಥ ಚಕ್ರಾಯುಧವನ್ನು ಕುರಿತ ದಾಖಲೆಯಿದೆ. ಬಿಲ್ಲು ಬಾಣದಂತೆ 'ಗದೆ' ಒಂದು ವಿದ್ಯೆಯಾಗಿ ಕಲೆಯಾಗಿ ಕ್ರೀಡೆಯಾಗದೆ ಸನ್ಮಾನ ಸಮಾರಂಭದಲ್ಲಿ ಗದೆ ಕೊಡುವ ಕಾರ್ಯಕ್ರಮವಾಯಿತು. ಇನ್ನು ಕತ್ತಿ ಖಡ್ಗ ತಮ್ಮ ನಿಯತ್ತು ಕಳೆದುಕೊಂಡು ಮೊಂಡಾಗಿ ಚಾಕು ಚೂರಿಯಾಗಿ ಸಂಸ್ಕೃತಿಗೆ ಕಳಂಕ ತಂದಿತು. ಇದು ಕಾಲ ಪ್ರವಾಹದ ವಿಪರ್ಯಾಸ. *

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸುವ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಕುಸುಬಿಷ್ಟೆ
(ಅ) ಎಣ್ಣೆ ತೆಗೆದ ಹಿಂಡಿ
(ಆ) ಒಣ ಜಂಬ
(ಇ) ಕೆಟ್ಟ ಕೆಲಸದ ಪ್ರವೃತ್ತಿ
(ಈ) ಕೆಂಬಣ್ಣ

2. ಐಕಿಲು
(ಅ) ಕೋಟೆಯ ಬಾಗಿಲು
(ಆ) ಹಳೆಗಾಲದ ಶಾಲಾ ಮಾಸ್ತರು
(ಇ) ಚಿಮ್ಮಟಿ
(ಈ) ಚಳಿ

3. ಅರಕಳಿ
(ಅ) ಅಪೂರ್ಣ
(ಆ) ಬಾಗಿಲಿನ ಕೀಲು
(ಇ) ಆಕಳಿಕೆ
(ಈ) ತೆಳ್ಳನ್ನ ತಗಡು

4. ಅರಕೆ
(ಅ) ರೆಕ್ಕೆ
(ಆ) ಅಪೂರ್ಣವಾಗಿರುವುದು
(ಇ) ಕೊರತೆ
(ಈ) ಕಸಗುಡಿಸುವ ಸಾಧನ

5. ಸಭಾಕಂಪ
(ಅ) ಚಪ್ಪರದ ಕಂಬ
(ಆ) ಒಳ್ಳೆಯವರ ಅಂಜಿಕೆ
(ಇ) ಭಾಷಣಕ್ಕೆ ನಿಂತಾಗ ಉಂಟಾಗುವ ಭಯ
(ಈ) ಸಭ್ಯತನ

6. ಹುಮ್ಮಸ್ಸು
(ಅ) ಉತ್ಸಾಹ
(ಆ) ನೆಲಕ್ಕೆ ಬಳಿಯುವ ಕೆಂಬಣ್ಣ
(ಇ) ಹೆಡ್ಡತನ
(ಈ) ಅಹಂಕಾರ

7. ಮುಚ್ಚಟೆ
(ಅ) ಮೊದಲಿನ ಭಾಗ
(ಆ) ಕಟ್ಟಡದ ಮಾಡು
(ಇ) ತಪ್ಪೊಪ್ಪಿಗೆ ಪತ್ರ
(ಈ) ಪ್ರೀತಿ

8. ಸ್ವಯಂಕೃತ
(ಅ) ತಾನೇ ಶ್ರೇಷ್ಠನೆಂಬ ಭಾವನೆ
(ಆ) ತಾನೇ ಮಾಡಿದ
(ಇ) ಇಚ್ಛಾನುಸಾರ ನಡೆವಳಿಕೆ
(ಈ) ಸ್ವಾಧೀನತೆ

9. ಕ್ಷಪಣ
(ಅ) ರಾತ್ರಿ
(ಆ) ಕ್ಷೀಣವಾಗುವುದು
(ಇ) ದೂರಕ್ಕೆ ಬೀಸುವ ಅಸ್ತ್ರ
(ಈ) ಮಾಫಿ ಬೇಡುವುದು

10. ಲಾವಂಚ
(ಅ) ಒಂದು ಸುವಾಸನೆಯ ಹುಲ್ಲು
(ಆ) ಮಜ್ಜಿಗೆ ಹುಲ್ಲು
(ಇ) ಒಟ್ಟಿನಲ್ಲಿ
(ಈ) ಸಮಾನತೆ

11. ಕೊರಡೆ
(ಅ) ಚಾಟಿ
(ಆ) ಗಟ್ಟಿ ಬೀಜ
(ಇ) ಕಣ್ಣಿಲ್ಲದವಳು
(ಈ) ಹೆಣ್ಣು ಕೋಳಿ

12. ಖಾವಂದ
(ಅ) ತಿನ್ನುವ ಚಟ
(ಆ) ಬಹಳ ಬಿಸಿ
(ಇ) ಶ್ರೀಗಂಧ
(ಈ) ಒಡೆಯ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಕುಸುಬಿಷ್ಟೆ
(ಅ) ಒಣ ಜಂಬ, ಬಯಲಾಡಂಬರ, ವ್ಯಥಾಭಿಮಾನ. ಉದಾ: ವ್ಯರ್ಥ ಕುಸುಬಿಷ್ಟೆಯಿಂದ ಹಾಳಾದ. (ಸಂ. ಕುಶ್ರವಿಷ್ಠ)

2. ಐಕಿಲು
(ಈ) ಚಳಿ, ಶೀತ, ಮಂಜು, ಹಿಮ. ಉದಾ: ಮಾಘದ ಬೆಳಗಿನ ಐಕಿಲಲ್ಲಿ ಸ್ನಾನಕ್ಕೆ ಹೋದ. (ದೇಶ್ಯ. ಅಯ್ಕಿಲ್)

3. ಅರಕಳಿ
(ಅ) ಅಪೂರ್ಣ, ಅರೆಬರೆ. ಉದಾ: ಅವನ ಎಲ್ಲಾ ಕೆಲಸ ಅರಕಳಿಯೇ. (ಉ. ಕರ್ನಾ ಅರೆ=ಅರ್ಧ+ಕಳಿ)

4. ಅರಕೆ
(ಇ) ಕೊರತೆ; ಬಯಕೆ. ಉದಾ: ತನ್ನ ಬದುಕಿನಲ್ಲಿನ ಅರಕೆ ಅವನನ್ನು ಕೊರೆಯುತ್ತಿತ್ತು. (ದೇಶ್ಯ)

5. ಸಭಾಕಂಪ
(ಇ) ಸಭೆಯೆದುರು ಮಾತಾಡಬೇಕಾದಾಗ ಬರುವ ಅಧೈರ್ಯ, ತಡವರಿಕೆ. ಉದಾ: ಮೊದಲ ದಿನದ ಭಾಷಣ ಅವನ ಸಭಾಕಂಪದಿಂದ ಕೆಟ್ಟು ಹೋಯಿತು. (ಸಂ. ಸಭಾ+ಕಂಪ=ನಡುಕ)

6. ಹುಮ್ಮಸ್ಸು
(ಅ) ಉತ್ಸಾಹ, ಹುರುಪು, ಹುಮ್ಮಸ್ಸಿನಿಂದ ಕಾರ್ಯಾರಂಭವಾಯಿತು. (ಅರಬ್ಬಿ-ಹಿಮ್ಮತ್)

7. ಮುಚ್ಚಟೆ
(ಈ) ಪ್ರೀತಿ, ಅಚ್ಚುಮೆಚ್ಚು, ಮೋಹ, ಹಟ, ಮೊಂಡುತನ. ಉದಾ: ಎರಡು ಮೈ, ಒಂದು ಜೀವ ಎನಿಸುವ ಮುಚ್ಚಟೆ. (ದೇಶ್ಯ-ಮಚ್ಚು=ಪ್ರೇಮ(?))

8. ಸ್ವಯಂಕೃತ
(ಅ) ತಾನೇ ಮಾಡಿಕೊಂಡ. ಉದಾ: ಸ್ವಯಂಕೃತಾಪರಾಧದ ಫಲ ಅನುಭವಿಸಿದ. (ಸಂ. ಸ್ವಯಂ = ತಾನೇ+ಕೃತ=ಮಾಡಿದ)

9. ಕ್ಷಪಣ
(ಅ) ಸೊರಗುವುದು, ಕ್ಷೀಣಗೊಳಿಸುವುದು, ಕ್ಷಯವಾಗುವುದು. ಉದಾ: ಕರ್ಮಕ್ಷಪಣವಾಗದೆ ಶ್ರೇಯಸ್ಸಿಲ್ಲ. (ಸಂ.)

10. ಏವಂಚ
(ಇ) ಒಟ್ಟಾರೆ, ಅಂತೂ; ಸಾರಾಂಶವಾಗಿ. ಉದಾ: ಏವಂಚ ಪ್ರಪಂಚದಲ್ಲಿ ಸುಖವಿಲ್ಲ. (ಸಂ. ಏವಂ= ಹೀಗೆ, ಮತ್ತು+ಚ=ಕೂಡ)

11. ಕೊರಡೆ
(ಅ) ಚಾಟಿ, ಚಾಬೂಕು, ಬಾರುಕೋಲು; ಉದಾ: ಕೊರಡೆಯೇಟಿನ ಶಿಕ್ಷೆ. (ಮರಾ.ಕೋರ್ಡಾ-ಪೋರ್ಚುಗೀಸ್-corda ಹಗ್ಗ)

12. ಖಾವಂದ
(ಈ) ಒಡೆಯ, ಸ್ವಾಮಿ, ಗೌರವಾರ್ಹರಾದವರಿಗೆ ಉಪಯೋಗಿಸುವ ಪದ. ಉದಾ: ಖಾವಂದರ ಚಿತ್ತ. (ಪಾರಸಿಕ - ಖಾವಂದ್=ಒಡೆಯ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿತಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8	ಸರಿಯಿದ್ದರೆ	... ಸಾಧಾರಣ
9-10	"	... ಉತ್ತಮ
11-12	"	... ಅತ್ಯುತ್ತಮ

ಕಾಡೆಮ್ಮೆ-ಚಿರತೆಗಳ ಅದ್ಭುತ ಕುಸ್ತಿ

'ಕೊಲ್ಲು ಇಲ್ಲವೆ ಸಾಯಿ' ಎನ್ನುವುದು ಅಡವಿಯ ಜೀವನದ ಮಂತ್ರ

ಕಾಲಿಕಾ ಪ್ರಸಾದ ಮೋಹಿತೆ

"**ಕೊ**ಲ್ಲು ಇಲ್ಲವೆ ಸಾಯಿ" ಎನ್ನುವುದು ಅಡವಿಯ ಜೀವನದ ಸತ್ಯಮಂತ್ರ. ಅಡವಿಯಲ್ಲಿ ಕಿಂಚಿತ್ತಾದರೂ ದಯಾ ದಾಕ್ಷಿಣ್ಯವಿಲ್ಲ, ದೊಡ್ಡವರು ಸಣ್ಣವರು ಎಂಬ ಮಾತಿಲ್ಲ. ನಾಲ್ಕು ಕಣ್ಣುಗಳು ಎದುರುಬದುರಾಗಿ ಕೂಡಿದರೆ ತೀರಿತು. ಒಬ್ಬರಲ್ಲ, ಒಬ್ಬರು ಕಣ್ಣು ಮುಚ್ಚಲೇಬೇಕು. ಪ್ರಾಣ ಕೊಡು ಇಲ್ಲವೆ ತೆಗೆದುಕೊ. ಪ್ರಾಣದ ಬೆಲೆ ಪ್ರಾಣವೇ. ಯಾವನು ಬಲಿಷ್ಠನೋ, ಪರಿಸ್ಥಿತಿಯನ್ನು ಅನುಕೂಲ ಮಾಡಿಕೊಳ್ಳಬಲ್ಲನೋ ಅವನು ಮಾತ್ರ ಅಡವಿಯಲ್ಲಿ ಬದುಕಿರಬಲ್ಲನು. ಚಿರತೆಯು ಬೆನ್ನಟ್ಟಿದಾಗ ತನ್ನ ಹಿಂಡಿನೊಡನೆ ವೇಗದಿಂದ ಓಡಲಾರದೆ ಹಿಂದುಳಿಯುವ ಮುದಿ ಚಿಗರಿಯು ಚಿರತೆಯ ದಂತ-ನಖಗಳ ಆಘಾತದಿಂದ ಹತವಾಗುತ್ತದೆ. ಅದಕ್ಕೆ ತನ್ನ ಹಿಂಡಿನಲ್ಲಿ ಬದುಕಿರುವ ಅಧಿಕಾರವಿರುವುದಿಲ್ಲ.

ಅಡವಿಯಲ್ಲಿರುವ ಪ್ರತಿಯೊಂದು ಜೀವ ಜಂತುವಿಗೂ ಆತ್ಮರಕ್ಷಣೆಯ ಸಾಧನಗಳನ್ನು ಪ್ರಕೃತಿ ಒದಗಿಸಿದೆ. ಚಿರತೆ ಚಿಗರೆಯ ವಂಶವನ್ನು ನಿರ್ಮೂಲ ಮಾಡುವುದು ಸಾಧ್ಯವೇ ಇಲ್ಲ. ವನಚರ ಜೀವಿಗಳಲ್ಲಿ ಪ್ರಕೃತಿ ಸಮತೋಲನವನ್ನು ಕಾಯ್ದುಕೊಂಡು ಬರುತ್ತದೆ. ಹುಲಿ, ಚಿರತೆ, ಸರ್ಪ, ಚಿಗರಿ ಪ್ರತಿಯೊಂದು ತನ್ನ ಬಲವನ್ನೂ ದೌರ್ಬಲ್ಯವನ್ನೂ ಅರಿತಿರುತ್ತದೆ ಮತ್ತು ಪ್ರಸಂಗಾನುಸಾರವಾಗಿ ನಡೆದು ನಿರ್ವಾಹ ನಡೆಸುತ್ತದೆ. ಆದರೆ ಎಲ್ಲಿಯಾದದರೂ ತೂಕ ತಪ್ಪಿತೊ ಆಗ ಅವತಾರ ಪೂರ್ತಿಯಾದಂತೆಯೇ.

ಕುಸ್ತಿಯಾಡುವ ಮಲ್ಲರಂತೆ ಅಡವಿಯ



ಪ್ರಾಣಿಗಳು ಆಹಾರ-ವ್ಯಾಯಾಮಗಳಿಂದ ತರಬೇತಿ ಪಡೆಯಬೇಕಾಗುವುದಿಲ್ಲ. ಅಡವಿಯಲ್ಲಿ ಪಂಜರ ಅಗತ್ಯವೂ ಇಲ್ಲ. ಅಡವಿಯಲ್ಲಿ ನಡೆಯುವುದು ನೇರವಾದ ಹೋರಾಟ. ಗೆಲ್ಲು ಇಲ್ಲವೆ ಸೋಲು, ಬದುಕು ಇಲ್ಲವೆ ಸಾವು, ಅಡವಿಯ ಪ್ರಾಣಿಗಳು ಸದಾ ಮಲ್ಲಯುದ್ಧ ತಯಾರಿಯಲ್ಲೇ ಇರುವವು. ಅವಕ್ಕೆ ಶಸ್ತ್ರಾಸ್ತ್ರಗಳ ತಯಾರಿಕೆಯ ಅಗತ್ಯವಿರುವುದಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಮಧ್ಯಸ್ಥಿಕೆಯ ಹವ್ಯಾಸವಿರುವುದಿಲ್ಲ. ಅವುಗಳ ಕವಚವೆಂದರೆ ಅವುಗಳ ಸಾಹಸ, ಶಕ್ತಿ, ಚಪಲತೆ, ಕ್ರೌರ್ಯ ಮತ್ತು ನೇರ ಹೊಡೆತ. ಅವುಗಳಿಗೆ ಶಿಕ್ಷಣ ಅಥವಾ ಶಿಕ್ಷಕನ ಅಗತ್ಯವಿರುವುದಿಲ್ಲ. ಹುಟ್ಟಿದಂದಿನಿಂದಲೂ ಅವು ಪ್ರಾಣಹರಣ ಕಲೆಯನ್ನು ಅವಗತ ಮಾಡಿಕೊಂಡಿದ್ದು ಅದರ ಬಲದಿಂದಲೇ ಅಡವಿಯಲ್ಲಿ ಬದುಕುತ್ತವೆ.

ಅಡವಿಯ ಪ್ರಾಣಿಗಳು ಯಾವ ನಿಯಮವನ್ನು ಹಾಕಿಕೊಂಡಿರುವವೋ ಆ ನಿಯಮಗಳನ್ನೇ ಅವುಗಳನ್ನುಕೊಲ್ಲಲೆಂದು ಅಡವಿಗೆ ಹೋಗುವ ಮನುಷ್ಯ ಪಾಲಿಸಬೇಕಾಗುತ್ತದೆ. ಮೊದಲನೆಯ ಗುಂಡು ಹುಸಿ ಹೋದರೆ ಹುಲಿ ಬೇಟೆಗಾರನ ಮೇಲೆ ಎರಗದೆ ಬಿಡುವುದಿಲ್ಲ. ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತಿರುವವನು ಮಹಾರಾಜನೇ ಇರಲಿ, ರಾಜ್ಯಪಾಲನೇ ಇರಲಿ, ಯಾವುದನ್ನೂ ಅದು ಗಮನಿಸುವುದಿಲ್ಲ. ಬೇಟೆಯಾಡಲು ಹೋಗುವವರು ಪ್ರಾಣವನ್ನು ಅಂಗೈಯಲ್ಲಿಟ್ಟುಕೊಂಡಿರುವ, ಮೃತ್ಯುಲೋಕದ ಪ್ರಯಾಣವನ್ನು ಆನಂದದಿಂದ ಕೈಕೊಳ್ಳಲು ಸಿದ್ಧರಿರುವ 'ಗಂಡಸರೇ' ಆಗಿರುತ್ತಾರೆ.

ಮನಸ್ಸಿನಲ್ಲಿ ಈ ಬಗೆಯ ವಿಚಾರಗಳು ತಾಕಲಾಡುತ್ತಿದ್ದಂತೆ ನಾನು ಅಡವಿಯ ಸಮೀಪಕ್ಕೆ ಬಂದೆ. ಈ ಅಡವಿಯಲ್ಲಿ ಕ್ರೂರ ಚಿರತೆಯೊಂದು ತುಂಬ ಕೋಲಾಹಲವನ್ನೆಬ್ಬಿಸಿತ್ತು. ಸಮೀಪದ ಹಳ್ಳಿಗಳ ಎಷ್ಟೋ

ಕಸ್ತೂರಿ ನಡೆದು ಬಂದ ದಾರಿ

ದನಕರುಗಳು ಅದರ ಒಡಲನ್ನು ಸೇರಿದ್ದವು. ಮನುಷ್ಯರಿಗೂ ಅದು ಅಂಜುತ್ತಿರಲಿಲ್ಲ. ಸಂಜೆಯಾದೊಡನೆ ಅಲ್ಲಿಯ ದನಕರುಗಳಿಗೆ ಹಿಂಸೆ ಕೊಡಲು ಬರುತ್ತಿದ್ದ ಆ ಚಿರತೆಯ ಗರ್ಜನೆಗೆ ಕಾಡುನಾಡುಗಳು ನಡುಗುತ್ತಿದ್ದುವು. ಆ ಚಿರತೆಯೂ ಒಂದು ಆಕಳನ್ನಿಂದು ಕೊಂದು ಹಾಕಿತ್ತು. ಆದರೆ ತಿಂದು ಮುಗಿಸಿರಲಿಲ್ಲ. ಈ ಸುದ್ದಿ ತಿಳಿದೊಡನೆಯೇ ನಾನು ಕತ್ತಲಾಗುವುದಕ್ಕಿಂತ ಸಾಕಷ್ಟು ಮೊದಲೇ ಅಡವಿಯನ್ನು ಸೇರಿದೆ. ಶವಕ್ಕೆ ಎದುರಾಗಿ ಕುಳಿತುಕೊಳ್ಳಲು ಒಂದು ಮಂಚಿಕೆಯನ್ನು ತಯಾರಿಸಿಕೊಂಡೆ. ಬೇಟೆಗೆ ವಿಘ್ನವುಂಟಾಗಬಾರದೆಂದು ನಾನು ಜೊತೆಗೆ ಯಾರನ್ನೂ ಕರೆದುಕೊಂಡಿರಲಿಲ್ಲ. ಬಂದೂಕು ಮಾತ್ರ ನನ್ನ ಬದುಕು-ಸಾವುಗಳ ಜೊತೆಗಾರನಾಗಿತ್ತು. ನಾನು ಮಂಚಿಕೆಯನ್ನೇರಿ ನೋಡಿದಾಗ ಹೊಸತಾಗಿ ಸತ್ತು ಹೋದ ಒಂದು ಆಕಳನ್ನು ಕಂಡೆ. ಚಿರತೆಯು ಅದನ್ನು ಕೊಂದಿದ್ದರೂ ತಿಂದು ಮುಗಿಸಿರಲಿಲ್ಲ, ಸೂರ್ಯ ಮುಳುಗುವ ಮೊದಲೇ ನಾನು ಬೇಟೆಗೆ ತಯಾರಾಗಿದ್ದೆ. ದನಕರುಗಳ ಕುತ್ತಿಗೆಯ ಗಂಟೆಗಳ ಸದ್ದು ಅಡವಿಯ ನೀರವತೆಯನ್ನು ಭಂಗಗೊಳಿಸಿದರೆ, ನವಿಲೊಂದು ಕೆಸರಿನ ಹೊಂಡದಲ್ಲಿ ಬಾಯಾರಿಕೆಯನ್ನು ತಣಿಸಿಕೊಂಡು ಹಾರಿ ಹೋಗಿ ಮರದ ರೆಂಬೆಯಲ್ಲಿ ಕುಳಿತು ಆನಂದದಿಂದ ಹಾಡುತ್ತಿತ್ತು.

ಆ ದಿನ ಹುಣ್ಣಿಮೆ! ಒಂದು ಕಡೆ

ಸೂರ್ಯಾಸ್ತವಾದರೆ ಇನ್ನೊಂದೆಡೆಯಿಂದ ಚಂದಿರನ ಥಳಥಳಿಸುವ ಬಿಂಬವು ಆಗಸದಲ್ಲಿ ಬೆಳಗತೊಡಗಿತ್ತು. ನೆಲದಮೇಲೆ ಎತ್ತರವಾಗಿ ಬೆಳೆದು ನಿಂತ ಹುಲ್ಲು ಅಲುಗಾಡಿದಂತೆ ಕಂಡೊಡನೆಯೇ ನನ್ನ ಕೈ ಬಂದೂಕಿನೆಡೆಗೆ ಸಾಗಿತು. ಅಷ್ಟರಲ್ಲಿ ಹುಲ್ಲಿನೊಳಗಿಂದ ನರಿ ರಾಯರ ಸವಾರಿ ಹೊರಬಂತು! ಬಂದೂಕನ್ನು ಬದಿಗಿರಿಸಿ ಹಣೆಯ ಮೇಲೆ ಕೈಯಿಟ್ಟುಕೊಂಡು ಅಯ್ಯೊ, ದೇವರೇ, ಇದೇನು ವಿಪರೀತ! ಎಂದುಕೊಂಡೆ. ನರಿಯು ಮೆಲ್ಲನೆ ಸತ್ತ ಆಕಳಿನ ಕಡೆ ತರಳಿತು. ಅಕ್ಕ ಪಕ್ಕಗಳಿಗೆ ನೋಡಿಕೊಂಡು ಮುಂದುವರಿದು ಶವಕ್ಕೆ ಸುಮಾರು ಹತ್ತು ಗಜ ದೂರ ಇರುವಾಗ ಕುಳಿತುಬಿಟ್ಟಿತು. ಅದರ ಆಸೆಯು ಕಣ್ಣು ಹೆಣದ ಮೇಲಿತ್ತು. ಸುತ್ತಮುತ್ತಲೂ ಆಗಾಗ್ಗ ದೃಷ್ಟಿ ಹೊರಳಿಸುತ್ತಿತ್ತು. ಇದಿರಿನಲ್ಲಿ ತುಂಬಿದ ಬಟ್ಟಲು! ಆದರೆ ಎಲ್ಲಾದರೂ ಚಿರತೆಯು ಬಂದುಬಿಟ್ಟರೆ ಎಂಬ ಹೆದರಿಕೆಯು ಅದರ ಆಶೆಯನ್ನೆಲ್ಲ ತಣಿಸಿಬಿಡುತ್ತಿತ್ತು. ಅಪಾಯವನ್ನೆದುರಿಸದೆ ಯಾರಿಗೆ ತಾನೆ ಲಾಭವಾದೀತು? ನರಿಯು ಸಾಹಸ ಮಾಡಿಕೊಂಡು ಶವದತ್ತ ಸಾಗಿತು. ಶವಕ್ಕೆ ಬಾಯಿ ಹಾಕಿತ್ತೊ, ಇಲ್ಲವೊ, ಪಕ್ಕದಲ್ಲೊಂದು ಸಪ್ಪಳವಾಯಿತು. ನರಿರಾಯ ಎಲ್ಲೋ ಏನೋ? ನಾಪತ್ತೆ!

ನನಗೆ ಆಕಳಿಕೆಯು ಮೇಲಿಂದ ಮೇಲೆ ಬರತೊಡಗಿತು. ನರಿಯು ಕಣ್ಮರೆಯಾಗಿ ತುಸು ಸಮಯ ಕಳೆಯುವಷ್ಟರಲ್ಲಿ, ಒಂದು ಕಾಡೆಮ್ಮೆಯ ಗರ್ಜನೆ ಕೇಳಿಸಿತು. ಕೆಸರಿನ ಮೈದಾನಿನಲ್ಲಿ ಕಾಡೆಮ್ಮೆಯು ತಲೆಯನ್ನು ನೋಡಿ ನನಗೆ ಸಂತಸವಾಯಿತು. ಹೀಗೆ ನೋಡುತ್ತ ಕುಳಿತುಕೊಳ್ಳೋಣವೆಂದರೆ ನನ್ನ ಉದ್ದೇಶಕ್ಕೆ ಭಂಗವಾಗುತ್ತದೆ. ನಾನು ನೋಡುತ್ತಿದ್ದಂತೆಯೇ ಸತ್ತ ಆಕಳ ಬಳಿಯಲ್ಲಿ ಏನೋ ಪ್ರಕಾಶದಂತೆ ಕಾಣಿಸಿತು. ಅದು ಚಿರತೆಯ ಕಣ್ಣುಗಳ ಹೊಳಪೆಂದು ಅರಿತುಕೊಂಡೆ. ಚಿರತೆಯು ಅರ್ಧ ಶರೀರ ಪೊದರಿನೊಳಗೆ ಮರೆಯಾಗಿದ್ದು, ಅದು ಬಾಯಿತೆರೆದು ಗರ್ಜಿಸುತ್ತಿದ್ದುದು ನನಗೆ ಗೋಚರವಾಯಿತು. ತನ್ನ ಆಹಾರದ ಬಳಿಯಲ್ಲಿ ಕಾಡೆಮ್ಮೆಯು ನಿಂತಿರುವುದು ಚಿರತೆಗೆ ಇಷ್ಟವಿರಲಿಲ್ಲ. ಕಾಡೆಮ್ಮೆಗೆ ಚಿರತೆ ಬಂದುದು ಅಸಹನೀಯವಾಗಿತ್ತು. ಕಾಡೆಮ್ಮೆಯು ಬಳಿಯಲ್ಲಿದ್ದ ಪೊದರನ್ನು ಕೋಡುಗಳಿಂದ ಸವರಿ ಚಿರತೆಯ ಗರ್ಜನೆಗೆ ಉತ್ತರ ಹೇಳಿತು. ಹುಟ್ಟಿನಿಂದಲೇ ಕೋಪಿಷ್ಟವಾದ ಚಿರತೆಯು ಇದನ್ನೆಂತು ಸಹಿಸಬಲ್ಲದು? ಅದು ಮತ್ತೂ ಬಲವಾಗಿ ಗರ್ಜಿಸಿ, ಸಿಟ್ಟಿನಿಂದ ಹೋರಾಟಕ್ಕೆ ಅಣಿಯಾಯಿತು. ಕಾಡಿನ ಈ ಬಲಶಾಲಿ ಪ್ರಾಣಿಗಳ ದ್ವಂದ್ವವನ್ನು ನಾನು ನೋಡುತ್ತಲೆ ಇದ್ದುದರಿಂದ ಚಿರತೆಯ ಮೇಲೆ ಗುಂಡು ಹಾರಿಸಲು ಮರೆತುಬಿಟ್ಟಿದ್ದೆ. ಒಂದು ಹಿಂಸ್ರ ಪಶುವಿನ ಯುದ್ಧಾಹ್ವಾನವನ್ನು ಸ್ವೀಕರಿಸಿ ಮತ್ತೊಂದು ಕ್ರೂರ ಜಂತುವು ಹೋರಾಟಕ್ಕೆ ಅಣಿಯಾಗಿ ನಿಲ್ಲುವುದನ್ನು ನಾನು ನೋಡುತ್ತಿರುವುದು ಇದೇ ಮೊದಲು. ಚಿರತೆಯು ಕಾಡೆಮ್ಮೆಯನ್ನು ತನ್ನ ಚೂಪಾದ ಕೋಡುಗಳಿಂದ ಅದನ್ನು ಇದಿರಿಸುತ್ತಲೇ ಇತ್ತು. ಎರಡು ಪ್ರಾಣಿಗಳೂ ಎದುರು-ಬದುರಾಗಿದ್ದು ಎದುರಾಳಿಯ ಮೇಲೆ ಮೊದಲು ಬೀಳಲು ಹಿಂಜರಿಯುತ್ತಿದ್ದುವು. ಚಿರತೆಯ ಬಾಯಿಯಿಂದ ಗರ್ಜನೆಯೊಂದಿಗೆ ಜೊಲ್ಲು ಸುರಿಯುತ್ತಿತ್ತು. ಕಾಡೆಮ್ಮೆಯೂ ಜೋರಾಗಿ ಬುಸುಗುಟ್ಟುತ್ತಿತ್ತು. ಈ ಭಯಾನಕ ದೃಶ್ಯವನ್ನು ನೋಡಿ ನನ್ನ ರೋಮಗಳು ಮುಳ್ಳಿನಂತೆ ನಿಮಿರಿ ನಿಂತಿದ್ದುವು. ನಾನು ಉಸಿರನ್ನು ತಡೆದು ಹಿಡಿದುಕೊಂಡು ಕಣ್ಣು ಹೊರಳಿಸಿದೆ. ಎರಡು ಬಲಶಾಲಿ ಮೃಗಗಳ ಹೋರಾಟವನ್ನು ಗಮನಿಸಿದೆ. ಬೇಟೆಯು ಸಾಮಾನ್ಯ ಕೆಲಸವಲ್ಲ. ಇಲ್ಲಿ ಸ್ವಲ್ಪವಾದರೂ ಗಮನತಪ್ಪಿದರೆ

ತತ್-ಪರಿಣಾಮವಾಗಿ ಪ್ರಾಣವನ್ನೇ ತೆರಬೇಕಾಗುತ್ತದೆ.

ಚಿರತೆಯು ತನ್ನ ಶರೀರವನ್ನು ಕುಗ್ಗಿಸಿ ಸೆಟೆದು ನೆಗೆಯಿತು. ಕಾಡೆಮ್ಮೆಯು ತನ್ನ ಕೋಡುಗಳಿಂದ ಅದನ್ನು ತಡೆದಾಗ, ಚಿರತೆಯು ಕೋಡಿನ ಮೇಲೆ ಸಿಲುಕಿ ಜೋತಾಡುವಂತಾಯಿತು. ಒಬ್ಬ ಪೈಲ್ವಾನನು ಭಾರವಾದ ವಸ್ತುವನ್ನು ತನ್ನ ಎರಡೂ ಕೈಗಳಿಂದ ಎತ್ತಿ ಹಿಡಿದಂತೆ ಕಾಣಿಸುತ್ತಿದ್ದ ಆ ನೋಟವನ್ನು ನೋಡುತ್ತ ಇದ್ದಂತೆಯೇ ಚಿರತೆಯು ಅಲ್ಲಿಂದ ಜಿಗಿದು ಬಿಟ್ಟಿತು. ಮತ್ತೆ ಎರಡೂ ಪ್ರಾಣಿಗಳು ಎದುರು-ಬದುರಾಗಿ ಯುದ್ಧಕ್ಕೆ ಸನ್ನದ್ಧವಾಗಿ ನಿಂತವು. ಕೋಪಾತಿರೇಕದಿಂದ ಚಿರತೆಯು ಕಾಡೆಮ್ಮೆಯ ಹಿಂದೆ ಹಾರಿ, ಮಿಂಚಿನಂತೆ ತಿರುಗಿ ಅದನ್ನು ಗಾಯಗೊಳಿಸಿತು. ಎರಡೂ ಪಂಜುಗಳನ್ನೂರಿ ಚಿರತೆಯು ಹಲ್ಲುಗಳಿಂದ ಕಚ್ಚುವಷ್ಟರಲ್ಲಿ, ಕಾಡೆಮ್ಮೆಯು ಬಲವಾಗಿ ಕಾಲಿನಿಂದ ಒದೆಯಿತು. ಚಿರತೆಯು ದೂರ ಬಿದ್ದು, ಬಲವಾದ ಆರ್ತನಾದ ಮಾಡಿತು. ಕಾಡೆಮ್ಮೆಯು ಪುನಃ ಹೊಡೆತ ಕೊಡಲು ಬಂದಾಗ ಚಿರತೆಯು ಅದಕ್ಕೆ ಸಿಗಲಿಲ್ಲ. ಕಾಡೆಮ್ಮೆಯ ಕಪ್ಪು ದೇಹದಲ್ಲಿ ರಕ್ತವು ಧಾರಾಕಾರವಾಗಿ ಹರಿಯುತ್ತಿದ್ದರೂ ಅದು ತನ್ನ ಕಾಲಿನಿಂದ ಮಣ್ಣನ್ನು ಕೆದರುತ್ತ ಚಿರತೆಯನ್ನೇ ನೋಡುತ್ತಿತ್ತು. ಚಿರತೆಯು ಈ ಬಾರಿ ಜಯಿಸಿಯೇ ಬಿಡಬೇಕೆಂದು ಜಾಗ್ರತೆಯಾಗಿ ಹೋರಾಡಲು ಬಯಸಿತ್ತು. ಎರಡೂ ಪ್ರಾಣಿಗಳು ಸರಿಯಾಗಿ ನಿಂತುಕೊಂಡು ಬಳಲಿದ ಜಟ್ಟಿಗಳಿಬ್ಬರು ಕೈಮಾಡುವಮೊದಲು ಉಸಿರು ತೆಗೆದುಕೊಳ್ಳುವಂತೆ, ಪರಸ್ಪರ ದೃಷ್ಟಿ ತೆಗೆಯದೆ ಘರ್ಜಿಸುತ್ತಿದ್ದುವು. ಮತ್ತೆ ಚಿರತೆಯು ಶರೀರವನ್ನು ಮುದುಡಿಸಿಕೊಂಡು ಕಾಡೆಮ್ಮೆಯ ಕೋಡುಗಳ ಮೇಲೆ ನೆಗೆಯಿತು. ಉನ್ಮತ್ತವಾದ ಕಾಡೆಮ್ಮೆಯು ಕುತ್ತಿಗೆಯನ್ನು ಚಾಚಿ ನಿಂತಿದ್ದಂತೆಯೇ ಕ್ರೂರ ಚಿರತೆಯು ಉಗುರು ಹಾಗೂ ಹಲ್ಲುಗಳಿಂದ ಕಾಡೆಮ್ಮೆಯ ಬೆನ್ನನ್ನು ಹರಿಯಿತು. ಚಿರತೆಯ ಅರ್ಧ ದೇಹವು ಕಾಡೆಮ್ಮೆಯ ಮುಖದ ಮೇಲೆ ಜೋತಾಡುತ್ತಿರುವ ವೇಳೆ ಚಿರತೆಯು ಗೆದ್ದಂತೆಯೂ ತುಸು ಹೊತ್ತಿನಲ್ಲೇ ಕಾಡೆಮ್ಮೆಯನ್ನು ಸೀಳಿಬಿಡುವಂತೆಯೂ ನಾನು ಭಾವಿಸಿದೆ. ಆಗ ಕಾಡೆಮ್ಮೆಯು ಗಡುತರವಾದ ಒಂದು ಹುಣಿಸೆ ಮರಕ್ಕೆ ತನ್ನ ತಲೆಯನ್ನು ಒಡೆಯಿತು. ತಲೆಯ ಮೇಲೇರಿದ ಚಿರತೆಯು ಬಲವಾದ ಆರ್ತನಾದ ಮಾಡುತ್ತ ಕಾಡೆಮ್ಮೆಯ ಬೆನ್ನಿನ ಮೇಲಿನ ಹಿಡಿತವನ್ನು ಸಡಿಲಿಸಿತು. ಕಾಡೆಮ್ಮೆಯು ತನ್ನ ತಲೆಯನ್ನು ಕೊಡವಿ ಚಿರತೆಯನ್ನು ಗಜ ದೂರಕ್ಕೆ ಎಸೆಯಿತು.

ಕಾಡೆಮ್ಮೆಯು ಐದು-ಹತ್ತು ಗಜ ಹಿಂದೆ ಸರಿದು ಮತ್ತೆ ಹಾರಿ ನೆಲದ ಮೇಲೆ ಬಿದ್ದ ಚಿರತೆಯನ್ನು ಮೂರು-ನಾಲ್ಕು ಸಲ ಇರಿಯಿತು. ಚಿರತೆಯು ಮೊದಲಿನಿಂದಲೇ ನಿರ್ಜೀವವಾದಂತಿದ್ದುದರಿಂದ ಕಾಡೆಮ್ಮೆಯ ಈ ಹೊಡೆತಗಳಿಂದ ಅದರ ಇತಿಶ್ರೀ ಆಗಿ ಹೋಯಿತು. ಚಿರತೆಯ ಅವಸಾನ ಮುಗಿದಿದ್ದರೂ ಕಾಡೆಮ್ಮೆಗೆ ತೃಪ್ತಿಯಾಗಿರಲಿಲ್ಲ. ಅದು ತನ್ನ ಕೋಡುಗಳಿಂದ ಚಿರತೆಯನ್ನು ದೂರಕ್ಕೆಸೆದು ವಿಜಯೋತ್ಸವವನ್ನು ಆಚರಿಸಿ, ಗಟ್ಟಿಯಾಗಿ ಒದರುತ್ತ ಹೊರಟುಹೋಯಿತು. ಕಾಡೆಮ್ಮೆಯ ಕಪ್ಪು ಶರೀರದ ಮೇಲೆ ರಕ್ತಧಾರೆಯು ಹರಡಿ ನಕಾಶೆಯನ್ನು ಬಿಡಿಸಿದಂತೆ ಕಾಣುತ್ತಿತ್ತು. ರಾತ್ರಿಯಾಗಿತ್ತು, ಆಗಸದಲ್ಲಿ ಚಂದ್ರನು ವಿರಾಜಿಸುತ್ತಿದ್ದನು. ನೀರವತೆಯು ಸದ್ದುಗಳನ್ನೆಲ್ಲಾ ಅಡಗಿಸಿತ್ತು. ಮಿಂಚುಹುಳ ಮತ್ತು ಜೀರುಂಡೆಗಳ ಸಂಗೀತದಿಂದ ಕಾಡು ಝೇಂಕಾರಮಯವಾಗಿತ್ತು! ನಾನು ಕೆಳಗಿಳಿದು ಸತ್ತ ಚಿರತೆಯ ಕಡೆಗೆ ತಿರಸ್ಕಾರದಿಂದ ನೋಡುತ್ತ, ಅದರ ಚರ್ಮದ ಮೇಲೆ ನನಗೇನೂ ಅಧಿಕಾರವಿಲ್ಲವೆಂದುಕೊಂಡು ಮನೆಯ ಕಡೆ ಸಾಗಿದೆ.★

ಪದಾರ್ಥ ಚಿಂತಾಮಣಿ

-142-

ದಕ್ಷಿಣ ಕನ್ನಡ ಮತ್ತು ಆಸುಪಾಸಿನಲ್ಲಿ 'ಹಸುರುವಾಣಿ' ಅಥವಾ 'ಹಸರುವಾಣಿ' ಎಂಬ ಪದವೊಂದು ಪ್ರಚಲಿತವಾಗಿದೆ. ಗೇಣಿ ಕಾನೂನು ಜಾರಿಗೆ ಬರುವ ಮೊದಲು ಒಕ್ಕಲು ಜನ ವರ್ಷದ ಮೊದಲ ಬೆಳೆ ಬಂದ ಹೊತ್ತಿನಲ್ಲಿ ತಮ್ಮ ಒಡೆಯನಿಗೆ ತಂದೊಪ್ಪಿಸಬೇಕಾಗಿದ್ದ ಕಾಯಿಪಲ್ಲೆಗಳ ಕಾಣಿಕೆಗೆ ಆ ಹೆಸರು. ಗೇಣಿ ಚೀಟಿ (ಕರಾರು)ಯಲ್ಲೇ ಇದು ನಮೂದಾಗಿರುತ್ತಿತ್ತು. ಈಗ ಗೇಣಿಯೇ ಇಲ್ಲವೆಂದ ಮೇಲೆ (ಹಸುರು) ವಾಣಿಯೆಲ್ಲಿ? ಆದರೂ ಹಸರು ವಾಣಿ ಶಬ್ದದ ಮೂಲಾರ್ಥ ಏನೆಂಬ ಪ್ರಶ್ನೆ ತಪ್ಪುವುದಿಲ್ಲ. 'ಹಸುರು' ಸಂದರ್ಭಕ್ಕೆ ಉಚಿತ; 'ಪಸುರ್ ಕಂದಾಯ' ಎಂಬ ಪದವೂ ಶಾಸನಗಳಲ್ಲಿ ಸಿಕ್ಕುತ್ತದೆ. ಆದರೆ 'ವಾಣಿ' ಎಂದರೇನು? ನಮಗೆ ಗೊತ್ತಿರುವುದು ಮಾತೆಂಬ ಅರ್ಥವುಳ್ಳ ವಾಣಿ. ಇಲ್ಲಿ ಹೊಂದುವುದಿಲ್ಲ.

ಮರಾಠಿಯಲ್ಲಿ 'ವಾಣಿ' ಎಂದರೆ ಬ್ರಾಹ್ಮಣರಿಗೆ ನೀಡುವ ಹಣ್ಣು, ಮಿಠಾಯಿ ಮೊದಲಾದವುಗಳ ದಾನ. ಅದು ಸಂಸ್ಕೃತ 'ಉಪಾಯನ-ಪ್ರಾಕೃತ 'ಉವಾಣಅ'ದ ಅಪಭ್ರಂಶವೆಂದು ಮರಾಠಿ ನಿರುಕ್ತಕಾರರ ಹೇಳಿಕೆ. 'ಉಪಾಯನ' ಅಥವಾ 'ವಾಯನ' ಸಂಸ್ಕೃದಲ್ಲಿ ಬ್ರಾಹ್ಮಣರಿಗೋ ಮುತ್ತೈದೆಯರಿಗೋ ಕೊಡುವ ಹಣ್ಣುಹಂಪಲು, ಪಕ್ವಾನ್ನ ಮತ್ತು ಇತರ ವಸ್ತುಗಳ ಉಡುಗರೆ. ಈ ವಾಣವೇ ಕರಾವಳಿಯ (ಹಸುರು) 'ವಾಣಿ' 'ಪಸುರ್ ಕಂದಾಯ' ರಾಜ್ಯಕ್ಕೆ ಸಲ್ಲುವಂಥಾದ್ದು; ಇದು ಭೂಮಾಲಿಕನಿಗೆ ಒಪ್ಪಿಸುವ ಮರ್ಯಾದೆ.

ಮರಾಠಿ ಪ್ರಭಾವ ಮತ್ತು ಸಾಮೀಪ್ಯದಿಂದ, ಉತ್ತರ ಕರ್ನಾಟಕದಲ್ಲಿ ಎಷ್ಟೋ ಪದಗಳೂ ವಾಗ್ರೂಢಿಗಳೂ ಮರಾಠಿಯಿಂದ ಕನ್ನಡದಲ್ಲಿ ಸೇರಿಕೊಂಡಿವೆ. ನಮ್ಮ 'ಘೋಟಾಳೆ' (ಮರಾಠಿ 'ಘೋಟಾಳಾ') ಒಂದು ಕುತೂಹಲಕರ ಉದಾಹರಣೆ. ಇದು ಹಿಂದಿಯಲ್ಲಿ ಲಕಾರಾಂತವಾಗಿ 'ಘೋಟಾಲಾ' ಎಂಬ ರೂಪದಲ್ಲಿ ಕಾಣಿಸುತ್ತದೆ. ಕನ್ನಡದಲ್ಲಿ ಇದರ ಅರ್ಥ ಗೊಂದಲ, ಗಲಾಟೆ, ಗಲಿಬಿಲಿ, ಇಕ್ಕಟ್ಟಿನ ಪ್ರಸಂಗ, ಪೇಚಾಟದ ಪರಿಸ್ಥಿತಿ. 'ಘೋಂಟಾಳಾ' ಎಂಬ ರೂಪದಲ್ಲಿಯೂ ಅದು ಮರಾಠಿಯಲ್ಲಿದೆ. ಅದಕ್ಕೆ ಮರಾಠಿಯಲ್ಲಿ ಸುತ್ತುಸುತ್ತು ತಿರುಗುವುದು ಅರ್ಥಾತ್ ಭ್ರಮಣ ಎಂಬ ಅರ್ಥವೂ ಇದೆ. ಆದರೆ 'ಘೋಟಾಳಾ'ದ ವ್ಯುತ್ಪತ್ತಿ ಹೇಗೆಂದು ಕೇಳಿದರೆ ಘೋಟಾಳೆಯೇ! 'ಘೋಟ' (ಕುದುರೆ) ಕಂತೂ ಅದು ಸಂಬಂಧಿಸಿದ್ದಲ್ಲ. 'ಘಂಟ್ ಪರಿವರ್ತನೇ' (=ಸುತ್ತಾಡು) 'ಟತ, ಟೂತ' ವೈಕ್ಲವ್ಯೇ' (=ಕಷ್ಟಪಡುವುದು) ಎಂಬ ಸಂಸ್ಕೃತ ಧಾತುಗಳಿಂದ ಅದು ಹುಟ್ಟಿರಬಹುದೆಂದು ಹೇಳಿ ಮರಾಠಿ ವ್ಯುತ್ಪತ್ತಿ ಕೋಶಕಾರರು ತಮ್ಮ ನಿರುಕ್ತಿಗೇ ಸಂದೇಹಪಟ್ಟು, ಈ

ಶಬ್ದ ದ್ರಾವಿಡ ಅಥವಾ ಆಸ್ಟ್ರೋ ಏಶಿಯಾಟಿಕ್ ಮೂಲದಿಂದ ಬಂದಿರಬಹುದೆಂಬ ಊಹೆಯನ್ನು ತೇಲಿಬಿಟ್ಟಿದ್ದಾರೆ.

ಈ ಗಾಳಿಪಟದ ಬೆಂಬತ್ತುವುದಾದರೆ ಕನ್ನಡ 'ಕೋಟಲೆ' ದೃಷ್ಟಿಪಥಕ್ಕೆ ಬರುತ್ತದೆ. ಕಾಟ, ಸಂಕಷ್ಟ, ಉಪದ್ರವ, ತೊಂದರೆ, ಗಲಿಬಿಲಿ, ಹಿಂಸೆ ಇತ್ಯಾದಿ ಅರ್ಥಗಳು ಈ ಶಬ್ದಕ್ಕೆ ಇವೆ. 'ಕೋಟಲಿಗ' ಎಂದರೆ ಉಪದ್ರವಕಾರಿ. ತಮಿಳಿನಲ್ಲಿ 'ಕೋಟ್ಪಾಲ್' ತೆಲುಗಿನಲ್ಲಿ 'ಕೋಡಾಡು', ತುಳುವಿನಲ್ಲಿ 'ಕೋಟಲೆ,' (ರೋಗ ಸೀರು ಕೋಟಲೆ=ಗಣಜಲ ರೋಗ) ಇವೆ. 'ಕೋರ್', 'ಗೋರ್' (=ಗೊಬ್ಬರ ರೋಗ measles) ಎಂಬ ತುಳು ಪದಗಳು ಕೂಡ ಕೋಟಲೆಯ ಪೂರ್ವಪದದಿಂದ ಬಾಂಧವರೆಂದು ದ್ರಾವಿಡ ವ್ಯುತ್ಪತ್ತಿ ಕೋಶ (DED) ದಾಖಲಿಸುತ್ತದೆ. 'ಕೋಟಲೆ'ಯ ಕನ್ನಡ ಅರ್ಥಗಳು ತಮಿಳಿನ 'ಕೋಟ್ಪಾಲ್'ಗೂ ಸಲ್ಲುತ್ತವೆ.

ಕೋಟಲೆ ಮರಾಠಿಯಿಂದ ನಮಗೆ ಬಂದಿರಲಾರದು. ಪಂಪನೇ ಕೋಟಲೆಯನ್ನು ಪ್ರಯೋಗಿಸಿದ್ದಾನೆ. ಕೋಟಲೆ, ಕೋಟ್ಪಾಲೆಗಳಲ್ಲಿನ ಕೋಟು, ಕೋಟ್ಪು 'ಕುಡು' (ವಕ್ರ, ಡೊಂಕು) ಧಾತುವಿನಿಂದ ರೂಪುಗೊಂಡಿರಬೇಕು. 'ಅಲೆ' ಧಾತು ಪೀಡೆ, ಸುತ್ತಾಟ ಇತ್ಯಾದಿ ಅರ್ಥಗಳನ್ನು ಕೊಡುವುದರಿಂದ ಕೋಟಲೆಗೆ ಪಂಪನ ಕಾಲದಿಂದಲೂ ಬಂದ ಅರ್ಥಕ್ಕೆ ಈ ಪದವಿಂಗಡಣೆಗೆ ಸರಿಹೊಂದುತ್ತದೆ. ಕ, ಗಗಳು ಸವರ್ಗೀಯವಾಗಿದ್ದು 'ಘ'ಕಾರ ಪ್ರಥಮಾಕ್ಷರಕ್ಕೆ ಒತ್ತು ಕೊಡುವ ಪ್ರವೃತ್ತಿಯಿಂದ ಉಂಟಾಗಿರಬೇಕು. ಉದಾ: ಕಬ್ಬಿಣ - ಖಬಣ ಗಂಗಾಳ ಗರ್ಜನೆ - ಘರ್ಜನೆ ಘೋಟಾಳೆ ಮರಾಠಿಗೆ ಕನ್ನಡದಿಂದ, ಹಿಂದಿಗೆ ಮರಾಠಿಯಿಂದ ಹೋಗಿರಬಹುದು ಪ್ರಾಕೃತದಲ್ಲಿ ಘೋಟಾಳೆಗೆ ಸಮಾನಪದ ಇಲ್ಲ. ಬಂಗಾಲಿಯಲ್ಲಿಯೂ ಅದು ಕಾಣದು. ಆದ್ದರಿಂದ ಕೋಟಲೆಯೇ ಘೋಟಾಳೆಯೆಂಬುದಕ್ಕೆ ಯುಕ್ತಿವಿರೋಧವಿಲ್ಲ.

ರಾಷ್ಟ್ರೀಯ ಚಳವಳಿ ಕಾಲದಲ್ಲಿ ಹಿಂಸಾತ್ಮಕ ಕ್ರಾಂತಿವಾದಿಗಳನ್ನು 'ಜನ್ಮಟಾಪು' ಶಿಕ್ಷೆಗೆ ಗುರಿಪಡಿಸಿದ ಸುದ್ದಿಗಳನ್ನು ಓದುತ್ತಿದ್ದೆವು. ಇದರರ್ಥ ಆಜೀವ ಸೆರೆಮನೆ ವಾಸಕ್ಕಾಗಿ ದ್ವೀಪಾಂತರಕ್ಕೆ (ಆಗ ಅಂಡಮಾನ ದ್ವೀಪಗಳಿಗೆ) ಕಳಿಸಿದರು ಎಂಬುದಾಗಿತ್ತು. ಇದೂ ಮರಾಠಿಯಿಂದ ನಮಗೆ ಬಂದದ್ದು. ಅಲ್ಲಿ 'ಟಾಪು' ಎಂದರೆ ದ್ವೀಪ ಈ ಪದ ಹಿಂದೀ, ಬಂಗಾಲಿ ಭಾಷೆಗಳಲ್ಲಿಯೂ ಇದೆ. ಅದು ಪ್ರಾಕೃತ ಭಾಷೆಯ 'ಟಪ್ಪೂ' ಪದದ ಎರವಲು.

ಕಾಗದಗಳನ್ನು ಒಂದಕ್ಕೊಂದು ತಗಲಿಸಲು ಉಪಯೋಗಿಸುವ 'ಪಿನ್' (pin) ಕನ್ನಡೀಕೃತವಾಗಿ 'ಗುಂಡುಸೂಜಿ' ಎನ್ನಿಸಿದರೆ ಉತ್ತರ ಕರ್ನಾಟಕದಲ್ಲಿ ಅದು 'ಟಾಚಣಿ' ಅಥವಾ 'ಟಾಂಚಣಿ' ಎನಿಸುತ್ತದೆ. ಇದೂ ಮರಾಠಿ ಪದ. ಈ ಶಬ್ದದ ಮೂಲಕ್ಕೆ ಹೋದರೆ, ಅದಕ್ಕೆ ಸೂಜಿ ಎಂಬ ಅರ್ಥವಿಲ್ಲ; ಲಘುವಾದ ಹೊಲಿಗೆ ಹಾಕುವುದು, ಗುರುತು ಮಾಡಿಕೊಳ್ಳುವುದು, ಟಿಪ್ಪಣಿ ಬರೆದುಕೊಳ್ಳುವುದು ಇತ್ಯಾದಿ ಅರ್ಥಗಳು 'ಟಾಚಣಿಯೇ' 'ಟಾಂಚಣೀ' ಧಾತುವಿಗಿದೆ. ಹಿಂದಿಯಲ್ಲಿ 'ಟಾಂಕ್' 'ಟಾಂಚ್' ಬಂಗಾಲಿಯಲ್ಲಿ 'ಟಂಕಿತ' ಎಂಬವುಗಳೂ ಸುಮಾರು ಇದೇ ಅರ್ಥಕೊಡುತ್ತವೆ. ಕನ್ನಡದಲ್ಲಿಯೂ ಲಘುವಾದ ಹೊಲಿಗೆಗೆ 'ಟಾಕಿ ಹಾಕುವುದು' ಎನ್ನುವುದುಂಟು. ಹೀಗೆ 'ಟಾಚಣಿ'ಯಿಂದ ವಿದಿತವಾಗುವ ಒಂದಂಶವೆಂದರೆ, ಕಾಗದದ ದಾಖಲೆಗಳನ್ನು ಒಂದಕ್ಕೊಂದು ಜೋಡಿಸಲು ಹಿಂದೆ ಮೂಲೆಯಲ್ಲೋ ಬದಿಯಲ್ಲೋ ಹಗುರಾಗಿ ಹೊಲಿಗೆ ಹಾಕಿಡುತ್ತಿದ್ದರಲ್ಲದೆ ಸೂಜಿ ಚುಚ್ಚಿಡುತ್ತಿದ್ದಿಲ್ಲ. ಮುಂದೆ ಗುಂಡು ಸೂಜಿ ಆಮದಾದ ಮೇಲೆ ಅದಕ್ಕೂ ಹಳೇ 'ಟಾಚಣೀ'ಯದೇ ನಾಮರೂಪವನ್ನು ಅನ್ವಯಿಸಿದರಷ್ಟೇ ●

ಪಾವೆಂ.

ಶಿಳ್ಳಾಯಣ

ಹಾ.ಮೈ.ಸೂರಿ

''ಶ್ಶೆ ಶ್ಶಿ ಶ್ಶೈ eee ಶ್ಶಿ ಶ್ಶೀ'' ಎಂದು ಅಡಿಗೆ ಮನೆಯಿಂದ ನನ್ನ ಹೆಂಡತಿ ಪ್ರೇಮ ಶಿಳ್ಳೆ ಹೊಡೆದಳು.

''ಏನೇ ಇದೂ .... ಹೊಸ ವಿಧಾನ'' ಎಂದು ಕೇಳಿದೆ.

''ನಾವೂ ಹೊಸ ಹೊಸಾ ಭಾಷೆ ಕಲೀಬೇಕ್ರೀ ...... ಜೀವನದಲ್ಲಿ ಹೊಸತು ಏನಾದರೂ ಬೇಡವೇ!''

''ಅದಕ್ಕೆ ಶಿಳ್ಳೆ ಯಾಕೆ ಹಾಕ್ತೀಯಾ? ಹೆಂಗಸರು ಶಿಳ್ಳೆ ಬಾರಿಸೋಣ ಅಂದ್ರೆ ಏನು!''

''ಇವತ್ತಿನ ದಿನಪತ್ರಿಕೆ ನೋಡಿದಿರಾ? ಲಾಗೋ ಮೇರಾ ದ್ವೀಪದಲ್ಲಿ ಸಂಭಾಷಣೆ ಮಾಬೇಕಾದರೆ ಶಿಳ್ಳೆ ಹಾಕ್ತಾರಂತೆ ಕಣ್ರೀ, ರೈತರ ಸಂಭಾಷಣೆ, ಗಂಡಹೆಂಡಿರ ಸಂಭಾಷಣೆ ಕೂಡ ಶಿಳ್ಳೆಯ ಮೂಲಕಾನೇ ಅಂತ ಗೊತ್ತಾಗಿದೆ; ಭಾಷೆಗೆ ವ್ಯಾಕರಣ ಇರುವಂತೆ ಶಿಳ್ಳೆಗೂ ವ್ಯಾಕರಣ ಇದೆಯಂತೆ'' ಎಂದು ನನ್ನ ಮುಂದೆ ಅಂದಿನ ದಿನಪತ್ರಿಕೆ ತೆರೆದಿಟ್ಟಳು.

ಅಂದಿನಿಂದ ನಾವೂ ಮೋಜಿಗಾಗಿ ಶಿಳ್ಳೆ ಅಭ್ಯಾಸ ಶುರು ಮಾಡಿಕೊಂಡೆವು.

ನಮ್ಮ ಮನೆ ಬಚ್ಚಲು ಮನೆ ಹೊರಗಡೆ ದೂರದಲ್ಲಿರೋದರಿಂದ ಟವಲ್, ಸೋಪು, ತಣ್ಣೀರು ಏನು ಬೇಕಾದರೂ ತರಹ ತರಹೇವಾರಿ ಗೊತ್ತಾದ ಧಾಟಿಯಲ್ಲಿ ಶಿಳ್ಳೆ ಹೊಡೆದು ತರಿಸ್ಕೋಳ್ತೀವಿ. ನಮ್ಮ ಮರಿ ಪಿಳ್ಳೆಗಳೂ ಸಣ್ಣ ಸಣ್ಣ ನರ್ಸರಿ ಶಿಳ್ಳೆ ಹೊಡೆಯಲು ಕಲಿತರು.

ಹಾಲಿನ ಕುಕ್ಕರ್ರೇ ಶಿಳ್ಳೆ ಹೊಡೆದು ನಮ್ಮನ್ನ ಕರೆಯೋವಾಗ ನಾವು ಯಾಕೆ ಶಿಳ್ಳೆ ವಿದ್ಯೆ ಕಲಿಯಬಾರದು ಎಂದೇ ನಮ್ಮ ಅಭಿಮತ.

ನಿತ್ಯ ಜೀವನದಲ್ಲಿ ಶಿಳ್ಳೆಗೆ ಮಹತ್ವ ಇದ್ದೇ ಇದೆ. ಸ್ಕೌಟ್‌ಗಳು ವಿಶಲ್ ಮೂಲಕ ಸಂಭಾಷಣೆ ಮಾಡಬಹುದು. ಹಕ್ಕಿಗಳ ಪರಸ್ಪರ ಸಂಭಾಷಣೆ ಶಿಳ್ಳೆಯ ತಿರುಚಿದ ಅನೇಕ ರೂಪಗಳು. ಹಿಕ್ಕಿನ ಕೂಗಂತೂ ಇಂಪಾದ ಶಿಳ್ಳು. ಶಿಳ್ಳೆ ಹೊಡೆಯುವುದರಿಂದ ನಮ್ಮ ತುಟಿಗೆ ಒಳ್ಳೆ ವ್ಯಾಯಾಮ. ಬಸ್ ನಿಲ್ಲಿಸಲು ಶಿಳ್ಳೆ ಬೇಕು. ಬಸ್ ಹೊರಡಿಸಲು ಶಿಳ್ಳೆ ಕಂಡಕ್ಟರಿಗೆ ಒಳ್ಳೆಯ ಸಾಧನ. ಈ ಶಿಳ್ಳೆ ಆಟ ರೈಲಿನಲ್ಲಿ ನಡೆಯೋದಿಲ್ಲ. ನೈಟ್ ಬೀಟ್ ಮಾಡುವ ಜನರೂ ಶಿಳ್ಳೆ ಹೊಡೆಯುತ್ತಾರೆ. ಒಟ್ಟಿನಲ್ಲಿ ರಾತ್ರಿ ಒಂಟಿಯಾಗಿದ್ದಾಗ ಶಿಳ್ಳೆ ಸಂಗೀತ ಬಾರಿಸುತ್ತಿದ್ದರೆ ಧೈರ್ಯ ಉತ್ಪತ್ತಿ ಆಗುತ್ತದೆ, ಮನೋರಂಜನೆ ಆಗುತ್ತದೆ, ಸೊಳ್ಳೆಗಳೂ ಹತ್ತಿರ ಸುಳಿಯುವುದಿಲ್ಲ. ಮಿಗಿಲಾಗಿ ಈ 'ಶಿಳ್ಳೆ'ಗೆ ಜಾತಿ, ಲಿಂಗ, ದೇಶ, ಭಾಷೆ ಇವು ಯಾವ ಬೇಧವೂ ಇಲ್ಲ.

ಚಿಕ್ಕಂದಿನಲ್ಲಿ ನಾವು ಸಿನೆಮಾಗೆ ಹೋಗುತ್ತಿದ್ದಾಗ ಅದರಲ್ಲಿನ ಹೀರೋಗಳು ತಮಗೆ ಬೇಕಾದಾಗ ಶಿಳ್ಳೆ ಹೊಡೆದು ತಮ್ಮ ಕುದುರೆಗಳನ್ನೂ, ನಾಯಿಗಳನ್ನೂ ತಮ್ಮ ಬಳಿಗೆ ಕರೆಸಿಕೊಂಡು ಬಿಡುತ್ತಿದ್ದರು. ಅದನ್ನು ನೋಡುವುದೇ ನಮಗೆ ಭಾರೀ ಮೋಜು ಸಂತೋಷ.

''ರೇಶನ್ ಅಕ್ಕಿ ಬಂದಿದೆ, ಬೇಗ ಬಾ'' ಎಂದು ನಮ್ಮ ಮನೆಯ ಕಾಂಪೌಂಡ್ ಆಚೆ ನಾನು ಶಿಳ್ಳೆ ಹೊಡೆದು ನನ್ನ ಮಗನಿಗೆ ತಿಳಿಸುತ್ತೇನೆ. ''ಇಗೋ ಬಂದೆ'' ಎಂದು ಅವನೂ ಶಿಳ್ಳೆ ಹೊಡೆದು ರೇಷನ್ ಕಾರ್ಡ್, ಬ್ಯಾಗ್, ದುಡ್ಡು ತಗೋಂಡು ಬರ್‍ತಾನೆ. ಕ್ಯೂನಲ್ಲಿ ನಾವೇ ಮೊದಲಿಗರು! ಹೀಗೇ ನಾಲ್ಕೈದು ಸಲ ಆದ

ಮೇಲೆ ಈ ಶಿಳ್ಳೆ ಗುಟ್ಟನ್ನು ಪಕ್ಕದ ಮನೆ ರಾಮಣ್ಣ ತಿಳಿದುಬಿಟ್ಟ. ಒಂದು ದಿನ ನಾನು, ''ರೇಶನ್ ಅಕ್ಕಿ ಬಂದಿದೇ'' ಎಂದು ಶಿಳ್ಳೆ ಹೊಡೆದ ಕೂಡಲೇ ರಾಮಣ್ಣ ಬ್ಯಾಗ್ ತಗೊಂಡು ನನಗಿಂತ ಮುಂಚೆ ರೇಶನ್ ಅಂಗಡೀಲಿ ಹಾಜರಾಗಿ ಬಿಟ್ಟ! ಎಲಾ ಬಡ್ಡೀ ಹೈದ ಎಂದು ಅಂದಿನಿಂದ ನನ್ನ ಶಿಳ್ಳೆಯ ರೂಪ, ರೀತಿ ಮಾರ್ಪಡಿಸಿಬಿಟ್ಟೆ. ನಮ್ಮ ಮನೆ ಯವರಿಗೆ ಮಾತ್ರ ತಿಳಿಯುವ ಸಿಕ್ರೇಟ್ ''ಹೈಬ್ರೀಡ್ ಶಿಳ್ಳೆ'' ವಿಧಾನ ಕಲಿತೆವು.

ಹೀಗಿರಲು ಒಂದಾನೊಂದು ದಿನ ಏನಾಯ್ತು ಅಂತೀರಿ!

ಒಂದು ದಿನ ಸಂಜೆ ಏಳು ಗಂಟೆಗೆ ಆಫೀಸಿ ನಿಂದ ಮನೆಗೆ ತಡವಾಗಿ ಬಂದೆ. ಬರುವಾಗ ಈ ಶಿಳ್ಳೆ ವಿಚಾರ ಚಿಂತಿಸುತ್ತಿದ್ದೆ. ನನ್ನ ಬಾಲ್ಯದ ದಿನಗಳು ನೆನಪಾದವು. ನನ್ನ ಮಿತ್ರನೊಬ್ಬ ತನ್ನ ನಾಲಿಗೆಯನ್ನು ಕಪ್ಪೆಯಂತೆ ಬಾಯಿಯೊಳಗೇ ಮಡಿಸಿ ಎಂಟು ಮೈಲಿ ಕೇಳುವಷ್ಟು ಶಿಳ್ಳೆ ಹೊಡೆ ಯುತ್ತಿದ್ದುದು ನೆನಪಾಯಿತು. ಮತ್ತೊಬ್ಬ ತನ್ನ ಬಲಗೈ ಹೆಬ್ಬೆರಳು, ತೋರುಬೆರಳನ್ನು ಉಂಗುರ ದಂತೆ ಮಾಡಿಕೊಂಡು ಮಡಿಸಿದ ನಾಲಿಗೆ ಮೇಲೆ ಇಟ್ಟುಕೊಂಡು ಸೊಗಸಾದ ಸೀಳು ಸಿಳ್ಳೆ ಬಾರಿಸು ತ್ತಿದ್ದ. ಇನ್ನೊಬ್ಬ ಎಡಗೈ ಮೇಲೆ ಬಲಗೈ ಇಟ್ಟುಕೊಂಡು ಶಂಖದಂತೆ ಮಾಡಿ ಶೀಟಿ ಹೊಡೆ ಯುತ್ತಿದ್ದ. ಹೀಗೆ ಯೋಚಿಸಿಕೊಂಡು ಮನೆಗೆ ಹೊರಟಿದ್ದೆ. ಕೆ.ಇ.ಬಿ.ಯವರ ಕೃಪೆಯಿಂದ ಎಲ್ಲಾ ಕಡೆ ಕತ್ತಲಾಗಿತ್ತು. ನಾನು ನನ್ನ ಮನೆಯ ಕಿಟಕಿಯ ಬಳಿ ನಿಂತು ನನ್ನ ಮನೋರಮೆ ಯನ್ನು ಕರೆಯಲು ಮಧುರವಾಗಿ ''ಶ್ಶಿವ್, ಶ್ಶಿವ್...... ಶ್ಶೀವ್'' ಎಂದು ಜೋರಾಗಿ ಪ್ರೀತಿಯಿಂದ ಶಿಳ್ಳೆ ಹೊಡೆದೆ.

ಶಿಳ್ಳೆ ಹೊಡೆದದ್ದೇ ತಡ, ''ಏ ..... ಯಾವನೋ ಅವನೂ ಗೂಬೆ ನನ್ಮಗನೇ..... ದೀಪ ಹೋಗಿದ್ದಾಗ, ಕಿಟಕಿ ಹತ್ರ ಬಂದು ...... She ...... She .... sheeeeeವ್ ಅಂತ ಶಿಳ್ಳೆ ಹೊಡಿಕೀಯೇನೋ'' ಎಂಬ ಗರ್ಜನೆ ನನ್ನ ಹೃದಯವನ್ನೇ ಅಳ್ಳಾಡಿಸಿತು. ನಾನು ಆ ಘಳಿಗೆಯಲ್ಲಿ ಬಳ್ಳೇ ಹಣ್ಣು ತಿಂದು, ಸೊಳ್ಳೆ ಕೈಲಿ ಕಡಿಸಿಕೊಂಡ ''ಶಿಳ್ಳೇ'' ಕ್ಯಾತನಾಗಿದ್ದೆ! ಏಕೆಂದರೆ ಪ್ರೇಮ ತರಕಾರಿ ತರಲು ಹೊರಗೆ ಹೋಗಿದ್ದಾಗ, ಹಾಗೆ ಒಳಗಿನಿಂದ ಗರ್ಜಿಸಿದ್ದ ವರು ನನಗೆ ಗೊತ್ತಿಲ್ಲದೆ ಆ ದಿನ ಊರಿನಿಂದ ಬಂದಿದ್ದ ನಮ್ಮ ಅತ್ತೆ!

ಉದರಕ್ಕಾಗಿ ಕುರಾನ್ ಮಾರಾಟ!

ಫಿರೋಜ್ ಷಾ (1397-1422) ಬಹಮನಿ ಸುಲ್ತಾನರಲ್ಲಿ ಪ್ರಸಿದ್ಧನಾದ ಅರಸ. 25 ವರ್ಷಗಳಿಗಿಂತಲೂ ಹೆಚ್ಚು ಕಾಲ ರಾಜ್ಯವಾಳಿದ ಇವನ ರಾಜ್ಯ ಸಕಲೈಶ್ವರ್ಯಗಳಿಂದ ಕೂಡಿತ್ತು. ಫಿರೋಜ್ ಷಾ ಇತರೆ ರಾಜರಂತೆ ಬೊಕ್ಕಸದ ಹಣವನ್ನು ಭೋಗವಿಲಾಸದ ಜೀವನಕ್ಕೆ ಬಳಸುತ್ತಿರ ಲಿಲ್ಲ. ಉದರ ಪೋಷಣೆಗೂ ಸಹ ಬೊಕ್ಕಸದ ಚಿಕ್ಕಾಸನ್ನು ಖರ್ಚುಮಾಡುತ್ತಿರಲಿಲ್ಲ; ಕುರಾನ್ ಗ್ರಂಥವನ್ನು ಮಾರಿ ಅದರಿಂದ ಬಂದ ಹಣದಿಂದಲೇ ಜೀವಿಸುತ್ತಿದ್ದ!

ಈ ಸರಳ ಸುಲ್ತಾನನ ರಾಣಿಯರು ಸಹ ದುಂದು ವೆಚ್ಚ ಮಾಡುವಂತಿರಲಿಲ್ಲ. ತಮ್ಮ ಜೀವನ ನಿರ್ವಹಣೆಗೆಂದು ಕಸೂತಿಯಂತಹ ಕರಕುಶಲ ವಸ್ತುಗಳನ್ನು ತಯಾರಿಸುತ್ತಿದ್ದರು.

ಫಿರೋಜ್ ಷಾ ಸರಳ ಸುಲ್ತಾನನಷ್ಟೇ ಅಲ್ಲ, ಪಂಡಿತನೂ ರಸಿಕನೂ ಆಗಿದ್ದ. ಇವನಿಗಿದ್ದ ರಾಣಿಯರ ಸಂಖ್ಯೆ 800! ಇವರು ವಿವಿಧ ಪ್ರಾಂತ್ಯಗಳಿಂದ ಬಂದವರಾಗಿದ್ದು, ವಿವಿಧ ಭಾಷೆಗಳನ್ನು ಮಾತನಾಡುತ್ತಿದ್ದರು. ಫಿರೋಜ್ ಷಾ ಸಹಾ ಆಯಾ ರಾಣಿಯರ ಭಾಷೆಗಳಲ್ಲಿಯೇ ವ್ಯವಹರಿಸಬಲ್ಲ ಬಹುಭಾಷಾ ವಿಶಾರದನಾಗಿದ್ದ. ಇಂತಹ ಪಂಡಿತ ಸುಲ್ತಾನನಿಗೆ ಮದ್ಯಪಾನವೆಂದರೆ ಅತಿ ಆನಂದದಾ ಯಕ!


(ಸಂಗ್ರಹ) ಎಚ್.ಎಸ್.ಸಿದ್ಧಪ್ಪ ಮಣ್ಣೂರ್

ಗರ್ಭಸ್ಥ ಶಿಶುವಿಗೂ ಶಸ್ತ್ರಚಿಕಿತ್ಸೆ !

ಡಾ. ಕರವೀರಪ್ರಭು ಕ್ಯಾಲಕೊಂಡ

ಬ್ಲೇಕ್ ಹುಟ್ಟುವ ಮೊದಲೇ ಸಾಯಬೇಕಿತ್ತು. ವೈದ್ಯಕೀಯ ಶಸ್ತ್ರ ಚಿಕಿತ್ಸೆಯಲ್ಲಾದ ಕ್ರಾಂತಿ ಅದಕ್ಕೆ ಅವಕಾಶಕೊಡಲಿಲ್ಲ. ೨೪ ವಾರ ತುಂಬಿದ ಬ್ಲೇಕ್ ತಾಯಿಯ ಗರ್ಭಕೋಶದಲ್ಲಿ ಮುದ್ದೆಯಾಗಿದ್ದ. ತಾಯಿ ರೋಜಿ ಹೆಲನ್ ವೈದ್ಯಕೀಯ ತಪಾಸಣೆಗೆ ಬಂದಿದ್ದಳು. ಭ್ರೂಣದ ಬೆಳವಣಿಗೆ ಸರಿಯಾಗಿದೆಯೋ ಇಲ್ಲವೋ ಎಂದು ತಿರ್ಮಾನಿಸಲು, ಸಂಜಾತ ನ್ಯೂನತೆಗಳ ತಳ್ಳಿಹಾಕಲು, ಪಿಂಡ ರೋಗ ಪೀಡಿತವಿಲ್ಲವೆಂದು ಖಚಿತಪಡಿಸಲು 'ಸೋನೋಗ್ರಾಮ್ ಪರೀಕ್ಷೆ' ಮಾಡಿದರು. ಪರದೆ ಮೇಲೆ ಮೂಡಿದ ಭ್ರೂಣದ ಚಿತ್ರ ನೋಡುತ್ತಿದ್ದಾಗ ಆಶ್ಚರ್ಯವೊಂದು ಕಾದಿತ್ತು. ಹೊಟ್ಟೆಯಲ್ಲಿಯ ಕರುಳುಗಳು ವಪೆಯ ಕಿಂಡಿಯಲ್ಲಿ ಹಾಯ್ದು ಎದೆಗೂಡಿನಲ್ಲಿ ಹಾವಿನಂತೆ ಸುರುಳಿ ಸುತ್ತಿಕೊಂಡು ಬಿದ್ದಿರುವುದು ಕಂಡುಬಂತು. ಇದಕ್ಕೆ 'ಹಯಾಟಸ್ ಹರ್ನಿಯಾ' ಎನ್ನುವರು. ಎದೆ ಮತ್ತು ಹೊಟ್ಟೆಯ ಅಂಗಾಂಗಗಳನ್ನು ಬೇರ್ಪಡಿಸುವ ಬರ್ಲಿನ್ ಗೋಡೆ ಈ ವಪೆ. ಈ ವಪೆಯಿಂದ ಎದೆಯಲ್ಲಿಯ ಅಂಗಾಂಗಗಳು ಎದೆಯ ಗೂಡಿನಲ್ಲೂ, ಹೊಟ್ಟೆಯಲ್ಲಿಯ ಅಂಗಾಂಗಗಳು ಹೊಟ್ಟೆಯಲ್ಲೂ ಇರಲಿಕ್ಕೆ ಸಹಾಯಕವಾಗುತ್ತದೆ. ಹೀಗಾಗಿ ಒಂದರ ಒತ್ತಡ ಇನ್ನೊಂದರ ಮೇಲೆ ಆಗದಂತೆ ತಡೆಯುವುದಲ್ಲದೇ, ಅವುಗಳ ಸಕ್ರಿಯ ಸರ್ವತೋಮುಖ ಬೆಳವಣಿಗೆಗೂ ಸಹಾಯಕವಾಗುತ್ತದೆ.

ಬ್ಲೇಕ್‌ನಲ್ಲಾದ ಸ್ಥಿತಿಯಿಂದ ಎದೆಯ ಗೂಡಿನಲ್ಲಿ ಬೆಳೆಯಬೇಕಾಗಿದ್ದ ಪುಪ್ಪುಸ ಒಂದು ಕಡೆ ಬೆಳವಣಿಗೆಯಾಗದೇ ಬತ್ತಿ ಹೋಗಿತ್ತು. ಹುಟ್ಟಿದ ಕೂಡಲೇ ಕೊಸರಾಡಿ ಉಸಿರಾಡಿದರೂ ಅದು ಬಲೂನಿನಂತೆ




ವಪೆಯ ಕಿಂಡಿಯಿಂದ ಕರಳು, ಜಠರ ಎದೆಯಗೂಡಿಗೆ ನುಗ್ಗಿರುವುದು.

ಉಬ್ಬುವುದಿಲ್ಲ. ಕುತ್ತುಸಿರು ಬಿಟ್ಟು ಅಸುನೀಗುವುದು ಅನಿವಾರ್ಯ. ಇಂತಹ ವೈಪರಿತ್ಯಗಳು ಕಂಡಾಗ ಅದನ್ನು ತಾಯಿಗೆ ತಿಳಿಸುವುದೊಂದೇ ವೈದ್ಯರಿಗೆ ಗೊತ್ತಿದ್ದ ಮಾರ್ಗವಾಗಿತ್ತು. ಈ ಅಸಹಾಯಕತೆಯನ್ನು ಅಲ್ಲಗಳೆಯುವ ಅಸ್ತ್ರಗಳು ವೈದ್ಯಕೀಯ ಶಾಸ್ತ್ರದ ಬತ್ತಳಿಕೆಯಲ್ಲಿ ಇತ್ತೀಚಿನವರೆಗೆ ಇರಲಿಲ್ಲ. ಆದರೆ ಇಂದು ಹೊಸ ಅಸ್ತ್ರದ ಅನ್ವೇಷಣೆ ಆಗಿದೆ.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಪ್ರಖ್ಯಾತ ಶಸ್ತ್ರಚಿಕಿತ್ಸಕರಾದ ಡಾ. ಮೈಕೆಲ್ ಹೆರಿಸನ್ ಅವರು ಪರಾಮರ್ಶೆಗೆಂದು ಕಳಿಸಿದ ರೋಜಿಯನ್ನು ಪರೀಕ್ಷಿಸಿದರು. 'ಸೊನೋಗ್ರಾಮ್' ವರದಿ ಪರಿಶೀಲಿಸಿದರು. ಸಂಗಡಿಗರೊಂದಿಗೆ ಚರ್ಚಿಸಿದರು. 'ಹಯಾಟಸ್ ಹರ್ನಿಯಾ' ಇರುವುದನ್ನು ಖಚಿತ ಪಡಿಸಿದರು. ಸಾಮಾನ್ಯವಾಗಿ, ಹುಟ್ಟುವ ಪ್ರತಿ ೨೫೦೦ ಮಕ್ಕಳಲ್ಲಿ ಒಂದಕ್ಕೆ 'ಹಯಾಟಸ್ ಹರ್ನಿಯಾ' ಕಂಡು ಬರುವುದು. ರೋಜಿಗೆ ಪರಿಸ್ಥಿತಿಯ ಬಗ್ಗೆ ತಿಳಿಸಿ ಹೇಳಿದರು. ಪ್ರಾಯೋಗಿಕ ಶಸ್ತ್ರ ಚಿಕಿತ್ಸೆಗೆ ಧೈರ್ಯಮಾಡಿ ಒಪ್ಪಿಗೆ ಕೊಟ್ಟಳು. ಶಸ್ತ್ರ ಚಿಕಿತ್ಸೆಯ ಪೂರ್ವಭಾವಿ ಸಿದ್ಧತೆಗಳನ್ನು ಮುಗಿಸಿದರು. ಸುಸಜ್ಜಿತವಾದ ಶಸ್ತ್ರಚಿಕಿತ್ಸಾ ಕೊಠಡಿಗೆ ರೋಜಿಯನ್ನು ಒಯ್ದರು. ಕಿಬ್ಬೊಟ್ಟೆಯನ್ನು ತೆರೆದು, ಗರ್ಭಕೋಶವನ್ನು ಬಿಚ್ಚಿದರು. ಭ್ರೂಣದ ಎಡಗೈಯನ್ನು ಹಿಡಿದು ಮೇಲೆ ಎತ್ತಿದರು. ಮಾಸು, ಹೊಕ್ಕಳ ಹುರಿ ತಾಯಿಯ ಸಂಬಂಧ ಕಳಚಿಕೊಳ್ಳದಂತೆ ಕಾಳಜಿ ವಹಿಸಿದರು. ಗರ್ಭಸ್ಥ ಶಿಶುವಿನ ಏರುಪೇರುಗಳನ್ನು ಸ್ಥಿತಿಗತಿ ಸೂಚಕ ಸಾಧನದ ಸಹಾಯದಿಂದ ತಿಳಿದುಕೊಂಡು ತಕ್ಷಣ ತಹಬದಿಗೆ ತರಲು ಬರುವುದು. ಯಾವ ಕಾರಣಕ್ಕೂ ಜೀವಾಳದ ಅಂಗಗಳಿಗೆ ಆಘಾತ ಅಥವಾ ಪೆಟ್ಟು ತಟ್ಟದಂತೆ ಎಚ್ಚರಿಕೆ ವಹಿಸಲಾಗುವುದು. ಶಿಶುವಿನ ಸಣ್ಣ ಎದೆಯಗೂಡಿನಲ್ಲಿ ಸೂಕ್ಷ್ಮ ಶಸ್ತ್ರ ಚಿಕಿತ್ಸೆ ಮಾಡಿದರು. ಹೊಟ್ಟೆಯಲ್ಲಿರಬೇಕಾದ ಅಂಗಾಂಗಗಳನ್ನು ತಳ್ಳಿ ಅವುಗಳ ಜಾಗೆಯಲ್ಲಿರಿಸಿದರು. ಅವು ಮರಳಿ ಮತ್ತೆ ಎದೆಗೂಡಿಗೆ ನುಸುಳಬಾರದೆಂದು ವಪೆಯಲ್ಲಿಯ ಕಿಂಡಿಗೆ ಗೊರೆ-ಟೆಕ್ಸ್ (GoreËTex) ಜಲಾಭೇದ್ಯ ವಸ್ತುವಿನ ತೇಪೆಹಾಕಿ ಹೊಲಿದರು. ಅದೇ ವಸ್ತುವಿನ ತೇಪೆಯನ್ನು ಶಸ್ತ್ರ ಚಿಕಿತ್ಸೆಗೊಳಗಾದ ಭ್ರೂಣದ ಪದರುಗಳನ್ನು ಹೊಲಿಯುವಾಗ ಬಳಸಿ ಗರ್ಭಕೋಶದಲ್ಲಿಟ್ಟರು. ಎಲ್ಲೂ ವೇಳೆ ಹರಣವಾಗದಂತೆ ಎಚ್ಚರಿಕೆ ವಹಿಸಿದರು. ನುರಿತ ಶಸ್ತ್ರವೈದ್ಯರ ತಂಡ, ನಯನಾಜೂಕಿನ ಉಪಕರಣ, ಸುಸಜ್ಜಿತ ಶಸ್ತ್ರ ಚಿಕಿತ್ಸಾ ಕೊಠಡಿ, ಸಾಕಷ್ಟು ಸಿಬ್ಬಂದಿಗಳ ಸಮ್ಮಿಳಿತದಿಂದಾಗಿ ಶಸ್ತ್ರ ಚಿಕಿತ್ಸೆ ಸಂಪೂರ್ಣಗೊಳ್ಳಲು ತೆಗೆದುಕೊಂಡ ಸಮಯ ೧ ಗಂಟೆ ೫೪ ನಿಮಿಷ! ಇದು ಆದದ್ದು ನಮ್ಮಲ್ಲಿ ಅಲ್ಲ. ಕ್ಯಾಲಿಫೋರ್ನಿಯಾದಲ್ಲಿ!!

ಏಳು ವಾರಗಳ ನಂತರ ರೋಜಿ ಹೆರಿಗೆಗೆ



ಗರ್ಭಸ್ಥ ಶಿಶುವಿನ ಮೇಲೆ ಶಸ್ತ್ರ ಚಿಕಿತ್ಸೆ ನಡೆಸುತ್ತಿರುವುದು.

ಬಂದಳು. ಬ್ಲೇಕ್‌ನಿಗೆ ಜನ್ಮವಿತ್ತಳು. ಬ್ಲೇಕ್ ಮೊನ್ನೆ ಮೊನ್ನೆಯಷ್ಟೇ ತನ್ನ ಮೊದಲ ಹುಟ್ಟು ಹಬ್ಬದ ಮೊಂಬತ್ತಿ ಊದಿದ. ದಷ್ಟ ಪುಷ್ಟವಾಗಿದ್ದಾನೆ. ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಂತ. ಮನೆಯ ಲ್ಲೆಲ್ಲಾ ಹರಿದಾಡುತ್ತಿದ್ದಾನೆ. ನಗೆಯ ಮಲ್ಲಿಗೆ ಚೆಲ್ಲಿದ್ದಾನೆ.

ಡಾ. ಹೆರಿಸನ್ ಮತ್ತು ಸಂಗಡಿಗರು ಹಲವಾರು ಶಸ್ತ್ರ ಚಿಕಿತ್ಸೆ ಮಾಡಿದರು. ಹತ್ತಾರು ಸಂಜಾತ ನ್ಯೂನತೆಗಳನ್ನು ಸರಿಪ ಡಿಸಲು ಶಸ್ತ್ರಚಿಕಿತ್ಸೆಯ ಹರವನ್ನು ವಿಸ್ತರಿಸಿ ದರು. ದೊರೆತ ಫಲಿತಾಂಶಗಳನ್ನು ಸಂಗ್ರಹಿ ಸಿದರು. ವಿಶ್ಲೇಷಿಸಿದರು. ಪ್ರಬಂಧ ರಚಿಸಿ ಜುಲೈ ೮೦ರ ಅಂತಾರಾಷ್ಟ್ರೀಯ ಶಸ್ತ್ರ ಚಿಕಿತ್ಸ ಕರ ಸಮ್ಮೇಳನದಲ್ಲಿ ಮಂಡಿಸಿದರು. ಮೆಚ್ಚುಗೆ ಪಡೆದರು. ಅದರ ತಿರುಳನ್ನು ಸೆಪ್ಟೆಂಬರ ೮೦ರಲ್ಲಿ 'ನ್ಯೂ ಇಂಗ್ಲಂಡ್ ಜರ್ನಲ್ ಆಫ್ ಮೆಡಿಸಿನ್ ಆ್ಯಂಡ್ ಸರ್ಜರಿ' ಪ್ರಖ್ಯಾತ ವೈದ್ಯಕೀಯ ನಿಯತಕಾ ಲಿಕ ವರದಿ ಮಾಡಿದೆ.

ಜನವರಿ ೧೯೮೧ರಲ್ಲಿ ಅಮೇರಿಕಾದಲ್ಲಿ ಸ್ತ್ರೀರೋಗ ತಜ್ಞರ, ಶಸ್ತ್ರ ಚಿಕಿತ್ಸಕರ ಸಭೆ ನಡೆಯಿತು. ವೈದ್ಯಕೀಯ ವಿಜ್ಞಾನ ಇಷ್ಟೊಂದು ಮುಂದುವರಿದ ಹಂತದಲ್ಲೂ ಗರ್ಭದಲ್ಲಿ ಬೆಳೆಯುತ್ತಿರುವ ಕರುಳಿನ ಕುಡಿ ಪ್ರತ್ಯೇಕ ರೋಗಿ ಎಂದು ಪರಿಗಣಿಸಿ ಚಿಕಿತ್ಸೆ ನೀಡುವುದು ಸಾಧ್ಯವಿಲ್ಲವೇ? ಎಂದು ತಮ್ಮಷ್ಟಕ್ಕೆ ತಾವೇ ಯಕ್ಷ ಪ್ರಶ್ನೆಯೊಂದನ್ನು ಹಾಕಿಕೊಂಡರು. ಭ್ರೂಣದ ಸ್ಥಿತಿಗತಿಗಳ ಬಗ್ಗೆ ಕಣ್ಣೆದುರೇ ನೋಡುವ ವ್ಯವಸ್ಥೆ 'ಸೋನೋಗ್ರಾಮ್'ನಿಂದ ಸಾಧ್ಯವಾಗಿದೆ. ಗರ್ಭಕೋಶದ ಆವರಣದಲ್ಲಿ ಭ್ರೂಣವನ್ನು ಸುತ್ತುವರಿದ 'ಅಮ್ನಿಯೋಟಿಕ್ ದ್ರವದಲ್ಲಿ' ಭ್ರೂಣದ ಜೀವಕೋಶಗಳು ತೇಲಾಡುತ್ತಿರು ತ್ತವೆ. 'ಅಮ್ನಿಯೋಸಿಂಟೆಸಿಸ್'ದಿಂದ ಭ್ರೂಣದ ತೇಲುವ ಜೀವಕೋಶಗಳನ್ನು ತೆಗೆದು ಪರೀಕ್ಷಿಸಲು ಅನುಕೂಲವಾಗಿದೆ. ಈ ಪರೀಕ್ಷೆಯಿಂದ ಸಂಜಾತ ಊನಗಳನ್ನು, ವಿಕೃತಿಗಳನ್ನು ಹುಟ್ಟುವ ಮೊದಲೇ ಪತ್ತೆ ಹಚ್ಚುವುದು ಸಾಧ್ಯ. ಇಷ್ಟಕ್ಕೆ ಕೈ ಕಟ್ಟಿ ಕೊಂಡು ಕೂತರೆ ಸಾಲದು. ನಮ್ಮ ಮುಂದಿನ ಆವಶ್ಯಕತೆ ಗರ್ಭಸ್ಥ ಶಿಶುವಿಗೆ ಸೂಕ್ತ ಚಿಕಿತ್ಸೆ, ಶಸ್ತ್ರಕ್ರಿಯೆ ನೀಡಿ ವೈದ್ಯಕೀಯ ರಂಗದಲ್ಲಿ ಕ್ರಾಂತಿ ಮಾಡುವುದು. ಹುಟ್ಟಿ ಸಾಯುವ ಸಾವಿರಾರು ಶಿಶುಗಳ ಸಾವುಗ ಳನ್ನು ತಪ್ಪಿಸುವುದು. ತಾಯಂದಿರಿಗೆ ನೆಮ್ಮದಿ ನೀಡುವುದು ಎಂದು ಸಭೆ ನಿರ್ಣ ಯಿಸಿತು.

ಇದರಿಂದ ಪ್ರೇರಿತರಾದ ಡಾ. ಹೆರಿಸನ್ ಪ್ರಾಣಿಗಳಲ್ಲಿ ಪ್ರಯೋಗ ಮಾಡಲು ಸಜ್ಜಾ ದರು. ಭ್ರೂಣಗಳ ತೊಡಕು ತೊಂದರೆಗ ಳಿಗೆ ಸೂಜಿಯ ಮುಖಾಂತರ ಗರ್ಭಕೋಶ ದಲ್ಲಿ ಸುರಂಗ ಕೊರೆದು ಔಪದೋಪಚಾರ ಮಾಡಿ ಪರಿಹಾರ ಕಂಡು ಹಿಡಿದರು. ಅದೇ ಮಾರ್ಗವಾಗಿ ಭ್ರೂಣಗಳ ರಕ್ತ ಮತ್ತು



ಶಸ್ತ್ರ ಚಿಕಿತ್ಸೆಯ ನಂತರ.

ಮೂತ್ರವನ್ನು ಪರೀಕ್ಷೆಗಾಗಿ ತೆಗೆಯಲಾರಂಭಿಸಿದರು. ಈ ಪ್ರಯೋಗದಲ್ಲಿ ಮೊದಮೊದಲು ಕಾಣುತ್ತಿದ್ದ ಅಡ್ಡಿ ಆತಂಕಗಳನ್ನು ತೊಡೆದು ಹಾಕಿದರು. ಪ್ರಯೋಗದ ಪ್ರತಿ ಹಂತಗಳನ್ನು ಸೂಕ್ಷ್ಮವಾಗಿ ವೀಕ್ಷಿಸಿ, ತಮ್ಮ ಮುಂದಿನ ಸಂಶೋಧನೆಗಳಿಗೆ ಭದ್ರ ಬುನಾದಿ ಹಾಕಿದರು.

೧೯೮೧ರ ಅಂತ್ಯದಲ್ಲಿ ವೈದ್ಯಕೀಯ ಇತಿಹಾಸದ ಹೊಚ್ಚ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದರು. ಜಗತ್ತಿನ ವೈದ್ಯ ಮೇಧಾವಿಗಳ ಕಣ್ಣು ಅರಳಿಸಿದರು. ಗರ್ಭಿಣಿಯ ಕಿಬ್ಬೊಟ್ಟೆಯಲ್ಲಿ ಸೂಜಿ ಹಾಕಿ, ಮೂತ್ರನಾಳದ ಅಡ್ಡಿಯಿಂದ ನರಳುತ್ತಿದ್ದ ೩೦ ವಾರದ ಭ್ರೂಣಕ್ಕೆ ಚಿಕಿತ್ಸೆ ನೀಡುವಲ್ಲಿ ಯಶಸ್ವಿಯಾದರು. ಪತ್ರಿಕೆಯ ಮುಖಪುಟಗಳಿಗೆ ದಪ್ಪಕ್ಷರದ ಸುದ್ದಿಯಾದರು.

೧೯೮೨ರಲ್ಲಿ ಇಂಥಹ ಅವಕಾಶ ಅವರಿಗೆ ಮತ್ತೊಮ್ಮೆ ಸಿಕ್ಕಿತು. ಆಗ ಧೈರ್ಯಮಾಡಿ, ಗರ್ಭಸ್ಥ ಶಿಶುವಿನ ಮೇಲೆ ಶಸ್ತ್ರಕ್ರಿಯೆ ಮಾಡಿದರು. ಸಂಜಾತ ನ್ಯೂನತೆ ಹೋಗಲಾಡಿಸಿದರು. ಮರುಜನ್ಮಕ್ಕೆ ಶ್ರೀಕಾರ ಹಾಕಿದರು.

ಗರ್ಭಸ್ಥ ಶಿಶುವಿನ ಹೃದಯದ ಕವಾಟ ಕಿರಿದಾದಾಗ, ರಕ್ತ ಪರಿಚಲನೆಗೆ ಅಡ್ಡಿಯನ್ನೊಡ್ಡಿ, ಶಿಶುವಿನ ಬೆಳವಣಿಗೆಗೆ ತಡೆಹಾಕುವುದರ ಜೊತೆಗೆ, ಜೀವಕ್ಕೂ ಸಂಚಕಾರವಾಗಬಹುದು. ಅಂಥಹ ಸಂದರ್ಭಗಳಲ್ಲಿ ತಾಯಿಯ ಗರ್ಭಕೋಶದ ಮೂಲಕ ಚಿಕ್ಕ ರಬ್ಬರ ಟ್ಯೂಬ್ ತೂರಿಸಿ ಕವಾಟವನ್ನು ಹಿರಿದುಗೊಳಿಸಲಾಗುವುದು. ಗರ್ಭಿಣಿಯರಲ್ಲಿ ಎರಡಕ್ಕಿಂತ ಹೆಚ್ಚು ಮಕ್ಕಳು ಇವೆಯೆಂದು 'ಸೋನೋಗ್ರಾಮ್' ತಿಳಿಸಿದಾಗ ತಾಯಿಯ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಎರಡು ಮಕ್ಕಳನ್ನು ಉಳಿಸುವುದು ವೈದ್ಯರ ಕರ್ತವ್ಯ. ಅಂಥ ಸಂದರ್ಭಗಳಲ್ಲಿ ಶಿಶುಗಳ ಹೃದಯಕ್ಕೆ ಪೊಟ್ಯಾಸಿಯಂ ಕ್ಲೋರೈಡ್ ಇಂಜೆಕ್ಶನ್ನನ್ನು ಕರ್ಭಕೋಶದ ಮುಖಾಂತರ ಕೊಟ್ಟು ಮಿಡಿಯುವ ಹೃದಯ ಮಡಿಯುವಂತೆ ಮಾಡಲಾಗುವುದು. ಗರ್ಭಕೋಶದಲ್ಲಿರುವ ಭ್ರೂಣಗಳ ಸಂಖ್ಯೆ ಕಡಿಮೆ ಮಾಡುವ ಈ ಶಸ್ತ್ರಕ್ರಿಯೆಯು ದುರುಪಯೋಗ ಆಗಬಹುದೆಂಬ ಅಳುಕು ವೈದ್ಯರಲ್ಲಿಯೂ ಇದೆ. ವೈದ್ಯಕೀಯ ಕಾರಣಗಳಿಗಾಗಿ ಅವಿಷ್ಕಾರಗೊಂಡ ಈ ವಿಧಾನವನ್ನು ವೈದ್ಯಕೀಯವಲ್ಲದ ಕಾರಣಗಳಿಗೆ ಬಳಸುವುದನ್ನು ಬಹಿಷ್ಕರಿಸಿ ವೈದ್ಯಕೀಯ ಸಂಹಿತೆಗೆ ಶಕ್ತಿ ಒದಗಿಸುವಲ್ಲಿ ವೈದ್ಯರು ಸಹಕರಿಸಬೇಕು.

ಶಿಶುಗಳ ಶ್ವಾಸಕೋಶಗಳಲ್ಲಿ ಶೇಖರಗೊಳ್ಳುವ ಒಂದು ವಿಚಿತ್ರ ರೀತಿಯ ದ್ರವದಿಂದಾಗಿ, ಜನಿಸಿದ ಮೇಲೆ ಉಸಿರಾಟದಿಂದ ಪುಪ್ಪುಸಗಳ ಹಿಗ್ಗುವಿಕೆಗೆ ಅವಕಾಶ ಕೊಡುವುದಿಲ್ಲವಾದ್ದರಿಂದ 'ರೆಸ್ಪಿರೇಟರಿ ಡಿಸ್ಟ್ರೆಸ್ ಸಿಂಡ್ರೋಮ್'ದಿಂದ ಕೂಸು ಅಸುನೀಗಬಹುದು. ಇದನ್ನು ತಪ್ಪಿಸಲು ಶಿಶು ಗರ್ಭದಲ್ಲಿದ್ದಾಗ ಶಸ್ತ್ರ ಚಿಕಿತ್ಸೆ ಮಾಡಿ, ವಿಶೇಷ ದ್ರವವನ್ನು ತೆಗೆದು ಹಾಕಲು ಬರುತ್ತದೆ. ಭ್ರೂಣ ಬೆಳೆಯುವಾಗ ಮೂತ್ರನಾಳ ನಿರ್ಮಾಣವಾಗದಿದ್ದರೆ. ಮೂತ್ರ ಶೇಖರಣೆಯಿಂದ ಮೂತ್ರಕೋಶ ಬಲೂನಿನಂತೆ ಉಬ್ಬುತ್ತ ಹೋಗುವುದು. ಮೂತ್ರಪಿಂಡಗಳಿಗೆ ಹಾನಿಮಾಡಿ, ಪ್ರಾಣಾಪಾಯಕ್ಕೆ ಕಾರಣವಾಗಬಹುದು. ಇದನ್ನು ಹುಟ್ಟುವ ಮೊದಲೇ ಶಸ್ತ್ರಕ್ರಿಯೆ ಮಾಡಿ ಸರಿಪಡಿಸಲು ಬರುವುದು. ಈ ನ್ಯೂನತೆಯ ಹಾವಳಿ ಸಾಮಾನ್ಯವಾಗಿ ೩೫೦೦ ಗರ್ಭಸ್ಥ ಶಿಶುಗಳಲ್ಲಿ ಒಂದು ಶಿಶುವಿಗೆ ಕಾಣಿಸಬಹುದು.

ಗರ್ಭಸ್ಥ ಶಿಶುವಿನ ಶಸ್ತ್ರಚಿಕಿತ್ಸೆ ಮಾಡುವ ನಿಪುಣ ತಜ್ಞರು ಜಗತ್ತಿನಾದ್ಯಂತ ಕೇವಲ ಬೆರಳಿನಲ್ಲಿ ಎಣಿಸುವಷ್ಟು ಮಂದಿ ಇದ್ದಾರೆ. ಭಾರತದಲ್ಲಂತೂ ಇಲ್ಲವೆಂದೇ ಹೇಳಬೇಕು.

ಈಗ ಶಸ್ತ್ರಚಿಕಿತ್ಸಕರ ಮುಂದಿರುವ ದೊಡ್ಡ ಸಮಸ್ಯೆಯೆಂದರೆ ಶಸ್ತ್ರಕ್ರಿಯೆಯಿಂದ

ಸಂಪೂರ್ಣ ಗುಣವಾಗುವ ರೋಗಗಳನ್ನು ಪತ್ತೆ ಹಚ್ಚುವುದು. ಪಟ್ಟಿ ತಯಾರಿಸುವುದು. ಕೆಲವು ರೋಗಗಳು ಎಷ್ಟು ತೀವ್ರ ಸ್ವರೂಪದ್ದವುಗಳಾಗಿರುತ್ತವೆಂದರೆ, ಶಸ್ತ್ರಕ್ರಿಯೆ ಸ್ವಲ್ಪೂ ಪ್ರಯೋಜನವಾಗುವುದಿಲ್ಲ. ಇನ್ನು ಕೆಲವುಗಳಿಗೆ ಆತುರದಿಂದ ಆಪರೇಶನ್ ಮಾಡುವ ಅಗತ್ಯವಿರುವದಿಲ್ಲ. ಹುಟ್ಟಿದ ನಂತರ ಹಸುಗೂಸಿನ ಸ್ಥಿತಿ ನೋಡಿಕೊಂಡು, ಅಶಕ್ತವಾಗಿದ್ದಲ್ಲಿ ಸಶಕ್ತವಾಗುವವರೆಗೆ ಕಾಯ್ದು ಶಸ್ತ್ರಕ್ರಿಯೆ ಮಾಡಬಹುದು. ಹೀಗಾಗಿ ಭ್ರೂಣ ಶಸ್ತ್ರ ಚಿಕಿತ್ಸೆಯ ಬಗ್ಗೆ ಜನರಿಗೆ ತಿಳುವಳಿಕೆ ಅಗತ್ಯ. ಇಲ್ಲವಾದಲ್ಲಿ ಈ ಅಜ್ಞಾನದ ಪ್ರಯೋಜನ ಪಡೆದ ವೈದ್ಯರು ಸಾರ್ವಜನಿಕರನ್ನು ಶೋಷಿಸುವ ಮತ್ತೊಂದು ಅಸ್ತ್ರವಾಗಿ ಇದರ ಅಪಬಳಕೆಯಾಗಬಹುದು.

ತಾಯಿಯ ಒಪ್ಪಿಗೆ ಇಲ್ಲಿ ಅತೀ ಮುಖ್ಯ. ಶಿಶುವಿನ ಉಳುವಿಗಾಗಿ, ತಾಯಿಗೇಕೆ ಶಿಕ್ಷೆ? ಇದು ವೈದ್ಯಕೀಯ ಸಂಹಿತೆಗೆ ವ್ಯತಿರಿಕ್ತವಾಗಿದೆ ಎಂದು ವೈದ್ಯರ ಗುಂಪೊಂದು ವಾದಿಸುತ್ತಿದೆ. ಶಸ್ತ್ರಕ್ರಿಯೆ ಕೈಕೊಂಡಾಗಲೂ ಶಿಶು ಅಪಾಯದಿಂದ ಪಾರಾಗದಿರುವ ಸಂದರ್ಭಗಳಲ್ಲಂತೂ ಇವರ ವಾದ ನೂರಕ್ಕೆ ನೂರು ಸತ್ಯ. ಕಾರಣ ತಾಯಂದಿರ ಹಕ್ಕು ಬಾಧ್ಯತೆಗಳ ಮರು ಪರಿಶೀಲಿಸಲು ಇದು ಸೂಕ್ತ ಕಾಲ.

ಹೊಸ ಅಧ್ಯಾಯದಿಂದ ವೈದ್ಯರು ಉತ್ಸುಕರಾಗಬಹುದು. ಆದರೆ ಅದನ್ನು ಕೈಕೊಳ್ಳುವ ಪೂರ್ವದಲ್ಲಿ ಆ ವಿಷಯದಲ್ಲಿ ಪರಿಣತಿ, ಪಾಂಡಿತ್ಯ, ಪಳಗುವಿಕೆ ಅತ್ಯಗತ್ಯ. ಈ ವಿಧಾನದಿಂದ ಪುಪ್ಪುಸ ಮತ್ತು ಬೆನ್ನೆಲುಬುಗಳಲ್ಲಿಯ ದೊಡ್ಡ ಗಂಟುಗಳಿಗೆ, ತೀವ್ರತರದ ಹುಟ್ಟು ಹೃದಯ ರೋಗಗಳಿಗೆ ಸಾಕಷ್ಟು ಪ್ರಯೋಜನವಾಗುವುದು ಎಂಬ ಡಾ. ಹೆರಿಸನ್‌ರ ಆಶಾ ಧ್ವನಿಗೆ ಬಹಳಷ್ಟು ತಜ್ಞರು ಒಪ್ಪಿದ್ದಾರೆ. ಇದು ಶಿಶುಗಳ ಸಾಕಷ್ಟು ಸಮಸ್ಯೆಗಳಿಗೆ ಉತ್ತರವಾಗಿದ್ದರೂ, ಅಷ್ಟೇ ಸಮಸ್ಯೆಗಳ ಹುಟ್ಟಿಗೂ ಹೊಸ ಅಸ್ತ್ರವಾಗಲಿದೆ ಎಂಬುದನ್ನು ತಳ್ಳಿಹಾಕುವಂತಿಲ್ಲ. ಇವೆಲ್ಲವುಗಳ ಮಧ್ಯಯೂ, ವೈದ್ಯಕೀಯ ರಂಗಕ್ಕೆ ಹೊಸ ಆಯಾಮ ನೀಡಿರುವುದು ಸತ್ಯ. ✱

"ಬಹಳ ಮಂದಿ ಅರ್ಜುನರು!!"

ಗಾಂಧೀಜಿಯವರು 1930ರಲ್ಲಿ ಅಲಹಾಬಾದ್ ಜೈಲಿನಲ್ಲಿದ್ದಾಗ ನಡೆದ ಘಟನೆ ಇದು- ಸಾಬರಮತಿ ಆಶ್ರಮದಲ್ಲಿದ್ದ ಗಾಂಧೀಜಿಯವರ ಶಿಷ್ಯರಲ್ಲಿ ಸಣ್ಣ ಪುಟ್ಟ ಮಕ್ಕಳು ಅವರಿಗೆ ಪ್ರತಿವಾರವೂ ದೀರ್ಘವಾಗಿ ಪತ್ರ ಬರೆಯುತ್ತಿದ್ದವು. ಅವುಗಳಿಗೆ ಗಾಂಧಿಜೀಯವರು ತಕ್ಷಣವೇ ಸಂಕ್ಷಿಪ್ತವಾಗಿ ಉತ್ತರ ಬರೆದು ಕಳುಹಿಸುತ್ತಿದ್ದರು. ಒಮ್ಮೆ ಒಬ್ಬ ತುಂಟ ಬಾಲಕನು ಬರೆದ ಪತ್ರದ ಒಕ್ಕಣೆ ಹೀಗಿತ್ತು-

"ಬಾಪೂಜೀ! ... ನೀವು ಸದಾ ಭಗ್ವದ್ಗೀತೆಯ ಬಗ್ಗೆ ಹೇಳುತ್ತಿರುತ್ತೀರಲ್ಲಾ!... ಅದರಲ್ಲಿ ಅರ್ಜುನ ಒಂದು ಸಣ್ಣ ಪ್ರಶ್ನೆ ಹಾಕಿದರೆ ಶ್ರೀಕೃಷ್ಣ ಅಧ್ಯಾಯ, ಅಧ್ಯಾಯಗಳಷ್ಟು ಉತ್ತರ ನೀಡುತ್ತಿದ್ದ. ಆದರೆ ನಾವು ಅಷ್ಟಷ್ಟು!.... ಉದ್ದವಾದ ಪ್ರಶ್ನೆ ಹಾಕಿದರೆ ನೀವು ಚುಟುಕಾಗಿ ಉತ್ತರ ಬರೆಯುತ್ತೀರಲ್ಲಾ! ಹೀಗೇಕೆ?

ಪ್ರತ್ಯುತ್ತರವಾಗಿ ಗಾಂಧೀಜಿಯವರು ಹೀಗೆ ಬರೆದರು - "ಶ್ರೀಕೃಷ್ಣನಿಗೆ ಒಬ್ಬನೇ ಅರ್ಜುನನಿದ್ದನೆಂಬ ವಿಷಯವನ್ನು ನೀನು ಮರೆತಂತಿದೆ. ಆದರೆ ನನಗೆ ಬಹಳ ಮಂದಿ ಅರ್ಜುನರಿದ್ದಾರಲ್ಲಾ ಮಗೂ!!...." ●

(ಸಂಗ್ರಹ): ಜೆ. ಎ. ಪ್ರಭು

ಸೊಂದಲಗೆರೆ ಲಕ್ಷ್ಮೀಪತಿ

ಸಾಗರ ಖನಿಜಗಳು

ಖನಿಜಗಳು ಮಾನವ ಜೀವನದ ಒಂದು ಅವಿಭಾಜ್ಯ ಅಂಗ. ಅವನು ತಿನ್ನುವ ಆಹಾರ, ತೊಡುವ ಬಟ್ಟೆ ಅಲ್ಲದೆ ಅವನ ದೇಹ ಕೂಡ ಅನೇಕ ಬಗೆಯ ಖನಿಜಗಳ ಖನಿಯೇ ಆಗಿದೆ. ಮಾನವ ಈ ಧರಣಿಯಲ್ಲಿ ಜನ್ಮ ತಾಳಿದಾಗಿನಿಂದ ಹಿಡಿದು ಇಂದಿನವರೆಗೆ ಅವನ ಇಡೀ ಇತಿಹಾಸದುದ್ದಕ್ಕೂ ಖನಿಜಗಳು ವಿಶೇಷ ಪಾತ್ರವನ್ನು ವಹಿಸಿದೆ. ಆದಿಮಾನವನಿಂದಿಡಿದು ಆಧುನಿಕ ಮಾನವನವರೆಗೆ ಅವನ ಏಳಿಗೆಯ ವಿವಿಧ ಹಂತಗಳಲ್ಲಿಯ ಅವನ ಬದುಕು, ಉಳಿವು ಹಾಗೂ ಅವನ ಅಂತ್ಯ ಕರ್ಮದವರೆಗಿನ ಎಲ್ಲ ಕಾರ್ಯಗಳಲ್ಲೂ ಖನಿಜಗಳು ವಿಶೇಷ ಪಾತ್ರ ವಹಿಸಿವೆ. ಹಳೆ ಶಿಲಾಯುಗದ ಮಾನವ ಪ್ರಾರಂಭಕ್ಕೆ ತನ್ನ ಹೊಟ್ಟೆ ಪಾಡಿಗಾಗಿ ಖನಿಜಗಳ ಮೊರೆ ಹೋದವನು ಕ್ರಮೇಣ ಅವುಗಳನ್ನು ತನ್ನ ಬದುಕಿಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದನ್ನು ಹೊಸಶಿಲಾಯುಗದಲ್ಲಿ ಅರಿತುಕೊಂಡ.

ಮಾನವನಿಗೆ ಬಹಳ ನಿಧಾನವಾಗಿ ಖನಿಜಗಳ ಬಳಕೆಯ ಮಾರ್ಗೋಪಾಯಗಳು ಹೊಳೆದವು. ಪ್ರಾರಂಭಕ್ಕೆ ಮಾನವ ಬಳಸಿದ ಪ್ರಥಮ ಖನಿಜಗಳು ತಾಮ್ರ, ಸತುವು, ತವರ. ಆದಕಾರಣ ಈ ಕಾಲವನ್ನು ತಾಮ್ರಯುಗವೆಂತಲೂ ತದನಂತರದ ಯುಗದಲ್ಲಿ ಕಬ್ಬಿಣ ವ್ಯಾಪಕವಾಗಿ ಬಳಕೆಗೆ ಬಂದುದರಿಂದ ಕಬ್ಬಿಣದ ಯುಗವೆಂತಲೂ ಕರೆಯಲಾಯಿತು. ಇದಕ್ಕೆ ಪುಷ್ಠಿಯಾಗಿ ಹರಪ್ಪ ಮತ್ತು ಮಹೆಂಜದಾರೋ ಸಂಸ್ಕೃತಿಗಳಲ್ಲಿ ದೊರೆತ ಆಯುಧಗಳ ಅವಶೇಷಗಳಿಂದ ಕ್ರಿ. ಪೂ. 5000-6000 ದಲ್ಲಿ ಹೆಚ್ಚು ಹೆಚ್ಚು ಖನಿಜಗಳು ಬಳಕೆಯಾಗುತ್ತಿದ್ದವೆಂದು ತಿಳಿದು ಬಂದಿದೆ. ನಮ್ಮ ಮಹಾಗ್ರಂಥಗಳೆನಿಸಿದ ರಾಮಾಯಣ, ಮಹಾಭಾರತಗಳಲ್ಲಿ ಬರುವ ವೈಭವೋಪೇತ ಆಭರಣ, ವಿವಿಧ ಬಗೆಯ ಆಯುಧಗಳ ವರ್ಣನೆಯಿಂದ ಖನಿಜಗಳ ಬಳಕೆ ಅಂದಿನ ಕಾಲದಲ್ಲಿ ವ್ಯಾಪಕವಾಗಿ ಇತ್ತೆಂದು ತಿಳಿದು ಬರುತ್ತದೆ. ಅಲ್ಲದೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ಗಣಿಕೈಗಾರಿಕೆ ಬಗ್ಗೆ ವಿಶೇಷ ವ್ಯಾಖ್ಯಾನವಿದೆ. ಒಟ್ಟನಲ್ಲಿ ಮಾನವ ಅನಾದಿಕಾಲದಿಂದಲೂ ತನ್ನ ಸ್ವಹಿತಕ್ಕೆ, ಅಭಿವೃದ್ಧಿಗೆ, ಖನಿಜಗಳ ಮೊರೆ ಹೊಕ್ಕಿದ್ದಾನೆ. ಭವಿಷ್ಯದಲ್ಲಿಯೂ ಖನಿಜಗಳಿಗೂ ಮಾನವನಿಗೂ ಇರುವ ಸಂಬಂಧ ಒಂದಕ್ಕೊಂದು ತಳಕು ಹಾಕಿಕೊಂಡಿದೆ.

ಶತಶತಮಾನಗಳಿಂದ ಖನಿಜ ನಿಕ್ಷೇಪಗಳನ್ನು ಬರಿದು ಮಾಡುತ್ತ ಬಂದ ಮಾನವ ಇನ್ನೂ ಎಷ್ಟು ದಿನ ಹೀಗೆಯೇ ತನ್ನ ಅಗತ್ಯಗಳ ಪೂರೈಕೆಗಾಗಿ ಭೂಗರ್ಭದತ್ತ ಕಣ್ಣಾಡಿಸಬಲ್ಲ ಎಂಬ ಪ್ರಶ್ನೆ ಈಗ ನಮ್ಮ ಮುಂದಿದೆ.

ನಮ್ಮ ಖನಿಜ ನಿಕ್ಷೇಪಗಳು ಬರಿದಾಗದ ಅಕ್ಷಯ ಪಾತ್ರೆಯೇನಲ್ಲ; ಒಂದಲ್ಲ ಒಂದು ದಿನ ಅವು ಬರಿದಾಗುವುದು ಶತಃಸಿದ್ಧ. ಖನಿಜಗಳ ಗಣಿಕಾರ್ಯ ಮುಂದುವರಿದಂತೆಲ್ಲಾ ಅವು ಕ್ಷೀಣಿಸುತ್ತ ಬರುತ್ತವೆ. ಇಂಧನ ನಿಕ್ಷೇಪವಂತೂ ಪೂರ್ಣ ಪ್ರಮಾಣದಲ್ಲಿ ದಹಿಸಿ, ಬೂದಿ ಇರಲಿ, ಹೊಗೆಯೂ ಸಹ ಸಿಗದಂತಹ ಅಪೂರ್ವ ಖನಿಜ; ಈ ಬಗೆಯ ಖನಿಜಗಳು ದಿನೇ ದಿನೇ ಮುಗಿಲು ಮುಟ್ಟುತ್ತಿರುವ ಅಪಾರ ಜನಸಂಖ್ಯೆಯ ಅಗತ್ಯಗಳನ್ನು ಪೂರೈಸಬಲ್ಲವೆ? ಈಗಿನ

ದರದಲ್ಲೇ ಖನಿಜಗಳ ಗಣಿಕಾರ್ಯ ಮುಂದುವರಿದರೆ ಕಲ್ಲಿದ್ದಲು, ಕಬ್ಬಿಣದ ಅದಿರು, ಬಾಕ್ಸೈಟ್, ಕ್ರೊಮೈಟ್, ಪೆಲ್ಸಪರ್, ಲೈಮ್‌ಸ್ಟೋನ್ ನಿಕ್ಷೇಪಗಳು ಕೆಲವೇ ನೂರು ವರ್ಷಗಳಲ್ಲಿ ಬರಿದಾಗುವ ಸೂಚನೆಗಳಿವೆ. ಅಂತೆಯೇ ನೈಸರ್ಗಿಕ ಅನಿಲ, ಮ್ಯಾಂಗನೀಸ್, ನಿಕ್ಕಲ್, ಮಾಲಿಬ್ಡಿನಮ್, ಕೊಬಾಲ್ಟ್, ಟೈಟಾನಿಯಮ್, ಜಿಪ್ಸಮ್, ಕಾಗೆ ಬಂಗಾರ, ಗ್ರಾಫೈಟ್, ಕಯಾನೈಟ್ ಮತ್ತು ಟಾಲ್ಕ್ ನಿಕ್ಷೇಪಗಳು ಕೇವಲ ಕೆಲವೇ ದಶಕಗಳಲ್ಲಿ ಖಾಲಿಯಾಗಲಿವೆ. ಇನ್ನು ಮೂರರಿಂದ ಐದು ದಶಕಗಳಲ್ಲಿ ತಾಮ್ರ, ಸತು, ತವರ, ಸೀಸ, ಪಾದರಸ, ಚಿನ್ನ, ಬೆಳ್ಳಿ, ವಜ್ರ, ಅಸಬೆಸ್ಟಾಸ್ ನಿಕ್ಷೇಪಗಳು ಬರಿದಾಗುವ ಸೂಚನೆಗಳಿವೆ. ಖಾಲಿಯೇ ಆಗದು ಎಂಬ ಖಾತ್ರಿಯ ಖನಿಜಗಳಾದ ರಂಜಕ, ಪೊಟಾಷ್‌ಗಳಿಗೂ ಈ ಮಾತು ಅನ್ವಯಿಸುತ್ತದೆ.

ಜನಸಂಖ್ಯೆಯ ಹೆಚ್ಚಳಕ್ಕೂ ಖನಿಜಗಳ ಬಳಕೆಗೂ ಸಾಮ್ಯವಿದೆ. ಜನಸಂಖ್ಯೆ ಏರಿದಂತೆಲ್ಲ ಖನಿಜಗಳ ಬೇಡಿಕೆ ಗಣನೀಯವಾಗಿ ಏರುತ್ತದೆ. ಉದಾಹರಣೆಗೆ ಜಾಗತೀಕ ಎರಡನೆ ಮಹಾಯುದ್ಧದ ಸಮಯದಲ್ಲಿ ಬಳಸಿದ ಒಟ್ಟು ಖನಿಜದ ಪ್ರಮಾಣ ಯುದ್ಧ ಪೂರ್ವದ ಇಡೀ ಮಾನವ ಇತಿಹಾಸದಲ್ಲಿ ಬಳಕೆಯಾಗಲಿಲ್ಲ. ಈಗಿನ ಪ್ರಮಾಣದಲ್ಲೇ ಪ್ರಾಕೃತಿಕ ನಿಕ್ಷೇಪಗಳನ್ನು ಬರಿದು ಮಾಡುತ್ತ ಹೋದರೆ ಇನ್ನು 50 ವರ್ಷಗಳಲ್ಲಿ ಇಡೀ ಮಾನವ ಕುಲದ ಅಭಿವೃದ್ಧಿ ಚಟುವಟಿಕೆಗಳಿಗೆ ಬರಸಿಡಿಲು ಅಪ್ಪಳಿಸಿದಂತಾಗುತ್ತದೆ. ಆದರೆ ಆಶಾವಾದಿಯಾದ ಮಾನವ ತನ್ನ ಸುತ್ತಲಿನ ನಿಸರ್ಗದ ಒಡಲಿನಲ್ಲಿ ಅಪಾರ ಖನಿಜ ಸಂಪತ್ತು ಅಡಗಿದೆ ಎಂಬ ಆಸೆಯನ್ನು ಹೊತ್ತಿದ್ದಾನೆ. ಅವನ ಈ ಆಸೆಗೆ ವಿಶಾಲ ತಿಳಿ ನೀಲಿ ಸಾಗರ ಇಂಬುಕೊಟ್ಟಿದೆ. ಪ್ರತಿ ಘನ ಮೈಲಿ ಸಮುದ್ರದ ಒಡಲಾಳದಲ್ಲಿ 166 ಮಿಲಿಯನ್ ಟನ್‌ನಷ್ಟು ಖನಿಜ ಭರ್ತಿಯಾಗಿದೆಯೆಂದು ಅಂದಾಜು ಮಾಡಲಾಗಿದೆ. ದಿನವೊಂದಕ್ಕೆ ಒಂದು ಸಾವಿರ ಮಿಲಿಯನ್ ಗ್ಯಾಲನ್ ಸಾಗರದ ನೀರು 45 ಮಿಲಿಯನ್ ಟನ್‌ನಷ್ಟು ಸೋಡಿಯಮ್ ಕ್ಲೋರೈಡ್ 3.5 ಮಿಲಿಯನ್ ಟನ್‌ನಷ್ಟು ಅನ್‌ಹೈಡ್ರೈಟ್, 1.5 ಮಿಲಿಯನ್ ಟನ್‌ನಷ್ಟು ಗಂಧಕ, 1.2 ಮಿಲಿಯನ್ ಟನ್‌ನಷ್ಟು ಪೊಟಾಷಿಯಮ್ ಕ್ಲೋರೈಡ್, 108,000 ಟನ್‌ನಷ್ಟು ಬ್ರೋಮೈನ್, 67ಸಾವಿರ ಟನ್‌ನಷ್ಟು ಬೋರಾಕ್ಸ್, 45 ಸಾವಿರ ಟನ್‌ನಷ್ಟು ಸ್ಟ್ರಾಂಶಿಯಮ್ ಸಲ್ಫೇಟ್ ಹಾಗೂ 27 ಸಾವಿರ ಟನ್‌ನಷ್ಟು ಮೆಗ್ನೀಶಿಯಮ್ ನೀಡುತ್ತದೆ.

ಒಟ್ಟು ಭೂಮಿಯಲ್ಲಿ ನೀರು ಶೇ. 71 ಭಾಗ. ಚಿತ್ತಾಕರ್ಷಕ ಮತ್ತೊಂದು ಕೌತುಕ ಜಗತ್ತೇ ಈ ವಿಶಾಲ ಸಾಗರದಡಿಯಲ್ಲಿ ಹುದುಗಿದೆ. ಇಂದು ಜಗತ್ತಿನ 1/5ನೇ ಭಾಗದಷ್ಟು ನೈಸರ್ಗಿಕ ಇಂಧನ ಈ ಮೋಹಕ ಜಲನಿಧಿಯ ತಳದಲ್ಲಿ ಲಭ್ಯವಿದೆ. ಒಂದು ಘನಮೈಲಿ ಸಾಗರದ ನೀರಿನಿಂದ 166 ಮಿಲಿಯನ್ ಟನ್‌ನಷ್ಟು ಖನಿಜಗಳು ದೊರೆತರೆ ಇಡೀ ಭೂಗೋಲದಲ್ಲಿ 300 ಮಿಲಿಯನ್ ಘನ ಮೈಲಿಯಷ್ಟಿರುವ ವಿಶಾಲ ಸಾಗರದಿಂದ ಒಟ್ಟು 50 ಸಾವಿರ ಮಿಲಿಯನ್ ಟನ್‌ನಷ್ಟು ಖನಿಜಗಳ ಆಕರವನ್ನು ಅಂದಾಜು ಮಾಡಬಹುದು.

ಈ ಸಾಗರ ಖನಿಜಗಳು ಬೆಳಕಿಗೆ ಬಂದದ್ದೇ 1872ರಿಂದ 1876ರವರೆಗೆ ಬ್ರಿಟೀಷ್‌ಸಂಶೋಧನಾ ನೌಕೆ; ಹೆಚ್.ಎಂ.ಎಸ್. ಚಾಲೆಂಜರ್ ಪ್ರಪಂಚ ಪರ್ಯಟನೆ ಕೈಗೊಂಡಾಗ ಈ ನೌಕೆಯಲ್ಲಿದ್ದ ವಿಜ್ಞಾನಿ ಸರ್ ಜಾನ್ ಪ್ರಪ್ರಥಮ ಬಾರಿಗೆ ಸಾಗರದ ತಳದಲ್ಲಿ ಬಹು ಲೋಹಗಳ ಗುಡ್ಡೆ ಗುಡ್ಡೆ ರಾಶಿಗಳನ್ನು 'ಖನಿಜಗೋಲಿಗಳು' ಎಂದು ಕರೆದ. ಆದರೆ ಈ ನೌಕೆಯಲ್ಲಿದ್ದ ಯಾರೊಬ್ಬರೂ ಮುಂದಿನ ನೂರು ವರ್ಷಗಳಲ್ಲಿನ ಇಡೀ ಜಗತ್ತು ಈ ಗೋಲಿಗಳತ್ತ ತನ್ನ ಗಮನವನ್ನು ಕೇಂದ್ರಿಕರಿಸುತ್ತದೆ ಎಂದು ಕನಸು ಸಹ ಕಂಡಿರಲಿಲ್ಲ. ಈ ಖನಿಜಗೋಲಿಗಳು ಜಗತ್ತಿನ ಮೂರು ಮಹಾ ಸಾಗರಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹರಡಿವೆ. ಈ ಖನಿಜ ಗೋಲಿಗಳನ್ನು 'ಸಾಗರದ ಬೆಳೆ' ಎಂದು ಕರೆಯುತ್ತಾರೆ.

ಈ ಮಾತು ಅಕ್ಷರಶಃ ಸತ್ಯ. ಖನಿಜ ಗೋಲಿಗಳ ಹುಟ್ಟು ಮತ್ತು ಬೆಳವಣಿಗೆಯು ಇದನ್ನು ಸಮರ್ಥಿಸುತ್ತದೆ. ವರ್ಷೇ ವರ್ಷೇ ಹುಲುಸಾಗಿ ವೃದ್ಧಿಸುತ್ತದೆ. ವರ್ಷಂಪ್ರತಿ ಸಾಗರದ ತಳದಲ್ಲಿ ಸುಮಾರು 10 ಮಿಲಿಯನ್ ಟನ್‌ನಷ್ಟು ಖನಿಜ ಗೋಲಿಗಳು ಉತ್ಪಾದನೆಯಾಗುತ್ತವೆ. ಪ್ರತಿ 3 ಸೆಕೆಂಡಿಗೊಮ್ಮೆ ಒಂದು ಟನ್‌ನಷ್ಟು ಲೋಹದ ಆಕ್ಸೈಡ್, ಆ ಗೋಲಿಗಳ ಮೇಲೆ ಬಂದು ಉರುಳುತ್ತವೆ. ಈ ಕಾರಣಗಳಿಂದ ಸಾಗರವನ್ನು 'ಫಲ ವೃಕ್ಷ' ಎಂದು ಕರೆಯುವುದು.

ಆದರೆ ಈ ಖನಿಜಗೋಲಿಗಳು ಆಕರ್ಷಣೀಯವೇನಲ್ಲ. ನೋಡಲು ಮಣ್ಣಿನ ಮುದ್ದೆಯಂತಿರುವ ಇವುಗಳ ಗಾತ್ರ 3 ರಿಂದ 10 ಸೆಂಟಿಮೀಟರ್. ಆಲೂಗಡ್ಡೆಯಂತೆ ದುಂಡು ದುಂಡಾಗಿದ್ದು ಬಣ್ಣದಲ್ಲಿ ಶ್ಯಾಮಲವರ್ಣದಿಂದ ಹಿಡಿದು ಕಡುಕಂದು ಬಣ್ಣದವರೆಗೆ ಇವೆ. ಭೂಗರ್ಭದಲ್ಲಿ ಖನಿಜಗಳ ಕೊರತೆಯಿಂದಾಗಿ, ಈ ಖನಿಜಗೋಲಿಗಳು ವ್ಯಾಪಕ ಪ್ರಚಾರ ಮತ್ತು ಪ್ರಾಮುಖ್ಯತೆ ಗಿಟ್ಟಿಸಲು ಕಾರಣವಾಗಿದೆ. ಕೆಲವು ಅಮೂಲ್ಯ ಮತ್ತು ಅಪರೂಪದ ಖನಿಜಗಳು ಅಪಾರ ಪ್ರಮಾಣದಲ್ಲಿ ಸಾಗರದ ತಳದಲ್ಲಿ ದೊರಕುವುದರಿಂದ ಇವುಗಳ ಗಣಿಕಾರ್ಯ ಇತ್ತೀಚಿನ ದಿನಗಳಲ್ಲಿ ಹೆಚ್ಚು ಮಹತ್ವವನ್ನು ಪಡೆದಿದೆ. ಇಂತಹ ಅಪರೂಪದ ಖನಿಜಗಳೆಂದರೆ ಸತು, ಬೇರಿಯಮ್, ಮಾಲಿಬೆಡಿನಮ್, ವೆನಡಿಯಮ್, ಕ್ರೋಮಿಯಮ್ ಮತ್ತು ಟೈಟಾನಿಯಮ್. ಈ ಖನಿಜಗಳಿಲ್ಲದೆ ಹಲವು ಕೈಗಾರಿಕೆಗಳು ತಮ್ಮ ಉತ್ಪಾದನೆಯನ್ನು ಮುಂದುವರಿಸಲಾರವು.

ಫೆಸಿಫಿಕ್ ಸಾಗರವು ಅತಿ ಹೆಚ್ಚು ಬಹುಲೋಹಗಳುಳ್ಳ ಖನಿಜಗೋಲಿಗಳ ನಿಕ್ಷೇಪವನ್ನು ಹೊಂದಿದೆ. ಹಿಂದೂಮಹಾಸಾಗರ 10 ಮಿಲಿಯನ್ ಚದುರ ಕಿ.ಮಿ. ವಿಸ್ತೀರ್ಣದಲ್ಲಿ ಇಂತಹ ಗೋಲಿಗಳ ನಿಕ್ಷೇಪ ಹೊಂದಿದ್ದು 2ನೇ ಸ್ಥಾನದಲ್ಲಿ ನಿಲ್ಲುತ್ತದೆ. ಹಿಂದೂ ಮಹಾಸಾಗರದ ಗೋಲಿಗಳ ಖನಿಜ ಪ್ರಮಾಣವನ್ನು ಭಾರತೀಯ ಸಂಶೋಧನಾ ನೌಕೆ 'ಗವೇಶಾನಿ' ಈಗಾಗಲೇ ನಡೆಸಿದೆ. ಈ ಅನ್ವೇಷಣೆಯಂತೆ ಮ್ಯಾಂಗನೀಸ್ ಶೇ.37, ಕಬ್ಬಿಣ ಶೇ.37, ನಿಕ್ಕಲ್ ಶೇ.1.55, ತಾಮ್ರ ಶೆ.1.36 ಮತ್ತು ಕೋಬಾಲ್ಟ್ ಶೇ.0.99 ರಷ್ಟಿದೆ.

ಈ ಗೋಲಿಗಳ ಮತ್ತೊಂದು ಅಪೂರ್ವ ವೈಶಿಷ್ಟ್ಯವೆಂದರೆ ಅವು ಸಮುದ್ರ ತಳದ ಮೇಲ್ಭಾಗದಲ್ಲಿ ಹರಡಿರುವುದು. ತೀರಾ ಕೆಳಗೂ ಅಲ್ಲ, ಅಲ್ಲದೆ ಈ ನಿಕ್ಷೇಪಗಳ ಮೇಲೆ ಯಾವುದೇ ಗಸಿ ಅಥವಾ ಮಡ್ಡಿ ಕುಳಿತಿಲ್ಲ. ಸುಲಭವಾಗಿ ಈ ನಿಕ್ಷೇಪಗಳ ಚಿತ್ರ ತೆಗೆಯಬಹುದು. ಭೂತೀರದಿಂದ 100 ಕಿ.ಮಿ. ದೂರದಲ್ಲಿ ಇವುಗಳು ಕಂಡುಬರುತ್ತವೆ.


'ಖನಿಜಗೋಲಿ'ಗಳ ಹುಟ್ಟಿನ ಬಗ್ಗೆ ಅನೇಕ ವಾದಗಳಿವೆ. ವಿಜ್ಞಾನಿಗಳ ಅಭಿಪ್ರಾಯದಂತೆ ಈ ನಿಕ್ಷೇಪಗಳು ಅನೇಕ ಮಿಲಿಯನ್ ವರ್ಷಗಳಿಂದ ಸತತವಾಗಿ ಸಾಗರಕ್ಕೆ ಹರಿದುಬಂದ ಗಸಿ ಅಥವಾ ಮಡ್ಡಿಯಿಂದ ವಿಚಲಿತವಾಗದೆ ಸಾಗರದ ತಳದ ಮೇಲ್ಭಾಗದಲ್ಲಿ ಚಾಪೆಯಂತೆ ಹಾಸಿವೆ. ಈ ಸಮುದ್ರ ಬೆಳೆಗಳು ಒಂದು ಮಿಲಿಯನ್ ವರ್ಷಕ್ಕೆ 1 ಮಿ.ಮೀ.ನಿಂದ 4 ಮಿ.ಮೀ. ರವರೆಗೆ ಬೆಳೆಯುತ್ತವೆಂದು ಗುರುತಿಸಲಾಗಿದೆ. ಒಟ್ಟಿನಲ್ಲಿ ಸಾಗರದ ಈ ಸಮೃದ್ಧ ಹುಲುಸು ಬೆಳೆ ಅನೇಕ ಅಂಶಗಳ ಸಹಕಾರದ ಒಟ್ಟಂಶದ ಫಲವೆಂದೇ ಹೇಳಬೇಕು. ಅಂದರೆ, ಸಾಗರಕ್ಕೆ ಹರಿದು ಬರುವ ಗಸಿ ಅಥವಾ ಮಡ್ಡಿ, ಸಾಗರದ ಸೂಕ್ಷ್ಮಾಣುಜೀವಿ ಮತ್ತು ಅಗ್ನಿಶಿಲಾ ಚಟುವಟಿಕೆಗಳು ಅನೇಕ ಮಿಲಿಯನ್ ವರ್ಷಗಳಿಂದ ನಡೆಯುತ್ತಾ ಬಂದಿರುವುದರ ಒಟ್ಟಾರೆ ಪ್ರತಿಫಲವಿದು. ಸಾಗರದಲ್ಲಿ ಈ ಚಟುವಟಿಕೆ ನಿರಂತರ, ಅನಂತ. ಆದಕಾರಣ ಸಾಗರದ ಈ ಖನಿಜಗೋಲಿಗಳ ನಿಕ್ಷೇಪಗಳನ್ನು ಅಕ್ಷಯ ಪಾತ್ರೆ ಎನ್ನುವದು. ಆದರೆ ಭೂಗರ್ಭದ ನಿಕ್ಷೇಪಗಳ ಕಥೆ ಹಾಗಲ್ಲ., ಬರಿದಾಗುವ ಖಾಲಿ ಪಾತ್ರೆ - ಮತ್ತೆಂದು ಅವು ತುಂಬವು. ಸಾಗರದ ನಿಕ್ಷೇಪಗಳು ಖಾಲಿಯೂ ಆಗವು. ಖಾಲಿಯಾದಂತೆಲ್ಲ ತುಂಬುತ್ತ ಹೋಗುವ ಅಕ್ಷಯ ಪಾತ್ರೆ. ■

'ಮದುವೆ ಹವ್ಯಾಸ'ದ ಸ್ಕಾಟಿ ಎಂಬ ಮುದುಕ

ಹರೀಶ್ ಪುತ್ತೂರಾಯ್

ಸ್ಕಾಟಿ ವೋಲ್ಫ್ ನಾಲ್ಕು ವರ್ಷಗಳ ಹಿಂದೆ ಮದುವೆಯಾದ. ಅರೆ, ಮದುವೆಯಾಗುವುದರಲ್ಲೇನು ವಿಶೇಷ ಎಂದು ಹುಬ್ಬೇರಿಸಬೇಡಿ. ಅದು ಆತ ತನ್ನ 77ನೇ ವಯಸ್ಸಿನಲ್ಲಿ ಮಾಡಿಕೊಂಡ 27ನೇ ವಿವಾಹ! ಸ್ಕಾಟಿ - ಡೈಸಿಯರದ್ದು ನೋಡುವವರ ಕಣ್ಣಿಗೆ ಅಪೂರ್ವ ಜೋಡಿಯಾಗಿತ್ತು. ಸ್ಕಾಟಿಯ ಜೀವನದಲ್ಲಿ ಅತಿ ದೀರ್ಘಕಾಲ ಒಟ್ಟಾಗಿ ಜೀವಿಸಿದ ಕೀರ್ತಿಯೂ ಡೈಸಿಯ ಪಾಲಿಗೆ ಸೇರುತ್ತದೆ. ಏಕೆಂದರೆ ಸ್ಕಾಟಿ ವೋಲ್ಫ್ ಯಾವತ್ತಿಗೂ ಅತಿ ದೀರ್ಘಾವಧಿಯ ವೈವಾಹಿಕ ಜೀವನದಲ್ಲಿ ನಂಬಿಕೆ ಮತ್ತು ಆಸಕ್ತಿಗಳೆರಡನ್ನೂ ಹೊಂದಿದವನಲ್ಲ.

ಆತ ಮೊದಲ ಮದುವೆಯಾದದ್ದು



1927ರಲ್ಲಿ. ಮುಂದಿನ ಸುಮಾರು ಅರ್ಧ ಶತಮಾನದ ಅವಧಿಯಲ್ಲಿ ಸ್ಕಾಟಿ 26 ಜನ ಪತ್ನಿಯರನ್ನು ಬದಲಾಯಿಸಿದ್ದಾನೆ. ಜಗತ್ತಿನಲ್ಲಿ ಅತಿ ಹೆಚ್ಚು ವಿವಾಹವಾದವರ ಪೈಕಿ ಈತನ ಹೆಸರು ಪ್ರಮುಖವಾದುದು.

ಸ್ಕಾಟಿಯ ಹಿಂದಿನ ಪತ್ನಿಯರ ಕುರಿತು ಕುತೂಹಲಕಾರಿ ಘಟನೆಗಳಿವೆ. ಅವನ 25ನೆ ಪತ್ನಿ ಐಲಿನ್ ವಿವಾಹವಾದ ಕೇವಲ 21 ದಿನಗಳಲ್ಲಿ ಅವನಿಂದ ದೂರ ಸರಿಯಬೇಕಾಯ್ತು. ಅದಕ್ಕೆ ಕಾರಣ ಐಲಿನ್ ಅತಿ ಹೆಚ್ಚಾಗಿ ಬಾರುಗಳಿಗೆ ಹೋಗುವ ಮತ್ತು ಸ್ಕಾಟಿ ಬಳಸುವ ಟೂತ್ ಬ್ರಷ್‌ನ್ನೇ ತಾನೂ ಬಳಸುವ ಕೆಟ್ಟ ಚಾಳಿ ಹೊಂದಿದ್ದಳು. ಇನ್ನು 26ನೇ ಪತ್ನಿ ಕ್ರಿಸ್ಟಿನಾಳಿಗೆ ವಿಪರೀತವಾಗಿ ನೃತ್ಯ ಕೂಟಗಳಿಗೆ ಹೋಗಿ ಭಾಗ ವಹಿಸುವ ಹುಚ್ಚು. ಇದು ಸ್ಕಾಟಿಗೆ ಇಷ್ಟವಾಗದ ಕಾರಣ ಮದುವೆಯಾದ 63 ದಿನಗಳಲ್ಲಿ ದಾಂಪತ್ಯ ಮುರಿದುಬಿತ್ತು. ಸ್ಕಾಟಿಗೆ 19 ಜನ ಮಕ್ಕಳು. ಮೊಮ್ಮಕ್ಕಳು ಮರಿಮಕ್ಕಳ ತಲೆ ಅಸಂಖ್ಯ.

ಸ್ಕಾಟಿಯ ಹಾಲಿ ಪ್ರೀತಿಯ ಪತ್ನಿ ಡೈಸಿ ಹುಟ್ಟಿದ್ದು ಫಿಲಿಫೈನ್ಸ್‌ನ ಸಿಬು ನಗರದಲ್ಲಿ. ಅತ್ಯಂತ ಬಡವಿಯಾದ ಅವಳ ತಾಯಿ ರಸ್ತೆ ಬದಿಯಲ್ಲಿ ಸ್ಯಾಂಡ್‌ವಿಚ್ ಮಾರುತ್ತ ತನ್ನ 13 ಸದಸ್ಯರ ಕುಟುಂಬವನ್ನು ಸಲಹುತ್ತಿದ್ದಳು. ಒಂದೇ ಕೋಣೆಯಲ್ಲಿ ಇವರೆಲ್ಲರ ಬದುಕು ರಾತ್ರಿ-ಹಗಲುಗಳೆನ್ನದೆ ಹೇಗೋ ಸಾಗುತ್ತಿತ್ತು. ಸ್ಕಾಟಿಯೊಂದಿಗೆ ಡೈಸಿಯ ಮದುವೆಯೂ ಒಂದು ಆಕಸ್ಮಿಕ. ಸ್ಯಾಂಡ್‌ವಿಚ್ ಕಟ್ಟಿಕೊಡಲಿಟ್ಟಿದ್ದ ಪತ್ರಿಕೆಯ ತುಣುಕೊಂದರಲ್ಲಿ ಸ್ಕಾಟಿ ತನ್ನ 26ನೇ ಪತ್ನಿಯನ್ನು ತೊರೆದ ಕುರಿತು ಹಾಗೂ ಅವನ ಹಿಂದಿನ ಜೀವನದ ಸವಿವರ ವರದಿ ಪ್ರಕಟವಾಗಿತ್ತು. ಅಕಸ್ಮಾತ್ ಆ ಸುದ್ದಿಯನ್ನೋದಿದ ಡೈಸಿಯ ತಾಯಿ ಅವನ ವಿಳಾಸವನ್ನರಸಿ ಪತ್ರ ಬರೆದಿದ್ದಳು. ಆಗಿನ್ನೂ ಡೈಸಿಗೆ 13 ವರ್ಷ ವಯಸ್ಸು. ಅತಿಯಾದ ಬಡತನ ಮತ್ತು ಡೈಸಿಯ ಮನದಲ್ಲಿ ಅಮೇರಿಕೆಗೆ ಹೋಗಿ ನೆಲೆಸಬೇಕೆಂಬ ಆಕಾಂಕ್ಷೆಯಿಂದ ಪ್ರೇಮಪತ್ರಗಳ ವ್ಯವಹಾರ ಆರಂಭವಾಗಿ ಮುಂದೆ ಸ್ಕಾಟಿಯ ಬಾಳ ಸಂಗಾತಿಯಾದಳು. ಈಗಲೂ ನಿತ್ಯ ಕಾಲೇಜಿಗೆ ಹೋಗುವ ಡೈಸಿಗೆ ಬದುಕು ಬಲು ಸಿಹಿಯೆನಿಸಿತು. ಅವಳ ಕಾಲೇಜಿನ ಸಹಪಾಠಿಗಳಾಗಲೀ ಅಥವಾ ಆಸುಪಾಸಿನವರಾಗಲೀ ಈ ದಂಪತಿಯರ ವಯಸ್ಸಿನ ಅಂತರದ ಕುರಿತು ಕುಚೋದ್ಯದ ಮಾತುಗಳನ್ನಾಡಿದಾಗ ಆಕೆ ಬರಿಯ ಮುಗುಳ್ನಗೆಯೊಂದನ್ನು ಬೀರಿ ಅಂತಹ ಮಾತುಗಳಿಗೆ ಕಿವಿ ಹಚ್ಚದೇ ನಡೆಯುತ್ತಾಳೆ. ಆದರೆ ಸ್ಕಾಟಿಗೆ ಮಾತ್ರ ಪತ್ನಿ ತನ್ನ ಗೆಳತಿಯರನ್ನು ಮನೆಗೆ ಕರೆತರುವುದಾಗಲೀ ಅಥವಾ ಮನೆಯ ಹೊರಗೆ ಭೇಟಿ ಮಾಡಿಸುವುದಾಗಲೀ ಸುತರಾಂ ಇಷ್ಟವಿಲ್ಲ. ಅಂತಹ ಸಂದರ್ಭಗಳಲ್ಲಿ ಅವನು ಕಣ್ಣು ತಪ್ಪಿಸಿ ಮನೆಯಿಂದ ಹೊರಗೇ ಉಳಿಯುತ್ತಾನಂತೆ. ಪ್ರತಿನಿತ್ಯ ಸಂಜೆ ಎಂಟು ಘಂಟೆಯೊಳಗೆ ಬೆಡ್‌ರೂಂ ಸೇರಿಬಿಡುವ ಸ್ಕಾಟಿ ಪತ್ನಿಯನ್ನು ಓದಲಿಕ್ಕಾಗಿ ಅಥವಾ ಟಿ.ವಿ. ಕಾರ್ಯಕ್ರಮಗಳನ್ನು ವೀಕ್ಷಿಸಲು ಬಿಟ್ಟು ಹಾಸಿಗೆಯಲ್ಲಿ ಉರುಳುತ್ತಾನೆ.

ಮೇಲೆ ವಿವರಿಸಿದ ಘಟನೆ ಸ್ಕಾಟಿ-ಡೈಸಿಯರ ಬದುಕಿನಲ್ಲಿ ನಿನ್ನೆ, ಮೊನ್ನೆಯವರೆಗಿನ ನೋಟ ಮಾತ್ರ. ಇದೆಲ್ಲಾ ಅನುಭವಗಳ ಮಧ್ಯೆ ಸ್ಕಾಟಿಯ ಮನಸ್ಸು 28ನೆಯ ಮದುವೆಯ ಕುರಿತು ಯೋಚಿಸುತ್ತಿದೆ. ಇದುವರೆಗೂ 'ನನ್ನ ಪ್ರೀತಿಯ ರಾಣಿ' ಎಂದೇ ಕರೆಯುತ್ತಿದ್ದ 27ನೇ ಹೆಂಡತಿ ಡೈಸಿಗೂ ಡೈವೋರ್ಸ್ ನೀಡುವ ಸನ್ನಾಹದಲ್ಲಿದ್ದಾನೆ. ಈಗ ಸ್ಕಾಟಿಯ ಮನದ ತುಂಬಾ ಆವರಿಸಿರುವ ಚೆಲುವೆಯ ಹೆಸರು ಲೋಯೆಲ್ಲಾ. ಅವಳು ಮತ್ತಾರೂ ಅಲ್ಲದೆ ಡೈಸಿಯ ಕಿರಿಯ ಸಹೋದರಿ. 17 ವರ್ಷ ವಯಸ್ಸಿನ ಸ್ಫುರದ್ರೂಪಿ ಹುಡುಗಿ. ಸ್ಕಾಟಿ-ಲೋಯೆಲ್ಲಾಳರ ವಿವಾಹಕ್ಕೆ ಅಡ್ಡಿಯಾಗಿರುವವಳು ಡೈಸಿ. ಗಂಡ ಪುನಃ ಮದುವೆಯಾಗುವ ಕಲ್ಪನೆಯನ್ನು ಆಕೆ ಸಹಿಸಲೊಲ್ಲಳು. ಈಗ ಅವಳ ಬದುಕಿನ ಒಂದೇ ಆಕಾಂಕ್ಷೆಯೆಂದರೆ

ತಾನು ನಂಬಿ ವಿವಾಹವಾಗಿರುವ ಸ್ಕಾಟಿಯ ಕೊನೆಯ ಪತ್ನಿಯಾಗಿರಬೇಕು. ಕೊನೆಯ ವರೆಗೂ ಆತನೊಂದಿಗೆ ಬದುಕನ್ನು ಹಂಚಿಕೊಳ್ಳ ಬೇಕು. ಆದ್ದರಿಂದ ಡೈಸಿ ವಿವಾಹ ವಿಚ್ಛೇದನಕ್ಕೆ ಸಿದ್ಧಳಿಲ್ಲ. ಆ ವಿಷಯ ಪ್ರಸ್ತಾಪಿಸುತ್ತಲೇ ಕಿಡಿ ಕಾರುತ್ತಾಳೆ. ಸ್ಕಾಟಿಯ ಹಿಂದಿನ ಪತ್ನಿಯರಿಗಿಂತ ವಿಭಿನ್ನ ಹೆಣ್ಣು ಆಕೆ.

ಸ್ಕಾಟ ಈ ಮಧ್ಯೆ ದೂರಾಲೋಚನೆಯ ಹೊಸ ಪ್ಲಾನೊಂದನ್ನು ಹೂಡಿದ್ದಾನೆ. ಲೋಯೆಲ್ಲಾಳನ್ನು ವಿವಾಹವಾಗಲು ಮತ್ತು ಅವರ ಪೂರ್ಣ ಕುಟುಂಬವನ್ನು ಅಮೇರಿಕೆಗೆ ಕರೆತರಲು ಹಣದ ಅವಶ್ಯಕತೆಯೂ ಅವನಿಗಿದೆ. ಅದಕ್ಕಾಗಿ ಅಮೇರಿಕಾದ 'ಪ್ಲೇ ಬಾಯ್' ನಿಯತಕಾಲಿಕದ ಮುಖಪುಟಕ್ಕಾಗಿ ಕಾಲೇಜು ತರುಣಿಯರ ಆಕರ್ಷಕ ಫೋಟೋಗಳಿಗೆ ರೂಪದರ್ಶಿಯಾಗಲು ಜಾಹೀರಾತು ನೀಡಿತ್ತು. ಡೈಸಿ ಕೂಡಾ ಕಾಲೇಜು ವಿದ್ಯಾರ್ಥಿನಿಯಾದ್ದರಿಂದ ಅವಳಿಗೆ ಹತ್ತು ಸಾವಿರ ಡಾಲರ್ ಸಂಭಾವನೆ ಕೇಳಿ ಮಾಡೆಲಿಂಗ್ ಆಗಲು ಸಲಹೆಯನ್ನು ನೀಡಿದ್ದಾನೆ. ಇದರ ಕುರಿತು ಡೈಸಿಯ ತಾಯಿಯ ಬಳಿಯೂ ಮಗಳಿಗೆ ರೂಪದರ್ಶಿಯಾಗಲು ಒತ್ತಾಯಿಸಿದ್ದಾನೆ. ಆದರೆ ಡೈಸಿ ಮಾತ್ರ ತಾನೆಂದಿಗೂ ಇಂತಹ ಕೆಲಸ ಮಾಡಲಾರೆನೆಂದು ನಿರಾಕರಿಸಿದ್ದಲ್ಲದೆ ಗಂಡ ಲೋಯೆಲ್ಲಾಳನ್ನು ವಿವಾಹವಾಗುವುದನ್ನು ಖಂಡಿಸುತ್ತಿದ್ದಾಳೆ. ಹೀಗೆ ನಾಲ್ಕಾರು ವರ್ಷ ಹಾಯಾಗಿದ್ದ ಅವರ ಜೀವನ ಈಗ ಹೊಯ್ದಾಟದಲ್ಲಿ ಸಿಲುಕಿದೆ ಮುಂದೇನು ...? ಸ್ಕಾಟಿಯ 28ನೆಯ ವಿವಾಹದ ಬಗ್ಗೆ ಕಾದು ನೋಡಬೇಕಿದೆ.

●

ನುಡಿಮುತ್ತುಗಳು

● ಇತರರನ್ನು ಅರಿತವನು ಜಾಣ, ತನ್ನನ್ನು ಅರಿತವನು ಜ್ಞಾನಿ.

- ತಾವೊ

● ಮುಖಸ್ತುತಿಯೆಂಬುದು ಅತ್ತರಿನ ಹಾಗೆ; ಮೂಸಲಿಕ್ಕೆ ಹೊರತು ನುಂಗಲಿಕ್ಕಲ್ಲ.

- ಜೆ.ಬಿಲಿಂಗ್ಸ್

● ದ್ವೇಷಿಸುವುದಿಲ್ಲ, ಬೇಡುವುದಿಲ್ಲ, ಪರನಿಂದೆ ಮಾಡುವುದಿಲ್ಲ, ಕರೆಯದೇ ಬರುವುದಿಲ್ಲ. ಆದ್ದರಿಂದ ಕಲ್ಲುಗಳೂ ದೇವರೆನಿಸಿವೆ.

- ಸುಭಾಷಿತ

● ನಮ್ಮ ಹಿಂದೇನಿದೆ ಮತ್ತು ನಮ್ಮ ಮುಂದೇನಿದೆ ಎಂಬುವುಗಳು ನಮ್ಮ ಒಳಗೇನಿದೆ ಎಂಬುದರ ಮುಂದೆ ಚಿಲ್ಲರೆ ಸಂಗತಿಗಳು.

- ಅಜ್ಞಾತ

● ಕಾರ್ಯತತ್ಪರತೆಗಾಗಿ ಜೇನ್ನೊಣಕ್ಕೆ ಹೊಗಳಿಕೆ ಸಿಗುತ್ತದೆ; ಸೊಳ್ಳೆಗೆ ಪೆಟ್ಟು ಬೀಳುತ್ತದೆ.

- ಗುಲಿಸ್ತಾನ್

● ಐವತ್ತು ಜನ ಗೆಳೆಯರಿದ್ದರೆ ಸಾಲದು; ಒಬ್ಬ ವೈರಿಯಿದ್ದರೆ ಹೆಚ್ಚಾಯಿತು.

- ಇಟಲಿ ಗಾದೆ

● ವಿವಾಹಕ್ಕಂಜಿ ಹಿಂದೆ ಸರಿಯುವವನು ಯುದ್ಧಭೂಮಿಯಿಂದ ಓಡಿಹೋಗುವ ಸೈನಿಕನಷ್ಟೇ ಹೇಡಿಯಾಗಿರುತ್ತಾನೆ.

- ಮ.ಗಾಂಧಿ

(ಸಂಗ್ರಹ) *- ಚಂದ್ರಶೇಖರ ಜೋಯ್ಸ*

ದ. ಆಫ್ರಿಕಾ ಎದುರಿಸುತ್ತಿರುವ ಸಮಸ್ಯೆಗಳು

ಗೋಪಾಲ ಆಶ್ರಿತ

೧೧-೨-೯೦ ರಂದು ನೆಲ್ಸನ್ ಮಂಡೇಲಾನ ಬಿಡುಗಡೆಯನ್ನು, ಅಲ್ಲಿನ ಕರಿಯ ಜನಸಮೂಹ ಹರ್ಷೋದ್ಗಾರಗಳಿಂದ ಸ್ವಾಗತಿಸಿತು. ವಿಶ್ವದ ಬಹುತೇಕ ರಾಷ್ಟ್ರಗಳ ನಾಯಕರು ಈ ಬಿಡುಗಡೆಯನ್ನು ಸ್ವಾಗತಿಸಿದರಲ್ಲದೆ, ತಮ್ಮ ಸರಕಾರ ಹಾಗೂ ಜನತೆಯ ಪರವಾಗಿ ಈ ಮುಖಂಡನನ್ನು ತಮ್ಮ ತಮ್ಮ ದೇಶಗಳಿಗೆ ಆಹ್ವಾನಿಸಿದರು. ಈಗಾಗಲೇ ಮಂಡೇಲಾ ಭಾರತಕ್ಕೆ ಭೇಟಿ ನೀಡಿ 'ಭಾರತ ರತ್ನ' ದಿಂದ ಗೌರವಿಸಿಕೊಂಡು ಮರಳಿದ್ದಾರೆ.

ಈಗ ದಕ್ಷಿಣ ಆಫ್ರಿಕಾದಲ್ಲಿ ಹೊಸಗಾಳಿ ಬೀಸುತ್ತಿದೆ. ಮುವತ್ತು ವರ್ಷಗಳ ಹಿಂದೆ ಇಲ್ಲಿ ವರ್ಣಭೇದ ನೀತಿ ಎಷ್ಟಿತ್ತೆಂದರೆ, ಬಿಳಿಯರು-ಕರಿಯರು, ವರ್ಣಿಗರು ಮತ್ತು ಭಾರತೀಯರು ಬೇರೆ ಬೇರೆ ಆಸ್ಪತ್ರೆಗಳಲ್ಲಿ ಹುಟ್ಟುತ್ತಿದ್ದರು. ಬೇರೆ ಬೇರೆ ಶಾಲೆಗಳಲ್ಲಿ ಓದುತ್ತಿದ್ದರು, ಬೇರೆ ಬೇರೆ ನೆರೆಹೊರೆಯಲ್ಲಿ ವಾಸಿಸುತ್ತಿದ್ದರು ಮತ್ತು ಅವರು ಸತ್ತಾಗ ಕೂಡಾ, ಅವರನ್ನು ಬೇರೆ ಬೇರೆ ಸ್ಮಶಾನಗಳಲ್ಲಿ ಹೂಳಲಾಗುತ್ತಿತ್ತು. ಅಂದಿನ ಕಾನೂನಿನ ಪ್ರಕಾರ, ಕರಿಯರನ್ನು ಕೀಳು ಕೆಲಸಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಬಹಳಷ್ಟು ಜನರು ಹರಕು ಬಟ್ಟೆಗಳನ್ನು ಧರಿಸುತ್ತಿದ್ದರು. ಇವರು 'ಬಿಳಿಯರು' ವಾಸಿಸುವ ಪಟ್ಟಣಗಳಲ್ಲಿ, ಓಣಿಗಳಲ್ಲಿ, ಓಡಾಡಲು ಅಪ್ಪಣೆ ಚೀಟಿ ಪಡೆಯಬೇಕಾಗುತ್ತಿತ್ತು.

ಆದರೆ ಕಳೆದ ಇಪ್ಪತ್ತು ವರ್ಷಗಳಲ್ಲಿ ವರ್ಣಭೇದ ನೀತಿ ಸಡಿಲಗೊಳ್ಳುತ್ತ ಬಂದಿದೆ. ದ. ಆಫ್ರಿಕೆಯ ಆರ್ಥಿಕ ಸ್ಥಿತಿ ಬಹಳಷ್ಟು ಸುಧಾರಿಸಿದ್ದರಿಂದ ಅಲ್ಲಿನ ಖಾಲಿಯಿದ್ದ ಕುಶಲಕರ್ಮಿಗಳು, ಕಚೇರಿ ಕೆಲಸಗಾರರು ಮತ್ತು ಸಣ್ಣ ದರ್ಜೆಯ ನಿರ್ವಾಹಕರುಗಳ ಜಾಗಗಳನ್ನು ಭರ್ತಿ ಮಾಡಲು ಸಾಕಷ್ಟು ಬಿಳಿಯರಿರಲಿಲ್ಲ. ಕಾನೂನನ್ನು ಕಡೆಗಣಿಸಿ, ಕರಿಯರಿಗೆ ಬಡ್ತಿ ಕೊಟ್ಟು ಆ ಜಾಗಗಳನ್ನು ತುಂಬಲಾಯಿತು. ಇದರಿಂದಾಗಿ ನೌಕರಿಯಲ್ಲಿನ ಪಕ್ಷಪಾತ ನಿಯಮ ರದ್ದಾಯಿತು.

ಇಂದು ದ. ಆಫ್ರಿಕಾದಲ್ಲಿ ವರ್ಣಭೇದ ನೀತಿ ಭರದಿಂದ ಮಾಯವಾಗುತ್ತಿದೆ. ಅಪ್ಪಣೆ ಚೀಟಿಯ ಶಾಸನ ಈಗಾಗಲೇ ರದ್ದಾಗಿದೆ. ಎಲ್ಲ ಜನಾಂಗಗಳ ಜನರು ಒಂದೆಡೆ ಕೆಲಸಕ್ಕೆ ಬರುತ್ತಾರೆ. ವಿಶ್ವವಿದ್ಯಾನಿಲಯಗಳಲ್ಲಿ, ಹೋಟೆಲು ಮತ್ತು ಬಾರ್‌ಗಳಲ್ಲಿ ಈ ಜನರು ಬೆರೆಯುವದು ಸಾಮಾನ್ಯ ದೃಶ್ಯ. ಜೋಹಾನ್ಸ್‌ಬರ್ಗ್‌ನಲ್ಲಿನ ಅನೇಕ ಸುಸಜ್ಜಿತ (Apartments) ಮನೆಗಳಲ್ಲಿ ಮಧ್ಯಮ ವರ್ಗದ ಕರಿಯರೂ ವಾಸಿಸುತ್ತಿದ್ದಾರೆ.

ಈಗ ಎಲ್ಲಕ್ಕಿಂತ ಪ್ರಧಾನವಾದ ಸಮಸ್ಯೆಯೆಂದರೆ ರಾಜಕೀಯ ಅಧಿಕಾರ. ಇಲ್ಲಿರುವ ಪ್ರಶ್ನೆಗಳು: ಬಿಳಿಯರು ಈ ಅಧಿಕಾರವನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಬಿಟ್ಟು ಕೊಡುವರೇ? ಯಾವಾಗ ಕೊಡುವರು? ಇದನ್ನು ಶಾಂತಿಯುತವಾಗಿ ನೆರವೇರಿಸುವರೆ? ಎಂದು ಕರಿಯರು ಪ್ರಶ್ನಿಸುತ್ತಿದ್ದಾರೆ. ಆದರಂತೆ ಬಿಳಿಯರಿಗೆ ಕೂಡಾ ತಮ್ಮ ಸ್ವಾತಂತ್ರ್ಯ ಹರಣವಾಗಿ, ಕರಿಯರ ಸರಕಾರ ಅಧಿಕಾರಕ್ಕೆ ಬರುವುದೇ ಭಯ. ಇಲ್ಲಿನ ಬಿಳಿಯರನ್ನು ರಕ್ಷಣೆಯಿಲ್ಲದ ಅಲ್ಪಸಂಖ್ಯಾತ

ರನ್ನಾಗಿ ಮಾಡುವದಿಲ್ಲವೆಂದು, ಅಧ್ಯಕ್ಷ ಡಿ ಕ್ಲರ್ಕ್ ಹೇಳಿದ್ದಾನೆ. ಬಿಡುಗಡೆಯಾದ ಕೆಲವೇ ತಾಸುಗಳಲ್ಲಿ ಮಂಡೇಲಾ ಸರ್ವರಿಗೂ ಮತ ಚಲಾಯಿಸುವ ಹಕ್ಕು- ಒಬ್ಬ ವ್ಯಕ್ತಿ ಒಂದು ಮತ (One Man One Vote) ಇರಬೇಕೆಂದು ಬೇಡಿಕೆಯಿಟ್ಟರು. ಈ ಇಬ್ಬರು ಮುಖಂಡರು ಬಹಳ ಜಾಣ್ಮೆಯಿಂದ ದ. ಆಫ್ರಿಕೆಯ ಈ ಜಟಿಲ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕಾಗಿದೆ.

ರಾಜಕೀಯವಾಗಿ ಕೆಲವು ತೀವ್ರ ಸುಧಾರಣೆಗಳಾಗುವ ಬಗ್ಗೆ ಕರಿಯರು ಬಹಳ ಉತ್ಸುಕರಾಗಿದ್ದಾರೆ. ಆದರೆ ಈ ಅಂಶವೊಂದನ್ನು ಬಿಟ್ಟು ಇತರ ಯಾವದೇ ವಿಷಯದ ಬಗ್ಗೆ ಅವರಲ್ಲಿ ಒಮ್ಮತವಿಲ್ಲ. ಈ ದೇಶದಲ್ಲಿ ನಾಲ್ಕು ಪ್ರಮುಖ ಜಾತೀಯ ಗುಂಪುಗಳಿವೆ. ಪ್ರತಿಯೊಂದಕ್ಕೂ ತನ್ನದೇ ಆದ ಸಂಸ್ಕೃತಿ, ಭಾಷೆ ಇದೆ. ಕರಿಯರ ಈ ಗುಂಪುಗಳ ಮಧ್ಯ ಭಯಂಕರ ದ್ವೇಷವೂ ಇದೆ. ಇದರಿಂದಾಗಿ ಕರಿಯರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ಊರುಗಳಲ್ಲಿ ಅರಾಜಕತೆ ಹೆಚ್ಚು ಕಂಡುಬರುತ್ತಿದೆ. ನೆಟಾಲ್ ಪ್ರಾಂತದಲ್ಲಿ ಎರಡು ಗುಂಪುಗಳ ಮಧ್ಯೆ ಅಂತರ್ಯುದ್ಧ ನಡೆದಿದೆ. ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ (ANC)ನ ತೀವ್ರಗಾಮಿ ಜುಲು ಅನುಯಾಯಿಗಳ ಮತ್ತು ಮಿತಗಾಮಿ ಗತಾಶಾ ಎಮ್. ಬುಥೆಲ್ಜಿ ಎಂಬ ಜುಲು ಪಂಗಡದ ನಾಯಕನ ಅನುಯಾಯಿಗಳ ಮಧ್ಯೆ ಈ ಕದನ ನಡೆದು ಈಗಾಗಲೇ ೩೦೦೦ ಜನರು ಸತ್ತಿದ್ದಾರೆ.

ಅನೇಕ ಬಿಳಿಯರಿಗೆ ಈಗಾಗಲೇ ಆಫ್ರಿಕೆಯ ಭವಿಷ್ಯವೇನೆಂಬುದು ತಿಳಿದಿದೆ. ೧೯೬೦ರ ದಶಕದಲ್ಲಿ ಸ್ವಾತಂತ್ರ್ಯ ಪಡೆದ ಆಫ್ರಿಕೆಯ ದೇಶಗಳ ಗತಿ ಏನಾಯಿತೆಂಬುದು ಅವರಿಗೆಲ್ಲ ತಿಳಿದ ವಿಷಯ. ಅಂತರ್ಯುದ್ಧಗಳು, ಅತಿಯಾದ ಭ್ರಷ್ಟಾಚಾರ ಮತ್ತು ಆರ್ಥಿಕ ಮುಗ್ಗಟ್ಟುಗಳ ಪೀಡೆಯಿಂದ



ಹುಷಾರಾಗಿ ಮಾತಾಡಿ ಅಪ್ಪಾ, ಇನ್ನೊಂದ್ಸಾರಿ ನನ್ನನ್ನ ಅಪ್ರಯೋಜಕ ಅಂದ್ರೆ ರಾಜಕೀಯಕ್ಕೆ ಇಳಿದುಬಿಡ್ತೀನಿ!

ಆ ದೇಶಗಳೆಲ್ಲವೂ ಸೇನೆಯ ನಿರಂಕುಶ ಅಧಿಕಾರಕ್ಕೆ ಬಲಿಯಾದದ್ದುಂಟು.

ಸಹಾರಾದ ಕೆಳಭಾಗದಲ್ಲಿರುವ ಏಕಮಾತ್ರ ಉದ್ಯಮಶೀಲ ದೇಶವಾದ ದ. ಆಫ್ರಿಕಾ, ಈ ಭಾಗದಲ್ಲಿ ಆರ್ಥಿಕವಾಗಿ, ಪ್ರಮುಖ ಪಾತ್ರ ವಹಿಸುತ್ತಿದೆ. ನೆರೆಯ ದೇಶಗಳಿಂದ ಬಡತನಕ್ಕೀಡಾದ ಹಾಗೂ ಕ್ಷಾಮಪೀಡಿತರಾಗಿ ವಲಸೆ ಬಂದ ಎರಡು ಲಕ್ಷ ಕರಿಯರಿಗೆ, ಇಲ್ಲಿನ ಗಣಿಗಳಲ್ಲಿ ಮತ್ತು ಹೊಲಗಳಲ್ಲಿ ಕೆಲಸ ದೊರಕಿದೆ. ಝೈರೆ ಮತ್ತು ಝಾಂಬಿಯಾದಲ್ಲಿರುವ ಅನೇಕ ತಾಮ್ರದ ಗಣಿಯಂತ್ರಗಳು ದ. ಆಫ್ರಿಕಾದಲ್ಲಿಯೇ ತಯಾರಾದ ಯಂತ್ರಗಳು. ಗಡಿಯಲ್ಲಿರುವ ಕರಿಯರ ಮಾರ್ಕ್ಸಿಸ್ಟ ರಾಜ್ಯವಾದ ಮೊಜಾಂಬಿಕ್ ಕೂಡಾ ತನ್ನ ಬಂದರು ಹಾಗೂ ರೈಲು ನಿಲ್ದಾಣಗಳಲ್ಲಿನ ಕೆಲಸಕ್ಕಾಗಿ

ದ. ಆಫ್ರಿಕೆಯ ತಂತ್ರಜ್ಞರನ್ನೇ ಅವಲಂಬಿಸಿದೆ. ಬೊಟ್ಸವಾನಾ, ಲಿಸೊಥೊ ಮತ್ತು ಸ್ವಾಜಿಲ್ಯಾಂಡ್‌ನಂಥ ಚಿಕ್ಕ ಪ್ರಾಂತಗಳ ಅಸ್ತಿತ್ವವೇ ದ. ಆಫ್ರಿಕೆಯನ್ನವಲಂಬಿಸಿದೆ.

ಮಂಡೇಲಾನ ANCಯ ಆಡಳಿತ ಮಂಡಳಿಯಲ್ಲಿ ಅರ್ಧದಷ್ಟವರು ಕಮ್ಯುನಿಸ್ಟರಿದ್ದಾರೆ. ಮಂಡೇಲಾ ತಾನು ಕಮ್ಯುನಿಸ್ಟನಲ್ಲವೆಂದು ಹೇಳಿಕೊಂಡರೂ, ನಾಡಿನ ಒಳಗಿನ ಹಾಗೂ ಹೊರಗಿನ ಅನೇಕ ಕಮ್ಯುನಿಸ್ಟರ ಜೊತೆ ಅವರು ಸಂಪರ್ಕವಿಟ್ಟುಕೊಂಡಿದ್ದಾರೆ. ೧೯೫೯ ರಲ್ಲಿ ಕೆಲವು ಕರಿಯ ಸದಸ್ಯರು, ANC ಮಾಸ್ಕೊದ ಕೈಗೊಂಬೆಯಾಗುವದನ್ನು ವಿರೋಧಿಸಿ, ಹೊರಬಂದು ಪ್ಯಾನ್ ಆಫ್ರಿಕನ್ ಕಾಂಗ್ರೆಸ್ (PAC) ಎಂಬ ಸಂಘ ಸ್ಥಾಪಿಸಿದರು. ಈ ಸಂಘ ಇಂದಿಗೂ ANCಯ ಪ್ರಮುಖ ಪ್ರತಿಸ್ಪರ್ಧಿಯಾಗಿದೆ.

ಬಿಡುಗಡೆಯಾದ ಕೂಡಲೇ, ಮಂಡೇಲಾ ದಕ್ಷಿಣ ಆಫ್ರಿಕಾ (ಕರಿಯರಿಗೆ) ಕ್ಕೆ ಹೇಗಾದರೂ ಮುಕ್ತಿ ತರುವರೆಂದು ಅನೇಕರು ಆಲೋಚಿಸಿದ್ದರು. ೨೭ ವರ್ಷ ಬಂಧಿಯಾಗಿದ್ದ ಮಂಡೇಲಾನನ್ನು, ವರ್ಣಭೇದ ನೀತಿಯನ್ನು ತಡೆಯಬಲ್ಲ ಏಕಮಾತ್ರ ಪ್ರತೀಕವೆಂದೆಣಿಸಿದ್ದ ಜನರು ಅವನಿಂದ ಬಹಳಷ್ಟು ನಿರೀಕ್ಷಿಸಿದ್ದರು. ಬಿಡುಗಡೆಯಾದ ನಂತರ ಮಂಡೇಲಾ ANCಯ 'ಸಶಸ್ತ್ರ ಹೋರಾಟ' ಮುಂದುವರಿಯಲೆಂದು ಕರೆಕೊಟ್ಟಾಗ, ಅವರ ಹಿತೈಷಿಗಳೂ ಗಾಬರಿಗೊಂಡರು. "ದಕ್ಷಿಣ ಆಫ್ರಿಕೆಯಲ್ಲಿ ಪ್ರಜಾಪ್ರಭುತ್ವ ನಿರ್ಮಾಣದ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಕಮ್ಯುನಿಸ್ಟ ಪಕ್ಷದವರಿಗೆ ನನ್ನ ನಮನಗಳು" ಎಂದಾಗ ಅನೇಕರಿಗೆ ನಿರಾಶೆಯಾಯಿತು. "ದ. ಆಫ್ರಿಕೆಯ ವಿಮೋಚನಾ ಚಳವಳಿಯೆಂದರೆ, ಈಗಿರುವ ಸರಕಾರದ ಸ್ಥಳದಲ್ಲಿ ಇನ್ನೊಂದು ಕ್ರೂರ ಹಾಗೂ ಅದಕ್ಷ ಸರಕಾರ ತರುವದಲ್ಲ. ಇಂಥವು ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಉರುಳಿಬೀಳುತ್ತವೆಂಬುದು ಅಲ್ಲಿನ ಜನರ ಭೀತಿಗೆ ಕಾರಣವಾಗಿದೆ" ಎಂದು 'ವಾಶಿಂಗ್ಟನ್ ಪೋಸ್ಟ್' ಮಂಡೇಲಾ ಭಾಷಣವನ್ನು ಕಟುವಾಗಿ ಟೀಕಿಸಿತು.

ANCಯ ಉಪಾಧ್ಯಕ್ಷ (ಮತ್ತು ಪರಿಣಾಮಕಾರಿ ಮುಖ್ಯಸ್ಥ) ನೆಂದು ನೇಮಕಗೊಂಡಾಗಿನಿಂದ ಮಂಡೇಲಾರಿಗೆ ತನ್ನ ಪ್ರಭಾವದ ಮಿತಿಯ ಬಗ್ಗೆ ತಿಳಿಯಹತ್ತಿದೆ.

ನೆಟಾಲ್ ಪ್ರಾಂತದಲ್ಲಿ ನಡೆಯುತ್ತಿರುವ ಕರಿಯರ ಅಂತರ್ಯುದ್ಧ ನಿಲ್ಲಿಸಿ ಶಾಂತಿ ತರಲು ನಡೆಸಿದ ಪ್ರಯತ್ನ ವಿಫಲವಾಯಿತು. ಕರಿಯರು ವಾಸಿಸುವ ಊರುಗಳಲ್ಲಿ ಭಯೋತ್ಪಾದನೆಯಲ್ಲಿ ತೊಡಗಿರುವ ತರುಣ ಕರಿಯ ಸೇನಾ ನಾಯಕರಿಗೆ, ಕಾನೂನು ಮತ್ತು ಶಿಸ್ತನ್ನು ಕಾಪಾಡುವಂತೆ ಕರೆಯಿತ್ತರು. ಆಗಲೂ ಅವರ ಕರೆಯನ್ನು ಕಡೆಗಣಿಸಲಾಯಿತು.

ಇತ್ತ ಅಧ್ಯಕ್ಷ ಡಿ ಕ್ಲರ್ಕ ಕೂಡಾ ಬೆಳೆಯುತ್ತಿರುವ ದಂಗೆಯನ್ನು ಎದುರಿಸಬೇಕಾಗಿದೆ. ಪಾರ್ಲಿಮೆಂಟಿನಲ್ಲಿ ಅವರ ನ್ಯಾಶನಲ್ ಪಕ್ಷ ಬಹುಮತದಲ್ಲಿದ್ದರೂ, ಅವರಲ್ಲಿ ೧-೪ ಸದಸ್ಯರು ನ್ಯಾಶನಲ್ ಪಕ್ಷ ಬಿಟ್ಟು, ವರ್ಣಭೇದ ನೀತಿಯನ್ನು ಪ್ರತಿಪಾದಿಸುವ ಕನ್ಸರ್ವೇಟಿವ್ (Concervative Party) ಪಕ್ಷಕ್ಕೆ ಬೆಂಬಲ ನೀಡುತ್ತಿದ್ದಾರೆ. ಕೆಲವು ಬಿಳಿಯ ಉಗ್ರಗಾಮಿ ಗುಂಪುಗಳು ಬಾಂಬ್ ಸ್ಫೋಟದಲ್ಲಿ ತೊಡಗಿದ್ದಾರೆ. ಒಂದು ಬಸ್ ನಿಲ್ದಾಣದಲ್ಲಿ ಇಂಥ ಸ್ಫೋಟದಿಂದಾಗಿ ೨೭ ಕರಿಯರು ಗಾಯಗೊಂಡರು. ಮತ್ತೆ ಕೆಲವು ಉಗ್ರಗಾಮಿಗಳು ನಾಝಿತೆರನಾದ ಸಮವಸ್ತ್ರ ಧರಿಸಿ ಓಣಿಗಳಲ್ಲಿ ಮೆರವಣಿಗೆ ನಡೆಸಿದ್ದುಂಟು.

ಕಾಲಕ್ರಮೇಣ ಮಂಡೇಲಾ ತನ್ನ ಮಾರ್ಕ್ಸಿಸ್ಟ ವಿಚಾರಧಾರೆಯನ್ನು ಬದಲಿಸಿ, ಹಿಂಸೆಯನ್ನು ತ್ಯಜಿಸಬಹುದೆಂದು ಅನೇಕ ವೀಕ್ಷಕರು ಆಶಿಸಿದ್ದಾರೆ. ಏಕೆಂದರೆ

ANCಯು ತರುಣ ಸದಸ್ಯರು ಮಾರ್ಕ್ಸ್‌ವಾದದ ಮಂತ್ರ ಕೇಳಲಿಕ್ಕೆ ಸಿದ್ಧರಿಲ್ಲ. ಈಗಾಗಲೇ ಕೆಲವರು ANCಗೆ ಪ್ರತಿಸ್ಪರ್ಧಿ ಪಕ್ಷಗಳಾದ PAC ಮತ್ತು ಬುಥೆಲ್ಜಿಯ ಇಂಕಥಾ ಪಕ್ಷ ಸೇರಹತ್ತಿದ್ದಾರೆ. ANCಯ ಭಯೋತ್ಪಾದನೆಯನ್ನು ಮೊದಲಿನಿಂದಲೂ ಖಂಡಿಸುತ್ತ ಬಂದಿರುವ ಬುಥೆಲ್ಜಿಗೆ ಜುಲು ಪಂಗಡದ ಬೆಂಬಲವಿದೆ. ದೇಶದಲ್ಲಿ ಇದೇ ಎಲ್ಲಕ್ಕಿಂತ ದೊಡ್ಡವಾದ ಪಂಗಡ.

ದಕ್ಷಿಣ ಆಫ್ರಿಕೆಯ ಬಿಳಿಯರು ಮತ್ತು ಕರಿಯರು ಬೇರೆ ಬೇರೆಯಾದರೂ, ಅಷ್ಟೇ ಅಸಾಧ್ಯವಾದ ಕನಸುಗಳನ್ನು ಕಾಣುತ್ತಲಿದ್ದಾರೆ. ಕೆಲವೊಂದು ಸಮೂಹ ಹಕ್ಕುಗಳು ಮತ್ತು ಇನ್ನಿತರ ಸಂವಿಧಾನಿಕ ತೊಡಕುಗಳಿಂದ ಬಿಳಿಯರು, ಕರಿಯರ ದಬ್ಬಾಳಿಕೆಯಿಂದ ತಮ್ಮನ್ನು ರಕ್ಷಿಸಿಕೊಳ್ಳಬಹುದೆಂದು ಯೋಚಿಸಿದ್ದಾರೆ. ಇತ್ತ ಕಡೆ ಕರಿಯರು, ಆದಷ್ಟು ತೀವ್ರ ಅಧಿಕಾರಕ್ಕೆ ಬರಬೇಕು, ಸಮೃದ್ಧರಾಗಬೇಕೆಂಬ ಕನಸು ಕಾಣುತ್ತಿದ್ದಾರೆ.

ಈ ಉಭಯ ವರ್ಗದವರ ಕನಸು ನನಸಾದೀತೆ? ಮಂಡೇಲಾ ಮತ್ತು ಡಿ ಕ್ಲರ್ಕ್ ಈ ಜಟಿಲ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲರೆ? ಈ ಇಬ್ಬರು ಮುಖಂಡರ ಪ್ರಾಮಾಣಿಕ ಪ್ರಯತ್ನಕ್ಕೆ ಫಲ ಸಿಕ್ಕೀತೆ? ಈ ಪ್ರಶ್ನೆಗಳಿಗೆ ಸದ್ಯದಲ್ಲಿ ಉತ್ತರ ಸಿಗಲಾರದು.

"ಬಾಲ ಜ್ಞಾನಿ"

ಒಬ್ಬ ಬಾಲಕನಿದ್ದ. ಅವನು ತುಂಬಾ ಅಮಾಯಕನಾಗಿದ್ದ. ಅವನ ತಾಯಿ ಕಾಡಿನಿಂದ ಸೌದೆಯನ್ನು ಕಡಿದು ತಂದು ಅಡಿಗೆ ಮಾಡುತ್ತಿದ್ದಳು. ಒಂದು ದಿನ ಅವನ ತಾಯಿ ಹೇಳಿದಳು. "ಮಗೂ.......! ಇಂದು ನನಗೆ ಮೈಯಲ್ಲಿ ಹುಷಾರಿಲ್ಲ; ನೀನೇ ಕಾಡಿಗೆ ಹೋಗಿ ಸೌದೆಯನ್ನು ಕಡಿದು ತೆಗೆದುಕೊಂಡು ಬಾ"

ಸರಿ!....... ಬಾಲಕ ಕೊಡಲಿಯನ್ನು ಹಿಡಿದು ಸೌದೆಯನ್ನು ಕಡಿದು ತರಲು ಕಾಡಿಗೆ ಹೊರಟ.

ಕಾಡಿನಿಂದ ಹಿಂದಿರುಗಿದ ಬಾಲಕನ ಹೆಗಲ ಮೇಲೆ ಸೌದೆ ಹೊರೆ ಇರಲಿಲ್ಲ. ಕೈಯಲ್ಲಿ ಕೊಡಲಿಯನ್ನು ಹಿಡಿದು ಕಾಲಿಗೆ ಗಾಯ ಮಾಡಿಕೊಂಡು ಕುಂಟುತ್ತಾ ಬಂದ. ಇದನ್ನು ಕಂಡ ತಾಯಿಗೆ ಕೋಪ ತಡೆಯಲಾಗಲಿಲ್ಲ. "ಸೌದೆಯನ್ನು ಏಕೆ ತರಲಿಲ್ಲವೋ!..... ಸೋಮಾರಿ?" ಎಂದು ರೇಗಿದಳು. ಅದಕ್ಕೆ ಆ ಬಾಲಕ "ಅಮ್ಮಾ!...... ಮರವನ್ನು ಕಡಿಯಲು ಹೋದಾಗ ನೀನು ಹೇಳಿದ 'ವೃಕ್ಷಗಳೂ ಜೀವ ರಾಶಿಗಳೇ' ಎಂಬ ಮಾತು ಜ್ಞಾಪಕಕ್ಕೆ ಬಂದು ಬಿಟ್ಟಿತ್ತು. ಮೊದಲು ನನ್ನ ಕಾಲಿಗೆ ಗಾಯ ಮಾಡಿಕೊಂಡು ನೋಡಿದೆ, ನೋವಾಯಿತು. ಅದೇ ರೀತಿ ಮರಗಳಿಗೂ ಗಾಯ ಮಾಡಿದರೆ ನೋವಾಗುವುದೆಂದು ಅರಿತು ಮರವನ್ನು ಕಡಿದು ಸೌದೆ ತರದೆ ಹಾಗೆಯೇ ಖಾಲಿ ಕೈಗಳಲ್ಲಿ ಬಂದು ಬಿಟ್ಟೆ!" ಎಂದು ಉತ್ತರಿಸಿದ.

ಬಾಲಕನ ಈ ಮಾತುಗಳನ್ನು ಕೇಳಿದ ತಾಯಿಗೆ ಆಶ್ಚರ್ಯವಾಗಿ ಸಂತೋಷದಿಂದ "ನೀನೊಂದು ದಿನ ಮಹಾಜ್ಞಾನಿಯಾಗುವೆ" ಎಂದು ಹರಸಿದಳಂತೆ. ಅದೇ ಬಾಲಕ ಬೆಳೆದು ಮುಂದೆ ಸುಪ್ರಸಿದ್ಧ ಸಂತ ನಾಮದೇವನಾದ.

(ಸಂಗ್ರಹ)

ಜಿ.ವಿ.ಪ್ರಭು

ಇದುಂಟೆ ಜೀವ ಇದು ಜೀವಾ

ನಾನೊಂದು ದಿನ ಮಧ್ಯಾಹ್ನದ ಹೊತ್ತಿಗೆ ನನ್ನ ಗೆಳೆಯನ ಮನೆಗೆ ಹೋದೆ. ಸಿಕ್ಕಾಪಟ್ಟೆ ಹಸಿವು ಮತ್ತು ಬಾಯಾರಿಕೆಯಿಂದ ಬಳಲಿದ್ದೆ. ಊಟದ ಸಮಯವಾದ್ದರಿಂದ ಖಂಡಿತವಾಗಿ ಆಮಂತ್ರಿಸುತ್ತಾನೆಂದು ಭಾವಿಸಿದ್ದೆ. ಬಹಳ ಆತ್ಮೀಯತೆಯಿಂದ ಸ್ವಾಗತಿಸಿದ ಅವನು 'ಊಟ ಮಾಡ್ತೀಯಾ?' ಎಂದು ಕೇಳಿದಾಗ ತುಂಬಾ ಸಂತೋಷದಿಂದ 'ಆಯ್ತು' ಎಂದು ಒಪ್ಪಿದೆ. ''ಸರಿ'' ಎಂದ ಆತ ಒಳಗೆ ಹೋದ. ಐದು ನಿಮಿಷ ಆಯ್ತು, ಹತ್ತು ನಿಮಿಷ ಆಯ್ತು, ಇನ್ನೂ 'ಒಳಗೆ ಬಾ' ಎಂಬ ಕರೆ ಬರಲಿಲ್ಲ. ಅಷ್ಟರಲ್ಲಿ ತಟ್ಟೆ ಪಾತ್ರೆಗಳ ಸದ್ದಾಯಿತು. ಸರಿ, ಈಗ ಬಂದು ಕರೆಯುತ್ತಾನೆ ಎಂದುಕೊಂಡೆ. ಮತ್ತೂ ಹತ್ತು ನಿಮಿಷ ಕಳೆಯಿತು. ಆತ ಹೊರಗೆ ಬರಲೇ ಇಲ್ಲ.

ನನ್ನಿಂದ ತಡೆಯಲಾಗದೆ ನೋಡಿಯೇ ಬಿಡೋಣ ಎಂದು ಮೆಲ್ಲಗೆ ಒಳಗೆ ಇಣಕಿ ನೋಡಿದೆ. ಅವನೂ ಅವನ ಹೆಂಡತಿಯೂ ಕುಳಿತು ಸೊಂಪಾಗಿ ಗೊಜ್ಜು, ತೋವೆ, ಉಪ್ಪಿನ ಕಾಯಿ, ಹಪ್ಪಳ ಹರಡಿಕೊಂಡು ಊಟ ಮಾಡುತ್ತಿದ್ದರು. ನನಗೆ ಸೊಗಸಾದ ಪರಿಮಳದಿಂದಾಗಿ ಬಾಯಲ್ಲಿ ನೀರೂರಿತ್ತು. ಅಡಿಗೆ ಮನೆಗೆ ನುಗ್ಗಿ ಬಿಡೋಣ ಎಂದುಕೊಂಡವನು ಸಂಯಮ ವಹಿಸಿದೆ. ಎಂಥ ಗೆಳೆಯ ಇವನು, ಆಮಂತ್ರಿಸಿದ ನನ್ನನ್ನು ಬಿಟ್ಟು ಉಣ್ಣುತ್ತಿದ್ದಾನಲ್ಲ ಅಂತ ಬೇಜಾರಾಯ್ತು.

ಊಟ ಮುಗಿಸಿ ಹೊರಗೆ ಬಂದ ಆತ, ''ಏಕೋ, ತುಂಬ ಬಳಲಿದ್ದೀಯ, ಊಟ ಮಾಡಬಾರದಿತ್ತೆ ..... ನಮ್ಮನೆಯಲ್ಲೇನು ನಿನಗೆ ಸಂಕೋಚ?'' ಎಂದ. ನನಗೆ ಕೋಪ ತಡಕೊಳ್ಳಲಾಗದೆ, ''ತಮಾಷೆ ಮಾಡ್ತಿಐನೋ? ಊಟ ಮಾಡುತ್ತೇನೆ ಎಂದು ಹೇಳಿದ ಮೇಲೂ ನೀನೊಬ್ಬನೇ ಉಂಡೆಯಲ್ಲ, ಇದು ನ್ಯಾಯಾನಾ?'' ಎಂದು ಕೂಗಾಡಿದೆ.

ಅವನೂ ಕೋಪಗೊಂಡು ''ಯಾವನು ತಮಾಷೆ ಮಾಡುತ್ತಿರುವುದು, ನೀನೋ ನಾನೋ?'' ಎಂದು ಅಷ್ಟೇ ಜೋರಾಗಿ ಕೂಗಿದ. ''ನಾನು ಕಾಳಜಿಯಿಂದ 'ಊಟ ಮಾಡ್ತೀಯಾ?' ಎಂದು ಕೇಳಿದಾಗ 'ಆಯ್ತು' ಎಂದೆ. ಅದಕ್ಕೆಂತಲೇ ನಾನು ಸುಮ್ಮನಾದೆ'' ಎಂದ.

'ಆಯ್ತು ಮಾಡ್ತೇನೆ' ಎಂಬ ಅರ್ಥದಲ್ಲಿ ನಾನು ಹೇಳಿದ 'ಆಯ್ತು' ಪದವನ್ನು ಅವನು 'ಊಟ ಆಗಿದೆ' ಎಂದು ಅರ್ಥಮಾಡಿಕೊಂಡಿದ್ದರ ಪರಿಣಾಮವಾಗಿ ಈ ಗೊಂದಲ ಉಂಟಾಗಿತ್ತು! *– ಎಸ್. ಜಯಶ್ರೀನಿವಾಸ್‌ರಾವ್*

ಇತ್ತೀಚೆಗೆ ದ.ಕ. ಜಿಲ್ಲೆಯ ಕುಂಭಾಶಿಯಲ್ಲಿನ ಗಣಪತಿ ದೇವಸ್ಥಾನ ನೋಡಲು ಹೋಗಿದ್ದೆವು. ದೇವಸ್ಥಾನದ ಸಮೀಪ ಬರುತ್ತಿದ್ದಂತೆಯೇ ಸುಮಾರು ಎಂಟು ವರ್ಷದ ಬಾಲಕಿಯೊಬ್ಬಳು ಕೈಯಲ್ಲಿ ಗರಿಕೆಯ ಕಟ್ಟೊಂದನ್ನು ಹಿಡಿದು ಕೊಂಡು ನಮ್ಮ ಸಮೀಪ ಬಂದು ''ಸಾರ್ ದಯಪಿಟ್ಟು ಈ ಗರಿಕೆಯ ಕಟ್ಟನ್ನು ದೇವಸ್ಥಾನಕ್ಕೆಂದು ಕೊಂಡುಕೊಳ್ಳಿ. ಐವತ್ತು ಪೈಸೆ ಮಾತ್ರ ನನಗೆ ಕೊಟ್ಟರೆ ಸಾಕು'' ಎಂದು ಗೋಗರೆಯುವುದಕ್ಕೆ ಪ್ರಾರಂಭಿಸಿದಳು. ನಾವುಗಳು ''ದೇವರ ನೈವೇದ್ಯಕ್ಕೆಂದು ಬಾಳೆಹಣ್ಣುಗಳನ್ನು ಈಗಾಗಲೇ ಕೊಂಡುಕೊಂಡಿದ್ದೇವೆ. ಈ ಗರಿಕೆ ನಮಗೆ ಬೇಡವಮ್ಮ'' ಎಂದು ಹೇಳಿದರೂ ಆ ಪುಟ್ಟ ಬಾಲಕಿ (ನಮ್ಮನ್ನು) ಗರಿಕೆಯನ್ನು ದೇವರಿಗೆ ನೀಡಿರೆಂದು ಒತ್ತಾಯಿಸ ಹತ್ತಿದಳು. ನಮ್ಮ ಹಿಂದೆ-ಮುಂದೆಯೇ ಸುತ್ತಾಡುತ್ತಿದ್ದ ಆವಳನ್ನು ಕಂಡು ಮರುಕಗೊಂಡು ''ನೋಡಮ್ಮ ನಮಗೆ ಗರಿಕೆ ಕಟ್ಟು ಬೇಡ. ಆದರೂ ನಿನಗೆ ನೀನು ಕೇಳಿದ ಐವತ್ತು ಪೈಸೆಯನ್ನು ಹಾಗೆಯೇ ಕೊಡುತ್ತೇವೆ. ಬೇರೆಯವರಿಗೆ ನೀನು ಗರಿಕೆ ಕಟ್ಟನ್ನು

ಮಾರಿಕೋ'' ಎನ್ನುತ್ತ ಆ ಹುಡುಗಿಯ ಕೈಗೆ ಐವತ್ತು ಪೈಸೆ ನಾಣ್ಯವನ್ನು ನೀಡಿ ಸರಸರನೆ ದೇವಸ್ಥಾನಕ್ಕೆ ಹೋದೆವು. ದೇವಸ್ಥಾನಕ್ಕೆ ಬಂದು ಒಂದು ಪ್ರದಕ್ಷಿಣೆ ಹಾಕಿ ಬರುವಷ್ಟರಲ್ಲೆ ಆ ಹುಡುಗಿ ದೇವಸ್ಥಾನಕ್ಕೆ ಬಂದಿದ್ದಳು! ಮತ್ಯಾಕೆ ಬಂದಳಪ್ಪಾ ನಕ್ಷತ್ರಿಕನ ಹಾಗೆ ಇವಳು? ಒಳ್ಳೆ ಶನಿ ಕಾಟವಾಯ್ತಲ್ಲಾ ಎಂದು ಅಂದುಕೊಳ್ಳುತ್ತಿರುವಾಗಲೇ ಆಕೆ ತನ್ನ ಕೈಯಲ್ಲಿ ಹಿಡಿದಿದ್ದ ಗರಿಕೆಯ ಕಟ್ಟನ್ನು (ನಮಗೆ ಕೊಡಲು ಬಂದಿದ್ದ ಗರಿಕೆಯ ಕಟ್ಟು ಅದು) ಭಕ್ತಿಯಿಂದ ಗಣಪನ ಪಾದದ ಸಮೀಪದಲ್ಲಿಟ್ಟು, ನಮಸ್ಕಾರ ಹಾಕಿ ನಮ್ಮತ್ತ ನೋಡಿ ನಸುನಕ್ಕು ಹೊರಕ್ಕೆ ಹೋದಳು. ಈ ದೃಶ್ಯ ಮನಮಿಡಿಯುವಂತಿತ್ತು. ದುಡ್ಡು ಪಡೆದ ಆಕೆ ಗರಿಕೆಯನ್ನು ನಮ್ಮ ಪರವಾಗಿ ದೇವರಿಗೆ ಅರ್ಪಿಸಿದ ಧನ್ಯತಾಭಾವ, ಸಂತೃಪ್ತಿ ಆಕೆಯ ಮುಖದಲ್ಲಿ ಎದ್ದು ಕಾಣುತ್ತಿತ್ತು. ಹೇಗಾದರೂ ಆಗಲಿ ಬಿಟ್ಟಿಯಾಗಿ ಹಣ ಸಿಕ್ಕರೆ ಸಾಕು ಎಂದುಕೊಳ್ಳುವ ನಮ್ಮಲ್ಲಿನ ಅನೇಕ ಸೋಂಭೇರಿ ಮಂದಿಗೆ ಆಕೆಯೊಂದು ಅಪವಾದ. ಆ ಪುಟ್ಟ ಹುಡುಗಿಯ ಅನುಕರಣೀಯ ಹೃದಯ ವೈಶಾಲ್ಯತೆ, ಗರಿಕೆಯಾದರೂ ಸರಿ ದುಡಿದು ಸಂಪಾದನೆ ಮಾಡಬೇಕೆಂಬ ನಿಯತ್ತು, ಛಲ ಮೆಚ್ಚಬೇಕಾದದ್ದೇ ಅಲ್ಲವೇ?

ಶಿವಮೊಗ್ಗ **ಎಸ್ಸಾರ್ ವಾಸುದೇವರಾವ್**

ಒಮ್ಮೆ ನಾನು ಬೆಂಗಳೂರಿನಿಂದ ಊರಿಗೆ ಹೋಗುವಾಗ ನನ್ನ ಪಕ್ಕದಲ್ಲಿ ಹಳ್ಳಿಯವರೊಬ್ಬರು ಕಿಟಕಿಯ ಪಕ್ಕದಲ್ಲಿ ಕುಳಿತುಕೊಂಡಿದ್ದರು. ಬಸ್ಸು ಬೆಂಗಳೂರು ಬಿಟ್ಟ ಅರ್ಧ ಗಂಟೆಯೊಳಗೆ ಅವರು ನಿಧಾನವಾಗಿ ಜೇಬಿನಿಂದ ಬೀಡಿಕಟ್ಟು ಹೊರತೆಗೆದರು. ನಂತರ ಯಾರಾದರೂ ಗಮನಿಸುತ್ತಿದ್ದಾರೋ ಎಂದು ಸುತ್ತಮುತ್ತ ಒಮ್ಮೆ ನೋಡಿ ಕಡ್ಡಿಪೆಟ್ಟಿಗೆ ತೆಗೆದರು. ಕೆಲನಿಮಿಷದ ನಂತರ ಬೀಡಿ ಹೊರಬಂತು. ನಾನು ಅವರ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಯಜಮಾನರು ಬೀಡಿಯನ್ನು ಬಾಯಿಗಿಟ್ಟಾಗ ''ಬೀಡಿ ವಾಸನೆಯಿಂದ ಕೆಲವರಿಗೆ ವಾಂತಿಯಾಗಬಹುದು. ಮುಂದೆ ಕಾಫಿಗೆ ಬಸ್ಸು ನಿಲ್ಲಿಸುತ್ತಾರೆ. ಆಗ ಬೀಡಿ ಸೇದಿ, ಯಾರಿಗೂ ತೊಂದರೆ ಇಲ್ಲ.'' ನಾನೆಂದೆ. ಕೂಡಲೆ ಬೀಡಿಯನ್ನು ಜೇಬಿಗೆ ಸೇರಿಸಿ ಎಷ್ಟು ಪ್ರಯತ್ನಿಸಿದರೂ ಬಿಡಲಾಗದ ಚಟದ ಬಗ್ಗೆ ಹೇಳಿಕೊಂಡರು.

ಇನ್ನೊಮ್ಮೆ ನನಗೆ ಆಧುನಿಕ ಉಡುಗೆ ಧರಿಸಿದ್ದ ಯುವಕರೊಬ್ಬರು ಸಿಕ್ಕಿದ್ದರು. ಅಕ್ಕಪಕ್ಕದಲ್ಲಿ ಯಾರ್‍ಯಾರು ಕುಳಿತಿದ್ದಾರೆಂದು ತಿಳಿದುಕೊಳ್ಳುವ ವ್ಯವಧಾನವಿಲ್ಲ. ಹೊಗೆಬತ್ತಿ ಸೇದಬಾರದೆಂಬ ಬೋರ್ಡ್ ಇದ್ದರೂ ತನಗೇನು ಎಂಬ ಧೋರಣೆಯಲ್ಲಿ ಸಿಗರೇಟ್ ಹಚ್ಚಿ ಸೇದತೊಡಗಿದರು. ನಾನು ಬಸ್ಸು ಚಲಿಸುತ್ತಿರುವಾಗ ಸಿಗರೇಟ್ ಸೇದುವುದನ್ನು ಆಕ್ಷೇಪಿಸಿದಾಗ 'ಬಸ್ ಕಂಡಕ್ಟರ್, ಡ್ರೈವರ್ಸ್ ಸಿಗರೇಟ್ ಸೇದುತ್ತಾರೆ. ಅವರಿಗೆಲ್ಲ ನಿಮಗೆ ಹೇಳಲಿಕ್ಕಾಗತ್ತದಾ?' ಎಂದು ತನ್ನ ನಡವಳಿಕೆಯನ್ನು ಸಮರ್ಥಿಸಿಕೊಳ್ಳತೊಡಗಿದ್ದರು. ಇನ್ನೊಬ್ಬರನ್ನು ತಿದ್ದೋದು ಬಹಳ ಕಷ್ಟ ಅಂತ ಅನ್ನಿಸಿತು.


ಬದಣಿ **ಬಿ.ಪಿ.ವರ್ಮ**

ಮಳೆಗಾಳಿ ಚಳಿಗಳಿಂದ
ಹಾನಿಯಿಲ್ಲದ
ಮುಟ್ಟಿದರೂ ಮಾಸದ
ಕನಕ ಕುಸುಮಕ್ಕಿಂತ
ಪ್ರಕೃತಿಗೆ ಸ್ಪಂದಿಸುವ
ಹಸಿರೆಲೆಯಾಗುವುದು
ನನ್ನ ಆಯ್ಕೆ

ಕಬ್ಬಿಣ ಕಾದಿಲ್ಲ,
ಪೆಟ್ಟಿ
ನಿಂದೇನು ಪ್ರಯೋಜನ ?

ಡಾ. ಎಚ್.ಎಸ್. ಸುಜಾತಾ

ಮೂರ್ತಿರಾಯರಿಗೊಂದು ಆತ್ಮೀಯ ಪತ್ರ



ಲಲಿತ ಪ್ರಬಂಧ ಪ್ರಕಾರದೊಂದಿಗೇ ಕೇಳಿಬರುವ ಮತ್ತೊಂದು ಹೆಸರೆಂದರೆ ಪ್ರೊ. ಎ.ಎನ್. ಮೂರ್ತಿರಾಯರದು. ತೊಂಬತ್ತರ ತಾರುಣ್ಯದಲ್ಲಿರುವ ಈ ಹಿರಿಯ ಜೀವಿಯನ್ನು ರೂಪಿಸಿದ, ಬೆಳೆಸಿದ ಶಿವಮೊಗ್ಗೆಯ ಸಾಹಿತ್ಯಿಕ ಪರಿಸರವೇ ನಾಡಿನ ಅನೇಕ ಸಾಹಿತ್ಯ ಕ್ಷೇತ್ರದ ದಿಗ್ಗಜರ ಸೃಷ್ಟಿಗೆ ಕಾರಣವಾಗಿತ್ತು. ಸೃಜನಶೀಲ ಕ್ರಿಯೆಯ ಎಳೆಗಳಿಗೆ ಕಲಾತ್ಮಕ ಮೆರುಗು ನೀಡಿದ ತುಂಗಾತೀರದ ಈ ನಗರಕ್ಕೆ ವಿಶಿಷ್ಟ ಸ್ಥಾನವಿದೆ. ಇಂಥದೊಂದು ಅನನ್ಯ ಪರಿಸರದ ಕೊಡುಗೆಯಾದ ಮೂರ್ತಿರಾಯರ ಬದುಕು, ಬರಹ,ಸ್ನೇಹವಲಯ ಒಂದರ ಹಿಂದೆ ಒಂದರಂತೆ ಅಲೆಯಲೆಯಾಗಿ ತೇಲಿಬರುವ ಆಷಾಢದ ಮೋಡಗಳಂತೆ. ಹಿಂದು ಮೋಡಗಳ ಬೆನ್ನತ್ತಿ ಹಿಡಿದು ತಂದ ನೆನಪುಗಳನ್ನು ತಮ್ಮದೇ ಆದ ಲಾಲಿತ್ಯಪೂರ್ಣ ಅಭಿವ್ಯಕ್ತಿಯಲ್ಲಿ ಕೆತ್ತಿ ನಿಲ್ಲಿಸಿದ್ದಾರೆ ಖಜಾನೆ ಕೃಷ್ಣಮೂರ್ತಿಯವರು.

ಖಜಾನೆ ಕೃಷ್ಣಮೂರ್ತಿ

ಸನ್ಮಾನ್ಯ ಪ್ರೊ. ಮೂರ್ತಿರಾಯರಿಗೆ ನಮಸ್ಕಾರಗಳು,

ಗುರುತು-ಪರಿಚಯಗಳಿಲ್ಲದ ನನ್ನಂತಹವನೊಬ್ಬನಿಂದ ಇಂತಹದೊಂದು ದೀರ್ಘ ಪತ್ರ ಬಂದರೆ, ನೀವು ಚಕಿತರಾಗಬಹುದು. ತೀರ ಸಹಜ. 1970ರಿಂದಲೂ ನಿಮ್ಮ ಬಗೆಗೆ ಆದರ, ಭಕ್ತಿ ಗೌರವಗಳನ್ನು ಬೆಳೆಸಿಕೊಂಡಿರುವ ನಾನು ನಿಮ್ಮನ್ನು ಕುರಿತು ಒಂದು ಆತ್ಮೀಯ ಲೇಖನವನ್ನು ಬರೆಯಬೇಕೆಂದು ಕಳೆದ ಮೂರು-ನಾಲ್ಕು ವರ್ಷಗಳಿಂದಲೂ ಬಲು ಬಯಸಿದೆ. ಕನ್ನಡಿಗರ ಪುಣ್ಯವಶಾತ್ ಈಗಲೂ ನಮ್ಮೊಡನಿದ್ದು ತೊಂಬತ್ತರ ಯೌವನದಲ್ಲಿರುವ ನಿಮ್ಮನ್ನು ಕುರಿತು ಏನು ಬರೆಯಲಿ ಎಂದು ಚಿಂತಿಸುವುದರಲ್ಲೇ ಸಾಕಷ್ಟು ಕಾಲಹರಣವಾಯಿತು. ನಿಮ್ಮ ಒಡನಾಟವಾಗಲೀ, ಸಖ್ಯವಾಗಲೀ ಪರಿಚಯವಾಗಲೀ ದೊರೆಯದಷ್ಟು ಕಿರಿಯನಾದ ನನಗೆ ನಿಮ್ಮ ಪಾಠ ಕೇಳುವ ಅಥವಾ ನಿಮ್ಮ ಭಕ್ತರ ಭೃತ್ಯತನವಾಗಲೀ, ಪುಣ್ಯವಾಗಲೀ ಇಲ್ಲ. ಇದರಿಂದ ನನ್ನ ಒದ್ದಾಟ ಹೇಳತೀರದು.

1947-48ರಲ್ಲಿ ನಮ್ಮೂರು-ಶಿವಮೊಗ್ಗದಲ್ಲಿ-ಇಂಟರ್‌ಮೀಡಿಯೆಟ್ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಕನ್ನಡ ಭಾಷಕರಾಗಿದ್ದ ಶ್ರೀ ಎಸ್.ವಿ.ಪರಮೇಶ್ವರ ಭಟ್ಟರು ನಮಗೆ ನಿಮ್ಮ ''ಹಗಲುಗನಸುಗಳು'' ಸಂಗ್ರಹದಿಂದ ಪ್ರಬಂಧಗಳನ್ನು ಓದಿ, 'ಗೌರಜ್ಜಿ'ಯ ದರ್ಶನ ಮಾಡಿಸಿದ್ದರು; 'ಹೂವುಗಳ' ಪರಿಚಯ ಮಾಡಿಸಿದ್ದರು; 'ಲಲಿತೆಗೆ ವಿದ್ಯಾಭ್ಯಾಸ, ಮಾಡಿಸಿ 'ಗಾಡಿ ಪ್ರಯಾಣ' ಮೂಡಿಸುವುದರ ಮೂಲಕ ಆಗ ಪ್ರೀತಿ, ಪ್ರೇಮ, ಮದುವೆ, ಮಕ್ಕಳು ಮೊದಲಾದವುಗಳ ಕುರಿತು ಮಾತನಾಡುವುದೇ ಒಂದು ನಿಷಿದ್ಧವಾಗಿದ್ದಾಗ 'ಪ್ರಣಯ ಯಾತ್ರೆ'ಯನ್ನೂ ಮಾಡಿಸಿದ್ದರು. ಇದರಿಂದಾಗಿ ನಿಮ್ಮ ಕುರಿತು ಆಸಕ್ತಿ ಕುತೂಹಲಗಳು ಮೊಳೆಯಲಿಕ್ಕೂ, ಬೆಳೆಯಲಿಕ್ಕೂ ಆರಂಭವಾದದ್ದು ಆವಾಗಲೇ! ಪರಕಾಯ ಪ್ರವೇಶ ವಿದ್ಯೆ ನಮಗೆ ತಿಳಿಯದು. ಅದು ಗೊತ್ತಿದ್ದಿದ್ದರೆ ಆಗ ನಿಮ್ಮ ಬರಹ ಮತ್ತು ಶ್ರೀ ಭಟ್ಟರ ವರ್ಣನೆಗಳು, ಯಾರ್‍ಯಾರ ಮನಸ್ಸಿನಲ್ಲಿ ಎಂತೆಂತಹ ಚಿತ್ರ ಬಿಡಿಸಿವೆ ಎಂಥೆಲ್ಲ ಭಾವನೆಗ

ಳನ್ನು ಅರಳಿಸಿ ಕೆರಳಿಸಿವೆ ಎಂಬುದನ್ನು ತಿಳಿಯಬಹುದಿತ್ತು. ಆ ಪುಣ್ಯವಿಲ್ಲ.

ಶ್ರೀ ಭಟ್ಟರೇನೋ 'ಸುತ್ತಲೂ ಸೌಂದರ್ಯವೇನೋ ತುಂಬಿದೆ; ನೋಡಲು ಕಣ್ಣು ಬೇಕು; ಅನುಭವಿಸಲು ತಕ್ಕ ಮನೋಭಾವ ಬೇಕು' ಎಂಬ ನಿಮ್ಮ ವಾಕ್ಯಗಳನ್ನು ಮತ್ತೆ ಮತ್ತೆ ಸಾರಿ ಹೇಳುತ್ತಿದ್ದರು. ಆದರೆ ಕಾಲಕಾರಣ ನಿಯಮಕ್ಕೆ ದಾಸ್ಯವೃತ್ತಿ ಮಾಡುವ ಪ್ರಪಂಚದಲ್ಲಿ ನಾವಿದ್ದುದರಿಂದ ಕಾಣುವ ಕಣ್ಣುಗಳಿದ್ದರೂ ಆನಂದಿಸಿ ಅನುಭವಿಸಲು ತಕ್ಕ ಮನೋಭಾವವಿಲ್ಲದೆ ಒಂದು ವೇಳೆ ಅದು ಇದ್ದರೂ ಇದ್ದದ್ದು ಸಾಲದೆ ಪರದಾಡುತ್ತಿದ್ದೆವು. ನಿಮ್ಮ ಮೊದಲದರ್ಶನ ನನಗಾದದ್ದು ಅಲ್ಲೇ!

1940ರ ಸುಮಾರಿನಲ್ಲಿ ನೀವು ನಮ್ಮೂರ ಕಾಲೇಜಿನಲ್ಲಿ ಉಪಪ್ರಾಧ್ಯಾಪಕರಾಗಿ ಇಂಗ್ಲಿಷ್ ಬೋಧಿಸುತ್ತಿದ್ದಿರೆಂದೂ, ನಿಮ್ಮ ಮಗ ರಾಜೂ ಹುಟ್ಟಿದ್ದು ಅಲ್ಲಿಯೇ ಎಂದೂ ತಿಳಿದು ಬಂತು. ಶಿವಮೊಗ್ಗೆಯ ಕರ್ನಾಟಕ ಸಂಘದಲ್ಲಿ, ಬೆಂಗಳೂರು ಆಕಾಶವಾಣಿಯಲ್ಲಿ, ದಿ. ವೀ.ಸಿ.ಯವರ ಮನೆಯಲ್ಲಿ ಎಂದು ಹಲವಾರು ಬಾರಿ ನಿಮ್ಮನ್ನು ದೂರದಿಂದ ನೋಡಿದ್ದೇನೆ. ಈ ಅಕ್ಟೋಬರ್ ತಿಂಗಳ ನಾಲ್ಕರಂದು ಬಸವನಗುಡಿಯ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರಿನಲ್ಲಿ ದಿ. ಇನಾಂದಾರರ 'ಕಾದಂಬರೀ ಲೋಕ'ದ ಬಿಡುಗಡೆ ಸಮಾರಂಭದಲ್ಲಿ ನಿಮ್ಮನ್ನು ನೋಡಿದ ಮೇಲೆ ಮನಸ್ಸು ತಡೆಯಲಾಗದೆ I blogged myself to shed away life liaziness and to take up my pen.

1987ರ ದಶಕದ ಒಂದು ದಿನ ಶಿವಮೊಗ್ಗಾ ಸಹ್ಯಾದ್ರಿ ಕಾಲೇಜಿನ ಎದುರಿಗಿರುವ ವಿದ್ಯಾನಗರದಲ್ಲಿ ವಾಸವಾಗಿದ್ದ ನಿಮ್ಮ ಮಗ ರಾಜು ಮನೆಗೆ ನುಗ್ಗಿದೆ. ಅವರು ಕೊಟ್ಟ ಕಡಲೆ ಕಾಯಿಬೆಲ್ಲಗಳನ್ನು ತಿಂದು ಅವರನ್ನು ಮಾತಾಡಿಸಿ ಒಂದೆರಡು ಸಂಗತಿ ತಿಳಿದೆ. ನೀವು ಬರೆದ ಲಲಿತೆ ನಿಜವಾದ ಲಲಿತೆಯಲ್ಲ; ಶ್ರೀಮತಿ ಜಯಲಕ್ಷ್ಮಿಯವರು- ಎಂಬುದು ಮೊದಲನೆಯದು. ಹೊರಗೆಲ್ಲ ತುಂಬ ಹಾಸ್ಯ ಪ್ರಿಯರಾದ ನೀವು ಮನೆಯಲ್ಲಿ ತೀರ ಗಂಭೀರವಾಗಿರುತ್ತಿದ್ದುದರಿಂದ ಮಕ್ಕಳ ಮೇಲೆ ಆ ಹಾಸ್ಯ ಪ್ರಿಯತೆಯ ಪ್ರಭಾವವೇ ಬೀಳಲಿಲ್ಲ- ಎಂಬುದು ಎರಡನೆಯದು.

ನಿಮ್ಮನ್ನು ಕುರಿತು ಬರೆಯಬೇಕೆಂದು ಬೇತಾಳ ನನ್ನ ಬೆನ್ನೇರಿದೆ ಎಂಬುದನ್ನು ತಿಳಿದ ಡಾ. ಎಸ್.ಎಲ್.ಭೈರಪ್ಪ 'ನೀವು ಮೂರ್ತಿರಾಯರ ಕುರಿತು ಏನಾದರೂ ಬರೆಯಬೇಕೆಂದಿದ್ದಲ್ಲಿ ಮೈಸೂರಿಗೇ ಬನ್ನಿ. ಅಲ್ಲಿ ನಿಮಗೆ ಇಬ್ಬರ ಗುರುತು ಮಾಡಿಸಿ ಕೊಡುತ್ತೇನೆ. ಅವರುಗಳು ಮೂರ್ತಿರಾಯರಿಗೆ ತುಂಬ ಬೇಕಾದವರು. ಅದೇನು ಬೇಕೋ ಅವರ ಬಳಿ ಹೋಗಿ ತಿಳಕಂಡು ಬಂದು ನಮ್ಮ ಮನೆ ಮಹಡಿ ಮೇಲೆ ಕೂತ್ಗಂಡ್ ಬರೀರಿ. ಊಟ-ತಿಂಡಿ ನಮ್ಮನೇಲೇ' ಎಂದು ಆಹ್ವಾನ ಕೊಟ್ಟರು. ಆದರೆ ಇದು ಕಾರ್ಯರೂಪಕ್ಕೆ ಬಾರದೇ ಹೋಯಿತು. ಒಂದು ವರ್ಷದ ನಂತರ ಅವರು ಅರೇಬಿಯಾ ಈಜಿಪ್ಟ್ ಪ್ರವಾಸದಲ್ಲಿದ್ದಾಗ ಅವರು ಹೇಳಿದ್ದ ಇಬ್ಬರು ಮಹನೀಯರನ್ನೂ (ಶ್ರೀ ಜೆ.ಆರ್.ಲಕ್ಷ್ಮಣರಾವ್ - ಡಾ. ಪ್ರಭುಶಂಕರ್) ನೋಡಿದೆ. ಬೆಂಗಳೂರ ಭಾರತೀಯ ವಿದ್ಯಾಭವನದ ಗೌರವ ನಿರ್ದೇಶಕರಾದ ಡಾ. ಎಚ್.ಕೆ.ರಂಗನಾಥ್‌ರವರು ಶ್ರೀ ಹೆಚ್.ಕೆ.ರಾಮಚಂದ್ರ ಮೂರ್ತಿಯವರ ಬಳಿ ಕಳುಹಿಸಿಕೊಟ್ಟರು. ರಾಮಚಂದ್ರಮೂರ್ತಿಯವರು ತುಂಬು ಅಭಿಮಾನದಿಂದ ಮಾತಾಡಿಸಿದ್ದು ಮಾತ್ರವಲ್ಲದೆ 'ಯಾವಾಗಬೇಕಾದರೂ ಬನ್ನಿ' ಎಂದು ನಾಲ್ಕೈದು ಪತ್ರ ಕೂಡ ಬರೆದರು. ಶ್ರೀ ಪು.ತಿ.ನ.ರವರ ಬಳಿ ಹೋಗಲಾಗಲಿಲ್ಲ.

ಬೆಂಗಳೂರಿನ ವಿಜಯನಗರದಲ್ಲಿ ನಿಮ್ಮ ಸೋದರರ ಮನೆಯಲ್ಲೇ ನೀವು ವಾಸ್ತವ್ಯ ಹೂಡಿದ್ದೀರೆಂಬ ವಿಷಯ ನನ್ನ ಕಿವಿಗೆ ಬಿದ್ದು ನಿಮ್ಮನ್ನೇ ಕಾಣಲು ಅಲ್ಲಿಗೆ ಬರುವವರೊಳಗೆ ನೀವು ಮೈಸೂರು ಒಂಟಿಕೊಪ್ಪಲಿಗೆ ಹೋದಿರೆಂದು ತಿಳಿದು ಬಂತು. ಅದಾದ ಕೆಲವು ದಿನಗ

ಳಲ್ಲಿ ನಿಮ್ಮ ಮಗ ರಾಜು ಶಿವಮೊಗ್ಗದಲ್ಲಿ ಸಿಕ್ಕಿದಾಗ 'ಮತ್ತೆ ಈಗ ಅಪ್ಪ ಬೆಂಗಳೂರಲ್ಲೇ ಇದಾರೆ. ನಮ್ಮ ಅಣ್ಣ ಸುಬ್ಬರಾಮು ಈಗ ಮೈಸೂರು ಬಿಟ್ಟು ಬೆಂಗಳೂರಲ್ಲೇ ಸೆಟ್ಲ್ ಆದರು. ಎಚ್.ಎ.ಎಲ್. ಸೆಕೆಂಡ್ ಸ್ಟೇಜ್ ಸಂಜಯನಗರದಲ್ಲಿ' ಎಂಬ ಸುದ್ದಿ ಕೊಟ್ಟರು. ಕೊನೆಗೂ ನಿಮ್ಮನ್ನು ಭೇಟಿ ಮಾಡಲಾಗಲಿಲ್ಲ.

ಈಚೆಗೆ ಸಾಹಿತ್ಯ ಭಂಡಾರದ ಗೋವಿಂದರಾಯರ ಮನೇಲಿ ನಡೆದ ಮದುವೆಗೆ ಮತ್ತೆ ಡಾ. ಭೈರಪ್ಪ ಬಂದಿದ್ದು 'ನೀವಿನ್ನೂ ಏನು ಬರೆಯುವ ಅಗತ್ಯವೇ ಇಲ್ಲ. ಮೂರ್ತಿರಾಯರೇ ತಮ್ಮ ಆಟೋಬಯೋಗ್ರಫಿ ಬರೆದು, ಅದು ಪ್ರಿಂಟೂ ಆಗಿ ಬಂದಿದೆ.' ಎಂದು ಬಿಟ್ಟರು. ನನ್ನ ಕೈಕಾಲೇ ಬಿದ್ದು ಹೋದವು. ಹಣೆ ಹಣೆ ಬಡಿದುಕೊಂಡೆ. 'ಹಗಲುಗನಸುಗಳು' ನಮಗೆ ಪಠ್ಯವಾಗಿದ್ದಂತೂ ಸರಿ. ಆದರೆ ನಿಮ್ಮ ಕುರಿತು ಬರೆಯಬೇಕೆಂಬ ಒಂದು ಬಯಕೆ ಕೂಡಾ ಹಗಲುಗನಸೇ ಆಗಬೇಕೆ! ನಿಮ್ಮ 'ಅಲೆಯುವ ಮನ' ಈಗ ಮೂರು ನಾಲ್ಕು ವರ್ಷಗಳ ಹಿಂದೆ ಸಿಕ್ಕಿದರೆ, 'ಚಿತ್ರಗಳು ಪತ್ರಗಳು' ಅಪರವಯಸ್ಕರ' ಅಮೇರಿಕಾ ಯಾತ್ರೆ,' ಮತ್ತು 'ಸಂಜೆಗಣ್ಣಿನ ಹಿನ್ನೋಟ' ಇವೆಲ್ಲ ಈಚೆಗೆ ಸಿಕ್ಕಿದವು. ಇವನ್ನೆಲ್ಲ ಓದುತ್ತಿದ್ದಂತೆಯೇ ಬರಡಾಗಿ ಕೊರಡಾಗಿದ್ದ ನನ್ನ ಆಸೆ ಮತ್ತೆ ಚಿಗುರಿತು.

★

ಕೈಲಾಸಂ, ಕಸ್ತೂರಿ, ರಾಜರತ್ನಂ, ಬೀಚಿ ಮೊದಲಾದವರ ಹಾಸ್ಯ ಪಂಥಕ್ಕೆ ಸೇರಿದ ನಮಗೆ ನಿಮ್ಮ ಕುರಿತು ಏಳೆತ ಬರಲು ನಿಮ್ಮ ಹಾಸ್ಯಪ್ರಿಯತೆಯೂ ಕಾರಣ. ಲಲಿತೆಯ ವಿದ್ಯಾಭ್ಯಾಸ, ಗಾಡೀ ಪ್ರಯಾಣ, ಪ್ರಣಯ ಯಾತ್ರೆಗಳಲ್ಲದೆ, ಕೆನ್ಸಿಂಗ್‌ಟನ್ ಪಾರ್ಕ್, ನಿನ್ನ ಕಾರ್ ನೀನೇ ರಿಪೇರಿ ಮಾಡಿ ನೋಡು, ಕ್ಲೀಷಾ ಪ್ರವೀಣರ ಸಾಕ್ಷ್ಯ ಮೊದಲಾದ ನಿಮ್ಮ ಪ್ರಬಂಧಗಳಲ್ಲಿ ಬರುವ ಹಾಸ್ಯ ಸನ್ನಿವೇಶಗಳನ್ನು ಅದೆಷ್ಟು ಬಾರಿ ಓದಿದ್ದೇನೋ, ನಕ್ಕಿದ್ದೇನೋ! ಟೆನಿಸ್ ಆಡಿ ಹಸಿದು ಬಂದ ಮಗ ಬಿಸಿಯಾಗಿ ಊಟ ಮಾಡಲೆಂದು ತಾಯಿ 'ಲಲಿತಾ, ರಾಮೂನ ಕಾಲಿಗೆ ಬಿಸಿ ನೀರು ಕೊಡಮ್ಮ' ಎಂದರೆ ನಿಮಗೆ ಅದೆಲ್ಲ ಬೇಕಿಲ್ಲ. 'ಮನೆಗೆ ಬಂದ ಕೂಡಲೇ ಹುಚ್ಚು ಹುಚ್ಚಾಗಿ ಹರಟಬೇಕು; ಲಲಿತೆಯನ್ನು ಮುತ್ತಿಡಬೇಕು' ಎಂದೆಲ್ಲ ಬರೆದುಕೊಂಡಿದೀರಲ್ಲ. ಶ್ರೀಪರಮೇಶ್ವರ ಭಟ್ಟರು ನಮ್ಮ ಕ್ಲಾಸಲ್ಲಿ ಈ ಸನ್ನಿವೇಶದ - ಉಳಿದೆಲ್ಲ ಭಾಗಗಳನ್ನೂ, ಲಲಿತವರಿಗೆ ಬಾಧೆಯಾಗುವವರೆಗೂ ಓದಿ ಈ ಕೊನೆಯ ಎರಡು ಶಬ್ದಗಳನ್ನು ಮಾತ್ರ ಓದದೆ ಬೇಕೆಂತಲೇ 'ಮೂರ್ತಿರಾಯರು ಅಲ್ಲೇನೋ ಬರೆದಿದಾರೆ; ನೀವೇ ಓದ್ಕೊಳಿ' ಎಂದು ರಸಭಂಗ ಮಾಡಿ ಇಡೀ ತರಗತಿಯನ್ನೂ ನಗೆಗಡಲಲ್ಲಿ ಮುಳುಗಿಸುತ್ತಿದ್ದರು.

'ಅಲೆಯುವ ಮನ'ದಲ್ಲಿನ ಪ್ರಬಂಧಗಳಲ್ಲಿ ನೀವು ಕತ್ತರಿಸಿರುವ ಜೋಕುಗಳು ಬರೆದಿರಿಸಿಕೊಳ್ಳುವಂತಹವು. ಮಹಾರಾಜಾ ಕಾಲೇಜಿನಲ್ಲಿ ನೀವಿದ್ದಾಗ ತೆಗೆದಿರುವ ಚಿತ್ರಗಳು, ವಿ.ಸೀ.ಯವರ ಕಾಲೇಜ್ ದಿನಗಳಲ್ಲಿರುವ ಚಿತ್ರಗಳು ಮತ್ತು ತೀರ ಈಚೆಗೆ ಪ್ರಕಟವಾಗಿರುವ ನಿಮ್ಮ 'ಸಂಜೆಗಣ್ಣಿನ ಹಿನ್ನೋಟ'ದ ಒಳಪುಟಗಳಲ್ಲಿರುವ ನಿಮ್ಮ ಮತ್ತು ನಿಮ್ಮ ಶ್ರೀಮತಿಯವರ ಚಿತ್ರಗಳು ಇವನ್ನೆಲ್ಲ ನೋಡುತ್ತಾ ಇದ್ದರೆ, ಕೆನ್ಸಿಂಗ್‌ಟನ್ ಪಾರ್ಕ್‌ನಲ್ಲಿ ನೀವು ಬರೆದಿರುವಂತೆ 'ಈಗ ವಯಸ್ಸಾಗಿರುವವರು ಒಂದು ಕಾಲದಲ್ಲಿ ಯುವತಿಯರಾಗಿದ್ದಿರಬೇಕು' ಎಂಬ ಮಾತು ಎಷ್ಟು ನಿಜ ಎಂಬುದು ಮಾತ್ರವಲ್ಲ; ಈ ಹಾಸ್ಯದ ನವಿರುಚಾಟಿಯ ಹೊಡೆತ ಎಷ್ಟು ಡಿಗ್ರಿ ಸೆಲ್ಷಿಯಸ್‌ದು ಎಂಬುದೂ ಗೊತ್ತಾಗುತ್ತದೆ.

'ನಿನ್ನ ಕಾರನ್ನು ನೀನೇ ರೀಪೇರಿ ಮಾಡಿ ನೋಡು' ಎಂಬ ಪ್ರಬಂಧದಲ್ಲಿ ಎಂಜಿಯನಿರಿಂಗನ್ನು ಆಂಜನೇರಿಂಗ್ ಮಾಡಿ Fools build houses; wise men live in it ಎಂಬ ಇಂಗ್ಲಿಷ್ ನಾಣ್ನುಡಿಗೆ ತರ್ಕಣೆಯಾಗುವಂತಹ ಒಂದು ವಾಕ್ಯ ಸೃಷ್ಟಿಸಿ 'ಮೂರ್ಖರು ಕಾರು ಕೊಳ್ಳುತ್ತಾರೆ; ಬುದ್ಧಿವಂತರು ಅದರಲ್ಲಿ ಪ್ರಯಾಣ ಮಾಡುತ್ತಾರೆ; ನಾನು ಈಗ ಕಾರ್ ಕೊಂಡಿದ್ದೇ

ನೆ' ಎಂದು ಕೊನೆಯ ವಾಕ್ಯದಲ್ಲಿ ಜೋಕ್ ಹಾರಿಸಿದ್ದೀರಿ. The tail, thought long, has still the sting at its end!

ನಮ್ಮ ಹಿರಿಯರು ಹೋಟಲಿಗೆ ಹೋಗುವುದು ಕೆಟ್ಟದು ಮಾತ್ರವಲ್ಲ. ಅದು ಪಂಚಮಹಾಪಾತಕಗಳಲ್ಲಿ ಒಂದು ಎಂದೇ ಭಾವಿಸಿದ್ದರು. ಅದೇ ಹಿರಿಯರು, ಪುರೋಹಿತರು, ಹುಡುಗರಿಗೆ ಕೆಟ್ಟ ಮೇಲ್ಪಂಕ್ತಿ ಹಾಕಬಾರದು ಎಂಬ ಸದುದ್ದೇಶದಿಂದ ಹೋಟಲಿಗೆ ಹೋಗುವಾಗಲೆಲ್ಲಾ ಗುಟ್ಟಾಗಿಯೇ ಹೋಗುತ್ತಿದ್ದರು. ಎಂಬ ವಾಕ್ಯದಲ್ಲಿ ಆ ಹಿರಿಯರನ್ನೂ ಪುರೋಹಿತ-ತಾರ್ತುಫೆಗಳನ್ನೂ ಒದ್ದು ಒಣಹಾಕಿದ್ದೀರಿ.

ನಿಷಿದ್ಧವಾದ ಕಾರ್ಯವನ್ನು ಮಾಡುವುದರಲ್ಲೇ ಒಂದು ಅಪೂರ್ವ ಸೌಖ್ಯವಿದೆ. ಮನೆಯಲ್ಲಿ ಅಜೀರ್ಣಕ್ಕೆ ಅವಕಾಶವಿಲ್ಲದ್ದರಿಂದ ನಾವು ಅದನ್ನು ಹೋಟಲುಗಳಲ್ಲಿ ಕೊಂಡುಕೊಳ್ಳಬೇಕಾಯಿತು. ಎಂದು, ಹೋಟಲುಗಳಿಗೆ ಹೋಗುವುದನ್ನು ಸಕಾರಣವಾಗಿ ಸಮರ್ಥಿಸಿಕೊಂಡಿರುವ ನೀವು ಎಂತಹ ಅರಸಿಕರಲ್ಲೂ ನಗೆಯುಕ್ಕಿಸಬಲ್ಲಿರಿ.

ಇದನ್ನು ಓದಿದ ಮೇಲೆ ಆ ಹೋಟಲುಗಳಿಂದ ಬರುವ ಭಕ್ಷ್ಯಗಳ ಕಂಪಿನ ಎಳೆತದಿಂದ ಒಂದು ದಿನದ ಮಟ್ಟಿಗಾದರೂ ಜೀವನದ ಬಿಗುಮಾನವನ್ನು ಬದಿಗಿರಿಸಿ, ಕೈಲಿ ಒಂದು ಪೊಟ್ಟಣ ಗರಿಗರಿಯಾದ ತಿಂಡಿಯನ್ನು ಹಿಡಿದು ಕುರುಕುತ್ತಾ, ನಿರಾತಂಕವಾಗಿ ತಿರುಗಾಡುತ್ತಾ ಈ ನಗರದ ಚಿಕ್ಕಪೇಟೆ ಬಳೇಪೇಟೆಗಳಲ್ಲೆಲ್ಲಾದರೂ ಬಂದು ಕಾಣಿಸುತ್ತೀರೇನೋ ಎಂದು ಅಲ್ಲಲ್ಲಾ ಕಾದು ನಿಂತಿರುತ್ತಿದ್ದೆ.

ನಿಮ್ಮ 'ಹೆಂಡತಿಯ ಹೆಸರು' ಪ್ರಬಂಧ ಆ ಕಾಲದ ಮದುವೆ ಮನೆಗಳಲ್ಲಿ ನಡೆಯುತ್ತಿದ್ದ ಉರುಟಣೆ, ಹಸೆಮಣೆ ಬೆಂಡಾಟ, ಅಕ್ಕಿ ಆನೆ ಉಪ್ಪಿನ ಆನೆ, ಎನ್ನರಸಿ ಚನ್ನರಸಿ, ಬಾಗಿಲು ಕಟ್ಟುವುದು ಮದುಮಕ್ಕಳನ್ನು ಹೆಸರು ಹೇಳಿಸಲು ಅಡ್ಡಗಟ್ಟುವುದೇ ಮೊದಲಾದ ಕಲಾಪಗಳ ಸುಂದರ ಚಿತ್ರವನ್ನು ಕೊಡುತ್ತದೆ. ಈಗಿನವರಿಗೆ ಮದುವೆಗೆ ಮುಂಚೆಯೇ ಸ್ಕೂಟರ್, ಮೋಟರ್‌ಗಳಲ್ಲಿ ಸಿನಿಮಾ ಹೋಟಲುಗಳಿಗೆ ಹೋಗಿ ಒಬ್ಬರನ್ನೊಬ್ಬರು ಆಗಲೇ ಏಕವಚನದಲ್ಲೇ ಹೆಸರು ಹಿಡಿದು ಕರೆಯುವ ಅರಸಿಕತನ! ಇದರಲ್ಲಿ ಲಜ್ಜೆ ನಾಚಿಕೆ, ಕೆನ್ನೆ ಕೆಂಪೇರುವುದು, ಹೊಸತನ ಈ ಥ್ರಿಲ್‌ಗಳಿಗೆ ಅವಕಾಶವಾದರೂ ಎಲ್ಲಿ ಅವಕ್ಕೆ?

'ನಿಮ್ಮ ಯಜಮಾನತಿ' ಎಂದು ಯಾರೋ ಲಲಿತಮ್ಮನವರನ್ನುದ್ದೇಶಿಸಿ ಹೇಳಿದಾಗ 'ಲಲಿತೆಗೆ ನನ್ನ ಮೇಲೆ ಯಜಮಾನಿಕೆ ಯಾರು ಕೊಟ್ಟರು?' ಎಂದು ನೀವು ಬಾಲವಾಡಿಸದೆ ಘರ್ಜಿಸಿದ್ದೀರಿ. ಅವರಿಗೆ ಆ ಯಜಮಾನಿಕೆ ಯಾರ್ಯಾಕೆ ಕೊಡಬೇಕು? ಮೊದಲ ತಿಂಗಳ ಸಂಬಳ ಎಪ್ಪತ್ತೈದು ರೂಪಾಯಿ (!) ತಂದು ಸೈಕಲ್ ತೆಗೆದುಕೊಳ್ಳಬೇಕೆಂದಿದ್ದಾಗ ತಿರುಪತಿಯ ದೇವರಿಗೆ ಅರ್ಧ ಸಂಬಳ ಹರಕೆಯಾಗಿ ಅರ್ಪಿಸುವ ಯಜಮಾನಿಕೆಯನ್ನು ಅವರಿಗೆ ಕೊಟ್ಟವರು ಯಾರು? ಅವರೊಂದಿಗೆ 'ಷೆಲ್ಲಿ' ಓದುವ ನೀವೇ ಅಲ್ಲವೆ?

ಇಂತಹ ಸುರಸ-ಸುಂದರ Someಸಾರ ಎಷ್ಟು ಜನರಿಗೆ ಲಭ್ಯ? ಪ್ರತಿ ಮಾತಿಗೂ ನೂರು ಮಾತಾಡಿ ಗಂಡಂದಿರ ತಲೆ ಚಿಟ್ಟು ಹಿಡಿಸುವ ಈ ಮೃದು ಮಧುರ ಭಾಷಿಣಿಯರು ದಿನಕ್ಕೊಂದು ನಾಲ್ಕೈದು ಬಾರಿಯಾದರೂ ಚಾಮುಂಡಿಬೆಟ್ಟದ ದೇವಸ್ಥಾನದ ಸೇವೆಗಳಲ್ಲಿರೋ ಲಿಸ್ಟಿನಲ್ಲಿ ಹನ್ನೊಂದನೇ ನಂಬರ್ ಹರಕೆ (ಬಾಯಿಗೆ ಬೀಗ)ಯನ್ನಾದರೂ ನಡೆಸಿದರಾದೀತು, ಎಂದು ನಾನೂ ಮನಸ್ಸಿನಲ್ಲೇ ಅಂದು ಕೊಂಡಿದ್ದೇನೆ.

'ಪ್ರೇಯಸಿಯ ಮೇಲೆ ನಮಗಿರುವ ವ್ಯಾಮೋಹ ಅಳಿದು ಹೋಗುವುದಾದರೆ, ನಮ್ಮಿಬ್ಬರ ಹೃದಯಬಂಧನವನ್ನು ಆ ಸ್ವರ್ಗ ಕಡಿಯುವುದಾದರೆ, ಅಂತಹ ಸ್ವರ್ಗ ದೂರವೇ ಇರಲಿ,' ಎಂಬ ನಿಮ್ಮ ಹರಕೆ ಎಷ್ಟು ಉದಾತ್ತವಾದ್ದು! ದೇವರು ನಮ್ಮನ್ನಿಲ್ಲಿ ತಂದಿಟ್ಟಿರುವುದು ಇಲ್ಲಿಂದ ಹೋಗಲು ಸಿದ್ಧರಾಗಲೆಂದು ಮಾತ್ರವಲ್ಲ. ವೈರಾಗ್ಯ ಎಂಬುದು ಮುಗಿದ ಯೌವನದ ಗುರುತೇ ಸರಿ. ಇದ್ದು ಜೈಸಬೇಕಾದರೆ

ಈಜಲೇಬೇಕು. ಈ ರೀತಿ ಈಜಹೊರಟಾಗ ನಮ್ಮ ನೆರವಿಗೆ ಬರುವ ಈಜುಬುರುಡೆಗಳೇ ಈ ಹರಕೆಗಳು ಎಂದು ನೀವು ಅದನ್ನು ಸಾಧಿಸಿರುವ ರೀತಿ ಚಿನ್ನದಂತಹ ಸಂಸಾರ ಚಿತ್ರಕ್ಕೆ ಹಾಕಿರುವ ರನ್ನದ ಕಟ್ಟುಕನ್ನಡಿಗಳು.

''ಕ್ಷೀಷಾಪ್ರವೀಣರ ಸಾಕ್ಷ್ಯ''ವಂತೂ ಹಾಸ್ಯವನ್ನು ಹೆಜ್ಜೆ ಹೆಜ್ಜೆಗೂ ಸೂರೆ ಮಾಡಿದೆ. ಸಂದರ್ಶಕರ ಪ್ರಶ್ನೆ; ಅದಕ್ಕವರ ಉತ್ತರ ಎರಡೂ ದಿ. ಬೀಚಿ ಬರೆಯುವ ಹಾಗೆ ನಮ್ಮನ್ನು ನಿಮಿಷಕ್ಕೆ ಎರಡೂವರೆ ಸಾರಿ ನಗಿಸುತ್ತದೆ.

ವರುಣ ಕೆಫೆಯವರು ಒದಗಿಸಿದ ಉಪಾಹಾರ ಬರೀ ಶುಚಿ-ರುಚಿಯಾದ್ದಲ್ಲ; ಕ್ಷೀಷಾಪ್ರವೀಣರ ಬಾಯಲ್ಲಿ 'ಹಿತ-ಮಿತ' ಕೂಡ. ಅದಕ್ಕೆ ನಿಮ್ಮ ಕಾಮೆಂಟರಿ: 'ಹಿತವಂತೂ ಸರಿ; ಮಿತವೇನಾಯಿತು? ಅತಿಥಿಗಳ ಜೀರ್ಣ ಶಕ್ತಿಯ ವಿಷಯದಲ್ಲೇನಾದರೂ ಸಂದೇಹ ಉಂಟಾಯಿತೆ?' ಎಂಬುದನ್ನು ಓದಿದಾಗ ಹುಚ್ಚಾಪಟ್ಟೆ ನಗು ಬಂದು ಪಕ್ಕೆ ಹಿಡಿದುಕೊಂಡು ಬಿಟ್ಟಿತು.

ಮುಂದೆ ''ಶ್ರೋತೃವೃಂದವೆಲ್ಲ ಗಾನ ಸುಧಾಂಬುಧಿಯಲ್ಲಿ ಮುಳುಗಿತ್ತು .... ಕ್ಷೀಷೆಯಲ್ಲಿ ಮುಳುಗುವುದಕ್ಕೂ ತೇಲುವುದಕ್ಕೂ ವ್ಯತ್ಯಾಸವಿಲ್ಲ'' ಎಂಬ ವಾಕ್ಯಗಳನ್ನು ಓದಿದಾಗ ಪುನಃ ಒಂದು ante-clock wise ನಗು ನಕ್ಕು ಹಿಡಿದಿದ್ದ ಪಕ್ಕೆ ಬಿಡಿಸಿಕೊಂಡೆ!

ಶ್ರೀ ಎಲೆಗಾನ ಹಳ್ಳಿಯವರು ತೀರ ತೆರೆದ ಮನಸ್ಸಿನಿಂದ ಅಧ್ಯಕ್ಷ ಭಾಷಣ ಮಾಡುವಾಗ ''ಈಗಲಾದರೋ ನಮಗೆ ಸ್ವಾತಂತ್ರ್ಯ ಬಂದಿದೆ'' ಎಂಬ ಜನಜನಿತ ರಹಸ್ಯವನ್ನೂ ಬಯಲಿಗೆಳೆದು ಬಿಡುವುದು ಎಂತಹ ದುರಂತ!

ವಿಷಯಗಳೆಷ್ಟೋ ಕೆಲವರಿಗೆ ತಿಳಿದಿದ್ದರೂ ಅದನ್ನು ಕುರಿತು ಕ್ರಮಬದ್ಧವಾಗಿ ಯೋಚಿಸುವ ಸಾಮರ್ಥ್ಯ ಎಲ್ಲರಿಗೂ ಇರುವುದು ಸಾಧ್ಯವಿಲ್ಲ. 'ನಿನ್ನ ಕಾರ್ ನೀನೇ ರಿಪೇರಿ ಮಾಡಿ ನೋಡು' ಪ್ರಬಂಧದಲ್ಲಿ 'ಇಂದ್ರ ತನ್ನ ಸಭೆಯಲ್ಲಿ ತಾನೇ ಕುಣಿಯುತ್ತಾನೆಯೆ' ಕುಣಿಯುವುದು ಅಂಚೆ ಬೂಚಿ (ರಂಭೆ-ಊರ್ವಶಿ)ಯರ ಕೆಲಸ. ಅದನ್ನು ನೋಡುವುದು ಇಂದ್ರನ ಕೆಲಸ'' ಇದನ್ನು ಸ್ಪಷ್ಟಪಡಿಸಲು ನವಿರು ರೇಷ್ಮೆ ಹಾಸ್ಯದ ಚಾವಟ ಹಿಡಿದು ಬಾರಿಸಲು ನೀವೇ ಸರಿ. Muse invited all. But she chose only you! ಆರ್ಕ್ ಎಂಜಲ್‌ಗೇಬ್ರಿಯಲ್‌ಗೆ ಸೃಷ್ಟಿ ಕಾರ್ಯವಹಿಸಿದ್ದರೂ ತಾನು ಮಧ್ಯ ಮಧ್ಯ ತಲೆಹಾಕುತ್ತ ಆ ದೇವನು ರಾಜಕಾರಣಿಗೆ ಎರಡು ನಾಲಿಗೆ ಕೊಡಬೇಕು; ಆ ಗಂಡಸಿಗೆ ಇನ್ನಷ್ಟು ಬೆನ್ನು ಮೂಳೆ ಸೇರಿಸು; ಹೆಂಗಸಿಗೆ ಅಷ್ಟುದ್ದ ನಾಲಿಗೆ ಕೊಡಬೇಡ ಎಂದೆಲ್ಲ ಎಚ್ಚರಿಸಿದ ಅವನ ಮಾತುಗಳನ್ನು ಬಹು ಜನ ಕುಕ್ಕುಟ ಕುಕ್ಕಿತ ಹೆನ್‌ಪೆಕ್ಡ್ ಹಸ್ ಬೆಂಡುಗಳೂ (ಅವರು ಮೊದಲೇ ಬೆಂಡು ಇಂತಹವರ ಕೈ ಹಿಡಿದ ಮೇಲೆ ಇದ್ದದ್ದೂ ಬಲು ಬೆಂಡು) ಕೇಳಿಸಿಕೊಂಡು ಮೌನವಾಗಿ ತಲೆದೂಗಿದ್ದಾರೆ.

ನಿಮ್ಮ ಕಾಲೇಜಿನ ಕಾಮನ್ ರೂಂ ಓದಿದ ಮೇಲೆ ನನಗಾದ ಹೊಟ್ಟೆ ಉರಿ ಅಷ್ಟಿಷ್ಟಲ್ಲ! ಅಂತಹ ಕಾಲೇಜು, ಸ್ನೇಹಪರ ಅಧ್ಯಾಪಕವೃಂದ ಸ್ವರ್ಗದೊಳಗಾದರೂ ಈಗ ಈ ಸ್ಕ್ರೀ ದೊರೆಯುವುದೇನು? ಆ ರಾಧಾಕೃಷ್ಣನ್, ಎನ್.ಎಸ್.ಸುಬ್ಬರಾವ್, ಪ್ರೊ.ರಾಲೊ. ಮ್ಯಾಕಿಂಟಾಷ್, ವೆಂಕಣ್ಣಯ್ಯ, ಬಿ.ಎಂ.ಶ್ರೀ, ವಿ.ಸಿ.ರಾಳ್ಳಪಲ್ಲಿ, ಕಸ್ತೂರಿ ಈಗ ಸಿಕ್ಕಿಯಾರೆ? ಎಂತಹ ಪುಣ್ಯವಂತರು ನೀವು! ಒಬ್ಬರನ್ನೊಬ್ಬರು ಹಾಸ್ಯ ಮಾಡಿ ನಕ್ಕ ಮಾತ್ರಕ್ಕೇ ತಿಂಡಿ ತೀರ್ಥ ಮುಗಿಸಿದ ಮಾತ್ರಕ್ಕೇ ನಿಮ್ಮನ್ನು ತಿಂಡಿಪೋತರೆಂದೂ ಬೇಜವಾಬ್ದಾರಿಯ ಲಫಂಗರೆಂದೂ ಮೂದಲಿಸಿದ ಆ ಅದೃಷ್ಟವಂತರು ಈಗಿಲ್ಲದೇ ಹೋದರೂ ಅವರ ಮನದ ಇನ್ನೊಂದು ಮೂಲೆಯಲ್ಲಿ ವಿಚಾರ ಸರಸ್ಸಿನಲ್ಲಿ ಕ್ರೀಡೆಯಾಡಿದವರು ನೀವು; ಭಾಷಾಶಾಸ್ತ್ರ ವ್ಯಾಸಂಗ ಮಾಡಿದವರು ನೀವು; ಕವಿತೆಗಳನ್ನು ಕಟ್ಟಿದವರು ನೀವು; ಸಾಮಾನ್ಯ ಮದ್ಯಪಾಯಿಗಳಲ್ಲ ನೀವು! ನೀವು ಕುಡಿದ ಮದ್ಯ ಅಂತಿಂಥದ್ದಲ್ಲ! ತ್ಯಾಗರಾಜ-ದೀಕ್ಷಿತರ ಕೃತಿಗಳು, ಈಗ್ಲಿಲಸ್ ಷೇಕ್ಸ್‌ಪಿಯರ್‌ನ ನಾಟಕಗಳು, ರಸಲ್ಲನ ಅನುಮಾನವಾದ ವರ್ಡ್ಸ್‌ವ

ರ್ತನ ಅನುಭಾವ ಈ ಎಲ್ಲ ಸರಕುಗಳ ಭಟ್ಟಿ ಇಳಿಸಿ ಬಂದ ಮದ್ಯ! ಎಂಬ ಭಾವನೆ ಇದ್ದಿರಬೇಕಾದರೆ ಏನು ಪುಣ್ಯ ನಮ್ಮದು. ಅದೇನೋ ಮಾಯಾಮಂತ್ರ ಮಾಡಿ ನಿಮಗರಿವಿಲ್ಲದಂತೆಯೇ ನಿಮ್ಮನ್ನು ಕನ್ನಡದ ಬಂದಿಗಳನ್ನಾಗಿಸಿದ ವೆಂಕಣ್ಣಯ್ಯ, ಬಿ.ಎಂ.ಶ್ರೀಯವರು 'ಊಟವಾದ ಮೇಲೆ ಎರಡು ಮಾವಿನ ಹಣ್ಣು ತಿನ್ನಲೇಬೇಕೆಂದು, ಅಪ್ಪಣೆ ಹೊರಡಿಸಬಹುದಾಗಿದ್ದ ನಿಮ್ಮ ಆರೋಗ್ಯ ರಕ್ಷಣೆಯ ಹೊಣೆ ಹೊತ್ತಿದ್ದ ಶ್ರೀ ಹನುಮಂತರಾಯರಂತಹವರು ಇಂತಹವರೆಲ್ಲ ಈಗೆಲ್ಲ ಸಿಗುತ್ತಾರೆ ಸರ್? When comes such another?

''ನನ್ನ ಮಾನಸಿಕ ಜೀವನ ಮತ್ತೂ ಭಾವಜೀವನ ಹೆಜ್ಜೆ ಹೆಜ್ಜೆಗೂ ಅವರ ಜೀವನದೊಡನೆ ಸಾಗಿದೆ. ಕಾಲೇಜ್ ಕಾಮನ್ ರೂಮಿನಲ್ಲಿದ್ದ ಒಬ್ಬೊಬ್ಬರೂ ಇತರರೆಲ್ಲರ ಜೀವನ ರೂಪಿಸಿದವರು. ಅವರಲ್ಲಿ ಯಾರೊಬ್ಬರು ತಮ್ಮ ಆತ್ಮಕತೆಯನ್ನು ಬರೆದರೂ ಅದು ಇತರರೆಲ್ಲರ ಕತೆಯಾಗದೆ ವಿಧಿಯಿಲ್ಲ'' ಎಂದು ನೀವು ಬರೆದಿರುವ ಮಾತುಗಳು ಎಷ್ಟು ದಿವ್ಯ ಎಷ್ಟು ಭವ್ಯ!

ಹೋಮರನು ಬದುಕಿದ್ದ; ಐವತ್ತು ನಗರಗಳ
ಬೀದಿ ಬೀದಿಗಳಲ್ಲಿ ತಂಗಳ ತಿಂದು ತಂದು!
ಹೋಮರನು ಸತ್ತಾಯ್ತು.
ಐವತ್ತು ನಗರಗಳು ಸ್ಪರ್ಧೆಯನು ಹೂಡಿದುವು
ನಮ್ಮವನು ಹೋಮರೆಂದು!

ಈ ಸಾಲುಗಳು ಬುದ್ಧಿ ಜೀವಿಗಳ, ಸಾಹಿತಿಗಳ, ಲೇಖಕರೆಲ್ಲರ ಬಾಳಿಗೆ ಹಿಡಿದ ಕನ್ನಡಿ; ತತ್ರಾಪಿ ಕರ್ಣಾಟಕದಲ್ಲಿ ಅಂತ ಮಾಡಿದ್ದೆ. ಆದರೆ ಹೋಮರನಂತಹ ಆದಿ ಕವಿಗೂ ಈ ಪಾಡೇ? ಇನ್ನು ಸಾಮಾನ್ಯರುಗಳಾದ ಕನ್ನಡಿಗರೇ ಲೆಕ್ಕಂ?

'ಚಿತ್ರಗಳು ಪತ್ರಗಳು' ಗುಚ್ಛದಲ್ಲಿ ನೀವು ಬಿಡಿಸಿರುವ ಶ್ರೀ ಎಂ.ಎಸ್.ಸುಬ್ಬರಾವ್, ರಾಧಾಕೃಷ್ಣನ್, ಬಿ.ಎಂ.ಶ್ರೀ, ದೇಶಿಕಾಚಾರ್, ವೆಂಕಣ್ಣಯ್ಯ, ರಾಲೊ, ಮೆಕಿಂಟಾಷ್‌ರವರ ಜೀವನಚಿತ್ರಗಳನ್ನೋದಿದ ಮೇಲೆ, ಇಂತಹ ಮಹಾಮಹಿಮರ ಶಿಷ್ಯರಾಗಿದ್ದುದರಿಂದಲೇ ನೀವು ಅಷ್ಟೆತ್ತರಕ್ಕೇರಿದಿರಿ;'' ಅವರ ಮಕ್ಕಳ ಸಂಖ್ಯೆ ಎಷ್ಟು ಗೊತ್ತೆ? ಹದಿನೈದಲ್ಲ ಹದಿನೆಂಟು! ಹೀಗೆಲ್ಲ ದೊಡ್ಡವರ ಧವಳ ಕೀರ್ತಿಗೆ ಕುಂದು ತರುವಂತಹ ಸುಳ್ಳುಕತೆಗಳನ್ನು ಹರಡಬಾರದು'' ಎಂದು ವಾದಿಯವರನ್ನೇ ತಿದ್ದಿದ ಮ್ಯಾಕಿಂಟಾಷ್‌ರವರಂತಹವರ ಬಳಿ ವ್ಯಾಸಂಗ ಮಾಡಿದುದರಿಂದಲೇ ನಿಮ್ಮ ಹಾಸ್ಯ ಪ್ರಜ್ಞೆ ಅಷ್ಟು ಚುರುಕಾಯಿತು ಎಂಬುದರಲ್ಲಿಯೂ ಅನುಮಾನವೂ ಇಲ್ಲ. They were good teachers and hence they inspired you!

ಕಷ್ಟದಲ್ಲಿದ್ದ ಹುಡುಗರಿಗೆ ಫೀಸು ಸಹಾಯ ಹಸ್ತ ನೀಡುವ ಸುಬ್ಬರಾಯರಂಥಹವರನ್ನೂ ತ್ರೀ-ಪೀಸ್ ಸೂಟ್ ಧರಿಸಿ, ಹಾಕಿಕೊಂಡ ಗೌನನ್ನು ಮಾತ್ರ ಬೇಕೆಂದೇ ಹರಕು ಪ್ರದರ್ಶಿಸುವ, ದೇಶ ಬಿಟ್ಟು ಹೋಗುವಾಗ ತಮ್ಮ ಕಾರನ್ನೇ ಡ್ರೈವರನಿಗೆ ಇನಾಮಾಗಿ ಕೊಟ್ಟು ಹೋಗುವ, ನಾಟಕವನ್ನೇನಾದಾರೂ ಆಂದರೆ Hamlet ಪಾತ್ರವನ್ನೆ ಆರಿಸಿಕೊಂಡು ''And in this horsh world draw thy breath in pain to tell my story' ಎಂದು ಹೂದೇಷಿಯೋಗೆ ಹೇಳಿ 'Rest is silence' ಎನ್ನುತ್ತಾ ಕಣ್ಮರೆಯಾಗುವ ರಾಲೋರವರನ್ನೂ ಎಲ್ಲಿಂದ ತರೋಣ!

ನಾನು ಈ ಹಾಳಾದ್ದು ಸೆಂಟ್ರಲ್ ಕಾಲೇಜಗೆ ಸೇರುವುದರ ಬದಲು ಮಹಾರಾಜಾ ಕಾಲೇಜಿಗೇ ಸೇರಿದ್ದರೆ ಚೆನ್ನಾಗಿತ್ತು. ರಕ್ತವರ್ಣದ ಈ ಕಾಲೇಜಿಗಿಂತ ಹಿತವಾದ ವರ್ಣಾಚ್ಛಾದನೆ ಹೊಂದಿ, ಚಾಮುಂಡೀಬೆಟ್ಟಕ್ಕೆ ಎದುರಾಗಿರುವ, ಸುಂದರ ಚೌಕಟ್ಟಿನಲ್ಲಿ ಬರೆದಿಟ್ಟಿರುವ ಚಿತ್ರದಂತೆ ಕಾಣುವ ಮಹಾರಾಜಾ ಕಾಲೇಜ್ ಮೇಲೇ ತುಂಬ ಪ್ರೀತಿ ನನಗೆ. ನೀವೆಲ್ಲ ಅಲ್ಲೇ ಇದ್ದು ಓದಿ ಅಲ್ಲೇ ಅಧ್ಯಾಪಕರಾದ್ದು ಎಂಬುದೇ ಈ ಆಕರ್ಷಣೆಯ ಮರ್ಮ. ಪ್ರತಿವರ್ಷ ಡಿಗ್ರಿ ತರಗತಿಗಳ ಇಂಗ್ಲಿಷ್ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಹೋದಾಗಲೆಲ್ಲ ಆ ಕಾಲೇಜಿನಲ್ಲಿ ನೀವಿದ್ದಿರಬಹುದಾದ ತರಗತಿಗಳು, ಪಾಠ ಹೇಳಿ

ರಬಹುದಾದ ಹಾಲ್‌ಗಳು, ಸುಬ್ಬರಾಯರೂ, ರಾಲೋರವರು ಮಾತಾಡುತ್ತ ನಿಂತಿದ್ದ ಮೂಲೆ, ಇವನ್ನೆಲ್ಲ ಹುಡುಕುಗಣ್ಣುಗಳಿಂದ ತಡಕಿ ಕಾಲ ಕಳೆಯುವುದೊಂದು ನನ್ನ ಕೆಲಸವಾಗಿತ್ತು.

ನಿಮ್ಮ ಪ್ರಬಂಧಗಳೂ ಚಿತ್ರಗಳೂ ಒಂದಕ್ಕಿಂತ ಒಂದು ಚೆನ್ನ. Mr. Murthy Rao is one of the best prosse writers in Kannada ಎಂದು ನನ್ನ ಸಾಹಿತಿ ಮಿತ್ರರೊರ್ವರು ಹೇಳಿರುವ ಮಾತುಗಳು ಕುರುಡು ಅಭಿಮಾನದ್ದಲ್ಲ ಉತ್ಪ್ರೇಕ್ಷೆಯದಲ್ಲ; ಉದ್ರೇಕದ್ದಲ್ಲ. ಅದರಲ್ಲೂ ನನಗೆ ಅತಿಪ್ರಿಯವಾದದ್ದು ನಿಮ್ಮ ''ಅಕ್ಕಿಹೆಬ್ಬಾಳು.'' ಈಸ್ಥೆಟಿಕ್ ಸೆನ್ಸ್ ಇರುವ ಯಾರಿಗೇ ಆಗಲಿ, ಇದನ್ನೋದಿದ ಮೇಲೆ ಅವನದೇ ಆದ ಅಕ್ಕಿಹೆಬ್ಬಾಳು ನೆನಪಿಗೆ ಬಾರದಿದ್ದೀತೆ:

Be it a weakness, if deserves some praise. We love the play place of our early days! ಎಂದು ಆಂಗ್ಲಕವಿ ಕೌಪರ್ ಬರೆದಿದ್ದಾನೆ. 'ನಾನು ಸತ್ತರೆ ನನ್ನ ಗೋರಿಯ ಮೇಲೆ ಹೆಸರು ಬರೆಯಿಸುವುದಾಗಲೀ ಹೂ ಎರಚುವುದಾಗಲಿ ಬೇಕಿಲ್ಲ. ನನಗೆ ನಾನು ಹುಟ್ಟಿದ ಹಳ್ಳಿಯಲ್ಲಿ ನನ್ನ ಗುಡಿಸಲನ್ನು ನನಗೆ ಕೊಟ್ಟುಬಿಡಿ' ಎಂಬರ್ಥದಲ್ಲಿ ಅಲೆಗ್ಸಾಂಡರ್ ಪೋಪ್ ಹಂಬಲಿಸಿದ್ದಾನೆ. ಈ ಯುಗದಲ್ಲಿ ಪರಶಿವನ ತದ್ರೂಪರಾಗಿದ್ದ ತ್ಯಾಗರಾಜ ಪರಮಶಿವ ಕೈಲಾಸಂ ಕೂಡ ನಿಲ್ಲಲು ನೆಲೆಯೇ ಇಲ್ಲದೆ

Home sweet home! Home sweet home!
There is no place like Home, There is no place like Home for Kailalsome!ಎಂದು ಹಲುಬಿದ್ದರು.

1930-1960ರವರೆಗಿನ ನಡುವಣ ಕಾಲದಲ್ಲಿ ಪೂರ್ವದ ಕೋರ್ಪರಯ್ಯನ ಚಿತ್ರದಿಂದ ಪಶ್ಚಿಮದ ಹರಕೆರೆಯವರೆಗೆ; ದಕ್ಷಿಣ ನಿದಿಯಿಂದ ಉತ್ತರದ ಮೆಗ್ಗಾನ್ ಆಸ್ಪತ್ರೆಯ ನೇರದ ವರೆಗಿನ ನಡುವಿನ ಪ್ರದೇಶದಲ್ಲಿದ್ದ ಶಿವಮೊಗ್ಗಿಯೇ ನನ್ನ ಅಕ್ಕಿಹೆಬ್ಬಾಳು! ಅರ್ನೆಸ್ಟ್ ಹೆಮಿಂಗ್ ವೇಗೆ ಯೋಕಾಪಟ್‌ನಾವ್ ಥಾ: ಆರ್.ಕೆ.ನಾರಾಯಣ್‌ಗೆ ಮಾಲ್ಗುಡಿ; ಹಾರ್ಡಿಗೆ ವೆಸೆಕ್ಸ್: ರಾಮಸ್ವಾಮಿ ಅಯ್ಯಂಗಾರ್ಯರಿಗೆ ಗೊರೂರು ; ಶ್ರೀನಿವಾಸರಿಗೆ ಮಾಸ್ತಿ; ತ.ರಾ.ಸುಗೆ ದುರ್ಗ; ಭೈರಪ್ಪಗೆ ಶಿವರ, ಬಾಗೂರು, ತಿಪಟೂರು ಚನ್ನರಾಯಪಟ್ಟ; ನಿಮಗೆ ಅಕ್ಕಿ ಹೆಬ್ಬಾಳು ಹೇಗೋ ನನಗೆ-ಮೇಲೆ ತಿಳಿಸಿದ ಶಿವಮೊಗ್ಗ ಹಾಗೆ! ''ನೀವು ಶಿವಮೊಗ್ಗದವರಿದೀರಲ್ಲ! ನಿಮಗೆ ಅದರ ಮೇಲಿನ ವ್ಯಾಮೋಹ ಒಂದ್ ಥರಾ ಮುಸಲ್ಮಾನರ ಜಾತಿ ಬಗೆಗಿನ ಲಾಯಲ್ಟಿ'' - ಎಂದು ಭೈರಪ್ಪ ಒಂದು ಬಾರಿ ಮೈಸೂರಲ್ಲ ಕುಟುಕಿಯೂ ಇದ್ದರು.

ಇದು ಅಂತಿಂಥಾ ಊರಲ್ಲ! ರಾಷ್ಟ್ರಕವಿ ಕು.ವೆಂ.ಪು. ಐದು ರೂಪಾಯಿನ ಪರೀಕ್ಷೆಗೆ ಬರೆದು ಪಾಸ್ ಮಾಡಿದ್ದು ಇಲ್ಲಿಯೇ! ಭೂಪಾಳಂ ಚಂದ್ರಶೇಖರಯ್ಯ (1957ರಲ್ಲೇ) - ಕು.ವೆಂ.ಪು. 'ರಕ್ತಾಕ್ಷಿ' ಬರೆದದ್ದು ಇಲ್ಲಿನ ನದೀ ಮರಳಲ್ಲೇ ಎಂದು ಹೇಳಿದ್ದರು ನನಗೆ! ತಮ್ಮ ಮೊದಲ ನಾಟಕ ಟೊಳ್ಳುಗಟ್ಟಿಯನ್ನು ಕೈಲಾಸಂ ಬರೆದದ್ದು ಇಲ್ಲೇ! The titilating effect of the sweet unicaceous waters of the Tunga, rather irritated his cerebral make up than as sauged his mental worries!

ಕಡಲ ತಡಿಯ ಭಾರ್ಗವ ಶ್ರೀ ಕಾರಂತರಂತೂ ಅದೆಷ್ಟು ಬಾರಿ ಈ ಊರಿನ ಬೀದಿಗಳಲ್ಲಿ ನಡೆದಾಡಿದ್ದಾರೋ! ಅವರ 'ಸಮೀಕ್ಷೆ'ಯ ನಾಯಕ ಶ್ರೀನಿವಾಸ ಶಿವಮೊಗ್ಗಕ್ಕೆ ಬಂದು ಸಂಪರ್ಕಿಸಿದ ಅಡ್ವೋಕೇಟರು ಬರೀ ಸುಬ್ಬಾಶಾಸ್ತ್ರಿಗಳಲ್ಲ; ನಮ್ಮ ಪರಿಚಯದ ಶ್ರೀ ಟಿ. ವೆಂಕಟಸುಬ್ಬಾಶಾಸ್ತ್ರಿಗಳೇ ಇರಬೇಕೆಂದು ನನ್ನ ಗುಮಾನಿ!

ಆಸ್ಥಾನ ವಿದ್ವಾನ್ ಪಂಡಿತರನ್ನೇ ಕೊಕ್ಕೆ ಸುಬ್ರಮಣ್ಯ ಶಾಸ್ತ್ರಿಗಳು; ಭಾರತದ ಪಾಶುಪತಾಸ್ತ್ರ ಭಾಗವನ್ನು ಬ್ಲಾಂಕ್‌ವರ್ಸ್‌ನಲ್ಲಿ (ಇಂಗ್ಲಿ

ಹಲ್ಲಿ) 'Imprisoned Ray' ಆಗ ಬರೆದ ಅವರ ಮಗ ಕುಕ್ಕೆ ಸೀತಾರಾಮ ಶಾಸ್ತ್ರಿ ಅವರ ತಮ್ಮ ಕಲಾವಿದ ಕುಕ್ಕೆ ಶ್ರೀಕಂಠ. ಆಸ್ಥಾನ ವಿದ್ವಾನ್ (ಸಂಗೀತದ) ಎ.ದೇವೇಂದ್ರಪ್ಪ, ಅವರ ತಮ್ಮಂದಿರು ಶೇಷಪ್ಪ, ಕೃಷ್ಣಪ್ಪ; ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಶ್ರೀ. ಎ.ಎಲ್.ಡಿಸೌಜ, ನವರತ್ನ ರಾಮರಾಯರು, ಕೂಡಲಿ ಚಿದಂಬರಂ, ಆನಂದ, ಕೇಂದ್ರದ ಆರ್ಕಿಯಾಲಜಿ ಇಲಾಖೆಯ ಮಹಾ ನಿರ್ದೇಶಕರಾದ ಶ್ರೀ ಎಸ್.ಆರ್.ರಾವ್, ರಾಜ್ಯದ ಅದೇ ಇಲಾಖೆಯ ನಿರ್ದೇಶಕರಾದ ಗುಡ್ಡೇ ಮರಡಿಯ ಎ.ಸುಂದರ್, ಕೃಷ್ಣರಾಜ ಸಾಗರ ಕಟ್ಟೆ ಕಟ್ಟುವಲ್ಲಿ ಸರ್. ಎಂ.ವಿ.ಯವರೊಂದಿಗೆ ಶ್ರಮಿಸಿದ ಬಾಟ್ನಿ

ಭೀಮರಾವ್, ಎಲ್ಲ ಇಲ್ಲಿಯವರು. ಅಲ್ಲದೆ ನಾಡಿನ ಯುವ ಪೀಳಿಗೆಯ ಕವಿ, ಸಾಹಿತಿಗಳಾದ ವಸುದೇವ ಭೂಪಾಳಂ, ಅನಂತಮೂರ್ತಿ, ಲಂಕೇಶ, ಸುಮತೀಂದ್ರ ನಾಡಿಗ, ಲಕ್ಷ್ಮೀನಾರಾಯಣ ಭಟ್ಟ, ಕೆ.ವಿ.ಸುಬ್ಬಣ್ಣ, ಶ್ರೀ ಪಂಚ (ಎಸ್.ಪಂಚಾಕ್ಷರಿ) ಮೊದಲಾದವರೆಲ್ಲ ಇಲ್ಲಿಯವರು. ದೇ.ಜ.ಗೌ., ತ.ರಾ.ಸು., ಹಾ.ಮಾ.ನಾ., ತ.ಸು.ಶಾಮರಾಯರು, ಪ್ರಜಾವಾಣಿಯ ಶ್ರೀ ಟಿ.ಎಸ್ಸಾರ್‌ರಾವ್‌ರವರೆಲ್ಲ ಇಲ್ಲಿದ್ದವರು. ಇಲ್ಲಿನ ಶಾಲಾ ಕಾಲೇಜುಗಳಲ್ಲಿ ಓದಿದವರು. ನಿಮಗಂತೂ 'ಬಾಗಿಲಿರುವ ಬಚ್ಚಲುಮನೆ ಹೊಂದಿದ್ದ ಮನೆಯನ್ನು ಬಾಡಿಗೆಗೆ ಕೊಡಿಸಿದ ಊರಿದು. ನಿಮ್ಮ ರಾಜು ಹುಟ್ಟಿದ್ದು ಇಲ್ಲೇ. ಎಂದ ಮೇಲೆ ನಿಮಗೂ ಈ ಊರು ಪ್ರಿಯವಾಗಿರಲೇಬೇಕೆಂಬ ನಂಬಿಕೆ ನನ್ನದು. ಇದು ಅಂತಿಂತಹ ಊರಲ್ಲ. ಈ ಊರಲ್ಲಿ ಹುಟ್ಟಿ ಬೆಳೆದು, ಓದಿ ಬರೆದವರು ದೇಶದ ನಾನಾ ಭಾಗಗಳಲ್ಲಿ ಉನ್ನತಾಧಿಕಾರಗಳಲ್ಲಿದ್ದವರು - ಈಗಲೂ ಇದ್ದಾರೆ. 'ಇಲ್ಲಿನ ನದಿಯ ನೀರನ್ನು (ಈಗಲ್ಲ!) ರಾತ್ರಿ ಲೋಟದಲ್ಲಿಟ್ಟು ಮುಚ್ಚಿಡುವುದನ್ನು ಮರೆತರೆ, ಬೆಳಗಾಗುವುದರೊಳಗೆ ಅದಕ್ಕೆ ಇರುವೆ-ಗೊದ್ದ ಮುತ್ತಿರುತ್ತಿತ್ತು.'' ಎಂದು ನನ್ನ ಹಿರಿಯರು ಮನೆಯಲ್ಲಿ ಮಾತನಾಡಿದ್ದು ನೆನಪಿದೆ. ಈ ನೀರಲ್ಲಿ ಒಗೆದ ಷರಟು ಪಂಚೆಗಳು ಕೊಕ್ಕರೆಯು ಗರಿಯಷ್ಟು ಬೆಳ್ಳಗಾಗುತ್ತವೆ ಎಂದು ಗಾದೆ. ಇದೇ ನನ್ನೂರು, ನನ್ನ ಅಕ್ಕಿಹೆಬ್ಬಾಳು.

ತಾಯ್ನಾಡೆಂಬುದೇನೆಂದೇ ತಿಳಿಯದ, ತಾಯ್ನಾಡನ್ನೇ ನೆನೆಯದ ಒಬ್ಬ ಹೀನವ್ಯಕ್ತಿಯನ್ನು ಕುರಿತು ಸ್ಕಾಟ್ ಬರೆದ ಒಂದು ಪದ್ಯ:

Breathes there the man, with soul so dead,
Who never to himself hath said,
This is may own, my native land!

Despits those titles, power and pelf,
The wretch concentred all in self,
Giving shall forfeit fair renown,
And doubly dying, shall go down
To the vile dust, from where he sprung,
Unwept, Unhonoured and Unsung- ಅಂತ (ಪೇಟ್ರಿಯಟ್ - ಇರಬಹುದೇನೋ) ರೆನ್ ಅಂಡ್ ಮಾರ್ಟಿನ್ ಗ್ರಾಮರ್ ಕಾಂಪೊಜಿಷನ್ ಪುಸ್ತಕದಲ್ಲಿದ್ದುದನ್ನು ಹೈಸ್ಕೂಲ್ ದಿನಗಳಲ್ಲೇ ಓದಿದ್ದೆ. ಮನಸ್ಸಿನಲ್ಲಿ ಏನೇನೋ ಹೇಳಲು ಬಾರದ ತಳಮಳ. ಭಾವನೆಗಳಿನ್ನೂ ಗರಿಗೆದರುತ್ತಿದ್ದ ಕಾಲವದು. ಯಾವುದೂ ಸ್ಪಷ್ಟವಿಲ್ಲ; ಏನು ಯೋಚನೆ, ಏನು ಬೇಕು. ಮನವೇಕೆ ಹೊಯ್ದಾಡುತ್ತದೆ- ಇದ್ಯಾವುದೂ ಅರ್ಥವಾಗದ ಕಾಲ ಅದು. ಸ್ಕಾಟನ ಈ ಪದ್ಯ ಮತ್ತು ಕಾಪರನ ಪದ್ಯಗಳೆರಡೂ ಮನಸ್ಸಿನ ಮೇಲೆ ಒಂದು ಅವ್ಯಕ್ತ ಮುದ್ರೆಯನ್ನೊತ್ತಿದ್ದವು.

ಕೃಷ್ಣಾ ಕೆಫೆಯ ಮಹಡಿಯ ಮೇಲೊಂದು ಕತ್ತಲ ಕೋಣೆಯಲ್ಲಿ ಕನವರಿಸುತ್ತಿದ್ದ ಕರ್ಣಾಟಕ ಸಂಘ ಹಸೂತಿ ವೆಂಕಟಶಾಸ್ತ್ರಿಗಳು ಕಟ್ಟಿಸಿಕೊಟ್ಟಿದ್ದ ಹೊಸ ಕಟ್ಟಡಕ್ಕೆ ಬಂದು ನೆಲೆಯೂರಿದಾಗ ಅದರ ಆರಂಭೋತ್ಸವ ಮಾಡಿದವರು ಮಹಾರಾಜಾ ಶ್ರೀ ಜಯಚಾಮರಾಜ ಒಡೆ

ಯರು! ಮೈಸೂರು ಮಹಾರಾಜಾ ಕಾಲೇಜಿಂದ ಇಲ್ಲಿಗೆ ಬಂದು ನಾಟಕಗಳನ್ನಾಡಿದ ನಾ.ಕಸ್ತೂರಿಯವರ ತಂಡವಲ್ಲದೆ ಅದೆಷ್ಟೊ ಅಮೆಚೂರ್ ತಂಡಗಳು ರಾತೋ ರಾತ್ರಿ ಸ್ಟೇಜ್ ಕಟ್ಟಿ ನಟಿಸಿ ಕುಣಿದು ಹೋದ ನೆಲ ಇದು.

ಅಂದಿನ ದಿನಗಳಲ್ಲಿ ಇಲ್ಲಿ ಧಾರಾಳವಾಗಿರುತ್ತಿದ್ದ ಸೊಳ್ಳೆಗಳು ಮತ್ತು ಮಲೇರಿಯಾ ಜ್ವರಗಳು ಹೊರಗಿನವರು ಇಲ್ಲಿಗೆ ಬರದಂತೆ ಮಾಡಿದ್ದವು. ಇಲ್ಲಿಯವರು ಹೊರಗೆ ಹೋಗುತ್ತಿರಲಿಲ್ಲ. ಸೊಳ್ಳೆಗಳಿಗೆ ಇಲ್ಲಿಯ ಅವರ ಪರಿಚಯ ಬಳಕೆ ಬೆಳೆದು ಅಷ್ಟಾಗಿ ಕಚ್ಚುತ್ತಿರಲಿಲ್ಲವೊ ಏನೋ. ಅವು ಅವರಿಗೆ - ಅವರು ಅವಕ್ಕೆ ಹೊಂದಿಕೊಂಡು ಬಿಟ್ಟಿದ್ದರು. ಆದ್ದರಿಂದ ಇಲ್ಲಿಯವರೇ ಇಲ್ಲಿ ರಾಜರು ಆಗ!

ನನಗೆ ಮತ್ತು ನನ್ನ ಬಾಲ್ಯಮಿತ್ರರಾದ ಸತ್ಯ, ದತ್ತ, ರಾಜಣ್ಣ, ಮಹಾಬಲ, ವೆಂಕಟರಾಮು, ರಂಗಣ್ಣ, ಹುಲಿಕುಂಟರಾಯ, ಇವರಿಗೆಲ್ಲಾ ಈ ಬೀದಿ, ಈ ನದಿ, ಈ ಶಾಲೆ ಇವೇ ಸ್ವರ್ಗ ಸೀಮೆ. ನಾವುಗಳು ಓದಿದ ಸ್ಕೂಲುಗಳು ಬೇರೆ ಬೇರೆ. ಸಂಜೆಯ ಐದು ಗಂಟೆಗೆ ಶಾಲೆಯ ಗಂಟೆ ಬಾರಿಸುತ್ತಲೇ ಅಲ್ಲಿಂದ ಓಡುತ್ತಾ ಬಂದು ಈ ಶಾಲೆ ಹೊಕ್ಕು ಅಲ್ಲಿಯೂ ಅದೇ ತಾನೆ ಗಂಟೆ ಹೊಡೆದು ಶ್ರೇಯ: ಪ್ರಾರ್ಥನೆಯಾಗುವವರೆಗೆ ಕಾದು ನಂತರ ಹೊರಗೆ ಬಂದ ಅವರೊಡನೆ ಮನೆಗೆ ಬರುತ್ತಿದ್ದೆ. ನದಿಯ ಎರಡನೇ ಸೀಳಿನ ಮರಳೇ ನಮ್ಮ ಆಟದ ಮೈದಾನ. ಆ ನದಿ, ನಿಶುಲ್ಕ ಈಜುಕೊಳ. ಮನೆಯುವರು ವಿಧಿಸಿದ ಯಮ ನಿಯಮಗಳನ್ನು ಮುರಿದು ಯಾವ ಹೊತ್ತೆಂದರೆ ಆ ಹೊತ್ತಲ್ಲಿ ಹೋಗಿ ಈಜುವ ಪ್ರಯತ್ನ ಮಾಡಿ ಅದು ಬಾರದೆ ಮುಳುಗಿ ಕೈಕಾಲು ಬಡಿದು, ನೀರು ಕುಡಿದು, ತೇಲುಗಣ್ಣು ಮಾಡಿ- ಯಾರೋ ಪುಣ್ಯಾತ್ಮರು ಕಂಡು ಮೇಲಕ್ಕೆ ಎಳೆದು ಹಾಕಿದ್ದು ಅದೆಷ್ಟು ಬಾರಿಯೋ! ಅದು ಬಿಟ್ಟರೆ ಇನ್ನೊಂದು ದಿನ ಸರ್ಜಾ ಮಂಜಪ್ಪನವರ ಮನೆಯ ಎದುರಿಗಿರುವ ನೆಲಗಟ್ಟಿನ ಮೇಲೆ ಗೋಡೆಗೆ ಸೇರಿದಂತಿರುವ ಎತ್ತರದ ನಲ್ಲಿ ಕಟ್ಟೆಯ ಮೇಲೆ ನನ್ನನ್ನು ಸಿಂಹಾಸನಾರೋಹಣ ಮಾಡಿಸಿ ಪಟ್ಟಾಭಿಷೇಕ ಮಾಡಿಸಿ, ನಜರು ಮುಜರೆಗಳನ್ನೆಲ್ಲ ಅರ್ಪಿಸುತ್ತಿದ್ದರು. ಮನೆ ಮನೆಗಳವರು ಹಿಂದುಗಡೆ ಹಾಕಿಸಿದ್ದ ಬೇಲಿ ಮುರಿದು ಕೈಕೋಲ್ ಮಾಡಿಕೊಂಡ ನಮ್ಮ ಸೈನ್ಯ ನೇರವಾಗಿ ಇಂಗ್ಲೆಂಡಿನ ಸ್ಯಾಂಡಸ್ಟ ಕಾಲೇಜಿಂದ ಪಾಸಿಂಗ್ ಔಟ್ ಪೆರೇಡ್ ಮುಗಿಸಿಕೊಂಡು ಬಂದದ್ದೇ ಇಲ್ಲಿಗೆ!

ಈ ನದಿ ಇಲ್ಲಿನ ಜನರ ಜೀವನಕ್ಕೆ ಒಂದು ಸಂಕೇತವಾಗಿ, ಸಾಕ್ಷ್ಯವಾಗಿ ಹರಿಯುತ್ತಿತ್ತು. ಯಾವ ರೀತಿ ನೆಹರು ಅಲಹಾಬಾದಿನಲ್ಲಿ ಆನಂದ ಭವನದ ಹಿಂದಿನಿಂದ ಅಲ್ಲಿ ಗಂಗಾ ನದಿಯಲ್ಲಿನ ಪ್ರವಾಹ-ಏರಿಳಿತ, ಕುಂಭ ಮೇಳಗಳನ್ನು ನೋಡಿ ನೋಡಿ ಕಣ್ಣು ತುಂಬಿಕೊಂಡಿದ್ದರೋ, ಯಾವ ರೀತಿ ನೀವು ಅಕ್ಕಹೆಬ್ಬಾಳದಲ್ಲಿ ಹೇಮಾವತಿಯನ್ನು ನೋಡಿ ನೋಡಿ ನಿಮ್ಮ ಮನದ ಭಾವನೆಗಳಿಗೆ ಅಭಿವ್ಯಕ್ತಿ ನೀಡಿದಿರೋ ಅದೇ ರೀತಿ ನಾನು ಮಧ್ಯಾಹ್ನದ ವೇಳೆಯಲ್ಲಿ ಮನೆಯ ಹಿಂದಿನ ಅರಳಿಮರಕ್ಕೂ ಹಿಂದಿದ್ದ ಮೋಟು ಗೋಡೆಯ ಮೇಲೆ ಗಂಟೆಗಟ್ಟಲೆ ಕೂತು ಕಾಲ ಕಳೆಯುತ್ತಿದ್ದೆ. ಈ ನದಿಯಲ್ಲಿ ಬಂದ ಪ್ರವಾಹ, ಬೇಸಗೆಯಲ್ಲಿ ಅದು ಒಣಗಿ ತೊರೆಯಂತಾದದ್ದು - ಎರಡನ್ನೂ ನೋಡುತ್ತಿದ್ದೆ.

ಮೆಲ್ಲ ಮೆಲ್ಲನೆ ಹೊರಗಿನವರು ಇಲ್ಲಿಗೆ ಬರಲಾರಂಭಿಸಿದರು. ಬಂದವರು ಬಹುಕಾಲ ನಿಲ್ಲದೆ ಮತ್ತೆ ವರ್ಗವಾಗಿ ತಮ್ಮೂರ ಕಡೆಗೇ ಹೋದರು. 1941ರಲ್ಲಿ ಇಲ್ಲಿ ಹಿಂದೂ ಮಹಾ ಸಭಾ ಸಮ್ಮೇಳನವಾದಾಗ, ಹರ್ಡೇಕರ್ ಮಂಜಪ್ಪ, ವೀರಸಾವರ್‌ಕರ್, ಬಿ.ಎಫ್. ಮೂಂಜೆ, ಗಾಂಧೀ ಹಂತಕ ನಾಥೂರಾಂ ಘೋಡ್‌ಸೆ ಮೊದಲಾದವರೆಲ್ಲ ಬಂದು ಹೋದದ್ದು ನೆನಪಿದೆ .

ಮುಂದೆ ಮೆಲ್ಲನೆ ಲೇಖಕರ ಕತೆ ಕಾದಂಬರಿಗಳಲ್ಲಿ, ಗದ್ಯಪದ್ಯಗಳಲ್ಲಿ ನಮ್ಮೂರು ಕಾಣಸಿಕೊಳ್ಳಲಾರಂಭಿಸಿತು. ಭೈರಪ್ಪನವರ 'ದೂರ ಸರಿದ

ರು' ಕಾದಂಬರಿಯ ಉಪನಾಯಕ ವಸಂತ ಈ ಊರಲ್ಲಿ ಸೃಷ್ಟಿಯಾದ ಪಾತ್ರ. 'ಗೃಹಭಂಗ'ದಲ್ಲಿ ಬೀಡಿ ಶೇದಲಿಕ್ಕೆ ಕಡ್ಡಿ ಗೀರಿ ಕಬ್ಬಿನ ಗದ್ದೀಗೆ ಬೆಂಕಿ ಬೀಳಿಸಿದ ಧೀರ ಅಪ್ಪಣ್ಣ ಶಿವಮೊಗ್ಗಕ್ಕೆ ಯಾವ ಹೆದರಿಕೆಯೂ ಇಲ್ಲದೆ ರೈಲಲ್ಲಿ ಬಂದು ಬೆಕ್ಕಿನ ಕಲ್‌ಮಠದಲ್ಲಿದ್ಗಂಡು, ಊರಲ್ಲಿ ಭವತಿ ಭಿಕ್ಷಾಂದೇಹಿ ಮಾಡಿ ಅವೆಲ್ಲವನ್ನೂ ನದಿಯ ಬಂಡೆಯೊಂದರ ಹಳ್ಳದಂತಹ ಭಾಗದಲ್ಲಿ ಹಾಕಿಕೊಂಡು ಲೊಟ್ಟೆ ಹೊಡೆಯುತ್ತಾ ತಿಂದು, ''ಅಲವು ಮನೆ ಎಸರು ಚೆಂದ: ಆದರಗಿತ್ತಿ ಮಗಳು ಚೆಂದ'' ಅಂತ ಬೈಸಿಕೊಂಡದ್ದು ಇಲ್ಲಿ ಮಾಡಿದ ಕೆಲಸದಿಂದಲೇ! ಖ್ಯಾತ ಚಲನಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಕೂಡ ವ್ಯಾನ್ ಡ್ರೈವರಾಗಿ ಇಲ್ಲಿ ಕೆಲಕಾಲ ಇದ್ದು ಹೋದವರು. ಟಿ.ವಿ.ಯ ಸುಬ್ಬಣ್ಣ, ಬಿ.ಕೆ.ಸುಮಿತ್ರ ಕೂಡ ಇಲ್ಲಿಯವರು.

ಎರಡನೇ ಸೀಳಿನ ಭಾಗದಲ್ಲಿದ್ದ ಲಕ್ಷ ಲಕ್ಷ ಟನ್ ಮರಳ ರಾಶಿಯೇ ಊರ ಮಕ್ಕಳ ಆಡೊಂಬೊಲ. ಇಲ್ಲಿ ತರಹೆವಾರಿ ಮರಳು; ದಪ್ಪದು, ಸಣ್ಣದು, ಸಕ್ಕರೆಯಂತಹುದು, ನುಣುಪಾಗಿ ಬೂರಾ ಸಕ್ಕರೆಯಂತಹುದು. ಇದರಲ್ಲಿ ಕಪ್ಪೆ ಗೂಡು ಕಟ್ಟಿ ಅದೆಷ್ಟು ಮಕ್ಕಳು ಆಡಿದ್ದವೋ, ಎಷ್ಟು ತರದ ದುಂಡು ಕಲ್ಲುಗಳು, ಶಂಖಗಳು, ಕಪ್ಪೆಚಿಪ್ಪು, ಮುತ್ತಿನ ಚಿಪ್ಪುಗಳನ್ನಾಯ್ದು ಮನೆಗೆ ಒಯ್ದವೋ; ಬೀದಿಯ ಹೆಂಗಳೆಯರು ಸಂಸಾರ ಸಹಿತರಾಗಿ ಅದೆಷ್ಟು ಬಾರಿ ಹುಣ್ಣಿಮೆಗಳಂದು ಬೆಳದಿಂಗಳೂಟ ಮಾಡಿದ್ದರೋ ನೆನಪಾಗದು. ನದಿ, ಮಳೆಯಿಂದಾಗಿ ಒಮ್ಮೆ ಏರಿದಾಗ ಈ ಮಳಲೆಲ್ಲಾ ನೆನೆದು ಸರಿದು ಹೋಗಿ, ಮತ್ತೆ ನೆರೆ ಇಳಿದಾಗ ಇಡೀ ಮಳಲ ವಿಸ್ತಾರ ಸಾಪಾಗಿ ಚುಂಬಿತ ಕನ್ಯೆಯಂತೆ ಅಹಲ್ಯೆಯಾಗಿ ಎಳೆ ಬಿಸಿಲಲ್ಲಿ ಮಿನುಗುತ್ತಿದ್ದಾಗ ದಡದಿಂದ ಈಜು ಬಿದ್ದ ಪೀರನ್ಯಾರೋ ಈ ಮರಳಿಗೆ ಹೋಗಿ ಅಲ್ಲೆಲ್ಲ ಓಡಾಡಿ (Foot prints on this sands of time) ತನ್ನ ಹೆಜ್ಜೆ ಗುರುತು ಮೂಡಿಸಿ ಬರುತ್ತಿದ್ದ.

ಒಮ್ಮೊಮ್ಮೆ ಈ ನದಿ 24 ಅಡಿಗಳ ವರೆಗೆ ಏರಿಬಂದು ತುಂಗೆ ರಕ್ತಾಕ್ಷಿಯಾಗಿ ಉಗ್ರಳಾದಾಗ ಕುಂಬಾರ ಗುಂಡಿಯ ಪ್ರದೇಶ, ಚರಂಡಿಗಳು ಸೇತುವೆಗಳೆಗೆಲ್ಲ ಕುತ್ತಿಗೆಯವರೆಗೆ ನೀರು ಬಂದು ಇಡೀ ವಾತಾವರಣವೇ ಗಂಭೀರವಾಗುತ್ತದೆ. ಜನರಿಗೆ ಗಾಬರಿ; ಮಕ್ಕಳಿಗೆ ಮಜ. ''ಎಷ್ಟು ಏರಿದೆ, ದಡಕ್ಕೆ ಇನ್ನೆಷ್ಟು ಮೆಟ್ಟಲು ಬಿಟ್ಟಿದೆ'', ಎಂಬ ಜನರ ಹೆದರಿಕೆಯ ಮಾತುಗಳು. ಏರಿಸಿ ಮೇಲಕ್ಕೆ ಕಟ್ಟಿದ ಪಂಚೆ ಪಾಯಿಜಾಮಗಳನ್ನು ಒಂದು ಕೈಲಿ ಮುದುರಿ ಹಿಡಿದು ಇನ್ನೊಂದರಲ್ಲಿ ಕುದುರೆ-ಹಿಡಿಗಳಿಲ್ಲದ ಹರಕು-ಮುರುಕು ಕೊಡೆಗಳನ್ನು ಹಿಡಿದು ಸಾಲು ಸಾಲಾಗಿ ನದಿ ದಂಡೆಗೆ- ಹೊಳೆಯ ಏರಾಟವನ್ನು ನೋಡ ಬರುವ ಜನ ಸಮೂಹ; ದೂರದ ಆನೆ ಬಂಡೆ ಇನ್ನೂ ಕಾಣಿಸುತ್ತಿದೆ; ಮುಳುಗಿಲ್ಲ - ಎಂದು ಸಮಾಧಾನ ತಂದುಕೊಂಡು ಹಿಂದಿರುಗುವವರು; ಜಗುಲಿಗಳ ಮೇಲೆ ಚಾಪೆ ಕಂಬಳಿಗಳನ್ನು ನೇತು ಬಿಟ್ಟು, ದುಪಟ ಟವಲುಗಳನ್ನು ಹೊದ್ದು ಸಿಂಡ್ರೆಲಾ, ಅಲಿಬಾಬಾ, ಕೆಸಬಿಯಾಂಕಾ, ರಾಬರ್ಟ್ ಬ್ರೂಸ್ ಕತೆ ಕೇಳುತ್ತ ತಿಮ್ಮಣ್ಣ ಅಥವಾ ಕುಳ್ಳೆ ನಾಗರಾಜನ ಸುತ್ತ ಕುಳಿತ ಮಕ್ಕಳು; ನದಿ ತುಂಬ ಮೇಲು ತನಕ ಬಂದರೆ ಸ್ಕೂಲುಗಳಿಗೆಲ್ಲ ರಜ ಕೊಡುತ್ತಾರೆ. ನದಿ ಇನ್ನೂ ಏರಲಪ್ಪಾ ದೇವರೇ - ಎಂದವುಗಳ ಪ್ರಾರ್ಥನೆ. ಎರಡು ದಿನ ತುಂಬ ಏರಿದಂತೆ ಮಾಡಿ ಊರವರನ್ನೆಲ್ಲ ಕಂಗಾಲು ಮಾಡಿ ಇನ್ನೇನು ಆ ಮಕ್ಕಳಿಗೆ ಬೇಕಾದ ವರ ಸಿಕ್ಕಿಬಿಡುತ್ತೆ ಅನ್ನುವಷ್ಟರಲ್ಲಿ ಪ್ರವಾಹ ಇಳೀ ಮುಖ! ಆಮೇಲೆ ಇಳಿದೇ ಬಿಟ್ಟಿತು; ನೀರೆಲ್ಲ ಹರಿದು ಹೋಗಿ ಕೊಳಕು-ಕಳೆ-ಕಸ. ಊರಿನ ಚರಂಡಿಗಳ ಎಷ್ಟುವಿಯ ಎಲ್ಲ ನಗೇ! ನದೀ ಮತ್ತು ನಾರಿ ಇಬ್ಬರೂ ಯಾಕಿರೋದು? ಇನ್ನೊಬ್ಬರ ಕಳಂಕ ತೊಳೆಯಲೆಂದಲ್ಲವೆ? ಎಂದೇ ತಾಯಿ ತುಂಗೆ ಮೌನವಾಗಿ Since time immemorial ಅಂತಾರಲ್ಲ- ಅಂದಿನಿಂದ

ಹರಿಯುತ್ತಲೇ ಬಂದಿದ್ದಾಳೆ. ಇದಲ್ಲದೆ ನೀರಲ್ಲಿರುವ ಮೀನುಗಳು, ಕರಗಿರುವ ಮೈಕಾ ಇವೆರಡೂ ಆಕಲಂಕ ಕಶ್ಮಲಗಳನ್ನು ತೊಡದು ನೀರನ್ನು ಶುದ್ಧವಾಗಿಯೇ ಇಟ್ಟಿವೆ!

1924ರಲ್ಲಿ ಬಂದಂತಹ ಒಂದು ಹುಚ್ಚು ಹೊಳೆ ಊರನ್ನೇ ಜಾಲಿಸಿ ತೇಲಿಸಿತಂತೆ. ಎಷ್ಟೋ ಮನೆಗಳು ಬಿದ್ದು ಹೋಗಿ ಪಶು, ಪಾತ್ರೆ, ಪದಾರ್ಥಗಳು ತೇಲಿ ಹೋದುವಂತೆ. ನೀರಿಳಿದ ಮೇಲೆ ಜನ ಮತ್ತೆ ಮನೆಗಳನ್ನು ಕಟ್ಟಿಕೊಂಡಾಗಲೇ ನಮ್ಮ ಕಾಲದ ಅರಮನೆಗಳು ಮೇಲಕ್ಕೇರಿದವು. ಒಂದು ಮನೆಗೂ ಮತ್ತೊಂದಕ್ಕೂ ನಡುವೆ ಜಾಗವೇ ಇಲ್ಲ. ಆ ಕಡೆ ಗೋಡೆ ಅವಂದು, ಈ ಕಡೇದು ಇವಂದು; ನಡುಮನೆಯವನದ್ದು ಬರೀ ಹಿಂದಿನ ಮತ್ತು ಮುಂದಿನ ಗೋಡೆ; ಇಷ್ಟಾದರೂ ಜನ ಜಗಳ, ತರಲೆ, ತಾಪತ್ರಯಗಳಿಲ್ಲದೆ ಸುಖವಾಗಿ ಬಾಳಿಕೊಂಡಿದ್ದರು. ವರ್ಣಾಶ್ರಮದಲ್ಲಿದ್ದಂತೆ ಅನೇಕ ಜಾತಿ ಮತಗಳು; ಒಂದೊಂದು ಮತದವರಿಗೂ ಒಂದೊಂದು ಪ್ರತ್ಯೇಕ ಬೀದಿ. ಮೇಲು ಕೀಳುಗಳ ಜಗಳ ಹಚ್ಚಲು ಆಗಿನ್ನೂ ಯಾವ ರಾಜಕಾರಣಗಳೂ ಅಲ್ಲಿದ್ದಿಲ್ಲ; ಅಲ್ಲಿಗೆ ಬಂದಿದ್ದಿಲ್ಲ.

ಮಹಾರಾಜರು ಸ್ಥಿತಿಯರಿತು ಬರಲು ಈ ಪ್ರವಾಹ ಪೀಡಿತ ನಗರ(!)ಕ್ಕೆ ದಿವಾನ್ ಮಿರ್ಜಾ ಸಾಹೇಬರನ್ನೂ ಕಳಿಸಿದರಂತೆ. ಅವರು ಬಂದು ಇದೆಲ್ಲ ನೋಡಿ "ಈ ನದಿ ಎಂದಿದ್ದರೂ ಅಪಾಯವೇ! ದಡ ಭದ್ರವಿಲ್ಲ. ಸರ್ಕಾರ ನಿಮಗೆ ಮೇಲೆ ಎತ್ತರದ ಪ್ರದೇಶದಲ್ಲಿ ಮನೆದಳ, ಮರಮುಟ್ಟುಗಳನ್ನು ಮುಫತ್ತಾಗಿ ಕೊಡುತ್ತದೆ. ಈ ಜಾಗ ಖಾಲಿ ಮಾಡಿ ಮೇಲಿನ ಮುಳ್ಳುಕೆರೆ, ಕಲ್ಲಹಳ್ಳಿಗಳ ಕಡೆ ಹೋಗಿ" ಎಂದು ಹೇಳಿದ್ದಕ್ಕೆ ಈ ಮುಂಡೇವು ಜಗಳ ತೆಗೆದು - "ನಾವು ಹೋಗಲ್ಲ; ತಲೆ ತಲಾಂತರದಿಂದ ಇಲ್ಲೇ ಇದ್ದೇವೆ. ಮುಂದೆಯೂ ಇಲ್ಲೇ ಇರುತ್ತೇವೆ ಹೊರತು ಈ ಜಾಗ ಬಿಡಲ್ಲ" -ಎಂದರೆ, ದರಿದ್ರ ಬ್ರಾಹ್ಮಣರು "ನದೀಂ ಬೋದು ಧೂರಾದರ, ನಮ್ಮ ಮಡೀ, ಮೈಲಿಗಿ, ಸಾನ, ಸಂಧ್ಯಾನ್ನಿ ಗತಿ ಏನು? ಈ ತುರಕರವಾ ನಮ್ಮನ್ನು ಇಲ್ಲಿಂದ ಎಬ್ಬಿಸಲಿಕ್ ಬಂದ್ಯಾನ. ಎಂದೆಂದಿಗೂ ಆಗದೂ- ಅಂತಗೋಳಾಡಿ ಮಹಾರಾಜರ ತನಕ ಹೋಗಿ ಅಹವಾಲ್ ಕೊಟ್ಟು, 'ನಿಮ್ಮಿಷ್ಟ-ಮುಂಡೇವಾ' ಅನ್ನಿಸಿಕೊಂಡೇ ಬಂದು ಸ್ವಧರ್ಮರಕ್ಷಣೆ ಮಾಡಿಕೊಂಡರಂತೆ. ಏನು ಮಾಡಿದರೂ ಊರು ಬಿಡುತ್ತಿರಲಿಲ್ಲ ಇವು.

ಇಲ್ಲಿಯೇ ಬಾಳಿ ಬದುಕಿ, ಸಮೀಪದ ಹೊನ್ನಾಳಿ, ಸಾಗರ, ಶಿಕಾರಿಪುರ, ತರೀಕೆರೆಗಳಲ್ಲಿ ನಮ್ಮನೆಗಳೊಂದಿಗೇ ಕೊಟ್ಟು-ತರುವ ಸಂಬಂಧ ಮಾಡಿ ಇಲ್ಲಿಯ ನೆಲದಲ್ಲೇ ಮಣ್ಣಾಗುತ್ತಿದ್ದರು. ಮೋಸ, ದ್ರೋಹ, ಸುಳ್ಳುಸಾಕ್ಷಿ, ತಾಯಿ ಗಂಡತನ, ತಂಟುಗತನಗಳು ಅಷ್ಟಾಗಿ ಜನಗಳಿಗೆ ಗೊತ್ತಿಲ್ಲದ ಕಾಲ ಅದು. ಹಾಲು ಹಣ್ಣು, ತರಕಾರಿ, ಎಣ್ಣೆ ಬೆಣ್ಣೆಗಳನ್ನು ತಲೆಯ ಮೇಲೆ ಹೊತ್ತು ತಂದು ಮನೆ ಮನೆಗಳ ಮುಂದೆ ಮಾರಲಾಗುತ್ತಿತ್ತು. ಸೀಮೆ ಎಣ್ಣೆ ಪುಟ್ಟ ಒಂಟೆತ್ತಿನ ಗಾಡಿಗಳಲ್ಲಿ ಮಾರಾಟಕ್ಕೆ ಬರುತ್ತಿತ್ತು. ಒಂದು ಡಬ್ಬಕ್ಕೆ ಇಪ್ಪತ್ನಾಲ್ಕು ಬಾಟಲಿ. ಒಂದು ಬಾಟಲ್ ಸೀಮೆ ಎಣ್ಣೆಗೆ ಒಂದೂ ಕಾಲಾಣೆ ಕನ್ನಡ ಜಿಲ್ಲೆಯ ಕಡೆಯ ಎಣ್ಣೆಗಾಣಿಗರು ಸ್ವಚ್ಛವಾದ ಡಬ್ಬಗಳಲ್ಲಿ ಒಳ್ಳೆಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ, ಹರಳೆಣ್ಣೆಗಳನ್ನು ತಲೆಯ ಮೇಲೆ ಹೊತ್ತು ತಂದು ಮಾರುತ್ತಿದ್ದರು. ಇವತ್ತು ದುಡ್ಡಿಲ್ಲವೋ? ಪರವಾಗಿಲ್ಲ, ಇದ್ದಾಗ ಕೊಡಿ; ಈಗ ಎಣ್ಣೆ ಎಷ್ಟು ಬೇಕು ಹೇಳಿ ಎಂದೆನ್ನುತ್ತಿದ್ದರು. ಬೆಣ್ಣೆ ರೂಪಾಯಿಗೆ ಐದು ಸೇರು! ಬಿಡಿಯಾಗಿ ಬೇಕಾದರೆ ಬಿಲ್ಲಿ ಕಮ್ಮಿ ನಾಲ್ಕಾಣೆ ಸೇರು. ಆಸೇರಾದರೂ ಎಂಥದ್ದು! ವಿಕ್ಟೋರಿಯಾ ರಾಣಿಯ ತಲೆ ಇದ್ದ ನಲವತ್ತೆಂಟು ಬೆಳ್ಳಿ ರೂಪಾಯಿಗಳ ತೂಕಕ್ಕೆ ಸಮನಾದ್ದು; ಹಾಲು ಮೊಸರುಗಳನ್ನು ಅಲ್ಯುಮಿನಿಯಂ ಭಾಂಡಗಳಲ್ಲೋ, ಮಿರಿ ಮಿರಿ ಮಿಂಚುವ ಹಿತ್ತಾಳೆ ಚೊಂಬುಗಳಲ್ಲೋ ತಂದು ಮಾರುತ್ತಿದ್ದರು.

ಗಟ್ಟಿಯಾದ ಹಾಲು ರೂಪಾಯಿಗೆ ಎಂಟು

ಸೇರು. ಸ್ವಲ್ಪ ಸುಮಾರಾದ್ದು ಒಂಬತ್ತು ಸೇರು. ಮೊಸರೇ ರೂಪಾಯಿಗೆ ಹದಿನಾರು ಸೇರು. ಎರಡೂ ಬೇಕಾದರೆ ವರ್ತನೆಗೂ ಸಿಗುತ್ತಿತ್ತು. ಈ ರೀತಿ ವರ್ತನೆ ಹಾಕುತ್ತಿದ್ದ ಎಲ್ಲಮ್ಮ ಫಕೀರಮ್ಮ-ಗಾಡೀ ಕೊಪ್ಪದವರು ಅವರು ಶಿವನ ಪಾದ ಸೇರಿಯೇ ನಲವತ್ತು ವರ್ಷಗಳಾಗಿರಬೇಕು. ಮನೆಯಾಕೆ ತಂದಿರಿಸಿದ ಪಾತ್ರೆಗೆ ಅಳೆದು ಮೊಸರು ಹಾಕಿದನಂತರ ಸುತ್ತ ನಿಂತಿರುವ ಪುಟ್ಟ ಮಕ್ಕಳಿಗೆಲ್ಲ ಕರಣೆ ಕೊಡುತ್ತಿದ್ದರು. ಆಗ ಮೊಸರು ಹಾಕಿಸಿಕೊಂಡ ಮನೆ ಯಜಮಾನಿ ನೆಲದ ಮೇಲೆ ತೊಟ್ಟಿಕ್ಕಿದ ಹನಿ ಮೊಸರನ್ನು ಬೆರಳಿಂದ ತಿಕ್ಕಿ ಅದರಿಂದ ತಲೆ ಬಾಗಿಲ ಹಿಂದೆ ಬೀರೂರು, ತಾಳಗುಪ್ಪ ರೈಲು ದಾರಿಯಂತೆ, ಸ್ಲೇಟಿನ ಮೇಲೆ ಮಕ್ಕಳು ಬರೆದ ಮೊದಲ ಪಾಠದ ಸಾಲಿನಂತೆ ಸೊಟ್ಟ ಸೊಟ್ಟನಾಗಿ ಗೋಡೆಗೆ ಹತ್ತಿಸಿದ ಬೊಟ್ಟುಗಳು. ತಿಂಗಳಾದ ಕೂಡಲೇ ಈ ರೈಲಿನ ಗಾಡಿಗಳನ್ನೆಣಿಸಿ ಹಾಲಿನವರ ಮೊಸರಿನವರ ಲೆಕ್ಕ ಚುಕ್ತಾ!

ರೂಪಾಯಿಗೆ ಎಂಟು ಸೇರು ಹಾಲೆಂದೆನಲ್ಲ! ಅದನ್ನು ಕಾಯಿಸಿ ಕುಡಿಕೆಗಳಲ್ಲಿ ತುಂಬಿ ಹೆಪ್ಪು ಹಾಕಿದರೆ ಮರುದಿನ ಗಟ್ಟಿಯಾದ ಧೈಂಡಿ ಮೊಸರು' ಇಂತಹ ಕುಡಿಕೆಗೆ ಮೂರು ಬಿಲ್ಲೆ! ಕೊಸರಾಟ ಚೌಕಸಿ ಮಾಡಿದರೆ ಅರ್ಧಾಣೆ (ಆರು ಕಾಸುಗಳಿ)ಗೇ ಕೊಟ್ಟು ಹೋಗುತ್ತಿದ್ದರು. ಆ ಗೋವಳಗಿತ್ತಿಯರು. ದಿನವೆಲ್ಲ ಮೈ ಮುರಿಯ ದುಡಿದು ಒಪ್ಪೊತ್ತು ಊಟ ಮಾಡಿ ಕಾಲ ತಳ್ಳುತ್ತಿದ್ದ ಫಣಿಯಮ್ಮಗಳು ಒಂದು ಹಿಡಿ ಅವಲಕ್ಕಿ ನೆನೆಸಿ, ಅಗ್ಗಿಷ್ಟಿಕೆ ಹೊತ್ತಿಸಿ ಬಾಣಲೆ ಏರಿಸಿ, ಕಾದ ಬಾಣಲಿಗೆ ಒಂದು ಸಣ್ಣ ಚಮಚ ತುಪ್ಪ ಬಿಟ್ಟು, ಅದರಲ್ಲಿ ಸಾಸಿವೆ ಉಪ್ಪು ಹಚ್ಚಿದ ಮೆಣಸಿನಕಾಯಿಗಳನ್ನು ಚಟಪಟ ಸಿಡಿಸಿ ಅದರಲ್ಲಿ ನೆನೆಸಿದ ಅವಲಕ್ಕಿ ಬಾಡಿಸಿ, ಕೆಳಗಿಳಿಸಿ ಈ ಧೈಂಡಿ ಮೊಸರು ತಾಡಿಸಿ ತಿಂದರೆ - ಮರುದಿನದ ಮಧ್ಯಾಹ್ನದವರೆಗೂ ಯೋಚನೆಯಿಲ್ಲ - ಅವರುಗಳಿಗೆ!

ಮೇಲು ಮತ್ತು ಕೆಳಗಿನ ಹನಸವಾಡಿಗಳ ಕಡೆಯಿಂದ ಹಾಲು ಬರುತ್ತಿದ್ದುದು ಮಧ್ಯಾಹ್ನದ ಮೇಲಾದರೆ ಬೆಳಿಗ್ಗೆ ಕಾಫಿ ಅಭ್ಯಾಸ ವಿರುವವರಿಗೆ ಕುಂಬಾರ ಕೇರಿಯ ನಿಂಗಪ್ಪನೇ ಗತಿ. ಅವನು ವಾಸ್ತವವಾಗಿ ನಿಂಗಪ್ಪ ಅಲ್ಲ-ನೀರಪ್ಪನೇ! ನೀರಿಗೇ ಸ್ವಲ್ಪ ಹಾಲು ಸೇರಿಸಿ ಬೀದಿಯವರಿಗೆಲ್ಲ ಅಳೆದು ಹೋಗುತ್ತಿದ್ದ. ಅವನ ಕೊಕ್ಕರೆಗರಿಯಷ್ಟು ಬಿಳಿಯಾದ ಷರಟು ಕಚ್ಚೆ ಪಂಚೆ-ಬಿಳೀ ಚೌಕಳಿಯ ಕೆಂಪು ರೇಷ್ಮೆಯ ಚೌಕ. ಒಣಹುಲ್ಲು ಹಾಸಿ ಅದರಲ್ಲಿ ಮಿರ ಮಿರನೆ ಮಿಂಚುವ ಹಿತ್ತಾಳೆ ಚೆಂಬುಗಳಲ್ಲಿ ಹಾಲು ಎಂಬ ಆ ಪದಾರ್ಥವನ್ನು ಬುಟ್ಟಿಯಲ್ಲಿರಿಸಿಕೊಂಡು ಅದನ್ನು ಪುಟ್ಟ ಪೇಟ ಸುತ್ತಿದ್ದ ತನ್ನ ತಲೆಯ ಮೇಲಿರಿಸಿಕೊಂಡು ಕಾಲಲ್ಲಿ ಚಡಾವು ಮೆಟ್ಟಿ ಅಂಕದಲ್ಲಿ ಗೆದ್ದ ಹುಂಜನಂತೆ ಹೆಜ್ಜೆ ಹಾಕುತ್ತಾ ಬರುತ್ತಿದ್ದ ಅವನನ್ನು ಯಾರು ತಾನೇ ಮರೆತಾರು! ಸಾಲದ್ದಕ್ಕೆ ಅವನು ಸಂಜೆಯ ವೇಳೆಗ ಅಲ್ಲಿ ಕರೀಚಿಂತಾಮಣಿ ಶಾಸ್ತ್ರಿಗಳ ಬಳಿ ಕುಳಿತು ಕಾಲಜ್ಞಾನವನ್ನೋ ಮತ್ತೊಂದನ್ನೋ ಕೇಳುತ್ತ ಕುಳಿತಿರುತ್ತಿದ್ದುದನ್ನು ಅದೆಷ್ಟು ಜನ ನೋಡಿಲ್ಲ!

ಬಾಲ್ಯದ ದಿನಗಳೇ ದಿನಗಳು. ಅದರಷ್ಟು ಸುಖದಕಾಲ-ಸುಂದರಯುಗ ಬೇರಾವುದು? ಆಗಿನ ನಮ್ಮ ನಗು-ನಲಿವುಗಳು-ನಂಬಿಕೆ, ಅಪನಂಬಿಕೆಗಳು - ಇವನ್ನು ನೆನೆದರೆ ಈಗಲೂ ನಗು ಬರುತ್ತದೆ. 'ಗಾಡೀ ಪ್ರಯಾಣ'ದಲ್ಲಿ ಬರುವ ನಿಮ್ಮ ಹೇಮಾವತಿಯ ವರ್ಣನೆ, ದೆವ್ವ ಭೂತಗಳು, ಜಡೆ ಮುನಿಯ, ಆಕಾರ, ವರ್ಣ, ಲಕ್ಷಣಗಳು, ಅದು ಕೃಷ್ಣಭಟ್ಟನ ಮಡುವಗೆ ಹೋಗಿ, ಅಲ್ಲಿ ಮುಳುಗಿರುವ ಕಂಚಿನ ತೇರನ್ನು ಎಳೆದು ಹಾಕಲು ಮಾಡುವ ಪ್ರಯತ್ನ-ಅದರಿಂದಾಗಿ ಅಲ್ಲಿನ ನೀರು ಯಾವಾಗಲೂ ಕದಡಿದ್ದಂತೆಯೇ ಕಾಣುವ ವಿವರಣೆ ಓದಿದಾಗ ನಮಗೆ ನಮ್ಮೂರಿನ ಭೀಮೇಶ್ವರ ದೇವಾಲಯದ ಬಳಿ ಇರುವ ಮಡುವಿಗೆ ಕತೆಯೂ ನೆನಪೂ ಬಾರದಿರುತ್ತದೆಯೇ? ಅಲ್ಲಿಯೂ ಇಂತಹುದೇ ಒಂದು ಇತಿಹಾಸ. ಆದರೆ ಮುಳುಗಿರುವ ಕಂಚಿನ ತೇರು ಮಾತ್ರ ಭೀಮನದು, ಅಷ್ಟೇ! ಅಮಾವಾಸ್ಯೆಯ

ಮಧ್ಯ ರಾತ್ರಿಯಲ್ಲಿ ಪುಣ್ಯವಂತರಿಗೆ ಮಾತ್ರ ಅದರ ಕಲಶ ಕಾಣಸುತ್ತದೆ. ನೀರಲ್ಲಿಕೈ ಆಡಿಸಿದರೆ ಆ ಕಲಶ ಕೈಗೆ ತಡೆಯುತ್ತದೆ - ಎಂದು ನಮ್ಮ ಜಗಳಗಂಟ ವಾದಿರಾಜನ ಹೇಳಿಕೆ! ಅದರಂತೆಯೇ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನಕ್ಕೂ ಇಂತಹುದೇ ಕತೆಗಳ ನಂಟು ಹಾಕಿ ಹತ್ತಾರು ಕತೆಗಳನ್ನು ಸೃಷ್ಟಿ ಮಾಡಿದ್ದ ಅವನು! ಮಾರುತಿಯ ವಿಗ್ರಹದ ಕೆಳಗೆ ದೂರ್ವಾಸರ ಜಾತಕ ಇದೆ. ಅದಕ್ಕೇ ಸ್ವಾಮಿ ಪರಮಸತ್ಯ!

ದೇವಾಲಯದ ಪ್ರಾಕಾರದಲ್ಲಿ ಒಂದು ಚಿಕ್ಕ ಕಲ್ಲಿನ ಚಕ್ರ ಇದೆ. ತಣ್ಣೀರು ಸ್ನಾನ ಮಾಡಿ ಅಲ್ಲಿ ಅದರ ಮೇಲೆ ಎರಡೂ ಹಸ್ತ ಊರಿ ಕುಳಿತು ಕಣ್ಣು ಮುಚ್ಚಿ ಭಕ್ತಿಯಿಂದ ಪ್ರಾರ್ಥನೆ ಮಾಡುತ್ತ ಸ್ವಾಮಿಗೆ ನಿಮ್ಮ ಕೋರಿಕೆಯನ್ನು ನಿವೇದಿಸುತ್ತ ಕುಳಿತುಕೊಳ್ಳಬೇಕು. ನಿಮ್ಮ ಕೆಲಸ ಆಗೋದಿದ್ದರೆ ಯಾರೋ ಬಂದು ನಿಮ್ಮ ಕೈಗಳನ್ನು ಅದರಿಂದ ಬಿಡಿಸಿದಂತಾಗುತ್ತದೆ. ಆಗ ನಿಮ್ಮ ಕೆಲಸ ಖಂಡಿತ ಗ್ಯಾರಂಟಿ. ಇದಕ್ಕೆ ನಮ್ಮ ಆನಂದ ತೀರ್ಥಾಚಾರ್ಯರ ಮಗಳು ಅರಣ್ಯಾನೀ ಸಾಕ್ಷಿ; ಬೇಕಾದರೆ ಅವಳನ್ನೇ ಕೇಳಿ ಎಂದು ವಾದಿರಾಜ ಮತ್ತೊಂದು ಕತೆ ಹೇಳುತ್ತಿದ್ದ.

"ಮಂಡ್ಲಿಯಲ್ಲಿ ವಾಟರ್ ವರ್ಕ್ಸ್ ಓಂದಿರುವ ಕಲ್ಲುಮಂಟಪ, ಅದರ ಕೆಳಗಿರುವ ವಿಶಾಲವಾದ ಕಲ್ಲು ಬಂಡೆಯ ಮೇಲಿರುವ ಕೆತ್ತಿದ ಪಗಡೆ ಹಾಸು ಯಾರದ್ದು ಗೊತ್ತಾ? ಸಾಕ್ಷಾತ್ ಪಾಂಡವರು-ಕೌರವರೇ ಬಂದು ಇಲ್ಲ ಆಡಿ ಸೋತು ಹೋದದ್ದು"- ಎಂದವನ ಬಾಯಿ ಬಡಿಯಾಟ!

ಹರಕೆರೆಯ ಬಂಡೆಗಳ ಮೇಲೆ ಉದ್ದಕ್ಕೂ ಎಂಟು ಹತ್ತು ಅಡಿಗಳ ಅಂತರದಲ್ಲಿ ಮೂಡಿರುವ ಕರೀ ಪಟ್ಟೆಗಳು ಯಾವುದೂಂತೀರಿ? ರಾಮಾಯಣದಲ್ಲಿ ರಾವಣ ಸೀತೆಯನ್ನು ಕದ್ದುಕೊಂಡು ಹೋಗುವಾಗ ಮೂಡಿದ ಆ ರಥದ ಗಾಲಿಗಳ ಗುರುತು - ಎಂದೇ ಅವನ ವಾದ! ಅವನ ಬಾಯಿಗೆ ಯಾರೂ ಎದುರು ಹೇಳಿ ಬದುಕುತ್ತಿರಲಿಲ್ಲ.

ಆಗಿನ ನಂಬಿಕೆಗಳು ಎಷ್ಟು ಸುಂದರ - ಎಷ್ಟು ಸ್ಥಿರ! ಬೆಳೆಯುತ್ತ ಬಂದ ಹಾಗೆಲ್ಲ ನಿರಾಸೆ, ಕಡುಕಷ್ಟ; ಅವುಗಳೊಂದಿಗೆ ವಸ್ತುಸ್ಥಿತಿ ಕುರಿತ ಕಟು ಸತ್ಯವೂ ಸೇರಿದರೆ, ಈ ಚಿತ್ರಗಳ ಬಣ್ಣ ಕ್ರಮೇಣ ಮಾಸಿ, ಅವು ಅಳಿದು ಹೋಗಿ, ಆಗುವ ಮಾನಸಿಕ ಬದಲಾವಣೆ ಎಂಥದ್ದು!

ಆ ರಥದ ಗಾಲಿ ಗುರುತುಗಳೇನೋ ಇಂದಿಗೂ ಇವೆ. ರಾವಣನೇನೋ 'ಸೀತಾದೇವಿ ಸಿಕ್ಕಿದ್ದೇ ಸಾಕು ಎಂದು ಆ ಉಬ್ಬುತಗ್ಗು ಬಂಡೆಗಳ ಮೇಲೆ ಎಷ್ಟಂ ತಿಷ್ಟಂ ರಥ ಓಡಿಸಿಕೊಂಡು ಹೋದರೆ ಒಳಗೆ ಕೂತಿದ್ದ ಸೀತಾದೇವಿಯ ಗತಿ ಏನು - ಅಂತ ಈಗ ಚಿಂತೆಯಾಗುತ್ತದೆ. ನಿಜ ಪ್ರಪಂಚ ನಮ್ಮನ್ನು ಕೆಕ್ಕರಿಸಿಕೊಂಡು ನೋಡುತ್ತದೆ. ಬಾಲ್ಯದ ಆ ನಂಬಿಕೆಗಳೂ ಸುಂದರ ದಿನಗಳೂ ನಮ್ಮೆಡೆಗೆ ಕಣ್ಣು ಮಿಟುಕಿಸಿ ನಗುತ್ತಾ ಮರೆಯಾಗಿ ಹೋಗಿವೆ.

ಗುಡ್ಡೆಮರಡಿಯಲ್ಲೂ ಇಂತಹುದೇ ಇನ್ನೊಂದು ಕತೆ. ಗುಡ್ಡದ ನೆತ್ತಿಯ ಬಳಿ ಇರುವ ಪುಟ್ಟ ದೇವಾಲಯ ಸುತ್ತ ವೃಕ್ಷರಾಜಿ 'ಘಂ' ಎಂದು ವಾಸನೆ ಬೀರುತ್ತಿರುವ ಹೂಗಳ ನಾನಾ ವಿಧದ ಹೂಬಳ್ಳಿಗಳು. ಎಡಭಾಗದಲ್ಲಿ ಇಂತಹ ಪೊದೆಯೊಂದನ್ನು ದಾಟಿ ಮುಂದುವರೆದರೆ ಅಲ್ಲೊಂದು ಗವಿ. ಅದರಲ್ಲಿ ಹೋದರೆ ನೇರವಾಗಿ ಕಾಶಿ-ನಿಯರೆಸ್ಟ್. ಅಂಡ್ ಗ್ಯಾರಂಟಿ! ಎಂದು ಆಗಿನ ಹುಡುಗರ ಕತೆಗಳು. ಆಗ ಹೇಗೋ ಹೇಳಲಾರೆ, ಈಗ ಅದನ್ನು ನೋಡಿದರೆ ಕಾಶಿ ಖಂಡಿತ ಗ್ಯಾರಂಟಿ- ಅನುಮಾನವೇ ಇಲ್ಲ!

ಶಿವರಾತ್ರಿಯ ದಿನ ಬೆಳಗಿನ ಜಾವದ ಮೂರು ಗಂಟೆಯ ವೇಳೆಗೇನೇ ಆ ಕೊರೆಯುವ ಚಳಿಯಲ್ಲಿ ನೂರಾರು ಜನ ಗಂಡಸರು, ಹೆಂಗಸರು, ಮಕ್ಕಳು, ಮುದುಕರು ನಮ್ಮ ಬೀದಿಯ ಮೂಲಕ ಪಶ್ಚಿಮದ ತೀರ್ಥ ಹಳ್ಳಿಯ ದಾರಿಯಲ್ಲಿರುವ ಹರಕೆರೆಗೆ ಸ್ನಾನ ಶಿವ ಪೂಜಾದಿಗಳಿಗೆ ಹೋಗುವವರು. ಅಲ್ಲೇ ಜಗುಲಿಯ ಮೇಲೆ ಮಲ

ಗಿರುತ್ತಿದ್ದ ನಮಗೆ ಇವರ ಪಿಸಿ ಪಿಸಿ ಮಾತುಗಳು ಮತ್ತು ಕಾಲ ಸಪ್ಪಳದಿಂದ ಎಚ್ಚರ. ಹರಕೆರೆಯ ಸ್ನಾನ ಘಟ್ಟದಲ್ಲಿ ಕಾಲಿಟ್ಟಲ್ಲೊಂದು ಶಿವಲಿಂಗ. ವಿಭೂತಿ, ಕುಂಕುಮ, ಊದುಕಡ್ಡಿ ತುಂಬೆ ಹೂವು ಬಿಲ್ಪತ್ರೆ, ರಾಶಿ. ಅದರ ಮುಂದೊಬ್ಬ ಪೂಜಕ. ಭೈರವ ಶಾಸ್ತ್ರಿಗಳ ಮಕ್ಕಳೆಲ್ಲ ಇಂತಹ ಒಂದೊಂದು ಲಿಂಗ ಮುಂಚಿತವಾಗಿ ಹಿಡಿದು ಬಂದವರಿಂದಲ್ಲ ಪೂಜೆ ಮಾಡಿಸುವರು. ಅಲ್ಲೂ ಅಷ್ಟೆ - ಒಂಬೈನೂರ ತೊಂಬತ್ತೊಂಬತ್ತು ಲಿಂಗಗಳಿವೆ; ಸಾವಿರಕ್ಕೆ ಒಂದೇ ಕಡಿಮೆ. ಅದೂ ಒಂದ್ ಬಿಟ್ಟಿದ್ದಿದ್ರೆ ನಮ್ಮ ಹರಕೆಗೆ ಸಾಕ್ಷಾತ್ ಕೈಲಾಸ ಆಗಿ ಬಿಡುತ್ತಿತ್ತು. ಬೆಳಗಿನ ಏಳು ಎಂಟು ಗಂಟೆಗಳವರೆಗೂ ಈ ಭಕ್ತರ ಭಾವುಕದ ಗುಂಪು ಏರು ಸಂಖ್ಯೆಯಲ್ಲೇ ಬರುತ್ತಿದ್ದು ಕ್ರಮೇಣ ಕಡಿಮೆಯಾಗಿ ನಂತರ ಬೇರೆಯವರು ವಿವಿಧೋದ್ದೇಶಗಳಿಗಾಗಿ ಬಂದು ಸಂಜೆಯವರೆಗೂ ಇದ್ದು ಹೋಗುವವರ ಜಂಗುಳಿ! ಭಕ್ತಾದಿಗಳು ಮುಂದೆ ಕಷ್ಟಪಟ್ಟು ನದಿದಾಟಿ ಕಾಲು ದಾರಿಯಲ್ಲಿ ಗುಡ್ಡೆಮರಡಿಗೂ ಹೋಗಿ ಅಲ್ಲಿಯ ದೇವರಿಗೂ ಪೂಜೆ ಮಾಡಿಸಿಕೊಂಡು ಸ್ವಾಮಿ ನಡುನೆತ್ತಿಗೆ ಬರುವ ವೇಳೆಗೆ ನದಿದಾಟಿ ಮನೆ ಮುಟ್ಟುತ್ತಿದ್ದರು.

ಊರ ಪೂರ್ವಕ್ಕಿರುವ ಪಿಳ್ಳಂಗೆರೆಯಲ್ಲಿ ಕೂಡ ವೈಶಾಖ ಮಾಸದಲ್ಲಿ ಇದೇ ದೃಶ್ಯಗಳ ಪುನರಾವರ್ತನೆ! ಅಲ್ಲಿನ ರಂಗನಾಥನ ದರ್ಶನಕ್ಕೆ ಊರಿಂದ ನಾಲ್ಕೈದು ಮೈಲಿ ಕಾಲ ನಡಿಗೆಯಲ್ಲೇ ದೂರ ಕ್ರಮಿಸಿ ಜನ ಹೋಗುತ್ತಿದ್ದರು. ಪುಣ್ಯವಂತರ ಮನೆಯವರು ಜೋಡೆತ್ತಿನ ಬಂಡಿಗಳಲ್ಲಿ! ನೀವು 'ಗಾಡಿ ಪ್ರಯಾಣ'ದಲ್ಲಿ ವರ್ಣಿಸಿರುವ ಸೊಬಗು ಸೌಂದರ್ಯಗಳನ್ನೆಲ್ಲ ನಾವು ಆಗಲೇ ಕಂಡದ್ದು!

ಊರಿನ ಬೀದಿ ಬೀದಿಗಳಲ್ಲಿ ನಡೆವ ಕಾಮನ ಹಬ್ಬ. ಶ್ರೀರಾಮ ನವಮಿ. ಗಣೇಶ ಮೊದಲಾದ ಉತ್ಸವಗಳಲ್ಲಿ ಸಂಗೀತ, ಭಾರತ ವಾಚನಗಳು ನಡೆಯುತ್ತಿದ್ದುವು. ತಿಮ್ಮಪ್ಪನ ಕೊಪ್ಪಲ ಚಪ್ಪರ , ಅಲ್ಲಿ ಮತ್ತೂರಿನ ಗಮಕಿ ವೆಂಕಟೇಶಯ್ಯನವರಿಂದ, ರಾಮಾಶಾಸ್ತ್ರಿಗಳಿಂದ ಕುಮಾರ ವ್ಯಾಸನ ಭಾರತದ ವಿರಾಟಪರ್ವವಾಚನ. ಮತ್ತೂರ ಲಕ್ಷ್ಮೀಕೇಶವ ಶಾಸ್ತ್ರಿಗಳ ಘನ ವ್ಯಾಖ್ಯಾನ, ಶೇಷಪ್ಪ, ಕೃಷ್ಣಪ್ಪ, ರಾಮಾಜೋಯಿಸರು ರಾಘವನ್‌ರವರ ಸಂಗೀತ; ವೀಣೆಗೆ ರಾಜೈಂಗಾರ್ಯರು; ಭುಜಂಗರಾಯರು ಗುಪ್ತರ ಪಿಟೀಲು; ತಬಲ ಅಥವಾ ಮೃದಂಗಕ್ಕೆ ಹಿರಣ್ಣಯ್ಯನವರ ಮಗ ಮೂರ್ತಿ, ಕಂಜೀರಕ್ಕೆ ಅವರಣ್ಣ ಗುಂಡ, ಶಿವೂನ ಕಂಜರ ಅಥವಾ ಘಟಂ ಇವಕ್ಕೆಲ್ಲ ಕಲಶವಿಟ್ಟಂತೆ Of course, sound system by K.G. Rao ... ಅದರ ಆಪರೇಟರ್ ನಮ್ಮ ಮಾರೀಚಿ ರಾಜ!

ತಬಲದ ಮೂರ್ತಿ ಬರಿಯ ತಬಲ ಮೃದಂಗ ಮಾತ್ರ ಬಾರಿಸುವುದಲ್ಲ: ಮತ್ತು ರಂಗಂಡ ಶಾಮಣ್ಣ ಪುಸಲಾಯಿಸಿದರೆ ಮಧ್ಯಮಾವತಿಯಲ್ಲಿ ಸೊಗಸಾಗಿ 'ಸಾಯಂಕಾಲೇ ವನಾಂತೇ ಕುಸುಮಿತ ಸಮಯೇ ಸೈಕತೇ ಚಂದ್ರಿಕಾಯಾಂ'' ಕೂಡ ಯಾವ ತ್ಯಾಗರಾಜ ಭಾಗವತರಿಗಾಗಲೀ ಪೊನ್ನಪ್ಪ ಭಾಗವತರಿಗಾಗಲೀ ಶೀರ್ಕಾಳಿ ಗೋವಿಂದ ರಾಜನಿಗಾಗಲಿ ಕಡಿಮೆ ಇಲ್ಲದಂತೆ ಹಾಡುವನು. ಅದನ್ನು ಕೇಳಲು ಸಿಕ್ಕಾಪಟ್ಟೆ ಜನ.

ಊರಲ್ಲಿ ಮಂಗಳವಾರ ಸಂತೆ. ಮೇನ್ ಮಿಡ್ಲಿಸ್ಕೂಲ್, ಎ.ವಿ.ಗರ್ಲ್ಸ್ ಸ್ಕೂಲು, ನ್ಯೂ ಮಿಡ್ಲಿಸ್ಕೂಲು. ಮೊದಲಾದ ಶಾಲೆಗಳಲ್ಲಿ ಅವತ್ತು ಮಾರ್ನಿಂಗ್ ಕ್ಲಾಸ್. ಅವತ್ತಿಡೀ ಸಂತೆಯ ಜನ. ಅವರ ನಡುವೇ ಊರಿನ ಕೃಷ್ಣಾ, ಗಜಾನನ, ಎಂ.ಜೆ.ಟಿ.ಎಸ್, ಎಂ, ಎಂ. ಎಸ್ ಅಂಡ್ ಎಸ್.ಟಿ.ಎ. ಬಿ.ಆರ್.ಕೆ., ಶ್ರೀರಾಮ, ಆರ್.ಎಂ., ಶಿವಶಂಕರ್ ಮತ್ತು ಬಹುದಿನಗಳ ನಂತರ ಬಂದ ಸಿ.ಕೆ.ಎಂ.ಎಸ್. ಬಸ್‌ಗಳ ಓಡಾಟ.

'ಧರುಮದ್ರಾಯ'ನ ಕಾಲ ಅದು. ಶಿವಮೊಗ್ಗದಿಂದ ರೈಲ್ವೇ, ಬಸ್ಸಲ್ಲೇ ಜೋಗಕ್ಕೆ ಛಾರ್ಜು ಹತ್ತೇ ಆಣೆ! ಊರ ಬಸ್‌ಗಳಲ್ಲಿ ಇನ್ನೂ ಕಡಿಮೆ. ಭದ್ರಾವತಿಗೆ ಎರಡಾಣೆ! ಬೆಂಗಳೂರಿಗೆ

ಆಗ ಬಸ್ ಇರಲಿಲ್ಲ. ರೈಲು ಛಾರ್ಜು ಒಂದು ರೂಪಾಯಿ ಹದಿನಾಲ್ಕುವರಾಣೆ!

ಆ ರೈಲು ಎಷ್ಟು ಸ್ಪೀಡು! ಬೆಳಗ್ಗೆ 9ಕ್ಕೆ ಇಲ್ಲಿಂದ ಹೊರಟರೆ ರಾತ್ರಿ ಒಂಬತ್ತುವರೆಗೇ ಬೆಂಗಳೂರು: ಜನಕ್ಕೆ ಸಂತೋಷವೋ ಸಂತೋಷ! ಅಷ್ಟೇ ಆಶ್ಚರ್ಯ ಹೆದರಿಕೆ! ರೈಲು ಹೋಗ್ತಾ ಇರೋವಾಗ ಲ್ಯಾವೇಟರೀಲಿ ಹೋಗಿ ಕೂತುಕೊಳ್ಳಲು ಅವರಿಗೆ ತುಂಬಾ ಭಯ. ರೈಲೆಲ್ಲಾದರೂ ಆ ಲ್ಯಾವೇಟರೀನ್ನು ಅಲ್ಲೇ ಬಿಟ್ಟು ಮುಂದಕ್ಕೆ ಹೊರಟುಹೋದರೆ! ಅವರಿಗೋ ಯಾವುದಕ್ಕೂ ಅವಸರವಿಲ್ಲ. ಅರ್ಜೆನ್ಸಿ ಇಲ್ಲ. ನಮ್ಮ ಗುಡಿ ಭೀಮ ಮೊದಲ ಬಾರಿ ಬೆಂಗಳೂರಿಗೆ ಬಂದಿದ್ದಾಗ ಅವನಿಗೇನೂ ತಿಳಿಯದು. ಬಿ.ಟಿ.ಸಿ. ಬಸ್‌ಗೆ ಕಾದು ನಿಂತ. ಎಷ್ಟು ಹೊತ್ತಾದರೂ 22ನೇ ನಂಬರ್ ಬಸ್ ಬರದಿದ್ದಾಗ 11ನೇ ನಂಬರ್ ಬಸ್ಸಲ್ಲೇ ಎರಡು ಸಾರಿ ಹೋಗಿ ಬಂದು ಬಿಡಾಣ ಎನ್ನಿಸಿಬಿಟ್ಟಿತ್ತವನಿಗೆ: ಚಾಮರಾಜ ಪೇಟೇಲಿ ಒಂದ್ ಮಹಡಿ ಮೇಲೆ ನಮ್ಮ ಹುಚ್ಚಣ್ಣ ರೂಂ ಮಾಡಿ ಕೊಂಡಿದ್ದ. ಅವನನ್ನು ನೋಡಲು ಹೋದಾಗ ಅಲ್ಲಿ ಪಕ್ಕದ ಬಚ್ಚಲು ಮನೇಲಿ ನೀರು ಬರ್ತಾ ಇದ್ದುದನ್ನು ನೋಡಿ- ''ಏನು, ಈ ಊರಲ್ಲಿ ಮಹಡೀ ಮೇಲಿರೋ ನಲ್ಲೀಲೂ ನೀರು ಬರುತ್ತಾ? ಎಂದು ಕುಣಿದಾಡಿಬಿಟ್ಟಿದ್ದ. ಎಂದ ಮೇಲೆ ಇವು ಇದ್ದ ಊರಾವುದು? ಅಲ್ಲಿ ಹೋಗಿದ್ದಿರಬಹುದು? Innocence is bliss!

ಹುಟ್ಟಿದಾಗಿನಿಂದ ಇಲ್ಲೇ ಇನ್ಕುಕೊಂಡು. ಕಾಮನ ಹಬ್ಬ, ಸಿನಿಮಾ, ಮೈಲಾರ ದೇವಸ್ಥಾನದ ಕಾಂಪೌಂಡ್, ಕುಂಬಾರ ಗುಂಡಿಗಳಲ್ಲಿ ನಡೆಯುವ ಕುಸ್ತಿಗಳು, ಸರ್ಕಸ್‌ಗಳು, ಕಂಪನಿ ನಾಟಕಗಳು- ನೂರು ಕಡೆ ಕೆಲಸ ಮಾಡಿ ನೂರಾ ಒಂದ್ ಸಾರಿ ಅದನ್ನು ಬಿಟ್ಟು ಮತ್ತೆ ನೂರ ಎರಡನೇ ಸಾರಿ ಅಲ್ಲೇ ಇರೋದು; ರಾಮಯ್ಯನ ಹೋಟೆಲು ಮಹಡಿ, ಕೂಡ್ಲಿ ಧೀರೇಂದ್ರಾಚಾರ್ಯ ಮನೆ ಹೊರ ಗೋಡೆಗಳಲ್ಲಿ ಇಸ್ಪೀಟು ಇವುಗಳಲ್ಲೇ ದೌಲತ್ತು ಮಾಡುತ್ತಿದ್ದ. ಈ ಮುಂಡೇವಕ್ಕೆ ತಮ್ಮೂರು ಬಿಟ್ಟು 'ಹೊರಗೂ ಒಂದು ಬೇರೆ ಪ್ರಪಂಚವಿದೆ' ಎಂಬುದೇ ತಿಳಿಯದು.

ಟೆನಿಸ್ಸನ್ನನ ಲಾಟೋಸ್ ಈಟರುಗಳು ಲಾಟೋಸ್ ದ್ವೀಪದಲ್ಲಿ ಕಣ್ಣಿಗೆ ಕಾಣದ ದೇವರನ್ನು ಕುರಿತು ಮಾಡಿದ ಪ್ರಾರ್ಥನೆ - ''Give us long rest or dreamful ease'' - ಎಂದು ಕೇಳಿಕೊಂಡದ್ದನ್ನು ಈ ಮುಂಡೇವು ಎಲ್ಲೋ ಕದ್ದು ಕೇಳಿಸಿಕೊಂಡು ಅವರಿಂದ ಭಿಕ್ಷೆ ಬೇಡಿ ಅದೇ ಗಿಡದ ಎಲೆ ಹೂವು ಕಾಂಡಗಳನ್ನು ಕಿತ್ತು ತಿಂದು - ''Why should we only tail - The roof and crown of things?" ಎಂದು ಸವಾಲೆಸೆದು ಎರಡು ಮೂರು ತಲೆಮಾರುಗಳವರೆಗೂ ಲಾಟೋಸ್ ಈಟರುಗಳಂತೆಯೇ ಬಾಳಿ ಬದುಕಿ ಬಳ್ಳಿ ಹರಿದಿರಬೇಕು!

ನಾಲ್ಕುವರಾಣೆಗೆ ಒಂದು ಪಂಚೇರು ಸಕ್ಕರೆ, ಒಂದೂ ಮುಕ್ಕಾಲು ರೂಪಾಯಿಗೆ ಒಂದು ಪೌಂಡ್ ಕಾಫಿಪುಡಿ, ಐದಾಣೆಗೊಂದು ಸೀಸೆ ಕಡಲೆಕಾಯಿ ಎಣ್ಣೆ! ರೂಪಾಯಿಗೆ ಏಳು ಸೇರು ಸಣ್ಣಕ್ಕಿ - ಏಳುವರೆ ಸೇರು ದಪ್ಪಕ್ಕಿ; ಒಂದೂವರೆ ರೂಪಾಯಿಗೆ ಒಂದು ಗಾಡಿ ಸೌದೆ; ಅದನ್ನು ಒಡೆಯಲಿಕ್ಕೆ ನಾಲ್ಕೂವರಾಣೆ! (ಕನ್ನಡ ಜಿಲ್ಲೆ ಕಡೆಯಿಂದ ಶೇಷ-ನಾರಾಯಣ, ಆನಂದ ಬಂದ ಮೇಲೆ ಅವರು ಸೌದೆ ಗಾಡಿ ಒಡೆಯೋಕೆ ಆರಾಣೆ-ಎಂಟಾಣೆ ಕೇಳೋಕೆ ಸುರು ಮಾಡಿದ್ದು!) ಅವರಿಗ್ಯಾಕೆ ಅಷ್ಟೊಂದು? ಅವರು ಸೌದೆ ಒಡಿಯೋವಾಗ ಹೇಗೆ ಒಡೀತಾರೆ ನೋಡಿಕೊಂಡು ಅದೇ ಥರಾ ಒಡೆದು ಒಳಗೆ ಹಾಕಿ ಅಮ್ಮ ದುಡ್ಡು ಉಳಿಸುತ್ತಿದ್ದರು- ಮನೆಯ ಹುಡುಗರುಗಳು!

ಓದಿಲ್ಲ-ಬರೀಏಲ್ಲ ಮುಂಡೇವುಕ್ಕೆ- ಕೆಲಸಕ್ಕೆ ಹೋದರೆ ಹೋದರು. ಸಂಪಾದನೆ ಮಾಡಿದರೋ ಬಿಟ್ಟರೊ! ಯಾರೋ ಸಂಪಾದನೆ ಮಾಡಿದರೆ ಈ ಮುಂಡೇವು ನದೀಲಿ ಮೆರೆದು ಮನೆಗೆ ತಮ್ಮಿಷ್ಟ ಬಂದಾಗ ಬಂದು ಅಕ್ಕ-ತಂಗಿ ತಾಯಂದಿರನ್ನ ಹೆದರಿಸಿ - ಅನ್ನ ತಿಂದು, ನಿಂಬೆ

ಹಣ್ಣು ತೆಂಗಿನಕಾಯಿ ಉರುಳಿಸುವರೇನು - ಆಡಿಕೊಂಡದ್ದು, ಕೃಷ್ಣಾ ಟಾಕೀಸಲ್ಲ ರಾಧಾ ರಾಣಿ- ಸರ್ದಾರ್ ಮನಸೂರ್, ನಾದಿಯಾ, ಜಾನ್‌ಕವಾಸ, ಮೋತಿ, ಜಾಲ್ ಮರ್ಚಂಟ್, ನವೀನ್‌ಚಂದ್ರ - ಶಂಕರ್‌ವಜ್ರೆ ಅಭಿನಯದ ಟಂಗಾ - ಟಂಗ - ಫೈಟಿಂಗ್ ಸಿನಿಮಾ ನೋಡಿ ಕೊಂಡು ಕಾಲ ಕಳೆಯುತ್ತಿದ್ದವು - ಇವುಗಳನ್ನು ಕಂಡರೆ ಓದುವ ಬರೆಯುವ ಸ್ಕೂಲು ಕಾಲೇಜು ಗಳಿಗೆ ಹೋಗುವವರಿಗೆ ಅಷ್ಟಕ್ಕಷ್ಟೆ!

ಸಂತೆ ಅಂಗಡಿಗಳ ಮುಂದೆ ಹೋಗಿ ನಿಂತರೆ ಆರು ಕಾಸಿಗೊಂದು ಸೇರು ಪುರಿ! ಉಪ್ಪುಗಡಲೆ ಅಥವಾ ಹುರಿಗಡಲೆ ಫ್ರೀ! ಆಲೆಮನೆಗೆ ಹೋದರೆ ಎಷ್ಟು ಕಬ್ಬಿನ ಹಾಲು ಕುಡೀತೀರಿ? ಅದೆಷ್ಟು ಕಬ್ಬು ತಿಂದೀರಿ? ಅಷ್ಟು ತಿಂದು ಕುಡಿದರೂ ಇಷ್ಟೇನಾ ನಿಮ್ಮ ತಾಕತ್ತು? ಎಂದು ಹಂಗಿಸಿ ಇನ್ನಷ್ಟು ಎಳೆಯುವ ಆಲೆಮನೆ ಮಾಲೀ ಕರು ಅಗಿದಷ್ಟು - ಸೀಗಿದಷ್ಟು ಉಗಿದಷ್ಟು ಕಬ್ಬು; ಮನೆಗೆ ಒಯ್ಯಲು ಬೇರೆ. ಜೊತೆಗೂ ಬೆಲ್ಲದ ಅಂಟು ಸೇರಿಸಿದ ಅಂಟುಗೋಲು ಕಬ್ಬು!

ಮಹಾರಾಜರ ಕಾಲದ ಸ್ಕೂಲುಗಳಲ್ಲಿ ಓದು ತ್ತಿದ್ದ ನಮಗೆ ಕಾಯೌ ಶ್ರೀ ಗೌರಿ ಬಾಯಿ ಪಾಠ. ಅವರ ವರ್ಧಂತಿ ದಿನ ಲಾಡು! ಸ್ಕೂಲಿಗೆ ರಜ! ಮರುದಿನ ಮತ್ತೆ 'ಕಾಲವೂ ಏಳು' ಘಂಟೆ ಯೋಳ್ ಪಾಠ; ಶಾಲೆಗಾಂ ಪೋಪೆಂ ಪೋಪೆಂ! ನಾನು ಓದಿದ್ದು ರಾಮಣ್ಣ ಸೆಟ್ಟಿ ಪಾರ್ಕ ಬಳಿ ಯಿದ್ದ ಚಿಲ್ಡ್ರನ್ಸ್ ಹೋಂ ಆದರೂ ನಮ್ಮ ಬೀದಿಲೇ ಇದ್ದ ಗೌ. ಪೇಟಾ ಪ್ರೈಮರಿ ಬಾಯ್ಸ್ ಸ್ಕೂಲೇ ನಂಗೆ ತುಂಬ ಇಷ್ಟದ್ದು. ಘಂಟೆಯಾದ ಕೂಡಲೇ ಪುಸ್ತಕಗಳನ್ನು ಬಾಚಿಕೊಂಡು ಇಲ್ಲೀ ತನಕ non-stop ಓಟ ಓಡಿ ಇಲ್ಲಿಗೆ ಬಂದು ನನ್ನ ಬಾಲ ಮಿತ್ರರನ್ನು ಕೂಡಿಕೊಳ್ಳುತ್ತಿದ್ದೆ. ಈ ಸ್ಕೂಲಿನ ಹೆಡ್ ಮಾಸ್ಟರು ಶಾಮಣ್ಣನವರು ಇಲ್ಲಿ ಏಳುವರೆಗೇ ಬೆಲ್ ಹೊಡೆಯಿಸಿ ಪ್ರಾರ್ಥನೆ ಸುರು ಮಾಡುವರು. ಗಂಟೆ ಶಬ್ದ ವಾದ ಕೂಡಲೇ ಆಚೆ ಈಚೆ ಮನೆಗಳ ಜಗುಲಿ- ಸುಗಂಧಮ್ಮನ ಮನೆ ಕಟ್ಟೆ- ಎಲ್ಲೆಲ್ಲೋ ಕೂತು ಲೆಕ್ಕ ಪಾಠ (Home work) ಮಾಡಿಕೊಳ್ಳುತ್ತಿದ್ದ ಹುಡುಗರು ಹೇಳದೇ ಕೇಳದೇ ಮಾಯವಾಗಿ ಸ್ಕೂಲಿನ ವಿವಿಧ ರೂಮುಗಳಲ್ಲಿ ಭಕ್ತಿಯಿಂದ ಕೈ ಮುಗಿದುಕೊಂಡು 'ಪ್ರೇಯರಿಗೆ' ಹಾಜರು. ಇತರ ಮೇಷ್ಟ್ರುಗಳಾದ ಗೋಪಾಲರಾಯರು ಲೋಕಾರಾಧ್ಯರು, ಬಸಣ್ಣಪ್ಪ ಎಲ್ಲರೂ ಬೆತ್ತದ ಸಮೇತ ಅಲ್ಲಿರಬೇಕು. ಮೊದಲು ಶಾಮಣ್ಣನ ವರು 'ಕರಾರವಿಂದೇನ ಪಾದಾರವಿಂದಂ' ಹೇಳಿ ಕೊಡುತ್ತಿದ್ದರು. ನಂತರ 'ಜೈಭಾರತ ಭೂಮಿ ಗೇ' ಹೀಗೇನೇ ಎಂಟರ ತನಕ. ಕೋಟು ಟೋಪಿ ಇಟ್ಟು ಯಾರೂ ಸ್ಕೂಲಿಗೆ ಬರೋ ಹಾಗಿಲ್ಲ. ಉಳಿದವರು ಎರಡಾಣೆಗೊಂದರ (ರಟ್ಟಿನ) ಕರೀ ಟೋಪಿ, ಆಣೆಗೊಂದರ ಗಾಂಧೀ ಟೋಪಿ. ಸ್ವಲ್ಪ ಉಳ್ಳವರ ಮನೆ ಮಕ್ಕಳು ಹಾಸನದ ಜರತಾರೀ ಟೋಪಿ! ಹೆಡ್ ಮಾಸ್ಟರು ಆಗಾಗ:

ಮರತೆ ಯಾತಕಯ್ಯ ನಿನ್ನ ಮಾತೃಭೂಮಿಯ?
ಒಂಬತ್ತು ತಿಂಗಾಳು ತನ್ನೊಳ್ ಇಂಬುಗೊಟ್ಟ ವಳು ತಾಯಿ!
ತೊಂಬತ್ತು ವರುಷವಾದರೂ - ಕುಂಭಿನಿ ತಾಯಲ್ಲೋ ಮನುಜಾ ....॥ಮರತೆ॥

ಎಂಬ ಹಾಡನ್ನು ಹೇಳಿ ಕೊಡುವವರು! 'ರಾಮ ತಾರಕ ನಾಮ ಮಹಿಮಾ' ಅವರ ಇನ್ನೊಂದು ಹಾಡು.

ಇವರನ್ನು ಬಿಟ್ಟರೆ- ಹುಡುಗರನ್ನು ಹೊಡೆದು ಸಾಯಿಸುವುದರಲ್ಲಿ ಎತ್ತಿದ ಕೈಯವ ರಾದ ಎಂ.ಡಿ.ಗೋಪಾಲರಾಯರು. ಶಿಕ್ಷೆ ಇಲ್ಲದ ಶಿಕ್ಷಣವೇ ಅಲ್ಲ ಎಂದು ಧೃಡವಾಗಿ ನಂಬಿದ್ದ ಉತ್ತಮ ಶಿಕ್ಷಕರು ಇವರು. ಆಕಾಲಕ್ಕೆ ತಕ್ಕಂತೆ ಉಳಿದೆಲ್ಲರ ಕೈಲಿರುವಂತೆ ಇವರ ಕೈಲಿದ್ದ ಏಕೈಕ ಟೀಚಿಂಗ್ ಏಡ್- ಮೂರು ಮೂರುವರಡಿ ಉದ್ದದ ನಾಗರ ಬೆತ್ತ. ತರಲೆ- ತಂಟೆಕೋರರಾದ ಪ್ರಾಣೇಶ, ಕಂಠ - ಪಿಂಚನಿ ಗುರು- ಕಟ್ನಿ ತಿಮ್ಮಣ್ಣ ನಾಗರಾಜರುಗಳು, ಸ್ವಪ್ನದಲ್ಲಿ ಗೋಪಾಲರಾಯರು ಕಂಡರೂ

ಸಾಕು ಉತ್ತರಾಷಾಢ ಪೂರ್ವಾಷಾಢ ಅವಕ್ಕೆ! ನಿಮ್ಮ ಹುಡುಗರಿಗೆ ಇವತ್ತೂ ಸ್ಕೂಲಲ್ಲಿ ಏಟು ಬಿತ್ತು ಅಂತ ಯಾರಾದಾರೂ ಹೇಳಿದರೆ ಮನೇಲಿ ಆಯ್ತು ಅವರ ಕತೆ. ಅಲ್ಲಿಗಿಂತ ಇಲ್ಲಿ ಹೆಚ್ಚು ಏಟು! ಕ್ಲಾಸಿಗೆ ಚಕ್ರ ಹೊಡೆದವರಿಗೆ ಪೋಲಿಸ್ ಕಸ್ಟಡಿಯಲ್ಲಿ ಕೊಡುವ ಥರ್ಡ್ ಡಿಗ್ರಿ, ಪನಿಷ್ ಮೆಂಟು!

ಹೈಸ್ಕೂಲಲ್ಲಿ ಆಗ ತಾನೇ ಇಂಗ್ಲೆಂಡಿಂದ ಹಿಂದಿರುಗಿದ್ದ ಶ್ರೀ ಎ.ಸಿ.ದೇವೆಗೌಡರು ಹೆಡ್ ಮಾಸ್ಟರು: ಸಿವಿಕ್ಸ್‌ಗೆ ಶೇಷಯ್ಯಂಗಾರ್. ಇಂಗ್ಲಿಷ್‌ಗೆ ಸಿ.ಡಿ.ಗೋವಿಂದರಾಯರು ಆರ್.ರಾಮ ಚಂದ್ರರಾಯರು. ಹಿಸ್ಟರಿ - ಜಾಗ್ರಫಿಗಳಿಗೆ ಬಿ.ಎಲ್.ಆರ್, ಎಸ್.ನಾರಾಯಣರಾವ್, ಗಣಿತಕ್ಕೆ ಬೀಜಗಣಿತದ ಕರ್ತೃ ಶ್ರೀ ಎಲ್.ಕೃಷ್ಣರಾಯರು. ಪಿ.ವಿ.ಎಸ್., ಎಸ್.ವಿ.ಎಸ್., ಫಿಜಿಕ್ಸ್‌ಗೆ ಟಿ.ಎಸ್.ಎಸ್.ಆರ್. ಎಂ.ಎ.ಕೆ. ಕೆಮಿಸ್ಟ್ರಿಗೆ ರಾಮರಾವ್‌ನಾಡಿಗ್, ಎನ್.ಪಿ, ಬಯಾಲಜಿಗೆ ಎಂ.ಎ.ಆರ್. ಕನ್ನಡಕ್ಕೆ ಶ್ರೀ ಬಸವಯ್ಯನವರು. ಭರ್ಮೆಗೌಡರು ಕಣ್ಣವ್ವ ... ಇಲ್ಲಿ ಮಿಡಲ್ ಸ್ಕೂಲಲ್ಲಿದ್ದಷ್ಟು ಬಂಧನಗಳಿಲ್ಲ. ಅರಿತವರಿಗೆ ಸ್ವಾತಂತ್ರ - ಬಲಿತವರಿಗೆ ಸ್ವಚ್ಛಂದ!

ಈಗ ಕಂಠ, ತಿಮ್ಮಣ್ಣ, ನಾಗರಾಜ ಮತ್ತು ನನ್ನ ಬಾಲಮಂಡಲಿಯವರು ಕ್ರಮೇಣ ಮಾಯವಾಗಿ ಅವರ ಸ್ಥಾನವನ್ನು ರಾಘಣ್ಣಗಳು, ಹನುಮಂತಗಳು, ನಾಣಿಗಳು, ಪ್ರಹ್ಲಾದಗಳು ಜಯರಾಮ, ತೋಪಯ್ಯ ನಾರಾಯಣಪ್ಪ ರಾಮಾ ಜೋಯ್ಸ್ (ಈಗಿನ ಹೈಕೋರ್ಟ್ ಜಡ್ಜ್) ಆಕ್ರಮಿಸಿಕೊಂಡರು. ಲೋಕಲ್ ಸ್ಕೌಟ್ಸ್ ಅಸೋಸಿಯೇಷನ್ನಿನಲ್ಲಿ ನಮ್ಮ ಸ್ಕೂಲಿನವರೇ ಆದ ಧರ್ಮಸಿಂಗ್, ಬಸರ್ವಾಸಿಂಗ್ ಠಾಕೂರ್ ಸಿಂಗ್, ತಿಮ್ಮು, ಗುರು, ಸಿ.ಎನ್.ರಾಮಚಂದ್ರ (ಈಗಿನ ತಾತಾ ಇನ್‌ಸ್ಟಿಟ್ಯುಟ್ ಡೈರೆಕ್ಟರ್ ಪ್ರೊ. ಸಿ.ಎನ್.ಆರ್.ರಾವ್) ಎಲ್ಲರು ತುಂಬಿದ. ಈ ಸ್ನೇಹ ನಾವೆಲ್ಲ ಇಂಟರ್ ಮೀಡಿಯೇಟ್ ಮುಗಿಸುವವರೆಗೂ ಇದ್ದದ್ದು. ಸಾಗರದ ಕೆ.ವಿ.ಸುಬ್ಬಣ್ಣ ಕಾಲೇಜಲ್ಲಿ ಜೊತೆಗೇಗೋದಿದವರು.

ಬ್ಯಾಡ್ ಮಾಸ್ಟರ್ ಮರಿದಾಸ್, ಟಿ.ಎ.ಆಗಿದ್ದ ಶೇಷಗಿರಿರಾವ್, ಗುರುನಾಥ್ ಇವರುಗಳು ಬಿ.ಪಿ.ಕೆ. ನಮ್ಮ ಮೇಷ್ಟ್ರುಗಳು ಕ್ವಿಕ್ ಮಾರ್ಚ್, ಸ್ಲೋಮಾರ್ಚ್, ಮಾರ್ಚ್ ಫಾಸ್ಟ್, ಬ್ಯೂಗಲ್ ಬೇಸ್‌ಡ್ರಂ, ಕೆಟಲ್‌ಡ್ರಂ ಎಲ್ಲವನ್ನು ಕಲಿಸಿದ ನಮ್ಮ ದಾಸ್ ಜುಲು, ಕಾಂಗೊ ಆಲ್ಜೀರಿಯಾ ನೈಜೀರಿಯಾ, ಮೊಂಬಾಸ ಭಾಷೆಗಳಿಂದ ತೋರುತ್ತಿದ್ದ ಸುಳ್ಳು ಪಳ್ಳು ಎಲ್ಲ ಸೇರಿಸಿ ಹಾಡು ಕಟ್ಟಿ 'ಬೂಕ ತಂಬೂ ಲೂಮೆ ಲಾಯೋ' ಹೇಳಿಸಿ ಟೂರು, ಟ್ರಿಪ್ಸ್, ಹೈಕು, ಹಡೆಬಿಟ್ಟೆ ಎಕ್ಸ್‌ಕರ್ಷನ್ ಎಂದು ಎಲ್ಲೆಲ್ಲಿಗೋ ಕರೆದುಕೊಂಡು ಹೋಗುತ್ತಿದ್ದರು.

ಊರಲ್ಲಿ ಅಧಾರ್ಮಿಕತೆ ಅವಿವೇಕಗಳು ಇದ್ದಿರಬಹುದು ಆದರೆ ಧಾರ್ಮಿಕತೆ ಸಾತ್ವಿಕತೆಗಳು ಇದ್ದ ಆಸ್ತಿಕರ ಮನೆಗಳಲ್ಲಿ ತಾಯಕಣ್ಣದಕೆ ರಕ್ಷಣೆ, ಭಯದಂಡನೆಗಳಿದ್ದ ಮನೆಯ ಮಕ್ಕಳಿಗೆ ಅಸತ್ಯ ಅಧರ್ಮ, ದಗ, ಮೋಸ, ಅನ್ಯಾಯಗಳ ಸೋಂಕು ತಗಲುತ್ತಿರಲಿಲ್ಲ. ಅಂತಹವು ಕಿವಿಗೆ ಬಿದ್ದರೂ ಇವುಗಳಿಗೆ ಅದು ಅರ್ಥವಾಗುತ್ತಲೂ ಇರಲಿಲ್ಲ. ಆಸಕ್ತಿ ಹುಟ್ಟುತ್ತಲೂ ಇರಲಿಲ್ಲ. ಅದಕ್ಕೆ ಕಾರಣ ಅವರ ವಾಸ ಸ್ಥಳಗಳ ಆಸುಪಾಸಿನಲ್ಲಿದ್ದ ಗುಡಿ-ಗುಂಡಾರಗಳು ಮತ್ತು ಮಠಮಂದಿರಗಳು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ವೈಕುಂಠೇಕಾದಶಿ, ಮುಕ್ಕೋಟಿ ದ್ವಾದಶಿ, ಮಾಘ ಶುದ್ಧ ಹುಣ್ಣಿಮೆಯ ರಥೋತ್ಸವಗಳು, ಅರ್ಚಕ ಅನಂತ ರಾಮಯ್ಯಂಗಾರ್ಯರು ಶ್ರೀ ಸ್ವಾಮಿಯವರುಗಳಿಗೆ ಮಾಡುತ್ತಿದ್ದ ಅಲಂಕಾರಗಳು, ರಾಜಬೀದಿ ಉತ್ಸವ, ಸೂರ್ಯವಾದ್ಯ-ಮಕರ ತೋರಣ ಪತಾಕೆಗಳು, ಅದೇ ರೀತಿಯ ಭೀಮೇಶ್ವರ ಮತ್ತು ದುರ್ಗಾಂಬದೇವಾಲಯಗಳ ಉತ್ಸವಗಳು, ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಕಾಲದ ಅಹೋರಾತ್ರಿ ಭಜನೆ - ಶಂಕರ ಜಯಂತಿಗಳು ಕಲ್ಲುಮಠದ ಮಧ್ವ ನವಮಿ, ಕೃಷ್ಣರಾಜಪುರದ ಸಂಜೀವಾಂಜ

ನೇಯದೇವಾಲಯದ ಅಕ್ಷತೃತೀಯ - ವ್ಯಾಸರಾಜ ಮಠದಲ್ಲಿ ಶ್ರೀಸಂಸ್ಥಾನ ಮೊಕ್ಕಾಂ ಹೂಡಿದ್ದ ಕಾಲದಲ್ಲಿ ನಿತ್ಯ ಕಟ್ಟಲೆಗಳು, ರಾತ್ರಿ ತೊಟ್ಟಿಲು ಪೂಜೆ ಇವೆಲ್ಲ ಆಸ್ತೀಕರ ಮನೆ-ಮಕ್ಕಳನ್ನು ತೋಳದ ಬಾಯಿಗೆ ಬೀಳದಂತೆ ಕಾಪಾಡುತ್ತಿದ್ದುವು.

ಶಂಕರ ಜಯಂತಿ ಉತ್ಸವ ಮರವೆಯಾಗದ್ದು. ಇಲ್ಲಿ ಸ್ಮಾರ್ತರು ನಡೆಯಿಸುತ್ತಿದ್ದ ಉತ್ಸವ ಪೂಜೆ, ಭಜನೆಗಳಿಗೆ ಬಾರದಿದ್ದ ಮಾಧ್ವರು ಸಂತರ್ಪಣೆಗೆ ಮಾತ್ರ ತಪ್ಪುತ್ತಿರಲಿಲ್ಲ. ಆದರೆ ತಮ್ಮ ಮಠ ದೇವಸ್ಥಾನಗಳಲ್ಲಿ ನಡೆಯುವ ಆರಾಧನೆ-ಮಧ್ವನವಮಿಗಳಿಗೆ ಉತ್ಸವಕ್ಕಾಗಲಿ ಊಟಕ್ಕಾಗಲೀ ಸ್ಮಾರ್ತರನ್ನು ಸೇರಿಸುತ್ತಿರಲಿಲ್ಲ. ಸ್ಮಾರ್ತ ಮಾಧ್ವರಲ್ಲಿ ಇದೊಂದು ಶೀತಲಯುದ್ಧ ಇಲ್ಲಿ. ವಿಶಿಷ್ಟಾದ್ವೈತಿಗಳ ಸಂಖ್ಯೆ ಇಲ್ಲಿ ಕಡಿಮೆ. ಅವರು ಯಾವುದಕ್ಕೂ ಬರುತ್ತಿರಲಿಲ್ಲ.

ಲಕ್ಷ್ಮೀನಾರಾಯಣ ದೇವಾಲಯ ಹಳೆಯ ಕಾಲದ್ದು. ಅದರ ಮುಂದೆ ಇಪ್ಪತ್ತು ಅಡಿ ಎತ್ತರದ ಷಣ್ಮೂತಿಯ ಒಂದು ಏಕಶಿಲೆಯ ಗರುಡಗಂಭವಿದೆ. ನೆಲದ ಮೇಲೆ ಎರಡು ಅಡಿಗೂ ಎತ್ತರದ ಕಲ್ಲಿನ ನೆಲಗಟ್ಟಿದ್ದು ಇದರ ಮೇಲೆ ಕಬ್ಬಿಣದ ಪಟ್ಟಿಯಿಂದ (ಬಹುಶಃ ಬಾಲ್ ಅಂಡ್ ಸಾಕೆಟ್ ತರಹ ಇರಬಹುದು) ಗರುಡಗಂಭವನ್ನು ಕೂರಿಸಿದ್ದಾರೆ. ಕಂಭದ ಪಕ್ಕದಲ್ಲಿ ಮೇಲಿನವರೆಗೂ ಏರಲು ಮೂಲೆ ಗಲ್ಲುಗಳನ್ನು ಕೊರೆದಿದ್ದಾರೆ. ಕೊನೆಯಲ್ಲಿ ಉಕ್ಕಿನ ಸ್ಥಾವರವಿರುವ ದೀಪ ಉರಿಸಲು ಬೇಕಾದ ಒಂದು ವ್ಯವಸ್ಥೆ ಅಲ್ಲಿ ಮಾಡಿದ್ದಾರೆ. ಕಾರ್ತೀಕದಲ್ಲಿ ಅಥವಾ ಕಾರ್ತೀಕ ಇದ್ದ ದಿನ ನಮ್ಮ ರಂಗಅಚ್ಚು ಯಾರಾದರೂ ಮೇಲಿನವರೆಗೂ ಏರಿ ಹೋಗಿ ಅಲ್ಲಿ ಎಣ್ಣೆಯಲ್ಲಿ ಅದ್ದಿ ನೆನೆದಿರುವ ಬಟ್ಟೆಯ ಕೋಡುಬಳೆ ಸಿಕ್ಕಿಸಿ ದೀಪ ಹತ್ತಿಸಿ ಬರುತ್ತಾರೆ. ಊರಿಗೆ ಎಲೆಕ್ಟ್ರಿಕ್ ದೀಪ ಬರುವುದಕ್ಕೂ (1935) ಮುಂಚೆ ಈ ದೀಪ ಅಥವಾ ದೊಂದಿಯು ಬೀದಿಯ ಎರಡೂ ಪಾರ್ಶ್ವಗಳಿಗೂ ಬೆಳಕು ಬೀರುತ್ತಿದ್ದುದು ಮಾತ್ರವಲ್ಲದೆ ದೇವಸ್ಥಾನದಲ್ಲಿ ಏನೋ ಕಾರ್ಯಕ್ರಮವಿದೆ ಎಂದು ದೂರದವರಿಗೂ ಸೂಚನೆ ಕೊಡುತ್ತಿತ್ತಂತೆ.

ಶಂಕರ ಜಯಂತಿಯೂ ಹೀಗೇನೇ ನಡೆಯುತ್ತಿತ್ತು. ರಾತ್ರಿ ರಾಜಬೀದಿ ಉತ್ಸವ ಈ ಸಮಾರಂಭದ ಅತಿ ದೊಡ್ಡ ಆಕರ್ಷಣೆ. ಎಲ್ಲೆಲ್ಲೂ ದಣದಣ ಉರಿಯುತ್ತಿರುವ ಪೆಟ್ರೋಮ್ಯಾಕ್ಸ್‌ಗಳು: 'ರಾಮನೀ ಸಮಾನಮೆವರು', 'ನಗುಮೊಮ್ಮು', 'ಪಾಹಿರಾಮಚಂದ್ರರಾಘವ', 'ರಾಮನನ್ನು ಬ್ರೋವರಾ' 'ಬ್ರೋಚೇವಾರೆವರುರಾ' ಮೊದಲಾದ ಕೀರ್ತನೆಗಳನ್ನು ಉತ್ಸವದುದ್ದಕ್ಕೂ ನುಡಿಸುವ ಜೋಡಿ ನಾಗಸ್ವರಗಳು ಸ್ಪರ್ಧೆಕಟ್ಟಿ ಬಜಾಯಿಸುವ ಡೋಲಿನ ಜೋಡಿ ಅವರ ಹಿಂದೆ ವಿವಿಧ ವಾದ್ಯಗಳನ್ನು ಹೊಂದಿರುವ ಭಜನಮಂಡಲಿ ಅದರ ಹಿಂದೆ ಮಡೀವಸ್ತ್ರಗಳನ್ನು ಧರಿಸಿ ತ್ರಿಪುಂ ರುದ್ರಾಕ್ಷಿ ಹಾಕಿದ ಕುಂಕುಮಾಂಕಿತರಾದ, ಅಧ್ಯಯನಕಾರರು, ವಾದ್ಯಾರು, ವೇ। ಬ್ರಂ। ಶ್ರೀ। ಗುರುಮೂರ್ತಿಶಾಸ್ತ್ರಿಗಳು, ದೊಡ್ಡ ಚಿಂತಾಮಣಿ ಶಾಸ್ತ್ರೀಗಳು ಮತ್ತವರ ಗ್ರೇಡಿನವರೇ ಆದ ವೇದವೇತ್ತರು! ಇವರು ಎರಡು ತಂಡ ಮಾಡಿಕೊಂಡು ನೀವು 'ಅಕ್ಕಿ ಹೆಬ್ಬಾಳು' ಪ್ರಬಂಧದಲ್ಲಿ ಬರೆದಿದೀರಲ್ಲ ಹಾಗೆ ಇವರೂ ಕೂಡ ತೈತ್ತಿರೋಪನಿಷತ್ತಿನಿಂದ ಆರಿಸಿಕೊಂಡ ಸ್ವಾಧ್ಯಾಯ ಪ್ರಶಂಸಾ ಶ್ಲೋಕಗಳನ್ನು ಒಂದು ತಂಡ 'ಋತಂಚ ಸ್ವಾಧ್ಯಾಯ ಪ್ರವಚನೇಚ' ಎಂದು ರಾಗವಾಗಿ ಹೇಳಿದರೆ ಅಷ್ಟೇ ರಾಗವಾಗಿ ಎದುರು ತಂಡ ಅದಕ್ಕೆ ಅನುಗಣನ ನೀಡುವಂತೆ ''ಸತ್ಯಂಚ ಸ್ವಾಧ್ಯಾಯರ ಪ್ರವಚೇನಚಾ ....'' ಎಂದು ಏರುಪುಟ ಹಾಕಿ ಕೊಡುತ್ತಿತ್ತು.

ಈ ಗುಂಪಿನ ಹಿಂದೆ ಇನ್ನೊಂದು ಭಜನೆಯ ತಂಡ ಶೃತಿ ಪೆಟ್ಟಿಗೆ - ಕಂಚಿನ ತಾಳಗಳು ಎಂದು ಮೂರು ಕಂಜೀರಗಳು, ಅಲ್ಲದೆ ಐವತ್ತು ಅರವತ್ತು ಜೊತೆ ಬರೀ ಕೈ ಚಪ್ಪಾಳೆ ಬಡಿಯುವ ಜನ. ಒದ್ದೆ ವಸ್ತ್ರಧರಿಸಿ ತ್ರಿಪುಂಡ್ರ ಧಾರಣೆ ಮಾಡಿ, ಒಂದು ಕಡೆ ಕುತ್ತಿಗೆ ವಾಲಿಸಿ ತಮ್ಮ

ಕಂಚಿನ ಕಂಠದಲ್ಲಿ:

''ಜಯ ಜಯ ಶಂಕರ ದೇವ ಶಿವಾ, ಜಯ ಮಾಂಪಾಲಯ ಸಾಂಬಶಿವಾ'' ಎಂಬ ಅಥವಾ ''ಜಯ ಜಯ ಶಂಕರಿ ಶ್ರೀ ಲಲಿತೆ ...... ಜಯ ಜಯ ತ್ರಿಪುರ ಸುಂದರಿ ಲಲಿತೆ .....'' ಎಂದು ಭಜನೆ ಹೇಳಿಕೊಡುತ್ತಾ ಬರುವಾ ಪಟಗುಪ್ಪೆ ನಾರಾಯಣ ಶಾಸ್ತ್ರಿಗಳು.

ಹೋದ ಸಾರಿ ಮಧ್ವನವಮೀಲಿ ಆ ಮಾಧ್ವರು ಜೋರಾಗಿ ಮೆರವಣಿಗೆ ಹೊರಡಿಸಿದ್ರಲಾ! ತಗೋ ಈ ಸಾರಿ ನಮ್ಮದೂ ....'' ''ಹಮ್ ಕ್ಯಾ ಜೀ ಬ್ರಾಮ್ ಕ ನಾಂಕೂ?'' (ನಾವು ಆ ಬ್ರಾಹ್ಮಣರಿಗೇನ್ರಿ ಕಮ್ಮಿ?) ಅಂತ ಈ ಹುಡುಗರ ಮೀಸೆ ತಿರುವಾಟ!

ಶನಿವಾರ ಶನಿವಾರ ಈ ದೇವಸ್ಥಾನದಿಂದ್ಲೇ ರಾಮ ಭಜನೆ ಹೊರಟು ಬೀದಿಲೆಲ್ಲಾ ಭಜನೆ ಮಾಡಿಕೊಂಡು ಪ್ರತಿ ಮನೆ ಬಾಗಿಲಿಗೂ ಹೋಗಿ ಗೋಲಕಕ್ಕೆ ದುಡ್ಡು ಹಾಕಿಸಿಕೊಂಡು ಇಂತಹ ಉತ್ಸವಗಳಿಗೆ ಫಂಡ್ ಕೂಡಿಸುತ್ತಿದ್ದರು. ಇಂತಹ ಭಜನೆಗಳಿಗೆ ಕುಳ್ಳೆ ನಾಗರಾಜ ಅವರಣ್ಣ ಕಂಠ ಗುರು ಇರಲೇಬೇಕು. ಗುರೂನ ಕಂಜರಿ ಹೊಡೆತ ಭರ್ಜರಿ. ಅವನೊಂದು ತರಹ ಮನುಷ್ಯ. ಅವನಿಗೆದುರಾಗಿ ಯಾರೂ ನಿಂತು ಸ್ಪರ್ಧಿಸಬಾರದು. ಆದರೆ ನಮ್ಮ ಅರುಣ-ರಾಜ ಬೇಕೆಂದೇ ಅವನ ಮುಂದೆ ಸ್ಪರ್ಧೆ ಹೂಡಿ ಬಾರಿಸಿದರೆ ಗುರೂಗೆ ಆವೇಶ ಬಂದು ಹೊಡೆತ ಇನ್ನು ಜೋರು ಮಾಡಿ. ಕಂಜೀರ ಒಡೆದು ಹಾಕಿದರೂ ಹಾಕಿದನೆ! ಇದರಿಂದ ಕೇಳೋರಿಗೆ ಇನ್ನೂ ಆನಂದ!

ಈ ಮೆರವಣಿಗೆ ಬೀದೀ ಮೇಲೆ ಬರೋದು ಕಾಣಿಸಿದ ಕೂಡಲೇ ಸೀತಾಲಕ್ಷ್ಮಿ, ಲಲಿತ, ಸುಶೀಲೆ, ಸರೋಜಮ್ಮ, ಸುಗಂಧಮ್ಮ ಸೋನಾರವರೆಲ್ಲ ಬೀದೀ ಕಸ ಹೊಡೆದು ಬಾಗಿಲಿಗೆ ನೀರು ಚಿಮುಕಿಸಿ ವಿಧಾವಿ ಚಿತ್ರವಾಗಿ ಬೀದಿಯಗಲಕ್ಕೂ ರಂಗೋಲೆ ಹಾಕಿ ದೇವರಿಗೆ ಆರರ ತಟ್ಟೆಗಳು ಹಣ್ಣುಕಾಯಿ ಎಲ್ಲ ಸಿದ್ಧ ಮಾಡಿಕೊಂಡಿರುತ್ತಿದ್ದರು.

ಮೆರವಣಿಗೆ ಊರಲ್ಲೆಲ್ಲಾ ಬಳಸಿ ದೇವಸ್ಥಾನಕ್ಕೆ ರಾತ್ರಿ 12 ಗಂಟೆಯ ವೇಳೆಗೆ ಹಿಂದಿರುಗಿದರೆ ಅಲ್ಲಿ ಮತ್ತೆ ಪೂಜೆ-ಭಜನೆ-ಪ್ರಾರ್ಥನೋತ್ಸವ ಅಷ್ಟಾವಧಾನ. ಸಂಗೀತ ಸೇವೆ. ಮಂತ್ರ ಪುಷ್ಪ, ರಾಜಾಶೀರ್ವಾದ ಮಂಗಳಾರತಿ ತೀರ್ಥ ಆದ ಮೇಲೆ ಅಲ್ಲಿದ್ದವರೆಲ್ಲರಿಗೂ ನದಿ ಮೆಟ್ಟಿಲ ಮೇಲೆ ಹುಳಿಯನ್ನ ಮೊಸರನ್ನ.

ಕೂಡ್ಲಿ ಅಕ್ಷೋಭ್ಯ ತೀರ್ಥಮಠ ಮಾಧ್ವರ ಸಾಂಸ್ಕೃತಿಕ ಕೇಂದ್ರ. ಅಕ್ಷತೃತೀಯ ಮಧ್ವನವಮಿ ಶ್ರೀ ರಾಮನವಮಿಗಳು ಇಲ್ಲಿಯೂ ನಡೆಯುತ್ತದೆ. ಆದರೆ ಫಾಲ್ಗುಣ ಮಾಸದಲ್ಲಿ ಮಾತ್ರ ಅದರಲ್ಲೂ ಶುಕ್ಲ ಪಕ್ಷದ ದ್ವಾದಶಿಯಿಂದ ಪೂರ್ಣಿಮಾ ರಾತ್ರಿಯವರೆಗೆ ಇಲ್ಲಿ ವಿಪರೀತ ಗದ್ದಲ. ಮಾಧ್ವ-ಸ್ಮಾರ್ತ ಬೇಧಗಳೇ ಇಲ್ಲದೆ ಬೀದಿ ಪಡ್ಡೆ ಬ್ರಾಹ್ಮಣ ಹುಡುಗರ ದಾಂಧಲೆ ಇಲ್ಲಿ ಹೇಳತೀರದ್ದು. ಊರಿಗೆ ಆದರಲ್ಲೂ ಈ ಬ್ರಾಹ್ಮಣರ ಬೀದಿಗೇ ಕಿರೀಟ ಕಟ್ಟಿದ ಕಾಮನ ಹಬ್ಬ ಇದಕ್ಕೆ ಕಾರಣ.

ಆ ಕಾಮನೋ! ಈಗ ನೆನೆದರೆ, ಅದೊಂದು, ದಕ್ಷಿಣ ಕನ್ನಡ ಜಿಲ್ಲೆಯ ಕಡೆಯಿಂದ ನೇರವಾಗಿ ಆಮದು ಮಾಡಿಕೊಂಡ ಒಂದು ಯಕ್ಷಗಾನದ ಬೊಂಬೆ. ಸೊಂಟದವರೆಗೆ ಮಾತ್ರ, ಇದರ ರಚನೆ. ತೊಡಿಸಿರುವ ಅಂಗರೇಖು ತಲೆಯ ಮೇಲಿನ ಪಾಗು ಎಲ್ಲ ಅದರದ್ದೇ! ಕೇದಗೆ ವರ್ಣದ ಮುಖ. ತಿದ್ದಿದ ಹುಬ್ಬು ಮೀಸಗಳು. ಹಣೆಯ ಮೇಲೆ ಅಂಗಾರ ಅಕ್ಷತೆಗಳು ಬಲ ಹಿಡಿಯಲ್ಲಿ ದವನ! ಕಳೆದ ವರ್ಷದ ಧೂಳು ಜಾಡಿಸಿ ಹೊರತಂದು ಅಲಂಕೃತ ಹಳೆಗಾಲದ ಕುರ್ಚಿಯಲ್ಲಿ ಕೂರಿಸಿ ಬಿದಿರು, ಬಣ್ಣದ ಕಾಗದಗಳಿಂದ ಮಂಟಪ ರಚಿಸಿ ಬೀದಿಗೇ ಅಡ್ಡಲಾಗಿ ಚಪ್ಪರ ವೇದಿಕೆ ಹಾಕಿ ನಾಲ್ಕು ದಿನಗಳ ಉತ್ಸವ!

ಆ ನಾಲ್ಕೂ ರಾತ್ರಿಯೂ ಬೀದಿಯಲ್ಲಿ ಅಸಾಧ್ಯ ಗಲಾಟೆ! ಯಾರು ಯಾವ ವೇಷ ಬೇಕಾದರೂ ಹಾಕಬಹುದು. ಯಾರನ್ನು ಬೇಕಾದರೂ ಚುಡಾಯಿಸಿ ಕಿಚಾಯಿಸಬಹುದು. ಸತಾಯಿಸಬ

ಹುದು. ರಾತ್ರಿಯಾದೊಡನೆ ಈ ಪುಂಡುಮುಂಡೇವೆಲ್ಲ ಸೇರಿ ಲೈಸೆನ್ಸ್ ತಂದ. ಅಣ್ಣಾಜಿಯನ್ನೂ ಲಬ್ಬಿ ಮೊದಲಾದವರನ್ನು ಮುಂದಿರಿಸಿಕೊಂಡು ಊರ ಮೆರವಣಿಗೆ ಶಾರದಸ್ತು (ಷಹರ್‌ಗಸ್ತು) ಹೋಗಿಬರಬೇಕು. ಲೌಡ್‌ಸ್ಪೀಕರ್ ಆಗಿನ್ನೂ ಹೊಸದು. ಅದರ ಮುಂದ ಬೀದಿಯ ಲತಾ-ಉಷಾ-ಆಶಾ ಮಂಗೇಶ್ಕರರು, ರಫಿ-ಮುಕೇಶ್-ಮನ್ನಾಡೇಗಳೂ ಹಾಡಿದ್ದೂ ಹಾಡಿದ್ದೆ! ''ಏ ಜಿಂದಗಿ ಉಸೀಕೆ ಹೈ'' ಅಂತ ಹೆಣ್ಣು ಧ್ವನಿ ಕೇಳಿಸಿದರೆ ಶಾಂತು ಹೇಳ್ತಿದ್ದಾಳೆ ಎಂದು ಕಿಶೋರಯರ ಕುಣಿತ ಅವರವರ ಮನೆಗಳಲ್ಲಿ! ''ಖಾಮೋಷ್ ಹೈ ಜಮಾನಾ .... ಆಯೆಗಾ ಆಯೆಗಾ ...... ಆನೇವಾಲಾ'' ಎಂದು ಲತಾನ ಅನುಕರಣೆ ಕೇಳಿಸಿದರೆ ಬನ್ರೋ ಹೋಗೋಣ ಚಪ್ರಕ್ಕೆ ನಮ್ ಕಿಟ್ಟ ಹೇಳ್ತಿದ್ದಾನೆ .... 'ಮಹಲ್'ದು .... ಎಂದು ಜನ ಚಪ್ಪರದೆಡೆಗೆ ಓಟ ....

ಹತ್ತೂ ಗಂಟೆಯ ಮೇಲೆ ಚಪ್ಪರದಲ್ಲಿ 'ದೇವದಾಸಿ ''ಧರ್ಮ ರತ್ನಾಕರ' ಗಳ ನಾಟಕಗಳು ಕಸ್ತೂರಿಯವರ 'ಗಗ್ಗಯ್ಯನ ಗಡಿಬಿಡಿ' 'ಕಾಡಾನೆ' 'ವರಪರೀಕ್ಷೆ'ಗಳ ಅಭಿನಯ.

ಈ ಕಾಲಕ್ಕೂ ಹತ್ತಿಪ್ಪತ್ತು ವರ್ಷಗಳ ಹಿಂದೆ ಅಂದಿನ ದಿನಗಳ ಉತ್ಸಾಹೀ ತರುಣರಾಗಿದ್ದ ಚಂದಾಚಾರ್, ಅಪ್ಪಾಣ್ಣಾಚಾರ್, ಗದ್ದೆ ರಾಮಚಂದ್ರಾಚಾರ್, ಸುಬ್ಬಣ್ಣಾಚಾರ್ ಸೇತುಮಾಧವಾಚಾರ್‌ಗಳು ಈ ಕಾಮನ ಹಬ್ಬ ನಡೆಸುತ್ತಿದ್ದರಂತೆ. ನಗದಿ ಆಚಾರ್ಯರು, ಮದ್ದೂರಾಯರು ಇವರ ಹಿಂದೆ! ರೂಪಾಯಿಗೆ ಬಲು ಬೆಲೆಯಿದ್ದ ಆ ಕಾಲದಲ್ಲಿ ಚಂದಾವಸೂಲು ಮಾಡಿ ಬಂದ ಹಣದಲ್ಲಿ ಇವರು ಹುಬ್ಬಳ್ಳಿ, ಧಾರವಾಡಗಳಿಗೆ ಹೋಗಿ ಅಲ್ಲಿಂದ ತಾಫೆ ಜಾನಕಿಯರನ್ನು ಕರೆತಂದು ಇಲ್ಲಿ ಕುಣಸುತ್ತಿದ್ದರಂತೆ! ಕಾರಂತರ 'ಮರಳಿ ಮಣ್ಣಿಗೆ'ಯಲ್ಲಿ ಬರುವ ಚಂದು ರಾಜೀವಿಯರು ಮಾಡಿದಂತೆ ಇಲ್ಲೂ ಈ ಗಣಿಕೆಯರು 'ದೌಲತ್ ಜಾದಾ' ಮಾಡುತ್ತಿದ್ದರಂತೆ.

ಈ ತಂಡಕ್ಕೆ ಮಧ್ದೂರಾಯರೇ ತುಂಡರಸರು. ಅವರ ಧೈರ್ಯ, ಸಾಹಸ, ಯಾವುದಕ್ಕೂ ಸೈ ಎಂಬ ಛಾತಿ. ಬಾಯಿ ತೆರೆದರೆ 'ಬೇಖೂಬ್', 'ಭಾಂಚೋದ್' ಎಂಬ ಅರೆ ಮುತ್ತುಗಳನ್ನುದುರಿಸುವ ಸಿದ್ಧಿ ಸಾಧನೆಗಳು! ಇದರಿಂದಾಗಿ ಅವರು ಈ ಬೀದಿಗೇ ಒಬ್ಬ ಮಹಾರಾಜ! ಬೀದಿಯ ಜನಕ್ಕೆ ಅವರ ಕುರಿತಾಗಿ ಅಷ್ಟೇ ಭಯ-ಭಕ್ತಿ! ಕಾಮನ ಚಪ್ಪರಕ್ಕೆ ಅವರ ಸವಾರಿ ಆಗಮಿಸಿತೆಂದರೆ ಸಾಕು ಅಲ್ಲಿದ್ದ ವಂದಿ ಮಾಗಧರು- ''ಸದ್ದೂ -ಸದ್ದು ..... ಮಧ್ದೂರಾಯರು ಈಗ ಕಾಮನ್ನ ಹೊಗಳತಾರ ....'' ಎಂದು ಘೋಷಿಸಿ ಸದ್ದಡಗಿಸಿದರೆ - ಅವರು ಮುಂದೆ ಬಂದು ಬಲತೋಳೆತ್ತಿ

'ಸಿರಿಯರಸು ಕರಿರಾಜವರದ ಶ್ರೀಹರಿಗೆ ನೀವರ ಕುಮಾರಕನಾದ ಮಾರ ಕುಲ ನಿಧಿಯೇ ...' ಎಂದು ದನಿ ಏರಿಸಿದರೆ ಸುತ್ತಲ ಜನ 'ಭಾಪುರೇ' ಎನ್ನಬೇಕು. ಅವರು ಮುಂದೆ ಮತ್ತ 'ನಿನ್ನ ಮೆರವಣಿಗೆಯೇಂ ಪೇಳಲೀ ....? ಎಂದು ಅಪಾಸ್ಟ್ರಫಿ ಮಾಡಿ ಮತ್ತೊಮ್ಮೆ 'ಭಾಪ್ರೇ' ಎನ್ನಿಸಿಕೊಂಡು ಮುಂದುವರಿಸುತ್ತಿದ್ದರು.

''ಶಾರ್ವರಿಯ ವರುಷದಲಿ ಫಾಲ್ಗುಣಾ ಮಾಸದಾ ಸರಿರಾತ್ರಿಯೊಳು ನಿನ್ನ ಮೆರವಣಿಗ ಪೋಗಿರಲು ಶಿವಮೊಗ್ಗಿಪುರದಲ್ಲಿ ಇರುತಿರುವ ಬಣಜಿಗರು ಬರಿ ಬ್ರಾಂಬರಿಪರೆಲ್ಲ ಪರಮಾನ್ನ ತಿಂಬುವರು ಕರಸೋತು ತಾವೆಲ್ಲ ತರತರನೆ ನಡುಗುತ್ತ ಕಾರಲಾರದೆ ಅಲ್ಲಿ ಯಾವತ್ತು ಬಿರುದುಗಳ ಸರಿ ಸೂರೆಯ ಮಾಡಿ.... ಎಂದು ಏಳಂಗರೆಯವರೆಗೂ ಬರುವಷ್ಟು ಉದ್ದದ ಆ ಕಾಮನ ಹೊಗಳಿಕೆಯನ್ನು ಮುಂದುವರಿಸುತ್ತಿದ್ದರು. ನೆರೆದವರ ಹರ್ಷೋದ್ಗಾರಗಳು ಉಕ್ಕಿಹರಿಯಬೇಕು!

ಒಂದೊಮ್ಮೆ ಈ ಉತ್ಸವದಲ್ಲಿ ಬ್ರಾಹ್ಮಣರಿಗೂ ಪೇಟೆಯ ಬಣಜಿಗರಿಗೂ ಏನೋ ಮಾತು ಬಂದು ಮಾರಾಮಾರಿಯಾಗಿ ಕಾಮಣ್ಣ ಕೋರ್ಟುಕಟ್ಟೆ ಹತ್ತಿ.... ಒಂದೇ ಎರಡೇ ಮಧ್ದೂರಾಯರೂ ಬಿಟ್ಟಾರೆಯೇ ಪೇಟೆಯವರ

ಹೆಣ ಬೀಳಿಸಿ ಗೆದ್ದು ಕೊಂಡೇ ಬಂದು ಬಿಟ್ಟರು. ಅದರ ಕತೆಯೇ ಈ ಹೊಗಳಿಕೆಯ ವಸ್ತು! ಇದಕ್ಕೂ ಮುಂಚೆ ಈ ಯುದ್ಧಕ್ಕೆ ಹೋಗಿ ಸೋತು ಬಂದವರ ಹೆಸರು ಈ ಹೊಗಳಿಕೆಯಲ್ಲಿ ಬರುತ್ತದೆ.

ಕೃಷ್ಣಾಯ ಎಂಬವನು ಪೇಟೆ ಎಂಬುದು ಬಿಟ್ಟ. ಶಾಮಾವಧಾನಿಯ ನಾಮವೇ ಮುಳ ಗೋಯ್ತು. ಕೊಪ್ಪಳದ ಕೃಷ್ಣಾಚಾರ್ಯನ ಸಪ್ಪ ಳವೇ ಅಡಗೋಯ್ತು. ಕುಕ್ಕೆ ಸುಬ್ಬಾ ಭಟ್ಟ ದೇವರಳ್ಳಿ ಲಕ್ಕಿಯಾ ಮನೆಗ್ಹೋಗಿ ಬಿಕ್ಕಿ ಬಿಕ್ಕಿ ಅತ್ತ ....'' ಎಂಬ ಸಾಲುಗಳಲ್ಲಿ ಈ ಮಹನೀಯರ ಪರಾಭವ ಶರಣಾಗತ ಮನೋಭಾವದ ದನಿ ಇದೆ. ಗೆದ್ದು ಬಂದ ಮನ್ಮಥನ ಕಳೆ.

'ತುಟಿ ಕೆಂಪು ಮುಖ ಬಿಳುಪು, ಓರೆ ನೋಟ ಎದೆ ಹಾರೆ ತುಂಬ ಕ್ಯಾದಿಗೀ ಮೇಲ್ ಶಿರ್ ಪೇಷ್' ಇಂತಹ ಮನ್ಮಥನನ್ನು ಕರಿಯ ಕಂಬಳಿ ತಂದು ಕರಿ ರಾಜನನ್ನು ಪಂಚಕಶರ ರಾಜನನ್ನು ಸುರರಾಜನಂರಚಿಸಿ ಸವಾರ್ ಬಾರ್ ಪೋಲಿಸ್ ರೊಡಗೂಡಿ ದುರ್ಗಿಯ ಗುಡಿಯವರೆಗೆ ಮೆರವಣಿಗೆಯು ಮಾಡಬಹುದೆಂದು ಕೃಷ್ಣರಾಯರು ಬರೆದಾಗಲೆ ಫೈಸಲಂ ... ಎಂದು ಹೊಗಳಿದಾಗ ಈ ಜನ ಸಮುದ್ರ ಉಕ್ಕೇರಿ .... ಬಿಡಿ ...... ಅದನ್ನು ವರ್ಣಿಸಲೇ ಸಾಧ್ಯವಿಲ್ಲ ....

ಮದ್ದೂರಾಯರು ತೆಳುವಾದ ಬಿಳುಪು ಬಣ್ಣದ ಮನುಷ್ಯ. ಮುಚ್ಚು ಕಾಲರ್ ಷರಟು, ಬಂಗಾರದ ಕಫ್‌ಲಿಂಕ್ ಗುಂಡಿಗಳು ಕಚ್ಚೆಪಂಚೆ-ಮುಚ್ಚು ಕಾಲರ್ ಕೋಟು. ಮೇಲು ಖಾಚದಿಂದ ಹೊರಟ ಬೆಳ್ಳಿಯ ಸರಪಣಿಯ ತುದಿಯ ಗಡಿಯಾರ ಎಡ ಮೇಲು ಜೇಬಿನಲ್ಲಿ ಮಾಯ. ತಿದ್ದಿದ ಹುಬ್ಬು ಮೀಸೆಗಳು. ತಲೆಯ ಮೇಲೆ ಗೋಪಾದ ಶಿಖೆ. ಮಾರ್ವಾಡಿ ಪೇಟ. ಒಂದು ಫರ್ಲಾಂಗ್ ದೂರದಿಂದಲೇ ನಾನು ಬರುತ್ತಿದ್ದೇನೆ ಎಂದು ಸೂಚಿಸುವ ಹುಬ್ಬಳ್ಳಿ ಧಾರವಾಡಗಳ ಕಡೆಯ ಚಪ್ಪಲಿಗಳು. ಇಂತಹವರು ಬಂದರೆ ಬೀದಿಯ ಗಂಡಸರು, ಹೆಂಗಸರು ಮಕ್ಕಳಾದಿಯಾಗಿ ನಡುಗಿ ಹೋಗಬೇಕು' ಅವರಿದ್ದಿದ್ದೇ ಪೋಲಿಸ್ ಇಲಾಖೆಯಲ್ಲಿ. ಬೀದಿಯವರ ಊರವರ ಹೆದರಿಕೆಗೆ ಇನ್ನೇನ್ನುಬೇಕೂ! ತೂಕ ಹೆಚ್ಚು ಕಡಿಮೆ ಮಾಡುವ ಕದೀಮರಿಗೆ, ಹಾಲಿಗೇ ನೀರು ಬೆರೆಸುವ ಕದೀಮರಿಗೆ ಅವರು ಸಿಂಹ ಸ್ವಪ್ನ. ಅಷ್ಟೂ ಹಾಲು-ಮೊಸರನ್ನೂ ತಂದವನ ತಲೆಯ ಮೇಲೆ ಸುರಿದು ಕಳುಹಿಸುವುದು ಅವರದೊಂದು ಸ್ಪೆಷಾಲಿಟಿ. ಆದರೆ ಮನೆಯಲ್ಲಿ ಮಾತ್ರ ತುಂಬ ಸಾತ್ವಿಕರು, ಧಾರ್ಮಿಕರು, ಸ್ನಾನ ಮುಂಚೆ ಜಪತಪ ಎಲ್ಲ ನಡೆಸುವ ಆಸ್ತೀಕರು. ಎಲ್ಲರಿಗೂ ಎಲ್ಲಕ್ಕೂ ಅಂತ್ಯವೊಂದಿದೆಯಲ್ಲ! ಅವರಿಗೂ ಅದು ಬಂದು ವೃದ್ಧಾಪ್ಯ ಸಂಭವಿಸಿದಾಗ ಈ ದೊಡ್ಡವರು ಹಿಂದೆ ಸರಿದು, ಸಣ್ಣವರು ಮುಂದೆ ಬಂದು ದೊಡ್ಡವರಾದರು.

ಅದೇ ಕಾಮನನ್ನು ಈಗ ಪಲ್ಲಕ್ಕಿ ಲಕ್ಷ್ಮಣ ಮತ್ತು ಅದೇ ಮದ್ದೂರಾಯರ ಮಕ್ಕಳು ಹೊಗಳುತ್ತಾರೆ. ಮನ್ಮಥ ದಹನವಾದ ಮರುದಿನ ಆನೆಯ (ಮರದ್ದು) ಮೇಲೆ ಕೂರಿಸಿದ್ದ ಮನ್ಮಥನನ್ನು ಎತ್ತಿನ ಗಾಡಿಯಲ್ಲಿ ನಿಲ್ಲಿಸಿ ಜನಗಳೇ ಮೂಕಿಯನ್ನೆತ್ತಿ ಎಳೆದು ಊರೆಲ್ಲ ಮೆರವಣಿಗೆ ಮಾಡಿ ಅಲ್ಲಲ್ಲಿ ಹೊಗಳಿ ಹಿಂದಿರುಗುತ್ತಾರೆ. ಕಾಮನ ವೈಭವ ಮದ್ದೂರಾಯರ ಕಾಲಕ್ಕೇ ಮುಗಿಯಿತು ಎಂದು ಜನ ಐವತ್ತು ವರ್ಷ ಕಳೆದು ಹೇಳುವುದು ಬಿಟ್ಟಿಲ್ಲ.

ವಿಚಿತ್ರವೇನೆಂದರೆ ಮುಸ್ಲಿಮರು ರಂಜಾನ್ ಹಬ್ಬದಲ್ಲಿ ಎದೆ ಎದೆ ಹೊಡೆದುಕೊಂಡು ಹೇಳುತ ''ಅಲ್ಬಿದಾಯ್ ಕ್ಯಾ ಹುಸೇನ್ ಬನೇಷಹೀದಾ ಅಲ್ ಬಿದಾ'' ಎಂಬ ಹಾಡನ್ನೇ ಹೋಲುವ ಕನ್ನಡ ಹಾಡನ್ನು ''ಮನ್ಮಥಾನೇ ಸನ್ನಸೋನೇ ಸುಂದರಾನೇ ಸುಗುಣನೇ ....'' ಎಂಬ ಸೂತಕದ ಹಾಡು ಹಾಡಿ ''ಮಂಗಳಂ ಶುಭಮಂಗಳಂ ಜಯಮಂಗಳಂ ನಮ ಕಾಮಗೇ .... ಮಂಗಳಂ ಜಯಮಂಗಳಂ ಶುಭಮಂಗಳಂ ಮನ್ಮಥನಿಗೇ .....'' ಎಂದು ಮುಕ್ತಾಯ ಹೇಳಿ ಬೂದಿ ಹೊಯ್ದುಕೊಂಡು ಹೊಳೆಯಲ್ಲಿ ಸ್ನಾನ ಮಾಡಿ ಮನೆಗೆ ಹೋಗುತ್ತಾರೆ.

ದೊಡ್ಡ ಮನುಷ್ಯರು ತಮ್ಮ ದೊಡ್ಡತನದಲ್ಲಿ

ಬೀಗುತ್ತಿದ್ದರೆ ಸಣ್ಣವರು ತಮ್ಮ ಸಣ್ಣ ಸಣ್ಣತನವನ್ನು ಪ್ರದರ್ಶಿಸುತ್ತಾ ಮೂರೂ ಬಿಟ್ಟವರು ಊರಿಗೇ ದೊಡ್ಡವರೆಂಬುದನ್ನು ಕೈಯಾರೆ ಮಾಡಿ ತೋರಿಸುತ್ತ ಬಂದಿದ್ದರು. ರಾಮಣ್ಣರಿದ್ದಷ್ಟೇ ಕೀಚಕ ದುಶ್ಯಾಸನರೂ ಇದ್ದರು.

ಪ್ರತಿಗೃಹಸ್ಥರಿಗೂ ಹತ್ತರ ಮೇಲೇ ಸಂತಾನ ಭಾಗ್ಯ. ಕೇಳಿದವರಿಗೆ ತಮಗಿಷ್ಟು ಗಂಡು ಇಷ್ಟು ಹೆಣ್ಣು ಎಂಬುದನ್ನು ಎದೆಯುಬ್ಬಿಸಿ ಹೇಳಾಟ! ಹಡೆಯಲು ಮಡದಿಯರು ಅವರ ಸೇವೆ ಸೂತ್ರಕ್ಕೆ ಪ್ರತಿಮನೆಯಲ್ಲೂ ಮೂರು ನಾಲ್ಕು ಜನ ಪಾರೋತಿ ಮೂಕಾಂಬುಗಳು!

ಸ್ವಜಾತೀಯರ ಏಳಿಗೆಯನ್ನೇ ಸಹಿಸದೆ ಅವರ ಸುಖಸಂತೋಷಗಳಿಗೆ ಬೆಂಕಿ ಹಾಕುವ ಇಯಾಗೋ ಲೇಡಿ ಮ್ಯಾಕ್‌ಬೆತ್‌ಗಳೂ, ಮಾಟ ಮದ್ದು ಮಾಡಿಸುವ ಬರೀ 'ತ್ರೀ' ಅಲ್ಲ ತ್ರೀ ಹಂಡ್ರಡನ್ ಥರ್ಟಿತ್ರೀ ವಿಚಸ್‌ಗಳೂ ಇದ್ದು When Stall we all meet again? in thunder lightning or in rain? ಎಂದು ಕಣ್ಣಲ್ಲೇ ಸಂಭಾಷಿಸುವ ಕುಂಠಣ ಕುಂಠಿಣಿಯರೂ ಇದ್ದರು. ಹುಡುಗಿಯೊಬ್ಬಳ ಮದುವೆಯಾಗದ ಕಾಲದಲ್ಲಿ ಅವಳ-ಅವಳ ತಾಯಿತಂಗಿಯರ ಕುರಿತ ಕೆಟ್ಟ ಕತೆಗಳನ್ನು ಹಬ್ಬಿಸಿ ಆ ಮದುವೆ ನಿಲ್ಲಿಸಿ ಗುಟ್ಟಾಗಿ ಸಂತೋಷಪಡುವವರಿಗೇನೂ ಇಲ್ಲಿ ಕಡಿಮೆ ಇರಲಿಲ್ಲ. ಇದರಿಂದಾಗಿ ಎದೆಯೊಡಕೊಂಡವರು ಹೆಣ್ಣು ಗಂಡಾದಿಯಾಗಿ ತಾಯಿ ತುಂಗೆಯ ಪಾಲಾದ್ದಿದೆ.

ಏನೇ ಆಗಲಿ. ಆ ಕಾಲದವರ್‍ಯಾರೂ ಆ ಬೀದಿಯಲ್ಲಿದ್ದ ಒಂದು ದೊಡ್ಡ ಮನೆಯನ್ನು ಮರೆಯಲಾರರು. ನಾವೆಲ್ಲ ಕಣ್ಣು ಬಿಡುವ ಹೊತ್ತಿಗೆ ಆ ಮನೆಯ ಯಜಮಾನರಾದ ಹರಕೆರೆ ರಾಮಪ್ಪನವರು ಕಣ್ಣುಮುಚ್ಚಿ ಅವರ ಮಕ್ಕಳು ಸುಂದರಂ ಐಯ್ಯರ್ ಮತ್ತವರ ಸೋದರರ ಆಳ್ವಿಕೆ ಆರಂಭವಾಗಿತ್ತು. ಅದೊಂದು ಅತಿ ದೊಡ್ಡ ಮನೆ.

ಈ ಐದು ಜನ ಸೋದರರ ಸಂತಾನವಲ್ಲದೆ ರಂಗಸ್ವಾಮಿ, ಕೃಷ್ಣಸ್ವಾಮಿ, ಪುಡಿಕ್ಕಾಗಿ ಪೋತು ಎಂದೆಲ್ಲ ಐವತ್ತು ಅರವತ್ತು ಜನ. ಇವರೊಂದಿಗೆ ಒಂದು ಹತ್ತು ಜನ ವಿಧವೆ (ಪಾಟಿ)ಯರು. ಹರಕೆರೆಯ ಬಳಿ ಇವರ ಭೂಮಿ ಕಾಣಿ ತೋಟಪಟ್ಟಿಗಳು ಕೃಷ್ಣರಾಜಪುರ ಬೀದಿಯಲ್ಲಿ ಅವರ ಏಕೈಕ (ಊರಿನ) ಸಿನಿಮಾ ಥಿಯೇಟರು, ಕೃಷ್ಣಾ ಟಾಕೀಸ್. ಜಿಲ್ಲೆಯ ಬೇರೆ ಬೇರೆ ಸಣ್ಣೂರುಗಳಲ್ಲಿ ಕೃಷ್ಣಾ ಟೂರಿಂಗ್ ಟಾಕೀಸ್‌ಗಳು. ಬೀದಿಯಲ್ಲಿನ ಎಲ್ಲ ಪಡ್ಡೆಗಳಿಗೂ, ಥಂಬಿಂಪ್ರೆರ್ಷ ಗ್ರಾಜುಯೇಟುಗಳಿಗೆ ಈ ಥಿಯೇಟರುಗಳ ಸೀಟು, ಬುಕ್ಕಿಂಗ್ ಕೌಂಟರುಗಳೇ ಗತಿ.

ಅವರ ಮನೆಯೇ ಒಂದು ಅರಮನೆಯಷ್ಟು ದೊಡ್ಡದು. ಐವತ್ತು ಅರವತ್ತು ಹಸು-ಎಮ್ಮೆ ಪಶುಗಳಿರುವ ಒಂದು ದೊಡ್ಡ ಗೋಶಾಲೆ! ಅವುಗಳ ನಡುವೆ ಯಮನ ಕೋಣನಂತಿರುವ ಒಂದು ದೊಡ್ಡ ಗೌಡರ ದೊಡ್ಡಮ್ಮ! ಇವುಗಳಿಂದ ಬರುವ ಹಾಲು ಅವರ ಮನೆಗೆ ಸಾಲುತ್ತಿರಲಿಲ್ಲ. ಬೇರೆಡೆಯಿಂದಲೂ ಹಾಲು ಕೊಳ್ಳುತ್ತಿದ್ದರು. ಬೆಣ್ಣೆ ತೆಗೆದ ಮೇಲೆ ಬರುವ ಗಟ್ಟಿ ಮಜ್ಜಿಗೆಯನ್ನೂ ಬಂದು ಬೇಡಿದವರಿಗೆಲ್ಲ ದಾನ ಮಾಡಿಬಿಡುತ್ತಿದ್ದರು.

ಮುತ್ತುಗದೆಲೆ ಆಯಲು ಪದ್ಮಮ್ಮನೊಂದಿಗೆ ಹೋಗುತ್ತಿದ್ದ ನಾವು ನಾಲ್ಕೈದು ಬಾಲಕರ ತಂಡ ಹರಕೆರೆಯ ಬಳಿಯ ಅವರ ತೋಟಕ್ಕೆ ಹೋಗಿ ಅದೆಷ್ಟೋ ಕಸಿ ಮಾವಿನ ಕಾಯಿಗಳಿಗೆ ಕಲ್ಲು ಹೊಡೆದು ಬೀಳಿಸಿ ಉಪ್ಪು-ಕಾರ ಹಾಕಿ ತಿಂದು, ಮನೆಗೂ ತಂದು ಉಪ್ಪಿನಕಾಯಿ ಚಟ್ನಿಗಳನ್ನೂ ಹಾಕಿದರೆ, ಉಳಿದ ಕಾಯಿಗಳು ಹಣ್ಣಗೆ ಬಂದಾಗ ಅದರಲ್ಲೂ ಇಷ್ಟಿಷ್ಟು ಎಂದು ಪ್ರತಿ ಮನೆಗೂ ಬೇರೆಯಾಗಿಯೇ ಕೊಡುತ್ತಿದ್ದರು. ಪ್ರತಿ ಹುಣ್ಣಿಮೆಗಳಂದು ಅವರ ಮನೆಯಲ್ಲಿ ನಡೆಸುತ್ತಿದ್ದ ಸತ್ಯನಾರಾಯಣ ಪೂಜೆಯಲ್ಲಿ ವಿತರಣೆ ಮಾಡುತ್ತಿದ್ದ ಪ್ರಸಾದದಲ್ಲಿ ಹೇರಳವಾಗಿ ಕಲ್ಲುಸಕ್ಕರೆ, ಗೋಡಂಬಿ, ಉತ್ತತ್ತಿ ದ್ರಾಕ್ಷಿಗಳು ಇರುತ್ತಿದ್ದುದಲ್ಲದೆ ತುಪ್ಪ ತೊಟ್ಟಿಕ್ಕುತ್ತಿರುತ್ತಿತ್ತು. ಅದರ ರುಚಿ ನಮ್ಮ ನಾಲಿಗೆಗಳ

ಮೇಲಿಂದ ಇನ್ನೂ ಅಳಿಸಿಲ್ಲ!

ಅವರ ಸಿನಿಮಾದಲ್ಲಿ ಈ ಬೀದಿಯವರಿಗೆ ಛಾರ್ಜಿಲ್ಲ. ಹಳಬರಿಗೆ ಅಲ್ಲಿ ಸತೀ ಸುಲೋಚನಾ, ಧ್ರುವಚರಿತ್ರೆ, ಸತಿ ಅನಸೂಯ, ಚಿತ್ರನಳೀಯಂ, ಹರಿಶ್ಚಂದ್ರ, ಭಕ್ತ ಮಾರ್ಕಂಡೇಯ ಮಹಾನಂದ, ಮಾಯಾ ಮಚ್ಛೇಂದ್ರ, ದಕ್ಷಯಜ್ಞಗಳಿದ್ದರೆ ಸ್ವಲ್ಪ ಮಾಡರ್ನ್ಯ್ಸಟ್ಸ್‌ಗಳು ಸಂಸಾರ ನೌಕ, ವಿಶ್ವಮೋಹಿನಿ-ಮಳ್ಳೀಪೆಳ್ಳಿ, ರಾಜಭಕ್ತಿ ದೇವದಾಸ್, ಧರ್ತಿಮಾತ, ಪ್ರೆಸಿಡೆಂಟ್ ಮಂಜಿಲ್-ಔರತ್,, ಫ್ಯಾರ್ಷ, ಪಾಗಲ್, ಸಿಕಂದರ್, ಗೋಪಾಲಕೃಷ್ಣ, ಪುಕಾರ್, ಆಧ್ಮಿ ಅಮರ್ ಜ್ಯೋತಿ ದುನಿಯಾ ನ ಮಾನೆ ಸೂರದಾಸ ತುಲಸೀದಾಸ್ - ತುಕಾರಾಂ, ಜ್ಞಾನೇಶ್ವರ್, ಷಾದಿ, ದಿವಾಲಿಗಳನ್ನೂ ನೋಡುತ್ತಿದ್ದರು.

ಅದನ್ನು ಥಿಯೇಟರ್ ಎನ್ನುವುದಕ್ಕಿಂತ ಗೋಡೌನ್ ಎನ್ನುವುದೇ ಸೂಕ್ತ. ಲೋಯೆಸ್ಟ್ ಕ್ಲಾಸಗೆ ಒಂದಾಣೆ ಹನ್ನೊಂದು ಕಾಸು. ಇದು ನೆಲ. ಬೇಕಾದರೆ ಕೂತು ನೋಡಿ ಸಾಕಾಗಿ ಸೊಂಟ ನೋವು ಬಂದರೆ ಅಲ್ಲಿಯೇ ಮಲಗಿಯೂ ಬಿಡಬಹುದು. ಬೆಂಚಿಗೆ ಮೂರಾಣೆ ಹನ್ನೊಂದು ಕಾಸು. ಹೈಯೆಸ್ಟ್ ಕ್ಲಾಸ್‌ಗೆ ಐವಾಣೆ ಹನ್ನೊಂದು ಕಾಸು. ಇದು ಆಗಿನ ಕಾಲದ ಸೋಫಾ! ಒಂದೇ ಪ್ರೊಜೆಕ್ಟರಾದ್ದರಿಂದ ನಾಲ್ಕು ಇಂಟರ್‌ವಲ್‌ಗಳು. ಈವಾಗ ಕಡಲೆ ಕಾಯಿ, ಮಸಾಲೆ ಮಂಡಕ್ಕಿ ಬೀಡಾ-ಬೀಡಿ-ಬೆಂಕಿಪಟ್ಟಣಗಳಿಗೆ ದೇಹಬಾಧೆ ನಿವಾರಣೆಗೆ ಜನ ಎದ್ದು ಹೊರಗೆ ಹೋಗಬಹುದು. ಎದುರಿಗೇ ರಾಮಯ್ಯನ ಹೋಟಲು; ಮೂರುಕಾಸಿಗೆ ಖಾಲಿ ದೋಸೆ, ಆರು ಕಾಸಿಗೆ ಕಾಫಿ! ಪದ್ಮನಾಭ, ಸುಬ್ಬರಾಯ, ಕೃಷ್ಣರ ಸಪ್ಲೈ! ಎಲ್ಲಿ ಜಾಗ ಸಿಕ್ಕಿದರೂ ಅಲ್ಲಿ ಮೂತ್ರ ವಿಸರ್ಜನೆ. ವಾಸನೆ ಈ ಜನಕ್ಕೆ ಬರುತ್ತಲೇ ಇರಲಿಲ್ಲವೊ ಏನೋ. ಮತ್ತೆ ಥಿಯೇಟರ ಪ್ರವೇಶ ಉಳಿದ ಸಿನಿಮಾ ನೋಡಲಿಕ್ಕೆ! ಈಗ ಶಿವಸ್ವಾಮಿ-ಕೃಷ್ಣಸ್ವಾಮಿ-ರಂಗಸ್ವಾಮಿಯರು ಒಂದೊಂದು ಗೇಟಲ್ಲೂ ಪ್ರೇಕ್ಷಕರ ಮೇಲೆರಗಿ ಟಿಕೆಟ್ ಇಲ್ಲದೆ ಕದ್ದು ಬಂದವರನ್ನು ಹೊರಕ್ಕೆ ಕರೆದೊಯ್ದು ಒದ್ದೋಡಿಸುವ ಕೆಲಸ!

ಶಿವರಾತ್ರಿ ಮೊದಲಾದ ಹಬ್ಬದ ದಿನಗಳಲ್ಲಿ ನಾಲ್ಕು ಆಟ. ಇಡೀ ರಾತ್ರಿ, ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಲಕ್ಷ್ಮೀಬಾಯಿ, ಕಮಲಾಬಾಯಿ ಪಾರ್ಟು ಕೂಡಿದ್ದು. ಜನ ಜಾತ್ರೆ ನೆರೆದುಹೋಗುತ್ತಿತ್ತು.

ಊರ ಮಕ್ಕಳ ಆಟದ ಮೈದಾನದ ಕುಂಬಾರ ಗುಂಡಿಯಲ್ಲಿ ಚಿನ್ನಿದಾಂಡು, ಫುಟ್‌ಬಾಲ್. ಕ್ರಿಕೇಟ್ ಆಡದ ಮಕ್ಕಳೇ ಇರಲಿಲ್ಲ. ಇಲ್ಲಿಗೆ ಬರುವ ಸರ್ಕಸ್‌ಗಳೆಲ್ಲ ಡೇರಾ ಬಡಿದು ಆಟ ತೋರಿಸಿ ಅವರ ಆನೆ ಕುದುರೆ ಒಂಟೆಗಳು ಲದ್ದಿ ಹಾಕಿ ಹೋಗುವುದೂ ಇಲ್ಲಿಯೇ!

ಇನ್ನೊಂದು ಕಡೆ ಎತ್ತರವಾದ ನೆಲಗಟ್ಟಿನ ಮೇಲೆ ನಿಂತಿರುವ ಚಾಪೆಗಳ ಹಂದರವೇ ನಮ್ಮ ಕಾಲದ ಗೊಲ್ಲರ ರಂಗಪ್ಪನ ಜಿ.ವಿ.ಆರ್.ಥಿಯೇಟರು. ವರದಾಚಾರ್ಯರಿಂದ ಹಿಡಿದು ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಲಕ್ಷ್ಮೀಬಾಯಿ, ಕಮಲಾಬಾಯಿಯರು, ಗುಬ್ಬಿವೀರಣ್ಣ, ಗಂಗಾಧರರಾಯರು, ಸುಬ್ಬರಾಯರು. ಮುರಾರಾಚಾರ್, ಜಯಮ್ಮ, ಸ್ವರ್ಣಮ್ಮ, ಮಾಲತಿಯಮ್ಮ, ಕೊಟ್ಟುರಪ್ಪ ಮೊದಲಾದವರೆಲ್ಲ ನಾಟಕ ಮಾಡಿ ಹೋದ ತಾಣವಿದು.

ಈ ಕಂಪನಿ ಜನಗಳಿಗೆ ಅನ್ನದಾತ ಹೋಟಲು ಸೀತಾರಾಮಯ್ಯನದು. ಅಲ್ಲೊಂದು ಹಿಸ್ ಮಾಸ್ಟರ್ಸ್ ವಾಯ್ಸ್ ಗ್ರಾಮೋಫೋನು - ದೊಡ್ಡಬಾಯಿ ಹಾರನ್ನು ಅಶ್ವತ್ಥಮ್ಮನ ಕಾಲದ ಹಾಡಿನ ಪ್ಲೇಟುಗಳು. ಇದರಂತೆ ಪೇಟೆಯಲ್ಲಿ ಮಹಾಚಾಲುಕ್ಯ, ಪದ್ಮನಾಭ, ನಾಗಪ್ಪ, ಅನಂತಯ್ಯನ ಹೋಟಲುಗಳು. ಅವುಗಳಲ್ಲಿ ಕ್ಲೀನೆಷ್ಟ್, ನೀಟೆಷ್ಟ ಮತ್ತು ಟೇಸ್ಟೀಯೆಸ್ಟ್ - ನಾಟಕದ ಥಿಯೇಟರ ಬಳಿಯ ಸೀನಪ್ಪನ ಹೋಟಲು. ಜೇಬಲ್ಲಿ ಎರಡಾಣೆ ಇದ್ದರೆ ಸಾಕು ಹೊಟ್ಟೆ ತುಂಬುವಷ್ಟು ತಿಂಡಿ ಮತ್ತು ಕಾಫಿ!

ಈ ಲೋಟಸ್ ಐಲೆಂಡಿಗೆ ಎರಡನೇ ಮಹಾ

ಯುದ್ಧದ ಬಿಸಿ ತಗುಲಿದ್ದು 1945ರಲ್ಲಿ. ರೇಷನ್ ಗವರ್ನಮೆಂಟ್ ಸೊಸೈಟಿ. ಸ್ಟೋರ್ಸ್ ಎಂಬ ಹೆಸರುಗಳನ್ನು ಇದು ಕೇಳಿದ್ದು ಈಗಲೇ. ಅಕ್ಕಿ ಬೇಳೆಗಳ ದರ ಏರಿ- ಹೋಟಲುಗಳಲ್ಲಿ ಅಕ್ಕಿನಿ ಷೇಧಿಸಲ್ಪಟ್ಟು ಹೆಸರು ಬೇಳೆ ದೋಸೆ....ಬಾಯಲ್ಲಿಡಬಾರದು. ದೇಶಪ್ರೇಮ-ತ್ಯಾಗ, ಸ್ವಾತಂತ್ರ, ಚಳುವಳಿ, ಗೋಲಿಬಾರ್, ಜೈಲುಗಳೆಂಬ ಶಬ್ದಗಳನ್ನು ಕೇಳಿದ್ದು ಈಗಲೇ! ಹಳೆಗಾಲದವರು ಒಬ್ಬೊಬ್ಬರೇ ಸತ್ತೋ ಕೆಟ್ಟೋ ಕಣ್ಮರೆಯಾಗಲಾರಂಭಿಸಿದರು. ಇಲ್ಲಿಂದ ಹೊರಗೆ ಯಾರು ಹೋದರೋ ಹೊರಗಿಂದ ಯಾರು ಬಂದರೋ, ನೋಡುವುದಕ್ಕಾಗಲೀ, ಚಿಂತಿಸುವುದಕ್ಕಾಗಲಿ ಯಾರಿಗೂ ಪುರಸೊತ್ತಾದರೂ ಎಲ್ಲಿ! ಈ ಗದ್ದಲದಲ್ಲೇ ನಮ್ಮ ಬಾಲ ಮಂಡಲಿಯವರೂ, ಕಂಠ ನಾಗರಾಜ ಪ್ರಾಣೇಶ ತಿಮ್ಮಣ್ಣ- ಪಿಂಚನಿ ಗುರು ಮೊದಲಾದವರೂ ಈ ಊರಿಂದ ಕಣ್ಮರೆಯಾದರು. 1947ರಲ್ಲಿ ದೇಶಕ್ಕೆ ಬಂದ ಸ್ವಾತಂತ್ರ-48ರಲ್ಲಿ ನಮ್ಮ ಸಂಸ್ಥಾನಕ್ಕೂ (ಬೇ)ಜವಾಬ್ದಾರಿ ಸರ್ಕಾರ ಬಂದು ಮಹಾರಾಜರೂ, ದಿವಾನರುಗಳೂ ಹೋಗಿ ಊರ ತುಂಬ ನೂರಾರು ಬಿಳೀ ಟೋಪಿಯ ದಿವಾನರುಗಳೂ ದೇಶಭಕ್ತರೂ ಹುಟ್ಟಿಕೊಂಡರು. ಖಾಸಗಿ ಶಾಲೆಗಳೂ ಸಂಸ್ಥೆಗಳೂ ತಲೆ ಎತ್ತಿದವು. ತಾವು ದೊಡ್ಡವರೆನಿಸಿಕೊಳ್ಳುವ ಅಜ್ಞಾನ- ಅವಿವೇಕಗಳಿಂದ, ಇದ್ದವರನ್ನು ಹೊರಕ್ಕೋಡಿಸಿದ ಈ ಜನ ತಮ್ಮ ಮುಂದೆ ತೆವಳುವ ಹೊರಗಿನವರನ್ನು ಇಲ್ಲಿಗೆ ತಂದು ತುಂಬಿಕೊಂಡರು. ಇದರಿಂದಾಗಿ ಈ ಅಕ್ಕಿ ಹೆಬ್ಬಾಳು ಈ ಮಾಲ್ಗುಡಿ ತನ್ನ ಪ್ರಾಮುಖ್ಯತೆಯನ್ನು ಕಳೆದು ಕೊಳ್ಳಲಾರಂಭಿಸಿತು. ಯಾರೋ ಗೊತ್ತಿಲ್ಲದ ಒಬ್ಬ ಕಿಂದರಿ ಜೋಗಿ- ತಲೆಯೊಳು ಸಕ್ಕರೆ, ಕೈಯೊಳು ಬೆಲ್ಲ' ವಿದ್ದ ಈ ಮಾಯಾನಗರಿಯಲ್ಲಿ ನಮ್ಮನ್ನು ಕಣ್ಣು ಕಟ್ಟಿ ಒಂದು ಕಾಲದಲ್ಲಿ ತಂದು ಬಿಟ್ಟು ಹೋಗಿದ್ದ. ಇವೆಲ್ಲ ಅಲ್ಲಿ ಸುಖವಾಗಿದ್ದವು. ಈಗ ಅಯ್ಯೋ ಹೋಯಿತೆ ಆನಾಕ! ಅಯ್ಯೋ ಬಂದಿತೇ ಈ ಲೋಕ ಎಂದು ಇವೀಗ ಗೋಳಾಡಲಾರಂಭಿಸಿದವು. ಆ ಕಿಂದರಿ ಜೋಗಿ ಮಾತ್ರ ಪತ್ತೆಯೇ ಇಲ್ಲ.

ಗಾಜನೂರ ಬಳಿ ನದಿಗೆ ಅಡ್ಡಗಟ್ಟೆ ಆಯಿತು. ಹರಿವ ನೀರನ್ನು ಬೇರಡೆ ತಿರುಗಿಸಿದರು. ಹರಿದು ಬರುತ್ತಿದ್ದ ಮರಳು ನೀರು- ನಿಂತಿತು. ಉಳಿದ ನೀರು ಕೆಟ್ಟು ನಾರಲಾರಂಭವಾದರೆ ಮರಳ ರಾಶಿಯನ್ನು ಕಂಟ್ರಾಕ್ಟರುಗಳು ಕದ್ದೊಯ್ದರು. ಇಂದೀ ಮರಳ ರಾಶಿಯೇ ಬ[illegible] ದಾಗಲಾರಂಭಿಸಿತು. ಬೇರೆಡೆ ತಿರುಗಿದ್ದ ನೀರು ಅಲ್ಲಲ್ಲಾ ಚಲಿಸಿ ಅಲ್ಲಿನ ಕಚಡ - ಅಂತರಗಂಗೆಗಳನ್ನು ಹೊತ್ತು ತಂದು ಪುನಃ ಸೀಗೆ ಹಟ್ಟಿ ಬಳಿ ಆ ಅಂತರಗಂಗೆ ಕೊಳಕು ಕಚಡಗಳನ್ನು ನದಿಗೇ ಬಿಟ್ಟೂ ಆಯಿತು. ಅಂದೆಲ್ಲ ಸಂಜೆಯ ವೇಳೆ ವಿದ್ಯಾಕಾಂಕ್ಷಿ ವಿದ್ಯಾರ್ಥಿಗಳು ಅಲ್ಲಲ್ಲಿ ಓದುತ್ತ ಕುಳಿತಿದ್ದರೆ ಈಗ ಅವರಿಲ್ಲ. ಮರಳೂ ಇಲ್ಲ ಈಗ ಯುವಕರನ್ನು ಬೀರು-ಬಾರುಗಳಲ್ಲಿ ಕಾಣಬೇಕಾದದ್ದು ಸ್ಥಿತಿಯೂ ಬಂತು. ಕಣ್ಣು ಬಿಟ್ಟು ನೋಡಿದರೆ ಊರಿಗೇ ಊರೇ ಬದಲಾವಣೆಯಾಗುತ್ತ ನ[illegible] ದಿತ್ತು! ಹಳೆಯ ಮುಖಗಳೆಲ್ಲ ಅದೃಶ್ಯವಾಗುತ್ತ ನಡೆದಿದ್ದವು!!

ನಾವೀಗ ಹೈಸ್ಕೂಲು ದಾಟಿ ಕಾಲೇಜು ಸೇರಿ ಗೋಲ್ಡ್ ಸ್ಮಿತ್ತನ 'ಡೆಸರ್ಟೆಡ್ ವಿಲೇಜ್,' ಗ್ರೇ ಬರೆದ 'ಎಲಿಜಿ', ನಿಮ್ಮ 'ಹಗಲುಗನಸುಗಳು' ಕಾರಂತರ 'ಹಳ್ಳಿಯ ಹತ್ತು ಸಮಸ್ತರು' ಓದಿ ಎಚ್ಚೆತ್ತೆವು. ಈ ಪದ್ಯ ಪ್ರಬಂಧಗಳಲ್ಲಿನ ಪಾತ್ರಗಳೂ ಘಟನೆಗಳೂ ನಮ್ಮೂರಲ್ಲೇ ಇರುವುದನ್ನು ಗುರುತಿಸಿ, ಬೇಕಾದ್ದಾಗಲೀ ಈ ತಾಣ ಬಿಡಬಾರದು; ಈ ನೆಲದ ಸುಖದುಃಖಗಳಲ್ಲೇ ಬಾಳಿ ಬದುಕಿ ಇದೇ ನೆಲದಲ್ಲೇ ಒಂದಾಗಬೇಕು. ''ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪೀಗರೀಯಸೀ''! ಎಂದು ನಿಶ್ಚಯಿಸಿಕೊಂಡೆವು. ಬಾಲ ಮಂಡಲಿಯ ಬಾಲ್ಯ ಸ್ನೇಹಿತರು ದೂರವಾದರು. ಸೈಗಾಲ್-ಪಂಕಜ್-ಕಾಳಿಂಗರಾಯರನ್ನು ಅನುಕರಿಸಿ ಹಾಡುತ್ತಿದ್ದ ಸುಳ್ಳು-ಕತೆ, ನಾಟಕ, ಪದ್ಯ ಹೇಳುತ್ತಿದ್ದ ತಿಮ್ಮಣ್ಣ, ಭಾರತಿ, ರಾಘು,

ಸೀನ, ಬಾದಿ, ರಂಗ, ಎಲ್ಲ ಹೋಗಿಬಿಟ್ಟಿದ್ದಾರೆ. ಪ್ರತಿ ಶನಿವಾರ 'ಪೋತನಾ' ಸಿನಿಮಾದಂದ ನಾಗಯ್ಯ ಹಾಡಿದ್ದ ಸರ್ವಮಂಗಳ ಸೀತಾರಾಮ - ಹಾಡಿ ಭಜನೆ ಮಾಡುತ್ತಿದ್ದ ಮನೆ ಬೀಗ ಮಾತ್ರವಲ್ಲ; ಹಾಳೂ ಬಿದ್ದಿದೆ. ಆದರೂ ನಾವಿಲ್ಲೇ ಇರೋಣ!

ಮನೆಮನೆಗಳಲ್ಲಿ ಬಿಸಿಲು ಕಾಲದಲ್ಲಿ ಹಪ್ಪಳ-ಸಂಡಿಗಿ, ಅವಲಕ್ಕಿ ಅರಳು ಮಾಡಿಕೊಳ್ಳುತ್ತಿದ್ದ ಮಡಿ ಸುಮಂಗಲಿಯರೂ ಅಮಂಗಲಿಯರೂ ಇಲ್ಲ. ಕೋದೂಲೆಯ ಪಕ್ಕದಲ್ಲಿ ಮಡಿಯಲ್ಲಿ ಕುಳಿತು ಹುರಿಯುವ ಓಡಿಗೆ ಒಂದೊಂದು ಅಳತೆ ಹಸೀಬತ್ತಹಾಕಿ ಹುರಿಯುತ್ತಾ ಶಕುಂತಲ ಚರಿತ್ರೆ; ರತಿ ಕಲ್ಯಾಣ, ವೆಂಕಟೇಶ ಪಾರಿಜಾತ, ಶ್ರೀನಿವಾಸಕಲ್ಯಾಣಗಳಿಂದ ರಾಗವಾಗಿ ಹಾಡುತ್ತಿದ್ದ ಅನಸೂಯಬಾಯಿ, ಇಲ್ಲ. ನಮ್ಮೊಡನೆ ಮಾವಿನಕಾಯಿ ಮುತ್ತುಗದೆಲೆಯೊಳಗೆ ಬರುತ್ತಿದ್ದ ಉದ್ದನಕಾಲಿನ ಪದ್ದಿ (ಪದ್ದಮ್ಮ) ಪತ್ತೆ ಇಲ್ಲ. ಕೇಳಿದರೆ ಏನೋ ಹೇಳುತ್ತಾರೆ. ಏನೋ ಗೊಣಗುತ್ತಾರೆ. ಯಾರೂ ಸರಿಯಾಗಿ ಹೇಳಲೊಲ್ಲರು.

ಈ ಮಾಯಾ ಬಜಾರಿನ ಹುಡುಗರು ಅನ್ನ-ನೆಲೆ-ಅವಕಾಶಗಳಿಗೆಂದು ಈ ಊರೇ ಬಿಟ್ಟರು. ಒಮ್ಮೆ ರಾಷ್ಟ್ರಭಕ್ತರಾಗಿದ್ದು ಕ್ರಮೇಣ ರಾಷ್ಟ್ರಭಕ್ಷಕರಾದ ಬಿಳೀ ಟೋಪಿಗಳು ಉಳಿದೆಲ್ಲ Sweet Aburnಗಳನ್ನು burn ಮಾಡಿ ಈ ನನ್ನ ಅಕ್ಕಿ ಹೆಬ್ಬಾಳನ್ನು ನೈತಿಕವಾಗಿಯೂ ದಿವಾಳಿ ಎಬ್ಬಿಸಿಬಿಟ್ಟರು. ಎಲ್ಲ ಮುಗಿದೇ ಹೋಯಿತು. ''ಅಕ್ಕಿ ಹೆಬ್ಬಾಳು ಹೊಯ್ಸಳ ಕರ್ಣಾಟಕದ ಲಂಡನ್‌ದ ಬರಿಯ ಊರಲ್ಲ'' ಎಂದು ಬರೆದಿದ್ದೀರಿ. ಆದರೆ ನಮಗಂತೂ ಇದೊಂದು ಬರಿಯ ಊರಲ್ಲ ಬರಿಯ ಬೀದಿಯಲ್ಲ ಇದೊಂದು ವಿಶ್ವವಿದ್ಯಾಲಯ. ಇದರ ಮುಂದೆ ನಮಗೆ ಯಾವ oxfor ಡೂ ಇಲ್ಲ. ಕೇಂಬ್ರಿಜ್ಜೂ ಇಲ್ಲ! ನಾವು ಇಂದೇನಾದರೂ ಆಗಿದ್ದರೆ, ಅದಾಗಲು ನಮಗೆ ಬೇಕಾದ ವಿದ್ಯೆಬುದ್ಧಿಗಳನ್ನು ಮುಫತ್ತಾಗಿ ಕಲಿಸಿದ ಈ ತಾಯಿ ಈ ಅಜ್ಞಾನಿ ಮುಗ್ಧಮಕ್ಕಳು ಅರಿಯದೆ ಮಾಡಿದ ತಪ್ಪನ್ನು ಮಾತ್ರ ಕ್ಷಮಿಸದೆ ನಮ್ಮನ್ನು ತನ್ನ ತೊಡೆಯ ಮೇಲಿಂದ ದೂಡಿಯೇ ಬಿಟ್ಟಳು. We are all graduates of that university when the tution was free but the penalty was very high!

ಅಲ್ಲಿಂದ ಹೊರಹೊರಟ ಈ ಹತ ಭಾಗ್ಯರಲ್ಲಿ ಹಲವರು ಓದು ವಿದ್ಯೆಗಳಿಗೆಂದು ದೇಶದ ವಿವಿಧ ಜನಾರಣ್ಯಗಳನ್ನು ಸೇರಿದರೆ ಇನ್ನು ಕೆಲವರು ತಾವಿದ್ದ ಮುರುಕು ದೋಣಿಗಳನ್ನು ಅಲ್ಲಿಯೇ ಬಿಟ್ಟು ಮೈಸೂರು ಬೆಂಗಳೂರು ಸೇರಿದರು. ಬಸವನಗುಡಿ, ಚಾಮರಾಜಪೇಟೆ, ಮಲ್ಲೇಶ್ವರ, ಶ್ರೀರಾಮಪುರ, ಗುಟ್ಟಹಳ್ಳಿಯಲ್ಲಿ; ಮೈಸೂರಲ್ಲಾದರ ಹಳ್ಳದಕೇರಿ, ಕೃಷ್ಣಮೂರ್ತಿಪುರ, ಚಾಮುಂಡೀಪುರ, ಲಕ್ಷ್ಮೀಪುರಗಳಲ್ಲಿ ಕೊಳಕು ಮನೆ ಹುಳುಕುಗಲ್ಲಿ-ಮನೆ ಹಿಡಿದರು. ಜೀವ ಹಿಡಿದು ಬದುಕಿದರು. ಆಗಾಗ ಅವರ ಅಕ್ಕಿಹೆಬ್ಬಾಳ ಕಡೆಯಿಂದ ಯಾರಾದರೂ ಬಂದು ಎಲ್ಲಾದರೂ ಸಿಕ್ಕಿದರೆ ಅವುಗಳ ಸಂತೋಷ ಹೇಳತೀರದು. ಅವರ ಹರ್ಷ, ಆನಂದಬಾಷ್ಪ, ಗಂಟಲು ಬಿಗಿತ ಒಂದಲ್ಲ. ಅವರಿಂದ ಮಾತುಗಳಿಗೆ ವಿಶ್ವದ ಯಾವ ಭಾಷೆಗಳಲ್ಲಿ ಲಿಪಿಯಿಲ್ಲ! ಆ ಸ್ವರ್ಗದಂತಹ ಊರು ಬಿಟ್ಟು ಇಲ್ಲಿಗೇಕೆ ಬಂದಿರೋ ....? ಎಂದು ಅವರ ಆಗ್ರಹ-ಆಕ್ರೋಶಗಳು! ಅವರಿಗೇನು ಗೊತ್ತು? ಅಲ್ಲೇ ಬದುಕಿ ಅಲ್ಲೇ ಕಣ್ಮುಚ್ಚಬೇಕೆಂದಿದ್ದ ಅನೇಕರಿಗೆ ಈಗ ಅದೇ ಊರು ನಿತ್ಯ ನರಕವಾಗುತ್ತ ನಡೆದಿದೆ ಎಂಬ ಅಂಶ?

ಎಂಟು ಹತ್ತು ವರ್ಷಗಳು ಹೀಗೇ ಉರುಳಿವೆ. ಎಲ್ಲಿದ್ದನೋ ಏನೋ ಒಂದು ಬೆಳಿಗ್ಗೆ, ಇದ್ದಕ್ಕಿದ್ದ ಹಾಗೆ ಕುಳ್ಳೆ ನಾಗರಾಜ ನಮ್ಮ ಬೀದಿಗೆ ಬಂದು ಬಿಡಬೇಕೆ? ಅವನು ಊರು ಬಿಟ್ಟೇ ಹತ್ತು ಹನ್ನೆರಡು ವರ್ಷ ಕಳೆದಿದ್ದವು. ಈಗ ಅವನು ಎತ್ತರವಾಗಿ ಬೆಳೆದು, ಜುಬ್ಬಾ, ಪೈಜಾಮ, ಕೈಗೆ ರಿಸ್ಟ್‌ವಾಚು ಕಾಲಲ್ಲಿ ಚಪ್ಪಲಿ, ನಾಟಕದವರಂತೆ ಬೆಳೆಸಿ ಓಂದೆ ಬಾಚಿದ

ಕೂದಲು.

'ಈಗ ಮೇಷ್ಟ್ರಾಗಿದೀಯಂತೆ' ಎನ್ನುತ್ತಾ ನಮ್ಮ ಮನೆಗೂ ಬಂದ. ಕೆಲಸಕ್ಕೆ ರಜ ಹಾಕಿ ಅವನ ಜೊತೆ ನಮ್ಮ ಮನೆ ಜಗುಲಿಯ ಮೇಲೆ ಅವನೊಂದಿಗೆ ಕುಳಿತೆ. ಅವನ ಮಾತು ತುಂಬ ವಿಚಿತ್ರವಾಗಿತ್ತು. ನೀವು ಚಿತ್ರಿಸಿರುವ ಕ್ಲೀಷಾಪ್ರವೀಣನ ಗ್ರಾಂಥಿಕ ಭಾಷೆಯಂತೆ ಮಾತಾಡುತ್ತಿದ್ದ. ತನ್ನ ಅಕ್ಕ-ತಾಯಿ-ತಂಗಿ-ತಮ್ಮಂದಿರು ತಂದೆ ತೀರಿದ ಬಳಿಕ ಹೇಗೆ ಛಿದ್ರಛಿದ್ರವಾಗಿ ತಾನು ಊರು ಬಿಡಬೇಕಾಯಿತು ಎಂಬುದನ್ನು ಶುದ್ಧ ಗ್ರಾಂಥಿಕ ಸಾಹಿತ್ಯದಲ್ಲಿ ಹೇಳಿದ. ತನಗೆ ಪರಿಚಿತವಾದ ಓಣಿಯೊಂದರ ಮೂಲಕ ನದಿಗೆ ಎಳೆದುಕೊಂಡು ಹೋದ. ಶುದ್ಧ ನೀರು ಹರಿಯುವ ಮೂರನೆಯ ಸೀಳು ಅವನಿಗೆ ಪರಮಾಪ್ತ! ಈ ದಡದಲ್ಲಿ ಮುಳುಗಿ ನೀರಿನೊಳಗೆ ಕ್ರಮಿಸಿ ಎಷ್ಟೋ ಹೊತ್ತಿನ ಮೇಲೆ ಬುಳುಕ್ ಎಂದು ಎದುರು ದಡವಲ್ಲಿ ತಲೆ ಎತ್ತುತ್ತಿದ್ದ ಅವನನ್ನು ಅವನ ತಾಯಿ ಪಾರ್ವತಮ್ಮ ನೀರು ಕಾಳಿಂಗ ಅಂತಲೇ ಕರೆಯುತ್ತಿದ್ದದ್ದು. ಅದೇ ಸೀಳಿಗೇ ನಾವು ಬಂದು ನಿಂತೆವು.

ಈ ಎಂಟು ಹತ್ತು ವರ್ಷಗಳಲ್ಲಿ ಬಹಳಷ್ಟು ನೀರು ತುಂಗೆಯಲ್ಲಿ ಹರಿದಿತ್ತು. ಅವನು ನೀರಿಗಿಳಿದು ಬಲಗೈ ನೀರಲ್ಲಿ ಮುಳುಗಿಸಿ ತನಗೆ ಪ್ರಿಯವಾದ ಒಂದು ಶಬ್ದವನ್ನು ಮೂರು ನಾಲ್ಕು ಬಾರಿ ಹೊರಡಿಸಿದ. ಬೊಗಸೆಗಟ್ಟಲೆ ನೀರು ಮೊಗಮೊಗೆದು ಕುಡಿಯುತ್ತಾ ಎಷ್ಟು ರುಚಿ-ಏನು ಸಿಹಿ! ಎಂದು ಕುಣಿದಾಡಿದ. ನೀರು ಬಿಟ್ಟು ಮೇಲಕ್ಕೆ ಬಂದು ಹಿಡಿಹಿಡಿಯಾಗಿ ಮರಳು ಬಗೆದು ತಲೆಯ ಮೇಲೆ ಸುರಿದುಕೊಳ್ಳುತ್ತಾ "ತಾಯೀ ..... ತುಂಗೇ .... ಕೊನೆಗೂ ನನ್ನ ಕೈ ಬಿಟ್ಟೆಯಾ? ನನ್ನನ್ನು ಈ ಊರಿಂದ ಹೊರಹಾಕಿಸಿಬಿಟ್ಟೆಯಾ?'' ಎಂದೆನ್ನುತ್ತ ದೊಡ್ಡ ದನಿಯಲ್ಲಿ ಅತ್ತ. ಅವನನ್ನು ಸಮಾಧಾನಪಡಿಸುವುದರಲ್ಲಿ ನನಗೆ ಸಾಕು ಸಾಕಾಗಿ ಹೋಯಿತು.

ಅವನ ಮಾತಿನ ಮೇಲೆ ತಂದೆ ಭೈರವಶಾಸ್ತ್ರೀಗಳು ಕಾಲವಾದ ನಂತರ ಅವರ ಮನೆ ಒಡೆದು, ಒಬ್ಬೊಬ್ಬರೂ ಒಂದೊಂದು ದಿಕ್ಕಾಗಿ ಇವನು ಈ ಊರುಬಿಟ್ಟು ತಿಪಟೂರು ಹಾಸನ ಅರಕಲಗೂಡುಗಳಲ್ಲೆಲ್ಲಾ ಅಲೆದು ಕೊನೆಯಲ್ಲಿ ಟಳಕವಾಡಿಗೆ ಬಂದು ಅಲ್ಲಿ ಒಂದು ಚಿಕ್ಕ ಅಂಗಡಿ ಹೋಟೆಲ ನಡೆಸುತ್ತಿರುವುದಾಗಿಯೂ ಹಾಸನದಲ್ಲಿ ಸಾಹಿತ್ಯ ಪ್ರೇಮಿಗಳ ಸ್ನೇಹದೊರೆತು ಅವರಿಂದ ತಾನೂ ಸಾಹಿತ್ಯದ ಕನ್ನಡದ ಭಕ್ತನಾದುದೂ ತಿಳಿಯಿತು. ಅದಕ್ಕೇ ಈ ರೀತಿ ಕ್ಲೀಷಾಪ್ರವೀಣನಾಗಬೇಕೆ! ಇವನು ಮಾತಾಡುವ ರೀತಿ ನೋಡಿದರೆ ಹುಚ್ಚರು ಮಾತಾಡುವಂತಿದೆಯಲ್ಲ! The poet, the lover and the Lunatic? ಈ ಊರಿನ ಹುಚ್ಚೇ ಹಿಡಿದುಬಿಟ್ಟಿದೆಯೇ? Is it madness? If this be madness, yet there is method in it ಎಂದು ನನಗನ್ನಿಸುತ್ತಿದ್ದರೂ ಅವನ ಸ್ಥಿತಿ ಊರಿನ ಸ್ಥಿತಿ ಎರಡೂ ನನಗೂ ದುಃಖ ತರುತ್ತಿದ್ದವು.

ಇದ್ದಕ್ಕಿದ್ದಂತೆ ಅವನಿಗೆ ಹಿಂದಣ ನೆನಪುಗಳು ಕೆದರಿದವು. ಅವನ ಒಂದು ಕಣ್ಣು ಮಾತ್ರ ಚಲಿಸುತ್ತಿತ್ತು. ಇನ್ನೊಂದು ಒಂದು ಕೊನೆಯಲ್ಲಿ ಸಿಕ್ಕಿಹಾಕಿಕೊಂಡಿತ್ತು. ಅದಕ್ಕೇ ಅವನಿಗೆ ಅವರಣ್ಣಂದಿರು ರಾಮಸ್ವಾಮಿ ಬಾಲಕಟ್ಟಿ ಕುಳ್ಡೆ ಅಂತ ಹೆಸರಿಟ್ಟದ್ದು. ಬೀದೀಲೂ ಅದೇ ಹೆಸರು ಶಾಶ್ವತವಾಗಿಬಿಟ್ಟಿತ್ತು. ಈಗ ಅದೇ ಸಿಕ್ಕಿಹಾಕಿಕೊಂಡ ಎಡೆ ನೋಡುತ್ತಾ ಎರಡೂ ಕೈ ಬೆರಳುಗಳನ್ನು ಅಂಗುಷ್ಠಾಭ್ಯಾನ್ನಮಃ ತರ್ಜನೀಭ್ಯೋನಮಃ ಮಾಡುತ್ತಾ 'ಹೌದಾ?' ನಗದಿ ಜಗನ್ನಾಥ ಎಲ್ಲಿ. ದೇವಸ್ಥಾನದ ತಮ್ಮಯ್ಯ ಎಲ್ಲಿ?' ಎಂದು ಹಲವರನ್ನು ಜ್ಞಾಪಿಸಿಕೊಂಡು ಕೇಳಿದ. ಜಗನ್ನಾಥನ ವಿಷಯ ಇವನಿಗೆ ಹೇಳದಿರೋದೇ ಒಳ್ಳೆಯದು. ತಮ್ಮಯ್ಯ ಮಾತ್ರ, ನಾನು ಓದಕ್ಕೆಂತ ಬೆಂಗಳೂರಿಗೆ ಹೋಗಿದ್ದ ಎರಡು ವರ್ಷದಲ್ಲೇ ಎಲ್ಲೋ ತೀರಿ ಹೋಗಿದಾನೆಂದು ಮಾತ್ರ ಹೇಳಿದೆ. ಅವನ ವಿಚಾರ ನನಗೂ ಮರೆತು ಹೋಗಿತ್ತು. ಈಗ ಈ ಕಾಳಿಂಗ ಕೇಳಿದ ಕೂಡಲೇ ಅವನೂ ಅವನ ಕತೆಗಳೂ ನೆನಪಿಗೆ ಬಂದವು.

ತಮ್ಮಯ್ಯ ಲಕ್ಷ್ಮೀನಾರಾಯಣ ದೇವಸ್ಥಾನದ ಅರ್ಚಕ. ನಮ್ಮ ಕಾಲದ ಎಲ್ಲ ಹುಡುಗರಿಗೂ ಅವನು ಚಿರಪರಿಚಿತ. ಎತ್ತರವಾದ ಕೊಂಚ ಕಪ್ಪು ಬಣ್ಣ ಆಳು. ಉಡುತ್ತ-ಹೊದೆಯುತ್ತಿದ್ದ ಪಂಚೆ ಶಲ್ಯಗಳು ಒಂದು ಕಾಲದಲ್ಲಿ ಬೆಳ್ಳಗಿದ್ದಿರಬಹುದು. ಮುಂಗಡೆ ಬೋಳುನೆತ್ತಿ. ಹಿಂಗಡೆ ಒಂದು ಸಣ್ಣದಿರುವ ಮುಖ. ಸಾಮ್ರಾಜ್ಯಂ ಭೋಜ್ಯಂ ಹೇಳಿಕೊಂಡು ದೇವರಿಗೆ ಪೂಜೆ ಮಾಡುತ್ತಿದ್ದು, ಬಿಡುವಿನ ಕಾಲದಲ್ಲಿ ಎದುರಿನ ಗರುಡಗಂಬಕ್ಕೆ ಬೆನ್ನು ಕೊಟ್ಟು ಒಂದು ಕಾಲು ಚಾಚಿ ಇನ್ನೊಂದು ಅರ್ಧ ಮಡಿಸಿ, ಎರಡೂ ಕೈಗಳಿಂದ ಮಂಡಿಯನ್ನು ತಬ್ಬಿಹಿಡಿದು ಕುಳಿತಿರುತ್ತಿದ್ದ. ಏನೋ ಚಿಂತನ ಮಾಡುತ್ತಿದ್ದು ತಾನೊಬ್ಬ ಈ ಊರಿನ ರಾಬಿನ್ ಹುಡ್ ಒಬ್ಬ ಧೀರೋದಾತ್ತ ನಾಯಕ ಎಂದು ಭಾವಿಸುತ್ತ ಸಲ್ಲದ ರೊಮಾನ್ಟಿಕ್ ಕತೆಗಳನ್ನು ಮನಸ್ಸಲ್ಲೇ ಕಟ್ಟಿಕೊಳ್ಳುತ್ತ ಕುಳಿತಿರುತ್ತಿದ್ದ. ಚಿಕ್ಕ ವಯಸ್ಸಿನ ಹುಡುಗರೇ ಅವನ ಶ್ರೋತೃವರ್ಗ. ಎಲ್ಲ ಕತೆಗಳ ಕೊನೆಗೂ ಅವನು ಪರಮಾತ್ಮನಂತೆ ಅವತರಿಸಿ 'ಅಭ್ಯುತ್ಥಾನಮಧರ್ಮಸ್ಯ' ಮಾಡುತ್ತಿದ್ದ. ಮಂಜಯ್ಯ ಅಂಡಿಗರ ಮಕ್ಕಳು ಚಿಂತಾಮಣಿ ಶಾಸ್ತ್ರಿಗಳ ಮಕ್ಕಳು ಮೊಮ್ಮಕ್ಕಳು, ದತ್ತಿ, ಹೆಚ್. ರಾಮು. ರಾಜ, ಜಗನ್ನಾಥ, ಕಾಳಿಂಗ, ಎಮ್ಮಾರ್ಸಿ, ಅರುಣ, ಬುದ್ಧಿಶೇಷ, ಈ ಕಿತಿಬಿಮುಂಡೇವೆಲ್ಲ ಅವನ ಸುತ್ತ ಸೇರಿ ''ತುಂಬ ಬೇಜಾರಾಗ್ತಿದೆ .. ತಮ್ಮಯ್ಯನೋರೇ! ಯಾವ್ದಾದರೂ ನಿಮ್ಮ ಕಾಲದ ಕತೆ ಹೇಳಿ,'' ಅಂತ ಅವನನ್ನು ಉಬ್ಬಿಸಿ ಉಪ್ಪರ್ ಮಾಡಿದರೆ ಅಂತಹ ಬೇಡಿಕೆಗೇ ಕಾಯುತ್ತಿದ್ದ ತಮ್ಮಯ್ಯ ಒಂದು ಹೊಸ ಕಗ್ಗ ಹೊಸೆದು ಎಸೆದು ನೆರೆದವರನ್ನು ರಂಜಿಸಿ ತಾನು ನಗೆಗೀಡಾಗುತ್ತಿದ್ದ. ಒಂದು ಸಾರಿ ವಾಲುತ್ತಾ ಬೀಳುವುದರಲ್ಲಿದ್ದ ಎತ್ತರದ ಗರುಡಗಂಬವನ್ನು ಬೆನ್ನುಕೊಟ್ಟು ಒತ್ತಿ ನೆಟ್ಟಗೆ ಮಾಡಿ ನಿಲ್ಲಿಸಿದ್ದರೆ, ಸೆಳವಿನಲ್ಲಿ ಕೊಚ್ಚಿ ಹೋಗುತ್ತಿದ್ದ ಬಡವಿಯೊಬ್ಬಳ ಸೀರೆಯನ್ನು ಈಜಿಬಿದ್ದು ಹಿಡಿದು ತಂದು ಆಕೆಗೆ ಕೊಟ್ಟದ್ದೂ; ಇನ್ನೊಂದು ಬಾರಿ ಎರಡೂ ಹೆಗಲುಗಳ ಮೇಲೆ ಒಂದೊಂದು ಮೂಟೆ ಭರ್ತಿ ಉದ್ದು ಹುರುಳಿ ಇಟ್ಟುಕೊಂಡು ಮಾರುಗೈ ಹಾಕಿ ಈಜಿ ನದಿ ದಾಟಿ ದೇವಸ್ಥಾನದ ದಡಮುಟ್ಟಿದ್ದು. ಹೀಗೇ ಅವನ ಸಾಹಸ ಗಾಥೆಗಳು. ಪ್ರತಿಯೊಂದರ ಕೊನೆಯಲ್ಲೂ ಅರುಣ ರಾಜ ಶೇಷ ಅಪಹಾಸ್ಯದ ನಗುನಕ್ಕು, ಚಪ್ಪಾಳೆ ಹೊಡೆದರೆ ತಮ್ಮಯ್ಯ ಥಂಗನೆ ಅವರತ್ತ ನೆಗೆದು ಅವರನ್ನು ಹೊಡೆದು ಹೆಣ ಬೀಳಿಸಲು ಅಟ್ಟಿಸಿಕೊಂಡು ಹೋದರೆ ಅವು ಮೂರು ದೇಶಾಂತರ ದಿಲ್ಲಿ



ದೀಪಾಂತರ! ಇವನ ಕೈಗೇಕೆ ಸಿಕ್ಕ ಬಾರದು! ''ನಾಳೆ ಮತ್ತೆ ಬನ್ನಿ ಮುಂಡೇವಾ ಮಾಡ್ತೀನಿ'' ಎಂದು ತಮ್ಮಯ್ಯ ರೋಷದಿಂದ ಮುಷ್ಟಿ ಬೀಸಿದರೆ ಅವು ಅವನ ಹೊಟ್ಟೆಯುರಿಯುವಂತೆ ನಗುತ್ತ ಓಡಿ ಹೋಗುತ್ತಿದ್ದವು.

ತಾನು ಹೇಳ್ತಿರೋ ಕತೆ ಎಲ್ಲ ಸುಳ್ಳು. ಅದು ಅವರಿಗೂ ಗೊತ್ತಿದೆ. ಅದಕ್ಕೇ ಅವರು ಖೋಟಾ ನಗುನಗುತ್ತಿದ್ದಾರೆ. ಎನ್ನುವ ವಿಷಯ ತಮ್ಮಯ್ಯನಿಗೂ ಗೊತ್ತು! ಏನು ಮಾಡೋದು? ಇಬ್ಬರಿಗೂ ಹೊತ್ತು ಹೋಗಬೇಕಲ್ಲ! ಮತ್ತೆ ಮರುದಿನ ಅದೇ ದೇವಸ್ಥಾನ; ಅದೇ ಗರುಡಗಂಬ; ಅದೇ ತಮ್ಮಯ್ಯ; ಅದೇ ಶ್ರೋತೃಗಳು. ಸ್ವಲ್ಪ ಹಿಂದೆ ರಾಜ, ಅರುಣ ಶೇಷ! ಇವತ್ತು ಅವನು ಅವರಿಗೇನೂ ಮಾಡಲ್ಲ ಯಾಕೆಂದರೆ ಅವರಿಲ್ಲದೆ ಹೋದರೆ ಅವನ ಕತೆ ಕಳೇನೇ ಕಟ್ಟರಲಿಲ್ಲ.

ಈಗ ನಾಗರಾಜ ಕೇಳಿದ್ದದ್ದು ಇದೇ ತಮ್ಮಯ್ಯನ್ನೆ. ಅವನ ಕಣ್ಣು ಮಾತ್ರ ಸುತ್ತ ಏನನ್ನೋ ಹುಡುಕುತ್ತಿತ್ತು. ನನ್ನ ಕೇಳಿದ ''ಎಲ್ಲಿಟ್ಟದೀಯ ಗ್ಯಾನ? ಊರು ನೋಡಿದೀಯ ಹ್ಯಾಗಾಗಿದೆ? ಎಷ್ಟೋ ಜನ ಊರು ಬಿಟ್ಟು ಎಲ್ಲೆಲ್ಲೂ ಹೋಗಿ ಒಟ್ಟಿದಾರೆ. ಭಾಳ ಜನ ಕಾಣಸ್ತಾನೇ ಇಲ್ಲ! ತುಂಗಮ್ಮ ತಾಯಿ ತನ್ನ ಮಡಿಲಲ್ಲಾಡಿದ ಮಕ್ಕಳನ್ನು ಒಬ್ಬೊಬ್ರನ್ನಾಗಿಯೇ ಕಳಕತ್ತಿದ್ದಾಳೆ. ಅವರೆಲ್ಲ ಇಲ್ಲಿ ನೆಲೆ ಕಳೆದುಕೊಂಡು ಯಾವ್ಯಾವುದೋ ಊರಲ್ಲಿ ಗುರ್ತು ಕಾಣದಿದ್ದವರು ಬಂದು ತುಂಬಿಕೋತಿದಾರೆ ....'' ಎಂದೆಲ್ಲ ಚಿಂತೆ ನನಗಂಟಿಸಿ ತಾನು ಮರುದಿನ ಮತ್ತೆ ಮಾಯವಾದ! ಒಂದು ಕಾಲದಲ್ಲಿ ವೈಭವದಿಂದ ಮೆರೆದು ಈಗ ಕ್ರಮೇಣ ಮರಳುಗಾಡಾಗುತ್ತಿದ್ದ ಈ ಮಾಲ್ಗುಡಿಯ ಚಿಂತೆ ಮತ್ತೆ ನನ್ನ ಕಾಡಲಾರಂಭಿಸಿತು. ಅಂದಿನಿಂದ ಊರಿನ ಬೀದಿ ಮನೆಗಳು - ಹಳೆಯ ಲ್ಯಾಂಡ್ ಮಾರ್ಕುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯಲಾರಂಭಿಸಿದೆ. ನೀನೇಕೆ ಈ ಊರು ಬಿಟ್ಟೆ? ಯಾಕೆ ಬಿಡುತ್ತಿದ್ದೀಯ? ಎಂದೆಲ್ಲರನ್ನೂ ಕೇಳುತ್ತಿದ್ದ ನಾನೂ ಅಂತಹ ಒಂದು ದಿನ ಈ ಅಕ್ಕಿ ಹೆಬ್ಬಾಳ ಬಿಟ್ಟು ಹೋಗಬೇಕಾಗಿ ಬಂತು.

ಈ ದಿನಗಳಲ್ಲೇ ನೀವು ಬರೆದ ಈಚಿನ ಪ್ರಬಂಧಗಳು ಸಿಕ್ಕು ನಿಮ್ಮ 'ಅಕ್ಕಿ ಹೆಬ್ಬಾಳ' ಓದಿ, ಎರಡು ಮೂರು ಬಾರಿ ಅದನ್ನು ಓದಿ ಮಗುಚಿ ಹಾಕಿ ನನ್ನ ಕಾಲದ ಈ ಊರಿನ ಆನಂದದಯುಗವನ್ನು ಮತ್ತೊಮ್ಮೆ ಕಣ್ಣ ಮುಂದೆ ತಂದುಕೊಂಡು ಹರ್ಷಿಸಿದೆ. 'ಗೌರಜ್ಜ'ಯ ವೃತ್ತಾಂತ ನಮ್ಮ ಬೀದಿಯಲ್ಲೇ ಇದ್ದು, ಏಕವಸ್ತ್ರ ಏಕಭುಕ್ತ ಬಾಳು ಬಾಳಿ ಇತರಿಗಾಗಿ ತಾವು ಹುಟ್ಟಿದ ಮನೆಯ ಸಂತಾನಗಳ ಸೌಖ್ಯಕ್ಕಾಗಿ ದೇಹತೇದು ತೀರಿಕೊಂಡ ನೂರಾರು ಗೌರಜ್ಜಗಳ ಪುನರ್ದರ್ಶನ ಮಾಡಿಸಿದರೆ, ನಿಮ್ಮ ಗಾಡೀ ಪ್ರಯಾಣ, ಲಲಿತೆಯ ವಿದ್ಯಾಭ್ಯಾಸ ಮತ್ತು ಪ್ರಣಯ ಯಾತ್ರೆಗಳು ಯಾವುದೋ 'ರೆ' ಪ್ರಪಂಚದ ಕನಸುಕಲ್ಪನೆಗಳ ಮುರುಕು ಗೊಂಬೆಗಳ, ಒಡಕು ಕನ್ನಡಿಗಳನ್ನು ಮುಖಕ್ಕೆ ಹಿಡಿದಿವೆ. ನಮಗೆ ಸಂದ ಸುಖವೆಷ್ಟು ....? ಕೈ ಕಣ್ಣು ತಪ್ಪಿ ಹೋದದ್ದೆಷ್ಟು ಇವೆಲ್ಲದರ ಖಾನೇಷು ಮಾರಿ ಎದುರಾಗುತ್ತದೆ. ಇವು ನಮ್ಮನ್ನು ಕಾಡಿ ಬಳಲಿ ಸೋತಿವೆ.

ನಿಮ್ಮ ಲಲಿತೆ (ಕ್ಷಮಿಸಬೇಕು-ಲಲಿತಾದೇವಿಯರು) ಹೇಗಿದ್ದಿರಬೇಕು? ನೀವು ಬಟ್ಟೆಗೆ ಸಾಬೂನು ಹಾಕಿದ್ದೂ ಅದು ಜಾರಿ ಬಾವಿಯ ನೀರಿಗೆ ಬಿದ್ದಿದ್ದು, ಒಲೆ ಹೊತ್ತಿಸಿದ್ದು ಅವರಿಗೆ ಪಾಠ ಹೇಳುವಾಗ ನಿಮ್ಮಿಬ್ಬರ ನಡುವೆ ಇದ್ದ ಶನಿಮೇಜು; ಮುಂದೆ ಅವರು ರೇಗಿ, ನೀವು ಹೇಳಿಕೊಟ್ಟ ಇಂಗ್ಲಿಷ್ ಬೈಗಳ (ಅರ್ಥ ತಿಳಿಯದೆ) ಸಿಲ್ಲಿ ಸ್ಟುಪಿಡ್ ಎಂಬ ಶಬ್ದಗಳನ್ನು ನಿಮ್ಮ ಮೇಲೇ ಉಪಯೋಗಿಸಿದ್ದು ಮಾಡಿದ ಸರಸ್ವತಿ ಪೂಜೆ, ನಮ್ಮ ಪಾಲಿಗೆ ಸಿಕ್ಕಿದ ಚೆರುಪು ..... ಇಂತಹ ಎಂದೆಂದೂ ಅಳಿಸಲಾಗದಂತಹ ಸುಂದರ ಚಿತ್ರಗಳನ್ನು ಇನ್ನೂ ಯಾರು ಕೊಟ್ಟಾರು? ಬ್ರಹ್ಮನು ನಿದ್ದೆಗಣ್ಣಲ್ಲಿದ್ದಾಗಲೋ ಸೋಮರಸ ಕುಡಿತದ ಅಮಲಿನಲ್ಲಿದ್ದಾಗಲೋ ಸೃಷ್ಟಿಸಿದ ಸುಂದರ ಸಮರಸದ ಸಂಸಾರ

ಗಳಲ್ಲಿ ದುಷ್ಯಂತ ಶಕುಂತಲೆಯರದೊಂದು ಎಂದು ಶ್ರೀ ರಾಜರತ್ನಂ ಕ್ಲಾಸಲ್ಲಿ ಹೇಳಿದ್ದರು. ನಿಮ್ಮಿಬ್ಬರದು ಇನ್ನೊಂದು ಎಂದೇ ನನ್ನ ಭಾವನೆ ನಂಬಿಕೆ! ಅಂತಹ ಪುಣ್ಯವಂತರು ನೀವು!

ಆ ಗಾಡೀ ಪ್ರಯಾಣ, ಹೇಮಾವತೀ ನದಿ, ಹೈದರಾಲಿ ಕಟ್ಟಿದ ಕೋಟೆ, ಜಡೆ ಮುನಿ, ಬಿಳೀ ಸೀರೆಯುಟ್ಟು, ಕೂದಲನ್ನು ಬೆನ್ನ ಮೇಲೆ ಹಾರ ಬಿಟ್ಟು ಕವಿದಂಚುಕಲ್ಲ ಮೋಹಿನಿ ನೀರಿನ ಬಳಿ ಕುಳಿತು ಕೈಲಿ ವೀಳೆಯ ಹಿಡಿದು ಯುವಕರನ್ನಾಕರ್ಷಿಸಿ ಅವರ ಕತೆಯನ್ನೇ ಪೂರೈಸ ಹೊರಟ ಆ ಮೋಹಿನಿ; ಇವನ್ನೆಲ್ಲ ಓದಿದ ಹಾಗೆಲ್ಲ ಅವನ್ನೆಲ್ಲ ಕಣ್ಣಾರೆ ಕಂಡು ಬರಲು ನೆಕ್ಸ್ಟ್ ಬಸ್ ಹತ್ತಿ ಅಕ್ಕ ಹೆಬ್ಬಾಳ ಕಡೆ ಹೋಗಿ ಬಂದೇ ಬಿಡಾನೆ? ಎನ್ನಿಸುತ್ತದೆ.

ಮನುಷ್ಯ ಎಂದರೆ ಹೇಗಿರಬೇಕು; ಅಧ್ಯಾಪಕನೆಂದರೆ ಹೇಗಿರಬೇಕು ಎಂಬುದನ್ನು ನೀವು ಹಿರಿಯರು ಚೆನ್ನಾಗಿ ತೋರಿಸಿಕೊಟ್ಟದೀರಿ. ನಿಮಗೆ ಅಧ್ಯಾಪಕರಾಗಿದ್ದು ನಿಮ್ಮಂತಹ ಚಿನ್ನವನ್ನು ಪುಟಕ್ಕಿಟ್ಟು ಅಧ್ಯಾಪಕರ ಶಿಷ್ಯನಾಗುವ, ಕೊನೆಗೆ ಅವರನ್ನು ಕಾಣುವ ಅದೃಷ್ಟವೂ ನನಗಾಗಲಿಲ್ಲವಲ್ಲ ಎಂದು ಹಂಬಲಿಸಿದವರಿಗೆ ರಾಧಾಕೃಷ್ಣ, ಸುಬ್ಬರಾವ್, ಬಿ.ಎಂ.ಶ್ರೀ, ರಾಲೋ ಮೆಕಿಂಟಾಷ್, ವೆಂಕಣ್ಣಯ್ಯ ಮೊದಲಾದ ಮಹನೀಯರ ಸ್ಥಿರ ಚಿತ್ರಗಳನ್ನು ಕೊಟ್ಟು ನಮಗೆ ಆ ಅರಕೆ ನಿವಾರಿಸಿದ್ದೀರಿ.

''ಏನು ಬರೆಯಲಿ, ಹೇಗೆ ಬರೆಯಲಿ'' ಎಂದು ಚಿಂತಿಸುವುದರಲ್ಲೇ ಕಾಲಹರಣ ಮಾಡುತ್ತಿದ್ದ ನನ್ನಂತಹ ಒಡ್ಡುಗಳಿಗೆ ಚೇತನ ನೀಡದಿರಿ. ನಮ್ಮ ಭಾವನೆಗಳಿಗೆ ಬಾಯಿಕೊಟ್ಟರಿ. ಇನ್ನು ನಿಮ್ಮನ್ನು ಏನ ಕೇಳಲಿ? ಏನ ಬೇಡಲಿ ನಿಮ್ಮ ಬಳಿಗೆ ಬಂದು?''

★ ★ ★ ★

ನನ್ನ ಸೇವಾವಧಿಯ ಕೊನೆಯ ಎರಡು ವರ್ಷಗಳಲ್ಲಿ ಶಿವಮೊಗ್ಗೆಯಲ್ಲೇ ಇದ್ದು ಕಳೆಯುವ ಹಾಗಾಯಿತು. ಈಗ ಇದು ಶಿಮೋಗಾ ಸಿಟಿ (What a pity?) ಎಲ್ಲವೂ ಬದಲಾಯಿಸಿವೆ. ಎಲ್ಲವೂ ಬದಲಾವಣೆಯಾಗಿವೆ. ಆಸೆ ಇರಿಸಿಕೊಂಡು ಸತ್ತವರು ದೆವ್ವವಾಗಿ ತಮಗೆ ಪ್ರಿಯವಾದ ಆವರಣದಲ್ಲೇ ಸುತ್ತುವಂತೆ ನಾನೂ ನನ್ನ ಪ್ರಿಯವಾದ 'ವಿಶ್ವವಿದ್ಯಾನಿಲಯ'ದ ಆವರಣದಲ್ಲಿ ಅಲೆದಾಡಿ ಕಾಲ ಕಳೆದಿದ್ದೇನೆ. ಹಳೆಯದನ್ನು ಹಿಂದಕ್ಕೆ ಪಡೆಯಲಾರದೆ ಹೊಸ



ದಕ್ಕೆ ಹೊಂದಿಕೊಳ್ಳಲಾರದೆ ಅಂತರ ಪಿಶಾಚಿಯಂತೆ ಹೊತ್ತನ್ನು ಎರಡೂ ಕೈಗಳಿಂದ ದೂಡಿ ಕಳೆದಿದ್ದೇನೆ.

ಈಗ ಈ ಊರಲ್ಲಿ ಅಷ್ಟಾಗಿ ನನ್ನನ್ನು ಜನ ಗುರುತಿಸದಿರುವುದು a blessing in disguise! ಉರಿಬಿಸಿಲಲ್ಲಿ ಸುರಿಮಳೆಯಲ್ಲಿ ನಡುರಾತ್ರಿಯಲ್ಲಿ ನಾನು ಅದೇ ಬೀದಿಯ ಮನೆಮನೆಗಳ ಮುಂದೆ, ಮಠಗಳ ಮುಂದೆ ದೇವಾಲಯಗಳ ಮುಂದೆ ಮೂಲೆಮೂಲೆಗಳಲ್ಲಿ ನಿಂತು ಗತವೈಭವವನ್ನು ನೆನಪಿಗೆ ತಂದುಕೊಳ್ಳುತ್ತಿರುವಾಗ; ಪುಣ್ಯಕ್ಕೆ ಯಾರೂ ಬಂದು ಗುರುತು ಹಿಡಿಯುವುದಿಲ್ಲ. ನನ್ನ ಆಲೋಚನಾ ಧಾಟಿಗೆ ಅಡ್ಡಿಯಾಗುವುದಿಲ್ಲ.

ದಶಕಗಳ ಹಿಂದೆ ದಿವಾನರನ್ನು ದೂರಿ ಈ ಬೀದಿಯಲ್ಲೇ ಉಳಿದವರ ಸಂತಾನಶ್ರೀಗಳು ಈಗ ತಾವಾಗಿಯೇ ನವೀನತೆಯ ಸಲುವಾಗಿ ಮೇಲಣ ಜಯನಗರ, ಗಾಂಧೀನಗರ, ರವೀಂದ್ರನಗರ, ರಾಜೇಂದ್ರನಗರ, ವಿನೋಬನಗರಗಳಿಗೆ ಹೋಗಿ ನೆಲೆಸಿದ್ದಾರೆ. ಈಗ ಈ ನೂತನ ನಗರ ಹಚ್ಚಗೆ ಉಂಡು ಬೆಚ್ಚಗೆ ಮಲಗುವವರ ಸ್ವರ್ಗವಾಗಿದೆ. ವರ್ಗವಾದರೆ ಎಲ್ಲ ಇಲಾಖೆಗಳವರ ಮೊದಲ ಪ್ರಾಶಸ್ತ್ಯ (first preference) ಶಿವಮೊಗ್ಗ. ಈಗ ಇಲ್ಲಿಂದ ಮುಂಬೈ ಮದರಾಸುಗಳಿಗೆ ಬಸ್ ಆಗಿದೆ.

ನಮ್ಮ ಬೀದಿ ಹಾಳು ಬಿದ್ದಿದೆ. ಇದು ಇಂತಿಂತಹುದು. ಇದು ಸುಂದರಂ ಅಯ್ಯರ್ ಮನೆ. ಇದು ಸರ್ಜಾರವರದ್ದು. ಎಂದು ನೆನಪು ಮಾಡಿಕೊಳ್ಳಬೇಕು.

ತುಂಬು ನಿರಿಗೆಯ ಲಂಗ ದಾವಣಿಯ ನಾಗರು ಗೊಂಡೆಗಳನ್ನು ಧರಿಸಿದ ಬಾಲೆಯರು ದಸರೆಯ ದಿನಗಳಲ್ಲಿ ಕುಣಿಕುಣಿಯುತ್ತಾ ಮನೆಗಳಿಂದ ಮನೆಗಳಿಗೆ ಹೋಗುತ್ತಾ ಅಲ್ಲಿ ಹಾಡುತ್ತಿದ್ದ ''ಕೋಲನಾಡುತ ಬಂದ, ಕೊಳಲನೂದುವ ಬಂದ, ಕ್ರೀಡೆನಾಡುತ ನಿಂದ ಯಮುನಾ ತೀರದಲಿ'' ಮೊದಲಾದ ಹಾಡುಗಳು, ಅವರ ಕೋಲಾಟದ ಶಬ್ದ ಯಾವುದೂ ಕೇಳದು. ಬಳೆ-ಕುಂಕುಮ-ಕುರಿತು ಮೂಗುಬೊಟ್ಟುಗಳ ಚದುರೆಯರು ಚದುರಿಹೋಗಿ ಅವರ ಜಾಗವನ್ನು ಬೋಳು ಮುಖ ಕೈಗಳು ಮುಂಗೂದಲ ಕತ್ತರಿಸಿಕೊಂಡು ಬಾಬ್ ಮಾಡಿಸಿಕೊಂಡು ಉದ್ದಕ್ಕೆ ಮ್ಯಾಕ್ಸಿ ಧರಿಸಿ ಕಾಲಲ್ಲಿ ಬಾತ್‌ರೂಂ ಚಪ್ಪಲು ಹಾಕಿ ರಬ್ಬರ್ ಪೈಪನ್ನು ನಲ್ಲಿಗೇ ಜೋಡಿಸಿ ಬೀದಿಗೆ ನೀರು ಸಿಂಪಡಿಸಿ ರಂಗೋಲೆ ಹಾಕಿದ ಶಾಸ್ತ್ರ ಮಾಡುವ ಮಾಡರ್ನ್ ಮುತ್ತೈದೆಯರು ಆಕ್ರಮಿಸಿದ್ದಾರೆ. ಯಾರನ್ನು ಕೇಳಿದರೂ ಎರಡೆರಡು ಮೂರು ಮೂರು ಸೈಟುಗಳ ಹದಿನಾಲ್ಕು ಹದಿನಾರು ಸ್ಕ್ವೇರ್ ಮನೆಗಳು, ಆಲಟೀಕ್, ಕಲರ್ ಟಿ.ವಿ. ರಿಮೋಟ್ ಕಂಟ್ರೋಲ್ ಇದೇ ಮಾತಾಡುತ್ತಾರೆ.

ಇಲ್ಲಿಯ ಸ್ತ್ರೀಯರು ಈಗ ಲಕ್ಷಣವಾಗಿ ಹೂವು, ಬಳೆ, ಕುಂಕುಮ ಎಲ್ಲ ಧರಿಸಿ ''ಟು ವ್ಹೀಲರ್'' ಹತ್ತಿ ಮಾರ್ಕೆಟ್‌ಗೆ ಹೋಗಿ ಕರಿಬೇವು ತಂದರೂ ತಂದರೇ! ಅಂತರ್ಜಾತಿ ವಿವಾಹ, ವಿವಾಹವೇ ಇಲ್ಲದ ಜಾತಿ ಎಲ್ಲ ಬಂದಿವೆ ಈಗ!

ಅಜ್ಜಿ ಇಲ್ಲ. ಅಣ್ಣಾಜಿ ಇಲ್ಲ. ಅವನು ಕಾರ್ತೀಕ ಮಾಸದಲ್ಲಿ ತೂಗು ಬಿಡುತ್ತಿದ್ದ ಬಣ್ಣ ಬಣ್ಣದ ಆಕಾಶ ಬುಟ್ಟಿಗಳಿಲ್ಲ. ಕಾರ್ಯ ಹಬ್ಬ ಇಲ್ಲವೇ ಇಲ್ಲ. ಲಕ್ಷ್ಮೀನಾರಾಯಣ ದೇವಸ್ಥಾನದ ಪ್ರಾಮುಖ್ಯತೆ ಈಗ ರೈಲ್ವೆ ಸ್ಟೇಶನ್ ಬಳಿ ಇರುವ ಹೊಸ ಶಂಕರ್ ಮಠಕ್ಕೆ ಹೋಗಿದೆ.

ದೇವಣ್ಣ ಕಾಮತ್ತರ ಕಾಲದ ಬಾಕ್ಸ್ ಗಾಡಿ, ಕಾರ್‌ಗಾಡಿ, ಷಾಪ್ ಸಂದೆ, ಬಗ್ಗಿ ಮೊದಲಾದ ತರಹೆವಾರಿ ಕುದುರೆ ಗಾಡಿಗಳು ಮಾಯವಾಗಿ ಆಟೋ ರಿಕ್ಷಾಗಳು ಬಂದಿವೆ. Men have become Simply restless.

ನನ್ನ ತಿರುಗಾಟಗಳಲ್ಲಿ ಇವನ್ನೆಲ್ಲ ನೋಡಿದ್ದೇನೆ. ಅಲ್ಲೊಬ್ಬರು ಇಲ್ಲೊಬ್ಬರು ಹಳಬರು ಕಣ್ಣಿಗೆ ಬೀಳುತ್ತಾರೆ. ಹಿಂದಿನ ಸುಂದರ ದಿನಗಳು ನೆನಪಿಗೆ ಬಂದು ಕಣ್ಣು ಮಂಜಾಗುತ್ತವೆ.

ಒಂದು ರಾತ್ರಿ ಕತ್ತಲೆಯಲ್ಲಿ ಬೀದಿ ಬಳಸು

ತ್ತಿದ್ದ ಒಬ್ಬ ಎತ್ತರದ ವಿಧವೆ ಕಾಣಿಸಿದಳು. ಅವಳೊಬ್ಬಳು ಇಲ್ಲಿಯ ಗತಕಾಲದ ಪಳೆಯುಳಿಕೆ. ನಮ್ಮ ಕಾಲದ ನಮ್ಮೊಂದಿಗೆ ಮಾವಿನ ಕಾಯಿ ಮುತ್ತುಗದೆಲೆಗಳಿಗೆ ಬರುತ್ತಿದ್ದ ಪದ್ಮಮ್ಮ. ಈಗವಳಿಗೆ ಎಪ್ಪತ್ತೊ-ಎಂಬತ್ತೊ! ಎರಡು ಕಣ್ಣೂ ಹೋಗಿವೆ. ನಾನಾಕೆಯನ್ನು ತಡೆದು ಮಾತಾಡಿಸಿ ನನ್ನ ಗುರುತು ಹೇಳಿದಾಗ ಅತ್ತೇ ಬಿಟ್ಟಳು .....

ಆಕೆಯನ್ನು ಕಳುಹಿಸಿಕೊಟ್ಟು ಮುಂದೆ ಹೋಗುತ್ತಿದ್ದಾಗ ಎರಡು ರಸ್ತೆಗಳು ಸೇರಿರುವಲ್ಲಿ (Cross roads) ಜನ ಜಮಾಯಿಸಿದ್ದರು. ಒಂದು ಮಗು ದಾರಿ ತಪ್ಪಿಸಿಕೊಂಡು ಈ ಬೀದಿಗೆ ಬಂದು ಬಿಟ್ಟಿದೆ. ಅರ್ಧಮರ್ಧ ಮಾತಾಡುತ್ತದೆ. ಏನು ಕೇಳಿದರೂ ಅನ್ನಬೇಕು ಎನ್ನುತ್ತದೆ ಅಳುತ್ತದೆ ....

ಇದಿಷ್ಟು ನನ್ನ ಅಕ್ಕ ಹೆಬ್ಬಾಳಿನ ಕತೆ.

ಕಾಗದ ತುಂಬ ದೀರ್ಘವಾಯಿತು. ಮೇಲಿಂದ ಮೇಲೆ ಇಂತಹ ಕಾಗದ ಬರೆದು ತೊಂದರೆ ಕೊಡುವುದಿಲ್ಲ. ಈ ಕಾಗದ 'ಬಂದಿದೆ' ಎಂದಿಷ್ಟೇ ಬರೆದು ನಿಮ್ಮ ಸಹಿ ಹಾಕಿ ಕಳುಹಿಸಿದರೂ ಸಾಕು. ಅದೇ ನನ್ನ ಸಂಗ್ರಹದಲ್ಲಿನ ಅಮೂಲ್ಯ ವಸ್ತುಗಳಲ್ಲಿ ಗಣಿಸಲ್ಪಡುತ್ತದೆ.

ನೀವು ನೂರ್ಕಾಲ ಬದುಕಿರೆಂಬ ಪ್ರಾರ್ಥನೆಯೊಂದಿಗೆ ಈ ಕಾಗದ ಮುಗಿಸುತ್ತೇನೆ. ನೀವು ಕ್ಷೇಮವೆಂದು ನನ್ನ ನಂಬಿಕೆ.

ನಮಸ್ಕಾರಗಳು,

ನಿಮ್ಮ ಅಭಿಮಾನಿ

- *ಖಜಾನೆ ಕೃಷ್ಣಮೂರ್ತಿ*

★


ವಿಶ್ವಾಸ ಪೂರ್ವಕ

ಒಮ್ಮೆ ಬರ್ನಾರ್ಡ್ ಷಾ ಹಳೆಯ ಪುಸ್ತಕದ ಅಂಗಡಿಗೆ ಹೋಗಿದ್ದರು. ಅಲ್ಲಿಯ ಪುಸ್ತಕಗಳನ್ನು ನೋಡುತ್ತಿರುವಾಗ ತುಸು ದಿನಗಳ ಮುನ್ನ ತಾವು ತಮ್ಮ ಮಿತ್ರರೊಬ್ಬರಿಗೆ 'ವಿಶ್ವಾಸ ಪೂರ್ವಕ'ವಾಗಿ ಕಳುಹಿಸಿದ್ದ ತಮ್ಮ ಪುಸ್ತಕವೂ ಅಲ್ಲಿರುವುದನ್ನು ಕಂಡರು. ಅದರಲ್ಲಿ ಅವರ ಹಸ್ತಾಕ್ಷರವೂ ಇತ್ತು. ಆ ಕೂಡಲೇ ಅವರೇನು ಮಾಡಿದರು ಗೊತ್ತೇ?

ಆ ಪುಸ್ತಕವನ್ನು ಅಂಗಡಿಯವನಿಂದ ಕ್ರಯಕ್ಕೆ ಕೊಂಡು 'ಸಾಹಿತ್ಯ ಕರ್ತೃವು ಬಹು ನಮ್ರತೆಯಿಂದ ವಿಶ್ವಾಸ ಪೂರ್ವಕವಾಗಿ ಕಳುಹಿಸಿದುದು'' ಎಂದು ಬರೆದು ಪುನಃ ಅದೇ ಮಿತ್ರರಿಗೆ ಕಳುಹಿಸಿದರು.

(ಸಂಗ್ರಹ) *ಚಂದ್ರಶೇಖರ ಜೋಯ್ಸ*

Printed and Published by V. G. VAIDYA on behalf of Loka Shikshana Trust at 'Samyukta Karnataka Press', Koppikar Road, Hubli-580020 (Phone: 64303), No. 2, Residency Road, Bangalore-560025 (Phone: 213265)
Managing Editor: K. SHAMA RAO.
Representatives: Bombay: V. Satyamurthy (Phone: 5510592)
Madras: S. K. Murthi (Phone: 414870)
New Delhi: V. K. Chopra (Phone:7114785)
Registered with the Registrar of Newspapers for India
under No. 3633/57



M. K. Publicity

KASTURI, Kannada Digest Reg.No. KRNG-43, Licence No.L 2120/WPP No.33 Price: Rs.3.00